# ಯೋಜನಾ

ಆಗಸ್ಟ್ 2014 | ಅಭಿವೃದ್ಧಿ ಮಾಸಪತ್ರಿಕೆ | ₹ 20/-

ವಿಶೇಷ ಸಂಚಿಕೆ

**ಕಾರ್ಯಸಾಧು ತಂತ್ರಗಳ ನಿರೂಪಣೆ**
ಅಶಿಮಾ ಗೋಯಲ್

**ಆರ್ಥಿಕ ಸದೃಢತೆಗೆ ಪಕ್ವ ಕ್ರಮ**
ಚರಣ್ ಸಿಂಗ್ ಮತ್ತು ಶಾರದಾ ಶಿಂಪಿ

**ಬದಲಾಗುತ್ತಿರುವ ಆರ್ಥಿಕತೆ ಆದ್ಯತೆಗಳ ರಚನೆ**
ರವೀಂದ್ರ ಧೋಲಾಕಿಯಾ

**ರೈಲ್ವೆ ಮುಂಗಡ ಪತ್ರ – 2014 ವಾಸ್ತವಿಕತೆಯತ್ತ ?**
ಎಸ್.ಶ್ರೀರಾಮನ್

ವಿಶೇಷ ಲೇಖನ :
**ಯಮುನಾ ನದಿ ಹಸನು**
ಸವಾಲು ಮತ್ತು ಕ್ರಮ
ದೀಪಿಕಾ ಶರ್ಮಾ

## ಕೇಂದ್ರ ಮುಂಗಡ ಪತ್ರ 2014-15



Yojana (Kannada) August 2014
"Registered" Reg.No.RNP/KA/BGS/2024/2013-2015
Date of Publication 6th August, Posted at Bangalore GPO on 14th August
Total No. of Pages : 72 + IV Cover Pages
ISSN 0971-8737
Regd.No. RNI 43034/85


# ಹರಿಪ್ರಸಾದ್

## ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

# IAS / KAS

## (Prelims cum Mains)

* ರಾಜ್ಯದಲ್ಲೇ ಅತೀ ಹೆಚ್ಚು KAS ಫಲಿತಾಂಶಗಳನ್ನು ನೀಡಿದ ಅನುಭವಿ ಬೋಧಕರ ತಂಡ
* ವಿನೂತನ ವಿಧಾನಗಳಿಂದ ತರಬೇತಿ
* ಪ್ರತಿಯೊಬ್ಬ ವಿದ್ಯಾರ್ಥಿಯ ಮೇಲೂ ವೈಯಕ್ತಿಕ ಗಮನ ನೀಡಲಾಗುವುದು
* Test Series ನಡೆಸಲಾಗುವುದು.
* UPSC/KPSC ಮಾದರಿಯಲ್ಲಿ ಮೌಲ್ಯಮಾಪನ
* ನಮ್ಮ ಸಂಸ್ಥೆಯ ಬೋಧನಾ ಗುಣಮಟ್ಟವನ್ನು ತಿಳಿಯಲು ಎರಡು ದಿವಸದ ಉಚಿತ ತರಬೇತಿಯಲ್ಲಿ ಪಾಲ್ಗೊಳ್ಳಬಹುದು


G.HARIPRASAD
DIRECTOR

**A Recipient of GLOBAL LEADERSHIP AWARD (2012)**

"ವಿಜ್ಞಾನ ಮತ್ತು ತಂತ್ರಜ್ಞಾನ" ಪುಸ್ತಕದ ಪರಿಷ್ಕೃತ ಆವೃತ್ತಿಯನ್ನು ನಮ್ಮ ಸಂಸ್ಥೆಯಿಂದಲೇ ಬಿಡುಗಡೆ ಮಾಡಲಾಗುವುದು.

FREE UPDATES ON CURRENT EVENTS @
**www.ambitionias.com**

# 6, 4th Cross, 5th Main, B/h. Hampinagar Post Office, (Next to SBM), Vijayanagar 2nd Stage, Bangalore-104

**Ph: 080-23354445, 9740472728, 8147013522**


Printed & Published by Ira Joshi, Additional Director General and Head on behalf of Publications Division
& Printed at Omkar Offset Printers, 3/3, 1st Main Road, New Tharagupet, Bangalore - 560 002. Ph. : 080-26708186/7
and Published at 1st Floor, 'F' Wing, Kendriya Sadana, Koramangala, Bangalore - 560 034. Ph : 080 2553 7244
Chief Editor : Rajesh K. Jha, Senior Editor : B.S. Meenakshi.

ಆಗಸ್ಟ್ 2014

ಸಂಚಿಕೆ – 1 ಸಂಪುಟ – 30

# ಯೋಜನಾ

ವಿಳಾಸ
ಯೋಜನಾ – ಕನ್ನಡ,
ಪ್ರಕಾಶನ ವಿಭಾಗ,
ಸಮಾಚಾರ ಮತ್ತು ಪ್ರಸಾರ ಸಚಿವಾಲಯ,
ಭಾರತ ಸರ್ಕಾರ,
ಮೊದಲನೆಯ ಅಂತಸ್ತು, 'ಎಫ್'ವಿಂಗ್,
ಕೇಂದ್ರೀಯ ಸದನ, ಕೋರಮಂಗಲ,
ಬೆಂಗಳೂರು – 560 034.
ದೂರವಾಣಿ : 080 – 25537244.
E-mail : yojanakannada@yahoo.com

ಮುಖ್ಯ ಸಂಪಾದಕ
**ರಾಜೇಶ್ ಕೆ. ಝಾ**

ಹಿರಿಯ ಸಂಪಾದಕಿ
**ಬಿ.ಎಸ್. ಮೀನಾಕ್ಷಿ**

ಸಂಪಾದಕಿ
**ಬಿ.ಕೆ. ಕಿರಣ್ಮಯಿ**

## ಈ ಸಂಚಿಕೆಯಲ್ಲಿ ..........

ಸಂಪಾದಕೀಯ ........ 2

ಕಾರ್ಯಸಾಧು ತಂತ್ರಗಳ ನಿರೂಪಣೆ ........ 3
**– ಅಶಿಮಾ ಗೋಯಲ್**

ಆರ್ಥಿಕ ಸದೃಢತೆಗೆ ಪಕ್ವ ಕ್ರಮ ........ 9
**– ಡಾ. ಚರಣ್ ಸಿಂಗ್ ಮತ್ತು ಶಾರದಾ ಶಿಂಪಿ**

ಬದಲಾಗುತ್ತಿರುವ ಆರ್ಥಿಕತೆ : ಆದ್ಯತೆಗಳ ರಚನೆ ........ 14
**– ಪ್ರೊ. ರವೀಂದ್ರ ಧೋಲಾಕಿಯಾ**

ರೈಲ್ವೆ ಮುಂಗಡ ಪತ್ರ–2014 : ವಾಸ್ತವಿಕತೆಯತ್ತ? ........ 19
**– ಡಾ. ಎಸ್. ಶ್ರೀರಾಮನ್**

ಕೇಂದ್ರ ಮುಂಗಡ ಪತ್ರ ಅವಲೋಕನ ........ 22
**– ಸೋನಾ ಮಿತ್ರ**

ಬಂಡವಾಳ ಹೂಡಿಕೆಗೆ ಪೂರಕ ನಿಲುವು ........ 30
**– ಡಾ. ಶಶಾಂಕ ಭಿಡೆ**

ಬಡತನ ಮತ್ತು ಅಪೌಷ್ಟಿಕತೆಯನ್ನು ಎದುರಿಸುವ ಬಗೆ ........ 35
**– ಆಶಾ ಕಪೂರ್ ಮೆಹ್ತಾ ಮತ್ತು ಸಂಜಯ್ ಪ್ರತಾಪ್**

ಆರ್ಥಿಕ ಕೊರತೆ : ಪರಿಣಾಮಗಳು ........ 42
**– ಡಾ. ಅಮಿಯಾ ಕುಮಾರ್ ಮಹಾಪಾತ್ರ**

ಮೂಲಭೂತಸೌಕರ್ಯ ಮತ್ತು ಇಂಧನ ವಲಯ ........ 47
**– ಡಾ. ಹಿರಣ್ಮಯ್ ರಾಯ್ ಮತ್ತು ಪ್ರೊ. ಅನಿಲ್ ಕುಮಾರ್**

ಜನರ ಪಾಲ್ಗೊಳ್ಳುವಿಕೆ; ಉತ್ತಮ ಸೇವೆ ........ 50
**– ಡಾ. ಮನೀಷಾ ವರ್ಮಾ**

ಯಮುನಾ ನದಿ ಹಸನು – ಸವಾಲು ಮತ್ತು ಕ್ರಮ........ 54
**– ಡಾ. ದೀಪ್ಷಿಕಾ ಶರ್ಮಾ**

ರೈಲ್ವೆ ಬಜೆಟ್: ರಾಜ್ಯಕ್ಕೆ ಬಹುಕೋಟಿ ಬಹುಮಾನ ........ 60
**– ಎಂ.ಕೆ. ಭಾಸ್ಕರ ರಾವ್**

ಕೇಂದ್ರ ಬಜೆಟ್; ಮಹಿಳೆಗೆ ದಕ್ಕಿದ್ದು ಏನು? ........ 64
**– ಸಿ.ಜಿ. ಮಂಜುಳಾ**

ಹತ್ತಿ ಬಿಡಿಸುವ ಯಂತ್ರ ........ 67
**– ನಾತುಭಾಯ್ ಆರ್ ವಾಡೆರ್**

ಹಾಜಿಯ : ಒಂದು ರಾಜಕೀಯ ಸ್ಫೂರ್ತಿ ........ 69
**– ಅಜ್ರಾ ಖಾತೂನ್**

ನಿಮಗಿದು ತಿಳಿದಿದೆಯೇ? ........ 71

ವಾರ್ತಾ ವಿಶೇಷ ........ 72

ಮುಖಪುಟ ವಿನ್ಯಾಸ : ಗಜಾನನ ಪಿ. ಧೋಪೆ

ಯೋಜನೆಯ ಸಂದೇಶವನ್ನು ಎಲ್ಲ ಜನಗಳಿಗೆ ಮುಟ್ಟಿಸಲು, ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಯ ಎಲ್ಲ ಸಮಸ್ಯೆಗಳ ಬಗ್ಗೆ ಪ್ರಾಮಾಣಿಕ ಚರ್ಚೆ ಕೈಗೊಳ್ಳುವುದನ್ನು ಯೋಜನಾ ಉತ್ತೇಜಿಸುತ್ತದೆ. ಭಾರತ ಸರ್ಕಾರದ ಸಮಾಚಾರ ಮತ್ತು ಪ್ರಸಾರ ಸಚಿವಾಲಯದಿಂದ ಪ್ರಕಟಿತವಾದರೂ, ಯೋಜನಾ ಕೇವಲ ಅಧಿಕೃತ ದೃಷ್ಟಿಕೋನವನ್ನು ಬಿಂಬಿಸುವುದಕ್ಕೆ ಮಾತ್ರ ಸೀಮಿತವಾಗಿಲ್ಲ. ಕನ್ನಡ, ಇಂಗ್ಲೀಷ್, ಹಿಂದಿ, ಅಸ್ಸಾಮಿ, ಗುಜರಾತಿ, ಬಂಗಾಲಿ, ಮಲಯಾಳಂ, ಮರಾಠಿ, ತಮಿಳು, ತೆಲುಗು, ಒರಿಯಾ, ಪಂಜಾಬಿ ಮತ್ತು ಉರ್ದು ಭಾಷೆಯಲ್ಲಿ ಯೋಜನಾ ಪ್ರಕಟವಾಗುತ್ತಿದೆ.

**ಚಂದಾ ವಿವರ**

| | |
|---|---|
| ಒಂದು ವರ್ಷಕ್ಕೆ | 100.00 |
| ಎರಡು ವರ್ಷಗಳಿಗೆ | 180.00 |
| ಮೂರು ವರ್ಷಗಳಿಗೆ | 250.00 |


**ಚಂದಾ ಹಣವನ್ನು ಮನಿಯಾರ್ಡರ್ ಮೂಲಕವೇ ನಮ್ಮ ವಿಳಾಸಕ್ಕೆ ಕಳಿಸಿರಿ.**

ಒಂದು ಪಕ್ಷ ಡಿಮಾಂಡ್ ಡ್ರಾಫ್ಟ್ ಕಳಿಸುವುದಾದರೆ ಅದನ್ನು PUBLICATIONS DIVISION, MINISTRY OF I & B, GOVERNMENT OF INDIA ಹೆಸರಿನಲ್ಲಿ CHENNAI ನಲ್ಲಿ ಸಂದಾಯವಾಗುವಂತೆ ಪಡೆದು ಅದನ್ನು ನಮ್ಮ ವಿಳಾಸಕ್ಕೆ ಕಳುಹಿಸಬೇಕು.

ಲೇಖನಗಳಲ್ಲಿ ವ್ಯಕ್ತವಾದ ಅಭಿಪ್ರಾಯಗಳು ಲೇಖಕರವು. ಅವರು ಪ್ರತಿನಿಧಿಸುವ ಸಂಸ್ಥೆ ಅಥವಾ ಸರ್ಕಾರದ ಅಭಿಪ್ರಾಯವಲ್ಲ. ಯೋಜನಾ ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹಿರಾತುಗಳ ಯಥಾರ್ಥತೆ ಆಯಾ ಸಂಸ್ಥೆಗಳ ಹೊಣೆಗಾರಿಕೆಯಾಗಿರುತ್ತದೆ.

ಮುಖ್ಯ ಸಂಪಾದಕರ ಲೇಖನಿಯಿಂದ

## ಮುಂದುವರಿಕೆ ಮತ್ತು ಬದಲಾವಣೆ




ಯಾವುದೇ ದೇಶದ ಆರ್ಥಿಕ ನಿರ್ವಹಣೆಗೆ ರಾಜಕೀಯ ವಾಸ್ತವಿಕತೆ ಆಧಾರ ಸ್ತಂಭವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಮೇ 2014ರಲ್ಲಿ ಅಸ್ತಿತ್ವಕ್ಕೆ ಬಂದಿರುವ ನೂತನ ಸರ್ಕಾರದ ನೀತಿ ನಿಯಮಗಳನ್ನು ಅವಲೋಕಿಸಬೇಕಿದೆ. 2014–15ನೇ ಸಾಲಿನ ಮುಂಗಡ ಪತ್ರ ಹೊಸ ಸರ್ಕಾರದ ನೀತಿ, ಧೋರಣೆಗಳ ಪ್ರಥಮ, ಅನಾವರಣವಾಗಿದೆ. ಅಧಿಕಾರ ವಹಿಸಿಕೊಂಡ 45 ದಿನಗಳಲ್ಲೇ ಸದೃಢ ಸರ್ಕಾರ ತನ್ನ ಮೊದಲ ಬಜೆಟ್‌ನ್ನು ಸಾದರಪಡಿಸಿತು. ಅಪಾರ ನಿರೀಕ್ಷೆಗಳ ಮಧ್ಯೆ ಈ ಅಲ್ಪಾವಧಿಯಲ್ಲೇ ಗಹನವಾದ ಬಜೆಟ್ ಸಿದ್ಧಪಡಿಸುವುದು ಒಂದು ಬೃಹತ್ ಸವಾಲಾಗಿತ್ತು. ಪಕ್ಷವೊಂದು ತನ್ನದೇ ಆದ ಸಂಪೂರ್ಣ ಬಹುಮತದೊಂದಿಗೆ ಅಧಿಕಾರಕ್ಕೆ ಬಂದಿರುವುದು ಕಳೆದ ಮೂವತ್ತು ವರ್ಷಗಳಲ್ಲೆ ಇದು ಮೊದಲು. ಸಮ್ಮಿಶ್ರ ರಾಜಕೀಯ ಬಂಧನವಿಲ್ಲದ ಹೊಸ ಸರ್ಕಾರಕ್ಕೆ ವ್ಯಾಪಕ ಬೆಂಬಲದ ಬೆನ್ನಲ್ಲಿ ದೇಶದ ಸಬಲ ಆರ್ಥಿಕತೆ ದೂರದೃಷ್ಟಿ ನಿರೂಪಿಸಲು ಅವಕಾಶವಾಯಿತು. ಆದರೂ, ಭಾರತದಂತಹ ಸಂಕೀರ್ಣ ಆಯಾಮದ ಸಮಸ್ಯೆಗಳಿಗೆ, ಭವಿಷ್ಯ ನಿರೂಪಣೆ ಸುಲಭವೇನಲ್ಲ. 2014–15ನೇ ಮುಂಗಡ ಪತ್ರದ ಮುಂದಿರುವ ಸವಾಲು ಅದೇ ಆಗಿತ್ತು. ಈ ನಿಟ್ಟಿನಲ್ಲಿ ಬಜೆಟ್, ಪರಂಪರೆಯನ್ನು ಮುಂದುವರೆಸಿ, ಸಮತೋಲನ ಕಾಪಾಡುವತ್ತ ತನ್ನ ಸ್ಪಷ್ಟ ದೃಷ್ಟಿಯನ್ನಿರಿಸಿದೆ. ಸರ್ಕಾರ ಎದುರಿಸುತ್ತಿರುವ ಬಹುಮುಖ್ಯ ಸವಾಲೆಂದರೆ, ಕ್ಷಿಪ್ರ ಆರ್ಥಿಕ ಬೆಳವಣಿಗೆ ಸಾಧನೆಯೊಂದಿಗೆ ಆರ್ಥಿಕ ಸ್ಥಿರತೆ ಸಾಧಿಸುವುದು. ಕಳೆದೆರಡು ಹಣಕಾಸು ವರ್ಷಗಳಲ್ಲಿ ಒಟ್ಟು ದೇಶೀಯ ಉತ್ಪನ್ನದ ಬೆಳವಣಿಗೆ ದರ ಶೇ. 4.7 ರಿಂದ 4.5ಕ್ಕೆ ಇಳಿದಿದೆ. ತಯಾರಿಕೆ, ನಿರ್ಮಾಣ, ಗಣಿಗಾರಿಕೆ, ಸಾರಿಗೆ ಮೊದಲಾದ ಕ್ಷೇತ್ರಗಳಲ್ಲಿ ಆರ್ಥಿಕತೆಯ ಕುಸಿತ ಗೋಚರವಾಗಿದೆ.

ಬೆಳವಣಿಗೆ ದರ ಕುಸಿದ ಪರಿಣಾಮ, ಹೆಚ್ಚಳದ ಬಂಡವಾಳ ಸಾಧನೆ ಅನುಪಾತ ಏರಿತು. 2009–11ರಲ್ಲಿ ಶೇ. 4.1 ಇದ್ದ ಈ ಅನುಪಾತ, ಸಾಮರ್ಥ್ಯದ ದಕ್ಷ ಬಳಕೆಯ ಕೊರತೆಯಿಂದಾಗಿ ಹೆಚ್ಚಾಯಿತು. ಇದರಿಂದಾಗಿ ಬಂಡವಾಳ ಹೂಡಿಕೆ ಹಾಗೂ ಉತ್ಪಾದನಾ ಸಾಮರ್ಥ್ಯ ಹೆಚ್ಚಿಸುವ ಕ್ರಮಗಳ ಹೊಣೆಗಾರಿಕೆ ಹೊಸ ಬಜೆಟ್‌ನ ಮೇಲಿತ್ತು. ಸಾರ್ವಜನಿಕ ವೆಚ್ಚ ಕುರಿತಾದ ವಿಮರ್ಶೆ ನಡುವೆಯೆ ಸಾರ್ವಜನಿಕ – ಖಾಸಗಿ ಸಹಭಾಗಿತ್ವ, ನೇರ ವಿದೇಶಿ ಬಂಡವಾಳ ಹೂಡಿಕೆ ಹಾಗೂ ಇತರ ಸಾಂಸ್ಥಿಕ ಕಾರ್ಯಕ್ರಮಗಳ ಮೂಲಕ ಖಾಸಗಿ ಬಂಡವಾಳ ಹೆಚ್ಚಿಸಲು ಸರ್ಕಾರ ಕ್ರಮ ಪ್ರಕಟಿಸಿದೆ. ಇದರ ದಕ್ಷ ಅನುಷ್ಠಾನಕ್ಕಾಗಿ, ಬಂಡವಾಳ ಹೂಡಿಕೆ ಸ್ನೇಹಿ ನೀತಿ ಮತ್ತು ಉತ್ತಮ ಸಾಂಸ್ಥಿಕ ಪರಿಸರ ನಿರ್ಮಾಣಗಳ ಕಡೆ ಮುಂಗಡ ಪತ್ರ ಆದ್ಯ ಒತ್ತು ನೀಡಿದೆ. ತಾತ್ಕಾಲಿಕ ತೆರಿಗೆ ಠೇವಣಿಯ ಮೇಲಿನ ಮಿತಿಯನ್ನು 100 ಕೋಟಿ ರೂ. ನಿಂದ 25 ಕೋಟಿ ರೂ. ಗಳಿಗೆ ಇಳಿಸಿರುವುದು, ತ್ವರಿತ ನಿರ್ಧಾರ ಪ್ರಕಟಿಸುವ ಭರವಸೆ, ವಿಮೆ ಮತ್ತು ರಕ್ಷಣಾ ಕ್ಷೇತ್ರದಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆ, ತೆರಿಗೆ ಪೂರ್ವಾನ್ವಯ ಅವಕಾಶಗಳ ಘೋಷಣೆ ಈ ದಿಸೆಯಲ್ಲಿ ಸಾದರಪಡಿಸಲಾದ ಪ್ರಮುಖ ಪ್ರಕಟಣೆಗಳಾಗಿವೆ.

ನಿಗದಿತ ಗುರಿ ಸಾಧನೆಯ ಪ್ರೇರಣೆ ಮತ್ತು ಹಣಕಾಸು ಸ್ಥಿರತೆ ನಡುವೆ ಸ್ಪರ್ಧೆ ಸಾಧ್ಯತೆಗಳಿಲ್ಲ. ಇವೆರಡರ ನಡುವೆ ಸಮತೋಲನ ಸಾಧಿಸುವುದೇ ಒಂದು ಕಠಿಣ ಕೌಶಲ್ಯ. ತೆರಿಗೆ ಆದಾಯ ಹೆಚ್ಚಿಸಿ, ಸಬ್ಸಿಡಿ ಇಳಿಸುವ ಮೂಲಕ ಆರ್ಥಿಕ ಕೊರತೆಯನ್ನು ನಿಯಂತ್ರಣದಲ್ಲಿ ಇಡುವ ಗುರಿ ಹೊಂದಲಾಗಿದೆ. ಒಟ್ಟು ದೇಶೀಯ ಉತ್ಪನ್ನದ ಶೇ. 4.1ರಷ್ಟಿರುವ ಆರ್ಥಿಕ ಕೊರತೆಯನ್ನು ಪ್ರಸ್ತುತ ಆರ್ಥಿಕ ವರ್ಷದಲ್ಲಿ ಅದೇ ಪ್ರಮಾಣದಲ್ಲೇ ಕಾಯ್ದುಕೊಂಡು ಬರುವ ಗುರಿ ಹೊಂದಲಾಗಿದೆ. 2015–16ರಲ್ಲಿ ಇದನ್ನು ಶೇ. 3.6ಕ್ಕೂ 2016–17 ಸಾಲಿಗೆ ಶೇ. 3ಕ್ಕೂ ಇಳಿಸುವ ಆಶಯ ಹೊಂದಲಾಗಿದೆ. ಇದೇ ವೇಳೆ ಜಿಡಿಪಿಯಲ್ಲಿನ ಒಟ್ಟು ತೆರಿಗೆ ಆದಾಯ ಪ್ರಮಾಣವನ್ನು 2013–14ರ ಶೇ. 10.2 ರಿಂದ 2016–17ರಲ್ಲಿ ಶೇ. 11.2ಕ್ಕೇರಿಸುವ ಗುರಿ ಇಟ್ಟುಕೊಳ್ಳಲಾಗಿದೆ. ಸೇವಾ ತೆರಿಗೆಯ ಆಧಾರವನ್ನು ವಿಸ್ತೃತಗೊಳಿಸುವ ಮೂಲಕ ಹಾಗೂ ಮಾಹಿತಿ ತಂತ್ರಜ್ಞಾನ ವ್ಯವಸ್ಥೆಯ ದಕ್ಷ ಬಳಕೆ ಮೂಲಕ ತೆರಿಗೆ ಸಂಗ್ರಹ ಉತ್ತಮಗೊಳಿಸಿ ತನ್ಮೂಲಕ ಹೆಚ್ಚಿನ ತೆರಿಗೆ ಕ್ರೋಢೀಕರಿಸುವ ಕಾರ್ಯತಂತ್ರ ಪ್ರಸ್ತಾಪಿಸಲಾಗಿದೆ. ಸಹಾಯಧನವನ್ನು ಹೆಚ್ಚು ಗುರಿನಿಗದಿಗೊಳಿಸಿ, ಸೋರಿಕೆ ತಡೆಗಟ್ಟುವ ಮೂಲಕ ಸಬ್ಸಿಡಿಯನ್ನು ಜಿಡಿಪಿಯ ಶೇ. 2ಕ್ಕೆ ಸೀಮಿತಗೊಳಿಸಲು ಉದ್ದೇಶಿಸಲಾಗಿದೆ. ಇವೆಲ್ಲವುಗಳ ನಡುವೆ ಬೆಲೆಯೇರಿಕೆ, ಉದ್ಯೋಗ, ಆರೋಗ್ಯ, ಶಿಕ್ಷಣ, ರಸ್ತೆ ಸೌಕರ್ಯ, ವಿದ್ಯುತ್, ಸಾಮರಸ್ಯದ ಸಾಮಾಜಿಕ, ರಾಜಕೀಯ ಪರಿಸರ, ಸಮಪಾಲು ಹೀಗೆ ಆರ್ಥಿಕತೆಗೆ ಸಂಬಂಧಿಸಿದ ವಿವಿಧ ಅಂಶಗಳು ಜನಸಾಮಾನ್ಯರ ದೃಷ್ಟಿಯಿಂದ ಉಳಿದ ಮೂಲಭೂತ ಪ್ರಶ್ನೆಗಳಾಗಿವೆ. ಯಾವುದೇ ಸಾರ್ವಜನಿಕ ನೀತಿಯನ್ನು ಅದರ ಯಶಸ್ಸಿನ ಮೇಲೆ ಅಳೆಯಲಾಗುತ್ತದೆ. 'ಎಲ್ಲರನ್ನು ಒಳಗೊಂಡ ಅಭಿವೃದ್ಧಿ' ಮಾದರಿಯಲ್ಲಿ ಸಾಧಿಸಲಾಗದಿದ್ದನ್ನು ವರ್ಧಿತ ಉತ್ಪಾದಕತೆ, ಉದ್ಯೋಗಸೃಷ್ಟಿ, ಮಾನವ ಸಾಮರ್ಥ್ಯದ 'ಸಕ್ರಿಯ ಒಳಗೊಳ್ಳುವಿಕೆ' ಮಾರ್ಗದ ಮೂಲಕ ಸಾಧಿಸುವ ಆಶಯ ಹೊಂದಲಾಗಿದೆ. ❑

# ಕಾರ್ಯಸಾಧು ತಂತ್ರಗಳ ನಿರೂಪಣೆ

**ಅಶಿಮಾ ಗೋಯಲ್**
**ಕನ್ನಡಕ್ಕೆ : ಕೆ. ವೆಂಕಟರಾಜು**



**ತ್ವರಿತ ಗತಿಯಲ್ಲಿ ತೀರ್ಮಾನಗಳನ್ನು ತೆಗೆದುಕೊಳ್ಳಬೇಕಾದರೆ, ಅದಕ್ಕೆ ಪೂರಕವಾದ ವ್ಯವಸ್ಥೆಯು ಇರಬೇಕು. ಅದೇತಡೆಯೊಡ್ಡುವ ವ್ಯವಸ್ಥೆ ವಿಳಂಬಕ್ಕೆ ಎಡೆಕೊಡುತ್ತದೆ.**

ಹೊಸ ಸರ್ಕಾರದ ಮೊದಲ ಆಯವ್ಯಯ ಒಂದು ಕಾಣ್ಕೆ ಮತ್ತು ಅದನ್ನು ಸಾಕಾರಗೊಳಿಸುವ ಯೋಜನೆಗಳನ್ನು ಸ್ಪಷ್ಟವಾಗಿ ನಿರ್ದೇಶಿಸುತ್ತದೆಂದು ನಿರೀಕ್ಷಿಸಲಾಗಿದೆ. ಉನ್ನತ ಬೆಳವಣಿಗೆ, ಉದ್ಯೋಗ, ಉತ್ತಮ ಸೌಕರ್ಯಗಳು, ಮೂಲಭೂತ ಅಗತ್ಯಗಳು ಹಾಗೂ ಉತ್ತಮ ಆಡಳಿತ ಮುಂತಾದುವನ್ನು ಕೊಡಮಾಡುವ ಆಶಯವನ್ನು ಬಜೆಟ್‌ನಲ್ಲಿ ವ್ಯಕ್ತಪಡಿಸಲಾಗಿದೆ. ಆದರೆ ಈ ನಿರೀಕ್ಷೆಗಳನ್ನು ಸಾಧಿಸಲು ಆಯವ್ಯಯ ಹೇಗೆ ಸಹಾಯ ಮಾಡುತ್ತದೆ ಎಂಬುದು ಸ್ಪಷ್ಟವಾಗಬೇಕಿದೆ.

**ನಿರ್ಣಾಯಕ ಅಂಶಗಳು**

ಸ್ಥೂಲ ಆರ್ಥಿಕ ಮಟ್ಟದಲ್ಲಿ ಹೇಳುವುದಾದರೆ ವಿವಿಧ ರೀತಿಯ ಹೂಡಿಕೆ ಮತ್ತು ಕುಟುಂಬ ಮಟ್ಟದ ಉಳಿತಾಯಕ್ಕೆ ಉತ್ತೇಜನ ವ್ಯಕ್ತವಾಗಿದ್ದು – ಇವೆಲ್ಲವೂ ಬೆಳವಣಿಗೆ ಮಟ್ಟವನ್ನು ಏರಿಸುತ್ತವೆ.

ಸರ್ಕಾರದ ಆಯವ್ಯಯದ ಅಂದಾಜು, ಮತ್ತು ಮಧ್ಯಂತರ ಆಯವ್ಯಯದ ಇದೇ ಅಂದಾಜಿನಲ್ಲಿನ ವ್ಯತ್ಯಾಸ ಪರಿಶೀಲಿಸಿದಾಗ ಹಿಂದಿನ ಆಯವ್ಯಯಕ್ಕಿಂತ ಭಿನ್ನವಾಗಿ ಪ್ರಸ್ತುತ ಬಜೆಟನ್ನು ಪುನರ್‌ರಚಿಸಲಾಗಿದೆ ಎಂಬುದನ್ನು ಟೇಬಲ್ (1)ರ ಕಾಲಂ 1 ತೋರುತ್ತದೆ. 2013–14 ಪರಿಷ್ಕೃತ ಆಯವ್ಯಯದಲ್ಲಿನ ವೆಚ್ಚ (ಆರ್‌ಇ) ಹಾಗೂ ಜುಲೈ 2014–15ರಲ್ಲಿ ವೆಚ್ಚದಲ್ಲಿನ ವ್ಯತ್ಯಾಸ, ವೆಚ್ಚದ ಹೆಚ್ಚಳ ಆರ್ಥಿಕ ಬೆಳವಣಿಗೆಯ ಮೇಲೆ ಪರಿಣಾಮ ಉಂಟು ಮಾಡುತ್ತದೆ.

ಕಾಲಂ (1), ಪ್ರಸ್ತುತ ಆಯವ್ಯಯದಲ್ಲಿ ಮಧ್ಯಂತರ ಆಯವ್ಯಯದಲ್ಲಿ ನಮೂದಿಸಿರುವುದಕ್ಕಿಂತ ಉತ್ಪಾದಕ ವೆಚ್ಚ ಹೆಚ್ಚಿಸಲು ಮಾಡಲಾದ ನಿರಂತರ ಮತ್ತು ಪ್ರಜ್ಞಾಪೂರ್ವಕ ಯತ್ನವನ್ನು ತೋರುತ್ತದೆ.

ಯೋಜಿತ ಆದಾಯ ವೆಚ್ಚ, ಯೋಜನೆಯಿಂದ ಆಚೆಗೆ ಬಂಡವಾಳ ಸೃಷ್ಟಿ, ಯೋಜಿತವಲ್ಲದ ಬಂಡವಾಳದಲ್ಲಿನ ಖರ್ಚುಗಳು, ಆಸ್ತಿಯ ಬಂಡವಾಳ ಸೃಷ್ಟಿಗಾಗಿ ಅನುದಾನ ಕೊಟ್ಟಿರುವುದು ಇವೆಲ್ಲವೂ ಕಳೆದ ಸಲದ ಹೆಚ್ಚುವರಿಗಿಂತ (ಕಾಲಂ 4) ಈ ಸಲ ಏರಿದೆ ಅಥವಾ ಹೆಚ್ಚುವರಿ ಗಮನಾರ್ಹ ಪ್ರಮಾಣದಲ್ಲಿ ಇದೆ.

ಸಾರ್ವಜನಿಕ ಕ್ಷೇತ್ರದ ಹೂಡಿಕೆಯಲ್ಲಿ ಪ್ರಗತಿ ತೀರಾ ಕಡಿಮೆ ಪ್ರಮಾಣದಲ್ಲಿದ್ದರೂ, ಖಾಸಗಿ ಹೂಡಿಕೆಯಲ್ಲಿನ ಕಡಿಮೆ ಪ್ರಗತಿ ಹಾಗೂ ಉತ್ಪಾದಕತೆಯಲ್ಲಿನ ಕಡಿಮೆ ಪ್ರಗತಿಯನ್ನು ಸುಧಾರಿಸಲು ಹಲವಾರು ಕ್ರಮ ಹೇಳಲಾಗಿದೆ.

ತಯಾರಿಕೆ ಕ್ಷೇತ್ರದ ಮಂದಗತಿಯನ್ನು ಸುಧಾರಿಸಲು ಇದು ಅತ್ಯಗತ್ಯವಾಗಿದೆ. ಹೂಡಿಕೆಗಳಿಗೆ ತೆರಿಗೆ ರಿಯಾಯಿತಿ, ಹೂಡಿಕೆಗಳಲ್ಲಿ ಹೂಡಿಕೆ ಭತ್ಯೆಯನ್ನು ಪಡೆಯಲು ಇದ್ದ ಮಿತಿಯನ್ನು ರೂ. 100 ಕೋಟಿಯಿಂದ 25 ಕೋಟಿಗಳಿಗೆ ಇಳಿಸಿದ್ದು ಅತಿ ಸಣ್ಣ ಹಾಗೂ ಸಣ್ಣ ತಯಾರಿಕಾ ಘಟಕಗಳು ಇದರ ವ್ಯಾಪ್ತಿಗೆ ಬರುತ್ತವೆ. ಪಿ.ಪಿ.ಪಿ. (ಖಾಸಗಿ ಮತ್ತು ಸರ್ಕಾರಿ ಸಹಭಾಗಿತ್ವ)ಗೆ ಒತ್ತು ನೀಡಿರುವುದು, ತೀವ್ರಗತಿಯಲ್ಲಿ ನಿರ್ಣಯ ತೆಗೆದುಕೊಳ್ಳುವ ಭರವಸೆ ಮತ್ತು ರಾಜ್ಯಸರ್ಕಾರಗಳು ಇದನ್ನು ಸ್ಥಳೀಯ ಮಟ್ಟದಲ್ಲಿಯೂ ಕಾರ್ಯಾನುಸರಣೆ ಮಾಡುವುದು ಇತ್ಯಾದಿಗೆ ಹೆಚ್ಚಿನ ಒತ್ತನ್ನು ನೀಡಲಾಗಿದೆ. ಇ–ಬಿಜ್ ಏಕಗವಾಕ್ಷ

ಪ್ರೊಫೆಸರ್, ಐಜಿಐಡಿಆರ್, ಮುಂಬೈ. email : ashima@igidr.ac.in

ಯೋಜನೆ, ಕೈಗಾರಿಕೆಗಳಿಗೆ ಕೈಗಾರಿಕಾ ಕಾರಿಡಾರ್‌ಗಳನ್ನು ನಿರ್ಮಿಸಲು ಹಾಗೂ, ಕೈಗಾರಿಕಾ ಸಮುದಾಯಗಳ ನಿರ್ಮಾಣಕ್ಕೆ ಸಹಾಯ ಮಾಡಲಿದೆ.

**ರಕ್ಷಣಾ ಉತ್ಪಾದನೆ ಮತ್ತು ವಿಮಾಕ್ಷೇತ್ರ**

ವಿದೇಶಿ ನೇರಬಂಡವಾಳ ಹೂಡಿಕೆಗೆ ನೀಡುವ ಪ್ರೋತ್ಸಾಹ ಕೂಡಾ, ಹೂಡಿಕೆ ಸ್ಥಳೀಯ ಮಟ್ಟದಲ್ಲಿ ಉದ್ಯೋಗ ಸೃಷ್ಟಿ ತಾಂತ್ರಿಕತೆ ಮತ್ತು ಹಣಕಾಸು ಸ್ಥಿತಿಯನ್ನು ಅಭಿವೃದ್ಧಿಪಡಿಸುತ್ತದೆ. ವಿದೇಶಿ ನೇರ ಬಂಡವಾಳ ಹೂಡಿಕೆಯ ಮಿತಿಯನ್ನು 26% ನಿಂದ 49% ಗೆ ಏರಿಸಲಾಗಿದೆ. ಇದರಿಂದ ನಿರ್ವಹಣೆ ಮತ್ತು ನಿಯಂತ್ರಣ ನಮ್ಮ ದೇಶದಲ್ಲಿಯೇ ಉಳಿಯುತ್ತದೆ. ನಿರ್ಮಿತಿಗೊಳಿಸಲಾದ ವಿಸ್ತೀರ್ಣ, ಬಂಡವಾಳ ಸ್ಥಿತಿ ಅದರಲ್ಲಿಯೂ ವಿಶೇಷವಾಗಿ ಕಡಿಮೆ ವೆಚ್ಚದ ಮನೆಗಳ ನಿರ್ಮಾಣ ಮತ್ತು ಸ್ಮಾರ್ಟ್ ಸಿಟಿಗಳಲ್ಲಿ ಹೆಚ್ಚಿನ ಆಸ್ಥೆ ತೋರಲಾಗಿದೆ.

ಕುಟುಂಬಗಳಲ್ಲಿನ ಉಳಿತಾಯವನ್ನು ಹೆಚ್ಚಿಸಲು ತೆಗೆದುಕೊಂಡಿರುವ ಕ್ರಮಗಳಿಂದಾಗಿ, ಬಂಡವಾಳಕ್ಕೆ ಹೆಚ್ಚುವರಿ ಹಣ ಬರುತ್ತದೆ. ಸಾರ್ವಜನಿಕ ಪ್ರಾವಿಡೆಂಟ್ ಫಂಡ್‌ನಲ್ಲಿ ತೆರಿಗೆ ವಿನಾಯಿತಿಗೆ ಮೊತ್ತವನ್ನು ಏರಿಸಿರುವುದು, ನೋ ಯುವರ್ ಕಸ್ಟಮರ್ ಸರಳಗೊಳಿಸಿರುವುದು, ಒಂದೇ ಡಿಮ್ಯಾಟ್ ಖಾತೆಯನ್ನು ಜಾರಿಗೊಳಿಸಿರುವುದು ಹಣಕಾಸಿನ ಉಳಿತಾಯವನ್ನು ಉತ್ತೇಜಿಸುತ್ತದೆ. ರಿಯಲ್ ಎಸ್ಟೇಟ್, ಹೂಡಿಕೆ ಟ್ರಸ್ಟ್‌ಗಳಿಗೆ ಪಾಸ್ ಟ್ಯಾಕ್ಸ್ ಸ್ಟೇಟಸ್ ನೀಡಿರುವುದು ಹಾಗೂ ಆಂತರಿಕ ಚಿಲ್ಲರೆ ಮಾರಾಟದಿಂದ ಸಾರ್ವಜನಿಕ ವಲಯದ ಬ್ಯಾಂಕುಗಳನ್ನು ದೂರವಿಟ್ಟಿರುವುದು ಕುಟುಂಬಗಳನ್ನು ಈಕ್ವಿಟಿ ಮಾರುಕಟ್ಟೆಯತ್ತ ಸೆಳೆಯುತ್ತದೆ. ಕನಿಷ್ಠ ಕಾನೂನು ಬದ್ಧವಾದ ಲಿಕ್ವಿಡಿಟಿ ಪ್ರಮಾಣ, ಕಾಯ್ದಿರಿಸಿದ ನಗದು ಪ್ರಮಾಣಗಳನ್ನು ಕಡಿತಗೊಳಿಸಿರುವ ಕಾರಣ ಬ್ಯಾಂಕುಗಳು ಈ ದೀರ್ಘಾವಧಿಯ ನಿಧಿ ಸಂಗ್ರಹಣೆ ಹಾಗೂ ದೀರ್ಘಾವಧಿ ಮೂಲಸೌಕರ್ಯಗಳಿಗೆ ಅನುದಾನ ಕೊಡಲು ಸುಲಭವಾಗುತ್ತದೆ.

ವಿಪರೀತ ತೆರಿಗೆ ಭಾರದಿಂದ ನಲುಗುತ್ತಿರುವ ಸಂಬಳದಾರರಿಗೆ ಸ್ವಲ್ಪ ರಿಯಾಯಿತಿ ತೋರಲಾಗಿದೆ. ಆಯ್ದ ಕೆಲವು ಕೈಗಾರಿಕೆಗಳಿಗೆ ಎಕ್ಸೈಸ್ ರಿಯಾಯಿತಿ ತೋರಲಾಗಿದೆ. ಇದರ ಜತೆಗೆ



ಹಣದುಬ್ಬರದ ಪರಿಣಾಮವಾಗಿ ತೆರಿಗೆ ತೊಂದರೆಗೊಳಗಾದವರಿಗೆ ಪರಿಹಾರ ನೀಡುವ ಮೂಲಕ ಕೈಗಾರಿಕೆಗಳಿಗೆ ಬೇಡಿಕೆ ಹೆಚ್ಚಿಸಲಾಗಿದೆ. ಹೂಡಿಕೆ ಹಾಗೂ ತೆರಿಗೆ ರಿಯಾಯಿತಿಗಳು, ಬೆಳವಣಿಗೆಯನ್ನು ಪ್ರೋತ್ಸಾಹಿಸುವ ಕಾರಣ, ಹೆಚ್ಚಿನ ತೆರಿಗೆ ಹಣ ಸಂಗ್ರಹವಾಗುತ್ತದೆ.

ಆಹಾರ ದರದುಬ್ಬರ ನಿಯಂತ್ರಣಕ್ಕೆ ನಿಖರವಾದ ಕ್ರಮ, ಸಂಗ್ರಹಿತ ಆಹಾರ ಪದಾರ್ಥಗಳನ್ನು ಮಾರಾಟ ಮಾಡುವ ಭರವಸೆಗೆ ಮಾತ್ರ ಸೀಮಿತವಾಗಿದೆ. ಆದರೆ, ಎ.ಪಿ.ಎಂ.ಸಿ. ಕಾಯಿದೆ ಸುಧಾರಿಸಲು ರಾಜ್ಯಗಳೊಡನೆ ಕೆಲಸ ಮಾಡಬೇಕಾದ ಅಗತ್ಯದ ಪ್ರಾಮುಖ್ಯತೆ ಮತ್ತು ಕೃಷಿ ಮಾರುಕಟ್ಟೆಯನ್ನು ಸುಧಾರಿಸಲು ತೆಗೆದುಕೊಳ್ಳಬೇಕಾದ ಇತರ ಕ್ರಮಗಳು, ಉಗ್ರಾಣಗಳ ಸುಧಾರಣೆ ಮತ್ತು ಭಾರತೀಯ ಆಹಾರ ನಿಗಮದ ಪುನರ್ರಚನೆ ಇತ್ಯಾದಿ ಕೆಲವು ಅಂಶಗಳನ್ನು ಉತ್ತಮಪಡಿಸಲು ಈ ಆಯವ್ಯಯ ಭರವಸೆ ಇತ್ತಿದೆ.

ಇನ್ನು ಕೃಷಿ ಕ್ಷೇತ್ರದಲ್ಲಿ, ನೀರಾವರಿ, ನೀರು ಇಂಗಿಸುವ ಕಾರ್ಯಕ್ರಮ, ವಿದ್ಯುತ್ ಫೀಡರ್‌ಗಳ ಬೇರ್ಪಡಿಸಿ ನೆರವು ನೀಡುವುದು, ರಸ್ತೆ ಮತ್ತು ವಸತಿಗಳನ್ನು ಕುರಿತು ಕೇಂದ್ರೀಕರಿಸುವ ಮೂಲಕ ಅಭಿವೃದ್ಧಿಗೆ ತರಲು ಸೂಕ್ತವಾಗಿಯೇ ಗಮನಿಸಲಾಗಿದೆ. ನರೇಗಾ ಕಾರ್ಯಕ್ರಮದಲ್ಲಿನ ಅನುದಾನವನ್ನು ನಿರ್ವಹಿಸಬೇಕಾಗಿದೆ ಮತ್ತು ಅದನ್ನು ಬಂಡವಾಳ ಸೃಷ್ಟಿಯ ದಿಕ್ಕಿನತ್ತ ಬಳಸಬೇಕಾಗಿದೆ. ಕೃಷಿಯ ಸಾಲ ಸೌಕರ್ಯ ಮುಂದುವರೆಯಬೇಕಾಗಿದೆ. ಗ್ರಾಮೀಣ ಉದ್ಯಮೀಕರಣಕ್ಕೆ ನೀಡಲಾಗುವ ಅನುದಾನ ಆಹಾರ ಶೇಖರಣೆ ಮತ್ತು ಸಂಸ್ಕರಣೆಯ ನೆರವಿಗೆ ಬರಲಿದೆ.

ಸ್ಥಳೀಯ ಮಾರುಕಟ್ಟೆಗಳನ್ನು ಬಲಪಡಿಸಲು ತೆಗೆದುಕೊಂಡ ಕ್ರಮಗಳಲ್ಲಿ, ವಿದೇಶಿ ಸಾಲ ಧಾರಾಳವಾಗಿ ಹರಿದುಬರುವ ಕ್ರಮವನ್ನು ಅರ್ಥಮಂತ್ರಿಗಳು ತೆಗೆದುಕೊಂಡಿಲ್ಲ. ಸ್ಥಳೀಯ ಸರಬರಾಜಿಗಿರುವ ಅಡೆ–ತಡೆಗಳನ್ನು ನಿವಾರಿಸಿದ ನಂತರವಷ್ಟೇ ಇದನ್ನು ಮಾಡಬಹುದಾಗಿದೆ. ಸ್ಥಳೀಯ ಮಟ್ಟದಲ್ಲಿ ವಾಣಿಜ್ಯ ಪರಿಸರವನ್ನು ಅಭಿವೃದ್ಧಿಗೊಳಿಸುವುದರಿಂದ ರಫ್ತು ವ್ಯವಹಾರ ಉತ್ತಮಗೊಳ್ಳುತ್ತದೆ. ರಫ್ತು ಪ್ರೋತ್ಸಾಹ ಅಭಿಯಾನ ಸ್ಥಾಪಿಸಬೇಕಾಗಿದೆ. ವಿಶೇಷ ಆರ್ಥಿಕ ವಲಯವನ್ನು ಪ್ರೋತ್ಸಾಹಿಸಬೇಕಾಗಿದೆ.

**ಅಡೆತಡೆಗಳ ನಿವಾರಣೆ**

ಹಿಂದಿನ ಆಯವ್ಯಯಗಳಲ್ಲಿ, ವೈವಿಧ್ಯಮಯ ಆಹಾರದ ಬೇಡಿಕೆಗಳಿಗೆ ವೆಚ್ಚಮಾಡುವುದು, ಅದೇ ಸಮಯದಲ್ಲಿ ಕೃಷಿಯ ಮೇಲಣ ನಿಯಂತ್ರಣ ಇದ್ದ ಸರಬರಾಜು ಸಂವೇದನೆಗೆ ತಡೆಯೊಡ್ಡುತ್ತಿತ್ತು. ಆಹಾರ ಬಳಕೆಗಾಗಿ ದೊಡ್ಡ ಪ್ರಮಾಣದ ಸರ್ಕಾರಿ ವೆಚ್ಚ, ಉಬ್ಬರಕ್ಕೆ ಕಾರಣವಾಗುತ್ತಿತ್ತು. ಈ ರೀತಿಯ ಆರ್ಥಿಕ ಅಡೆತಡೆಗಳನ್ನು ನಿವಾರಿಸುವುದು ಹಾಗೂ ಸರಬರಾಜು ಸಂವೇದನೆ ಪರಿಣಾಮಕಾರಿ ನಡೆಯಲು ನಿಯಂತ್ರಣ ಪರಿಹರಿಸುವುದು – ಇವು ಮೇಲಿನ ಅನುಭವ ಕಲಿಸಿದ ಪಾಠಗಳು. ಕೇವಲ ವೆಚ್ಚ ಕಡಿತ ಮಾಡುವುದಷ್ಟೇ

| ಟೇಬಲ್ – 1 ಆಯವ್ಯಯದಲ್ಲಿ ಪ್ರಮುಖ ಸಂಖ್ಯೆಗಳು (ಶೇಕಡಾವಾರು ಹೆಚ್ಚಳ) | | | | |
|---|---|---|---|---|
| | ಪುನರ್ರಚನೆ | ನಿರೀಕ್ಷಿತ ಪರಿಣಾಮ ಈಗಿನ ಅಂದಾಜು | ನಿರೀಕ್ಷಿತ ಪರಿಣಾಮ ಮಧ್ಯಂತರ ಅಂದಾಜು | ಸಾಧ್ಯತೆ |
| | ಮಧ್ಯಂತರ ಅಂದಾಜಿಗೆ ಹೋಲಿಸಿ ಪ್ರಸ್ತುತ ಅಂದಾಜು | ಪರಿಷ್ಕೃತ ಆಯವ್ಯಯದ ಅಂದಾಜಿಗೆ (2013–14) ಗೆ ಹೋಲಿಸಿ, ಪ್ರಸ್ತುತ ಅಂದಾಜು | | 2012–13ರ ವಾಸ್ತವಿಕ ಸಂಖ್ಯೆಗೆ ಹೋಲಿಸಿ, ಕಳೆದ ಸಲ ಅಂದಾಜು |
| | 1 | 2 | 3 | 4 |
| ಆದಾಯ ಕೊರತೆ ಪ್ರಮಾಣ | –3.33 | –12.12 | –9.09 | –8.33 |
| ಆರ್ಥಿಕ ಕೊರತೆ ಪ್ರಮಾಣ | 0.00 | –10.87 | –10.87 | –4.17 |
| ಪ್ರಾಥಮಿಕ ಕೊರತೆ ಅನುಪಾತ | 0.00 | –38.46 | –38.46 | –27.78 |
| ಯೋಜನೇತರ ಬಂಡವಾಳ ವೆಚ್ಚ | 5.17 | 20.72 | 14.79 | 5.79 |
| ಒಟ್ಟು ಯೋಜನಾ ವೆಚ್ಚ | 4.00 | 20.90 | 16.80 | 14.97 |
| ಯೋಜನಾ ಆದಾಯ ವೆಚ್ಚ | 2.54 | 21.96 | 18.94 | 12.95 |
| ಯೋಜನಾ ಬಂಡವಾಳ ವೆಚ್ಚ | 7.47 | 17.18 | 9.04 | 22.82 |
| ಒಟ್ಟು ಆದಾಯ ವೆಚ್ಚ | 15.80 | 12.86 | –2.54 | 12.77 |
| ಬಂಡವಾಳ ಆಸ್ತಿ ಸೃಷ್ಟಿಗೆ ಅನುದಾನ | 14.68 | 21.61 | 6.04 | 19.46 |
| ಯೋಜನೇತರ ಆದಾಯ ವೆಚ್ಚ | 0.62 | 8.46 | 7.79 | 12.40 |
| ಯೋಜನಾ ಆದಾಯ ವೆಚ್ಚ (ಅದರಲ್ಲಿ ಸಬ್ಸಿಡಿ ವೆಚ್ಚ) | 1.94 | 2.01 | 0.08 | –0.61 |
| ಸಾಮಾಜಿಕ ಸೇವೆಗಳು (ಆರೋಗ್ಯ ಶಿಕ್ಷಣ ಇತ್ಯಾದಿ) | 2.03 | –0.40 | –2.40 | 20.17 |
| ಒಟ್ಟು ಬಂಡವಾಳ ವೆಚ್ಚ | 6.39 | 18.80 | 11.66 | 14.41 |
| ಆದಾಯ ಸ್ವೀಕೃತಿ | 1.94 | 15.59 | 13.40 | 17.06 |
| ಬಂಡವಾಳ ಸ್ವೀಕೃತಿ | 1.52 | 7.83 | 6.22 | 5.66 |
| ಮೂಲ : ಇಂಡಿಯಾ ಬಜೆಟ್. | | | | |

ಅಲ್ಲ, ಹಣಕಾಸಿನ ಸ್ಥಿರತೆಯ ಗುಣಮಟ್ಟ ಮುಖ್ಯವಾಗುತ್ತದೆ. ಸಾಮರ್ಥ್ಯ ವರ್ಧನೆ ಮತ್ತು ಸರ್ಕಾರದ ವಿನಿಯೋಗ ಎರಡೂ ಒಂದಕ್ಕೊಂಡು ಪೂರಕವಾಗಿರಬೇಕಾಗುತ್ತದೆ. ಸಾರ್ವಜನಿಕ ಬಂಡವಾಳ ಹೂಡಿಕೆ ಹೆಚ್ಚಿಸಲು ಎರಡು ಅಡೆತಡೆಗಳಿವೆ. ಒಂದು, ವೆಚ್ಚವನ್ನು ಪರಿಣಾಮಕಾರಿಗೊಳಿಸಲು ವ್ಯವಸ್ಥೆಯನ್ನು ಸಿದ್ಧಗೊಳಿಸುವುದು, ಅದರಲ್ಲಿಯೂ ವಿಶೇಷವಾಗಿ ವೆಚ್ಚದ ದಿಕ್ಕನ್ನು ಬದಲಿಸುವ ಸಂದರ್ಭದಲ್ಲಿ ಇದು ಬಹಳ ಮುಖ್ಯವಾಗುತ್ತದೆ. ಬೇರೆಯ ಸರ್ಕಾರಿ ವೆಚ್ಚವನ್ನು ಕಡಿತಗೊಳಿಸಿ ಇದಕ್ಕೆ ಹೂಡದೇ ಹೋದ ಸಂದರ್ಭಗಳಲ್ಲಿ ಅನುದಾನ ಕೊರತೆ ಬೀಳುವುದು ಎರಡನೆಯ ಅಂಶವಾಗಿದೆ. ಆಯವ್ಯಯದಲ್ಲಿ ಸಾರ್ವಜನಿಕ ಹೂಡಿಕೆಗಾಗಿ, ಸರ್ಕಾರಿ ವೆಚ್ಚಗಳಲ್ಲಿನ ಮಾರ್ಪಾಡು (ಅಂತಹ ಹೇಳಿಕೊಳ್ಳುವಂತದ್ದಲ್ಲ) ಅತಿಕಡಿಮೆ. ಆದಾಯ ವೆಚ್ಚದಲ್ಲಿ ಮಿತವ್ಯಯ ಸಾಧಿಸಲಾಗದಿರುವುದು ಇದಕ್ಕೆ ಕಾರಣ. ಅಲ್ಲಲ್ಲಿ ತೆರಿಗೆ ವಿನಾಯ್ತಿ ಇದೆ. ಆರ್ಥಿಕ ಕೊರತೆ ತಗ್ಗಿಸಲು ಗುರಿ ನಿರ್ಧರಿಸಲಾಗಿದೆ (ಟೇಬಲ್ 1). ಸಬ್ಸಿಡಿ ಕುರಿತಂತೆ, ವೆಚ್ಚ ನಿರ್ವಹಣೆ ಆಯೋಗದ ವರದಿ ಇನ್ನೂ ಬರಬೇಕಿರುವುದರಿಂದ, ರಾಸಾಯನಿಕ ಗೊಬ್ಬರಗಳಿಗೆ ಸಹಾಯಧನ ಹೆಚ್ಚಿಸಿರುವ ಕಾರಣ ಒಟ್ಟು ಸಬ್ಸಿಡಿ ಮೊತ್ತ ಹೆಚ್ಚಾಗಿದೆ. ಇದನ್ನು ಜಿಡಿಪಿಯ ಶೇ 2ಕ್ಕೆ ಮಿತಿಗೊಳಿಸಿರುವುದರಿಂದ, ಇವು ಅನುದಾನ ಕೊರತೆಯಿಂದ ನರಳುತ್ತಿದೆ ಎಂದು ತೋರುತ್ತಿದೆ. ಆಯವ್ಯಯ ಅಂದಾಜಿನ ಆರ್ಥಿಕ ಕೊರತೆಗಿಂತ ಉತ್ತಮ ಸಾಧನೆ ಮಾಡುವ ಪ್ರಕ್ರಿಯೆಯಲ್ಲಿ ಮಧ್ಯಂತರ ಆಯವ್ಯಯ ಕೆಲಕ್ರಮಗಳಿಗೆ ಮುಂದಾಯಿತು. ಇದರಿಂದ ಸಾರ್ವಜನಿಕ ಕ್ಷೇತ್ರದಲ್ಲಿನ ಘಟಕಗಳು ಹೆಚ್ಚು ಮೊತ್ತ ಡಿವಿಡೆಂಟ್ ನೀಡುವಂತೆ ಒತ್ತಾಯ ಹೇರಲಾಯಿತು. ಬಂಡವಾಳದ ವೆಚ್ಚಕ್ಕೆ ತಡೆಒಡ್ಡಲಾಯಿತು. ದೀರ್ಘಾವಧಿ ಹಣಕಾಸಿನ ಸ್ಥಿರತೆಗಾಗಿ ತೋರಿರುವ ಬದ್ಧತೆ ಸಕಾರಾತ್ಮಕವಾಗಿದೆ. ಅದರಲ್ಲಿಯೂ ವಿಶೇಷವಾಗಿ, ಸರ್ಕಾರಿ

| ಟೇಬಲ್ – 2 ಕೇಂದ್ರಯೋಜನೆ ಮತ್ತು ವಿಭಾಗಗಳಿಗೆ ವಿತರಣೆ (ಶೇಕಡಾವಾರು ಹೆಚ್ಚಳ) | | | | |
|---|---|---|---|---|
| | ಪುನರ್ರಚನೆ | ನಿರೀಕ್ಷಿತ ಪರಿಣಾಮ ಈಗಿನ ಅಂದಾಜು (ಬಿಇ) | ನಿರೀಕ್ಷಿತ ಪರಿಣಾಮ ಮಧ್ಯಂತರ ಅಂದಾಜು (ಬಿಇ) | ಸಾಧ್ಯತೆ |
| | ಆಯವ್ಯಯ ಅಂದಾಜು (ಬಿಇ) ಮಧ್ಯಂತರ ಬಜೆಟ್ ಅಂದಾಜಿಗೆ ಹೋಲಿಸಿ | ಪರಿಷ್ಕೃತ ಆಯವ್ಯಯದ (ಆರ್ಇ) ಅಂದಾಜಿಗೆ (2013–14) ಗೆ ಹೋಲಿಸಿ, ಬಜೆಟ್ ಅಂದಾಜು | | 2012–13ರ ವಾಸ್ತವಿಕ ಖರ್ಚಿಗೆ ಹೋಲಿಸಿ, ಪರಿಷ್ಕೃತ ಅಂದಾಜು ಹೆಚ್ಚಳ |
| | 1 | 2 | 3 | 4 |
| ಕೇಂದ್ರ ಯೋಜನಾ ಗಾತ್ರ | 4.22 | –21.10 | –24.29 | 23.20 |
| ಬಾಹ್ಯ ಆಯವ್ಯಯ | –0.09 | –3.76 | –3.67 | 32.98 |
| ಆಯವ್ಯಯದ ಬೆಂಬಲ | 9.15 | –33.63 | –39.20 | 16.98 |
| **ಕ್ಷೇತ್ರ ಅಥವಾ ವಿಭಾಗಗಳು** | | | | |
| ಕೃಷಿ | 15.46 | –34.32 | –43.12 | 3.09 |
| ಗ್ರಾಮೀಣಾಭಿವೃದ್ಧಿ | 6.20 | –93.91 | –94.27 | 13.94 |
| ನೀರಾವರಿ | 24.45 | 287.28 | 211.21 | 5.69 |
| ಇಂಧನ | 1.74 | –6.99 | –8.58 | 35.29 |
| ಕೈಗಾರಿಕಾ ಮತ್ತು ಖನಿಜ | 4.16 | 11.18 | 6.74 | 8.93 |
| ಸಾರಿಗೆ | 4.66 | 6.58 | 1.84 | 20.45 |
| ಸಂಪರ್ಕ | –0.08 | 39.39 | 39.50 | 48.40 |
| ವಿಜ್ಞಾನ ತಾಂತ್ರಿಕತೆ ಮತ್ತು ಪರಿಸರ | 7.88 | 38.43 | 28.32 | 12.67 |
| **ಸಚಿವಾಲಯಗಳು** | | | | |
| ಸಮಾಜಸೇವೆ | 5.73 | –51.69 | –54.31 | 20.49 |
| ಮಾನವ ಸಂಪನ್ಮೂಲ ಅಭಿವೃದ್ಧಿ | 5.33 | –71.43 | –72.88 | 11.40 |
| ಆರೋಗ್ಯ | 9.06 | –67.58 | –70.27 | 11.71 |
| ಕುಡಿಯುವ ನೀರು ಮತ್ತು ನೈರ್ಮಲ್ಯ | 0.00 | –98.08 | –98.08 | –7.43 |
| ಆರೋಗ್ಯ ಮತ್ತು ಕುಟುಂಬ ಕಲ್ಯಾಣ | 9.06 | –67.58 | –70.27 | 11.71 |
| ವಸತಿ ಮತ್ತು ನಗರ ಬಡತನ ನಿರ್ಮೂಲನೆ | 0.00 | 77.63 | 77.63 | 33.29 |
| ಮಾನವ ಸಂಪನ್ಮೂಲ ಅಭಿವೃದ್ಧಿ | 5.33 | –71.43 | –72.88 | 11.40 |
| ಶಾಲಾಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ | 7.02 | –93.70 | –94.11 | 10.13 |
| ಉನ್ನತ ಶಿಕ್ಷಣ ಇಲಾಖೆ | 5.00 | –0.02 | –4.78 | 15.67 |
| ಕಾರ್ಮಿಕ ಮತ್ತು ಉದ್ಯೋಗ | 22.87 | –53.22 | –61.93 | –0.23 |
| ಜಲಸಂಪನ್ಮೂಲ | 85.43 | 363.57 | 150.00 | 36.45 |
| ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ | 11.25 | –94.57 | –95.12 | 7.36 |
| ಮೂಲ : ಇಂಡಿಯಾ ಬಜೆಟ್ | | | | |

ವೆಚ್ಚದಿಂದ ಉಂಟಾದ ತೀವ್ರವಾದ ಹೊರಗಿನ ದುರ್ಬಲತೆಯಿಂದ ಈಗ ತಾನೆ ಚೇತರಿಸಿಕೊಳ್ಳುತ್ತ ಇರುವ ಭಾರತೀಯ ಹಿನ್ನೆಲೆಯಲ್ಲಿ ಇದು ಬೇಕೆನಿಸುತ್ತದೆ. ಆದರೆ ನಾವು ಅಕ್ಷರಶಃ ಇದಕ್ಕೇ ಅಂದರೆ ತತ್ಕಾಲದ ಲಾಭಕ್ಕೆ ಅಂಟಿಕೊಂಡು ಬಿಟ್ಟರೆ ನಮಗೆ ಈ ಸಂರಚನೆಯನ್ನು ಅಭಿವೃದ್ಧಿಪಡಿಸುವ ಅವಕಾಶವೇ ತಪ್ಪಿಹೋಗಲೂಬಹುದು. ಹಣಕಾಸಿನ ಸ್ಥಿರತೆ ತರುವಲ್ಲಿ ಗುಣಮಟ್ಟ

ಮತ್ತು ವಿಶ್ವಾಸಾರ್ಹತೆ ಪ್ರಾಮಾಣಿಕತೆ ಬಹು ಮುಖ್ಯವಾಗುತ್ತದೆ. ಸರಬರಾಜು ಸಂಬಂಧಿ ಅಂಶಗಳು ಹಣದುಬ್ಬರವನ್ನು ಪ್ರೇರೇಪಿಸುತ್ತವೆ. ಆದರೆ ನಮ್ಮಲ್ಲಿ, ಪ್ರಪಂಚದಲ್ಲಿಯೇ ಅತಿ ಹೆಚ್ಚು ಪ್ರಮಾಣದ ಯುವ ನಿರುದ್ಯೋಗ ಇದೆ. ಆದ ಕಾರಣ ಬೇರೆ ಪಾಶ್ಚಿಮಾತ್ಯಗಳು ಮಾಡುತ್ತಿರುವಂತೆ ನಾವು ತೀವ್ರವಾದ ಪ್ರಬಲ ಕ್ರಮಕ್ಕೆ ಮುಂದಾಗಬೇಕು.

ಬೆಳವಣಿಗೆಗಾಗಿ ಸ್ಪರ್ಧೆ ನಡೆದಿದೆ. ಅದು ಈ ಸಂದರ್ಭದಲ್ಲಿ ನಡೆದಿರುವುದು ಸೂಕ್ತವಾಗಿದೆ. ಈಗ, ಸ್ಥಳೀಯ ಆಶಾವಾದ ಹಾಗೂ ಅಂತಾರಾಷ್ಟ್ರೀಯ ಬೆಳವಣಿಗೆ ಪುನರ್ ಪ್ರತಿಷ್ಠಾಪನೆಯಾಗಿವೆ. ತೈಲದ ಬೆಲೆಗಳು ಸ್ವಲ್ಪ ಕಡಿಮೆಯಾಗಿವೆ. ರೂಪಾಯಿ, ಸ್ವಲ್ಪ ಹೆಚ್ಚು ಶಕ್ತಿಯುತವಾಗಿದೆ ಮತ್ತು ತಂತಾನೆ ಏರಿಕೆಯಾದ ಡೀಸೆಲ್ ಬೆಲೆಯಿಂದ ಸಬ್ಸಿಡಿ ಕಡಿತಗೊಳ್ಳುತ್ತದೆ. ಸ್ಥಳೀಯ ಸ್ಟಾಕ್ ಮಾರುಕಟ್ಟೆಯಿಂದ ಹಣ ಹಿಂತೆಗೆತ ಮೂಲಕ ಹೆಚ್ಚಿನ ಸಂಪನ್ಮೂಲಗಳನ್ನು ಕ್ರೋಢೀಕರಿಸಬಹುದು. ಮಧ್ಯಂತರ ಆಯವ್ಯಯದಲ್ಲಿ ನಮೂದಾಗಿದ್ದ ತೆರಿಗೆ ಸ್ವೀಕೃತಿ ಪ್ರಮಾಣವನ್ನು ಹಾಗೆಯೇ ಇಟ್ಟುಕೊಳ್ಳಲಾಗಿದೆ. ಇದು 2013–14ರ ಪರಿಷ್ಕೃತ ಅಂದಾಜಿನ 17.1 ಕ್ಕಿಂತ ಸ್ವಲ್ಪ ಕಡಿಮೆ ಅಂದರೆ 15.6, ಮತ್ತು 2012–13ರಲ್ಲಿ ವಾಸ್ತವವಾಗಿ ಸಂದಾಯವಾದುದಕ್ಕಿಂತ ಸ್ವಲ್ಪ ಹೆಚ್ಚು (ಟೇಬಲ್ 1). ಆದುದರಿಂದ ಇದು ಸಾಧ್ಯ ಎಂದು ನಂಬಬಹುದು. ಈ ಜೂಜಾಟದಲ್ಲಿನ ಪ್ರಯೋಜನ ಹೆಚ್ಚೂ ಕಡಿಮೆ ನಮ್ಮ ಪರವಾಗಿಯೇ ಇದೆ.

ಆದರೆ, ಬೆಳವಣಿಗೆ ಗುರಿಗಳನ್ನು ತಲುಪಲು ಹೂಡಿಕೆಯನ್ನು ಕಡಿತಗೊಳಿಸುವಂತಹ ಅನುತ್ಪಾದಕ ಹಳೆಯ ಕ್ರಮಗಳು ಅಪಾಯ ಒಡ್ಡುವ ಸಾಧ್ಯತೆ ಇದೆ.

ಎರಡನೆಯ ಅಂಶವೆಂದರೆ ಹಣಕಾಸಿನ ವರ್ಗಾವಣೆಯನ್ನು ಸಾಮರ್ಥ್ಯ ಬೆಳೆಸಲು ಪುನರ್‌ರಚಿಸುವುದು. ಇದು ಅವಕಾಶಗಳ ಸಮಾನತೆಯನ್ನು ಹೆಚ್ಚಿಸುತ್ತದೆ. ತನ್ನ ಅವಧಿಯ ಆರಂಭದಲ್ಲಿರುವ ಒಂದು ಸ್ಥಿರ ಸರ್ಕಾರ ಜನಪ್ರಿಯತೆಯಿಂದ, ಉತ್ಪಾದಕತೆ ಕಡೆ ಹೋಗಲು ತ್ವರಿತವಾಗಿ ಕ್ರಮ ಕೈಗೊಳ್ಳಲು ಸ್ವಾತಂತ್ರ್ಯವಿದ್ದೇ ಇರುತ್ತದೆ. ಯಥಾಸ್ಥಿತಿಯಿಂದ ಹೊರಬರುವ ಜವಾಬ್ದಾರಿಯನ್ನು ಹೊರಲು ಮೀನಾಮೇಷ ಎಣಿಸುವುದು, ಅಪಾಯಕ್ಕೆ ಕಾರಣವಾಗಬಹುದು. ಮತದಾರರಿಗೆ,



ಮೂಲಭೂತ ಸೌಕರ್ಯಗಳು, ನೀರು, ನೈರ್ಮಲ್ಯ, ಆರೋಗ್ಯ ಮತ್ತು ಕೆಲಸ ಒದಗಿಸುವಂತ ಶಿಕ್ಷಣದಂತಹ ಉತ್ತಮ ಸಾರ್ವಜನಿಕ ಸೇವೆಗಳು ಬೇಕು.

ಸಾಮಾಜಿಕ ಮಾಧ್ಯಮ ಮಧ್ಯಮವರ್ಗದ ಅರಿವು ಹೆಚ್ಚಿಸಿದೆ.ಗ್ರಾಮೀಣ ಮತ್ತು ಪಟ್ಟಣದ ಪ್ರದೇಶದ ಸುತ್ತಲಿನ ಜನರಿಂದ ನವಮಧ್ಯಮ ವರ್ಗವೊಂದು ಸೃಷ್ಟಿಯಾಗಿದೆ. ದೇಶದ ಜನಸಂಖ್ಯೆಯಲ್ಲಿ ಯುವಜನರ ಪಾಲು ಹೆಚ್ಚಿದೆ. ಈ ಎಲ್ಲ ವರ್ಗಗಳೂ ಕೆಲಸ ಮಾಡುವ ವಾತಾವರಣದಲ್ಲಿ ಹೆಚ್ಚಿನದನ್ನು ಪಡೆಯುತ್ತವೆ.

"ಎಲ್ಲರನ್ನೂ ಒಳಗೊಂಡ ಬೆಳವಣಿಗೆ" ಈಗ, ಹಳೆಯ ಮಂತ್ರ. ಭಿನ್ನವಾದ ಹೆಚ್ಚಿದ ಉತ್ಪಾದನೆ ಮತ್ತು ಉದ್ಯೋಗದಿಂದಾದ "ಸಕ್ರಿಯವಾದ ಒಳಗೊಳ್ಳುವಿಕೆ ಹೊಸ ಮಂತ್ರ. ಯಾವಾಗಲೂ ಬಡವರಾಗಿಯೇ ಉಳಿಯುವವರಿಗಾಗಿ ಪೌಷ್ಟಿಕತೆ ಮತ್ತು ಶಿಕ್ಷಣಕ್ಕಾಗಿ ಸರ್ಕಾರ ಖರ್ಚು ಮಾಡಬೇಕು. ಇದರ ಜತೆಗೆ ಉತ್ತಮ ನೈರ್ಮಲ್ಯ ಹಾಗೂ ನೀರು, ಉತ್ಪಾದನೆಯನ್ನೂ ಹೆಚ್ಚಿಸುವ ಕಾರಣ, ಪೌಷ್ಟಿಕ ಆಹಾರದ ಪರ ಮತ್ತು ಬಡತನ ನಿವಾರಣೆಯ ಕಾರ್ಯಕ್ರಮಗಳು ಪರಿಣಾಮಕಾರಿಯಾದಾವು.

ಮೂಲಭೂತ ಸೌಕರ್ಯಗಳ ಬೆಳವಣಿಗೆ, ವಸತಿ ಮತ್ತು ನೀರು ಇವುಗಳತ್ತ ಆಯವ್ಯಯ ಗಮನ ಹರಿಸಿದೆ. ಇವು ಸರಾಸರಿ ಪ್ರಜೆಯ ಬದುಕನ್ನು ತೃಪ್ತಗೊಳಿಸುವಂತಹದಾಗಿದೆ. ಟೇಬಲ್ 2ರ ಕಾಲಂ 1 ಮತ್ತು 2 ವಸತಿ ಮತ್ತು ನೀರಾವರಿಗೆ ಹೆಚ್ಚಿನ ಖರ್ಚುಮಾಡಿರುವುದನ್ನು ತೋರಿಸುತ್ತದೆ.

### ಕ್ಷೇತ್ರಗಳು

ಖರ್ಚಿನಲ್ಲಿ ಮಿತವ್ಯಯ ತರುವುದು ಸಾಧ್ಯವೆಂದು ತಜ್ಞರು ವಾದಿಸಿದ್ದರು. ಆದರೂ, ಬೆಳವಣಿಗೆಯಲ್ಲಿ ಹೆಚ್ಚಳ ಆಗಬೇಕಾದರೆ, ಸರ್ಕಾರಿ ಯೋಜನೆಗಳ ಪುನರ್‌ರಚನೆಯಾಗಬೇಕು. ಅವು ಸಾಮರ್ಥ್ಯ – ಅದರಲ್ಲಿಯೂ ಮಾನವ ಸಾಮರ್ಥ್ಯವನ್ನು ಸಾಧಿಸುವುದಾಗಿರುತ್ತದೆ. ಎರಡನೆಯದಾಗಿ, ಬೆಳವಣಿಗೆ ಮತ್ತು ಉದ್ಯೋಗಕ್ಕೆ ಅಡೆತಡೆ ಪರಿಹರಿಸುವುದನ್ನು ಗುರಿಯಾಗಿಸಬೇಕು. ಖರ್ಚು ಮಾಡಿದ ಪ್ರತಿಯೊಂದು ರೂಪಾಯಿಯೂ ಅತ್ಯಂತ ಹೆಚ್ಚು ಪರಿಣಾಮ ಬೀರುವಂತಹುದಿರಬೇಕು. ಇದಕ್ಕೆ ಕ್ಷೇತ್ರವಾರು ವಿನಿಯೋಗದಲ್ಲಿ ಮಾರ್ಪಾಡು ಆಗಬೇಕು. ಮೂಲಭೂತ ಅಗತ್ಯಗಳ ಕ್ಷೇತ್ರಕ್ಕೆ ಅನುದಾನಗಳ ಲಭ್ಯತೆ ಹೆಚ್ಚಿನ ಪ್ರಮಾಣದಲ್ಲಿ ಇದ್ದು, ಸಾಮಾಜಿಕ ಕ್ಷೇತ್ರಗಳಿಗೆ ಸಚಿವಾಲಯಗಳಿಗೆ ಕಡಿಮೆ ಅನುದಾನ ಲಭ್ಯತೆ ಇತ್ತು. (ಟೇಬಲ್ 2) ಮಧ್ಯಂತರ ಆಯವ್ಯಯದಲ್ಲಿಯೇ ಇದನ್ನು ಮಾಡಲಾಗಿತ್ತು. ಬದಲಾವಣೆಗಳೊಂದಿಗೆ ಪ್ರಸ್ತುತ ಆಯವ್ಯಯವೂ ಇದನ್ನು ಒಪ್ಪಿಕೊಂಡಿದೆ. ಅನುದಾನಗಳಿಂದ ಆರ್ಥಿಕ ಸ್ಥಿತಿ ಆಯಾಸಗೊಂಡಿದೆ. ನಮ್ಮ ದೇಶದ ಆಡಳಿತ ವರ್ಗದಲ್ಲಿ ತ್ವರಿತವಾಗಿ ಈ ವಿವರವಾದ ಬದಲಾವಣೆ ತರಲು ಕಷ್ಟಸಾಧ್ಯ ಮಾಡುತ್ತದೆ. ಆದರೆ ಪ್ರಸ್ತುತದ ಸರ್ಕಾರ, ಸಾಮಾಜಿಕ ಕ್ಷೇತ್ರದಲ್ಲಿ ಅನುದಾನ ಹೆಚ್ಚು ಮಾಡಿದೆ. ಇದು ಬಂಡವಾಳ ರಚನೆಗಾಗಿ ಉನ್ನತ ಬೆಳವಣಿಗೆ (ಇದು ಆದಾಯ ವೆಚ್ಚದಲ್ಲಿ

ಬರುತ್ತದೆ. ಟೇಬಲ್ 1) ಹಾಗೂ, ಜವಳಿ ಪ್ರವಾಸೋದ್ಯಮ, ಕಟ್ಟಡ ನಿರ್ಮಾಣದಂತಹ ಕಾರ್ಮಿಕರನ್ನು ಅಪೇಕ್ಷಿಸುವ ಕ್ಷೇತ್ರಗಳಲ್ಲಿ ಬರುತ್ತದೆ.

### ವ್ಯವಸ್ಥೆಯಲ್ಲಿ ಉತ್ತೇಜನ

ತ್ವರಿತ ಗತಿಯಲ್ಲಿ ತೀರ್ಮಾನಗಳನ್ನು ತೆಗೆದುಕೊಳ್ಳಬೇಕಾದರೆ, ಅದಕ್ಕೆ ಪೂರಕವಾದ ವ್ಯವಸ್ಥೆಯು ಇರಬೇಕು. ಅಡೆತಡೆಯೊಡ್ಡುವ ವ್ಯವಸ್ಥೆ ವಿಳಂಬಕ್ಕೆ ಎಡೆಕೊಡುತ್ತದೆ.

ಇದು 2009ರಲ್ಲಿ ಸ್ಪಷ್ಟವಾಯಿತು. ಕೆಲಸ ಮಾಡದ ಬ್ಯಾಂಕುಗಳ ಸಾಲ ಹೆಚ್ಚಾದಂತೆಲ್ಲ, ಮೂಲಸೌಕರ್ಯ ಯೋಜನೆಗಳು ವಿಳಂಬವಾದವು. ಪ್ರಸ್ತುತ ಮಂತ್ರಿಮಂಡಲದಲ್ಲಿ, ಹಿಂದಿನ ಸರ್ಕಾರಗಳಿಗೆ ಹೋಲಿಸಿದರೆ, ಮಂತ್ರಿಗಳ ಸಂಖ್ಯೆ ಕಡಿಮೆ ಇದೆಯಾದರೂ, ಅನುದಾನವನ್ನು 49 ಸಚಿವಾಲಯಗಳಿಗೇ (ಯು.ಪಿ.ಎ. ಸಮಯದಲ್ಲಿ 50) ನೀಡಲಾಗಿದೆ.

ಕಾರ್ಯಕ್ರಮಗಳಿಂದ ಮಿತವ್ಯಯ ಸಾಧಿಸಲು ಸಂಯೋಜಿಸುವ ಕೆಲಸ ಆಗಿಲ್ಲ. ಈ ಹಿನ್ನೆಲೆಯಲ್ಲಿ ಆಡಳಿತ ಉತ್ತಮಪಡಿಸಲು ಹೊಸ ತಾಂತ್ರಿಕತೆಗೆ ಒತ್ತು ನೀಡಬೇಕಾಗುತ್ತದೆ. ಹೆಚ್ಚಿನ ತಾಂತ್ರಿಕತೆ, ಟಿನ್ ಡಾಟಾಬೇಸ್‌ನಲ್ಲಿರುವ ಮಾಹಿತಿ, ಜಿ.ಎಸ್.ಟಿ. ಮೂಲಕ ನಿರಂತರವಾಗಿ ಬಳಕೆಯ ತೆರಿಗೆ ವಿಧಿಸುವುದು ಇತ್ಯಾದಿ.

ಭಾರತದ ಕಿರಿದಾದ ತೆರಿಗೆ ಕ್ಷೇತ್ರವನ್ನು ಹಿರಿದಾಗಿಸಬಹುದು. ಚೀನಾದಲ್ಲಿ ಶೇ 20 ಜನ ತೆರಿಗೆ ನೀಡುತ್ತಿದ್ದರೆ, ಭಾರತದಲ್ಲಿ ಶೇ 3 ರಷ್ಟು ಮಂದಿ ತೆರಿಗೆ ನೀಡುತ್ತಾರೆ. ಆದುದರಿಂದ ವಿಸ್ತರಣೆಗೆ ವಿಪುಲ ಅವಕಾಶಗಳಿವೆ.



ಆಯವ್ಯಯ ಈ ವಿಷಯದಲ್ಲಿ ಒಂದು ಸಣ್ಣ ಹೆಜ್ಜೆಯನ್ನು ಇಟ್ಟಿದೆ.

### ಉಪಸಂಹಾರ

ಒಟ್ಟಾರೆ ಎಲ್ಲ ತಂತ್ರಗಳೂ, ಸೇರಿ ಒಂದು ದೊಡ್ಡ ಮಹಾತಂತ್ರವಾಗಿ ರೂಪುಗೊಂಡಿರುವುದು ನಿಜವಾದರೂ, ಅದರ ಸಂಯೋಜನೆ – ಅಲ್ಪ ಪ್ರಮಾಣದ್ದಾಗಿದೆ. ಇವೆಲ್ಲ ಹೇಗೆ ಒಟ್ಟಿಗೆ ಕಾರ್ಯನಿರ್ವಹಿಸುತ್ತದೆ ಎಂಬುದನ್ನು ಅರಿಯಲು ಎಲ್ಲ ಅಂಶಗಳು ಚೆನ್ನಾಗಿ ಬೆಸೆದುಕೊಂಡಿಲ್ಲ. ಭಿನ್ನ–ಭಿನ್ನ ರೀತಿಯ ಹೂಡಿಕೆಯನ್ನು ಎತ್ತಲು ತೆಗೆದುಕೊಳ್ಳಬೇಕಾದ ಕ್ರಮಗಳು ಮತ್ತು ಅದರ ಆರ್ಥಿಕತೆಯನ್ನು ದೃಢಗೊಳಿಸುವುದು ಬೆಳವಣಿಗೆ ಮತ್ತು ಉದ್ಯೋಗ ಸೃಷ್ಟಿಯಲ್ಲಿ ಹೆಚ್ಚಳ ತರುತ್ತದೆ.

ಉದ್ಯೋಗ ಬೇಡುವ ಕ್ಷೇತ್ರಗಳು, ಮೂಲ ಸೌಕರ್ಯಗಳು, ಕೃಷಿ ಮಾರುಕಟ್ಟೆ, ಬೆಳೆಗಳ ಸಾಗಾಣಿಕೆ, ಎಲ್ಲವನ್ನು ಕೇಂದ್ರೀಕರಿಸಲಾಗುತ್ತದೆ. ಅಲ್ಲದೇ, ಉತ್ತಮ ವ್ಯವಸ್ಥೆ, ಸಾರ್ವಜನಿಕ ವೆಚ್ಚದ ಪುನರ್ರಚನೆ, ಮತ್ತು ಸಾರ್ವಜನಿಕ ಸೇವೆ ಇವುಗಳಲ್ಲಿ ಸಣ್ಣ ಪ್ರಾರಂಭವನ್ನಂತೂ ಮಾಡಲಾಗಿದೆ. ಇದು ಬೆಳವಣಿಗೆಗೆ ಸಹಾಯ ಮಾಡುವುದುದರ ಜತೆಗೆ, ಸಾಮರ್ಥ್ಯವನ್ನು ಸೃಷ್ಟಿಸುವ ಮೂಲಕ ಸಮಾನತೆಯನ್ನು ತರುತ್ತದೆ. ಈ ಹಿಂದೆ ಬಳಕೆಗೆ ಒತ್ತುಕೊಟ್ಟ ಸರ್ಕಾರಿ ವೆಚ್ಚದಿಂದಾಗಿ, ಹಣದುಬ್ಬರ ಹೆಚ್ಚಿತ್ತು. (ಆದರೆ ಆಯವ್ಯಯ ಭಾಷಣ, ಸ್ಪಷ್ಟವಾಗಿ ಈ ಅಂಶಗಳಬಗ್ಗೆ ವಿವರಿಸಿಲ್ಲ.) ಹಿಂದಿನದರ ಮುಂದುವರಿಕೆ, ಎಲ್ಲರಿಗೂ ಏನಾದರೂ ಒಂದು ನೀಡುವುದರತ್ತಲೇ ಆದ್ಯತೆ ನೀಡುತ್ತದೆ. ನಿಜವಾದ ಬದಲಾವಣೆಗೆ ಇರುವ ಅವಕಾಶವನ್ನು ಸಂಪೂರ್ಣ ಬಳಸಿ ಕೊಳ್ಳಬೇಕಿದೆ. ಪ್ರಜ್ಞಾಪೂರ್ವಕವಾದ ಪ್ರಕ್ರಿಯೆಯಿಂದ ಉತ್ತಮವಾದ ಅನುಷ್ಠಾನ ಸಾಧ್ಯವಿದೆ. ❑




**68ನೇ**

**ವರ್ಷದ**

**ಸ್ವಾತಂತ್ರ್ಯ ದಿನದ ಶುಭಾಶಯಗಳು**



# ಆರ್ಥಿಕ ಸದೃಢತೆಗೆ ಪಕ್ವ ಕ್ರಮ

* ಡಾ. ಚರಣ್ ಸಿಂಗ್
** ಶಾರದಾ ಶಿಂಪಿ
ಕನ್ನಡಕ್ಕೆ : ನರಸಿಂಹ ಮೂರ್ತಿ




**ಸರ್ಕಾರದ ನೀತಿಯ ಮೂಲಭೂತ ಉದ್ದೇಶವೆಂದರೆ ಕನಿಷ್ಠ ಪ್ರಮಾಣದ ಸರ್ಕಾರ, ಗರಿಷ್ಠ ಆಡಳಿತ ಎನ್ನುವುದೇ ಆಗಿದೆ. ಈ ಹಿನ್ನೆಲೆಯಲ್ಲಿ ಕೊರತೆಗಳನ್ನು ತಗ್ಗಿಸಲು ಮತ್ತು ಹೆಚ್ಚಿನ ಸಾಲ ಮಾಡದಿರಲು 2014ನೇ ಸಾಲಿನ ಕೇಂದ್ರಸರ್ಕಾರದ ಬಜೆಟ್‌ನಲ್ಲಿ ಕಾಣಿಸುವ ಪ್ರಯತ್ನ ನಿಜಕ್ಕೂ ಶ್ಲಾಘನೀಯ.**

ಕಠಿಣವಾದ ಆರ್ಥಿಕ ಸ್ಥಿತಿಯ ಹಿನ್ನೆಲೆಯಲ್ಲಿ 2014ರ ಜುಲೈನಲ್ಲಿ ಕೇಂದ್ರ ಸರ್ಕಾರದ ಬಜೆಟ್‌ಅನ್ನು ಸಿದ್ಧಪಡಿಸಲಾಯಿತು.

ಜಾಗತಿಕವಾಗಿ ಆರ್ಥಿಕ ಪುನಶ್ಚೇತನವು ಸ್ಥಿರವಾಗಿ ದೃಢವಾಗಿರಲಿಲ್ಲ ಹಾಗೂ ಹಣಕಾಸು ಮಾರುಕಟ್ಟೆಗಳು ಸ್ಥಿರವಾಗಿಲ್ಲ. ಇಸಿಬಿ ಇತ್ತೀಚೆಗೆ ಋಣಾತ್ಮಕ ಬಡ್ಡಿದರಗಳನ್ನು ಪ್ರಕಟಿಸಿದೆ. ಆದರೆ ಅಮೆರಿಕ ಬಡ್ಡಿದರಗಳನ್ನು ಇಳಿಸುವ ಯೋಜನೆಗೆ ಅಂತಿಮರೂಪ ನೀಡಿಲ್ಲ. ಬ್ರಿಕ್ಸ್ ದೇಶಗಳಲ್ಲಿ ಅಭಿವೃದ್ಧಿ ಸ್ಥಿರವಾದ ಪ್ರವೃತ್ತಿಯನ್ನು ಬೆಳೆಸಿಕೊಂಡಿಲ್ಲದಿರುವಾಗ ಉದಯಿಸುತ್ತಿರುವ ದೇಶಗಳಲ್ಲಿ ಈ ಕುರಿತ ನೋಟ ನಿರಾಶೆಯದಾಗಿದೆ. ಜಾಗತಿಕ ಹಣಕಾಸು ಬಿಕ್ಕಟ್ಟಿನ ಸಂದರ್ಭದ ಮೊದಲ ವರ್ಷಗಳಲ್ಲಿ ಸಾಪೇಕ್ಷವಾಗಿ ರಕ್ಷಿತವಾದ ದೇಶಗಳ ಪೈಕಿ ಭಾರತವೂ ಒಂದಾಗಿತ್ತು. ಆದರೆ 2012–13 ಮತ್ತು 2013–14ರಲ್ಲಿ ಅದರ ಆರ್ಥಿಕತೆಯ ಬೆಳವಣಿಗೆಯ ದರ ಶೇ.5ಕ್ಕಿಂತ ಕಡಿಮೆಯಾಯಿತು. ಬೆಳವಣಿಗೆಯ ದರ ಎಲ್ಲ ಕ್ಷೇತ್ರಗಳಲ್ಲಿ ಕೃಷಿ, ಕೈಗಾರಿಕೆ ಮತ್ತು ಸೇವಾವಲಯ– ಕಡಿಮೆ ಬೆಳವಣಿಗೆಯ ದರ ದಾಖಲಾಯಿತು. ನಿರಾಶಾದಾಯಕ ಬೆಳವಣಿಗೆಯ ಜೊತೆಗೆ ಹಣದುಬ್ಬರ ಒಂದೇ ಸಮನೆ ಹೆಚ್ಚಾಗಿದೆ. ಸಗಟು ಬೆಲೆ ಸೂಚ್ಯಂಕವನ್ನು ಆಧರಿಸಿದ ಹಣದುಬ್ಬರದ ಸರಾಸರಿ ದರ 2013–14ರಲ್ಲಿ ಶೇ. 6ಕ್ಕೆ ಇಳಿದರೂ ಅದು ನೆಮ್ಮದಿಯ ಮಟ್ಟಕ್ಕಿಂತ ಹೆಚ್ಚಾಗಿತ್ತು. ಅಲ್ಲದೆ, ಅತಿಯಾದ ಆಹಾರಪದಾರ್ಥಗಳ ಕುರಿತಾದ ಹಣದುಬ್ಬರ ಸುಮಾರುಕಾಲದಿಂದ ಚಿಂತೆಗೆ ಕಾರಣವಾಗಿದೆ. ನೀತಿನಿಯಮಗಳ ಜಾರಿಯ ಕ್ರಮಗಳು ಚಿನ್ನದ ಆಮದನ್ನು ತಗ್ಗಿಸುವಂತೆ ಮಾಡಿದರೆ, ರೂಪಾಯಿಯ ಅಪಮೌಲ್ಯ 2013–14ರಲ್ಲಿ ಭಾರತದ ರಫ್ತನ್ನು ಹೆಚ್ಚಿಸುವಲ್ಲಿ ನೆರವಾಯಿತು. ಪರಿಣಾಮವಾಗಿ ಚಾಲ್ತಿ ಖಾತೆಯ ಕೊರತೆ 2012–13ರಲ್ಲಿದ್ದ ಜಿಡಿಪಿಯ ಶೇ4.7ರಷ್ಟರಿಂದ 2013–14ರಲ್ಲಿ ಶೇ.1.7ಕ್ಕೆ ಸುಧಾರಿಸಿತು.

**ಚಿತ್ರ–1 : ಚಾಲ್ತಿ ಖಾತೆ ಕೊರತೆ (ಸ್ಥೂಲ ದೇಶೀಯ ಉತ್ಪನ್ನದ ಶೇ. ಪ್ರಮಾಣ)**




ಆಕರ : ಭಾರತೀಯ ರಿಸರ್ವ್ ಬ್ಯಾಂಕು

## ವಿತ್ತೀಯ ಸೂಚಕಗಳು

2014–15ನೇ ಸಾಲಿನ ಕೇಂದ್ರದ ಬಜೆಟ್‌ನಲ್ಲಿಯೂ ಬಿಂಬಿತವಾಗಿರುವಂತೆ, ಹೊಸ ಎನ್‌ಡಿಎ ಸರ್ಕಾರದ ನೀತಿಯ ನಿಲುವಿನ ಮೂಲಭೂತ ಉದ್ದೇಶವೆಂದರೆ ಕನಿಷ್ಠ ಪ್ರಮಾಣದ ಸರ್ಕಾರ, ಗರಿಷ್ಠ ಆಡಳಿತ ಎನ್ನುವುದೇ ಆಗಿದೆ. ಈ ಹಿನ್ನೆಲೆಯಲ್ಲಿ ಕೊರತೆಗಳನ್ನು ತಗ್ಗಿಸಲು ಮತ್ತು ಹೆಚ್ಚಿನ ಸಾಲ ಮಾಡಲು ತೊಡಗದಿರಲು 2014ನೇ ಸಾಲಿನ ಕೇಂದ್ರಸರ್ಕಾರದ ಬಜೆಟ್‌ನಲ್ಲಿ ಕಾಣಿಸುವ ಪ್ರಯತ್ನ ನಿಜಕ್ಕೂ ಶ್ಲಾಘನೀಯ. (ಕೋಷ್ಟಕ –1)

ಬಜೆಟ್ ಮುಂದಿನ ಮೂರು – ನಾಲ್ಕು ವರ್ಷಗಳಲ್ಲಿ ಶೇ.ಏಳರಿಂದ ಎಂಟರ ದರದ ಸ್ಥಿರವಾದ ಬೆಳವಣಿಗೆ ಸಾಧಿಸುವ ಮತ್ತು ಅದರ ಜೊತೆಗೆ ನಿರ್ವಹಣಾ ಸಾಧ್ಯ ಚಾಲ್ತಿ ಖಾತೆಯ ಕೊರತೆ ಮತ್ತು ತಗ್ಗಿದ ವಿತ್ತೀಯ ಕೊರತೆ ಹಾಗೂ ಕಡಿಮೆ ಪ್ರಮಾಣದ

* ಆರ್‌ಬಿಐ ಚೇರ್ ಪ್ರೊಫೆಸರ್ ಆಫ್ ಎಕನಾಮಿಕ್ಸ್. email : charansingh@iimb.ernet.in
** ಸಂಶೋಧನಾ ಸಹವರ್ತಿ – ಐಐಎಂ, ಬೆಂಗಳೂರು. email : sharadash@iimb.ernet.in

ಹಣದುಬ್ಬರಗಳ ಗುರಿಯನ್ನು ಹೊಂದಿದೆ. 2015ರಲ್ಲಿ ವಿತ್ತೀಯ ಕೊರತೆಯನ್ನು ಶೇ. 3.6ಕ್ಕೆ ಇಳಿಸಲು ಮತ್ತು ಮುಂದೆ 2016–17ರಲ್ಲಿ ಅದನ್ನು ಶೇ.3ಕ್ಕೆ ಇಳಿಸಲು ಅಗತ್ಯವಾದ ವಿತ್ತೀಯ ಕ್ರೋಢೀಕರಣ ಯೋಜನೆಯನ್ನು ಸಿದ್ಧಪಡಿಸಿದೆ.

ಆರ್ಥಿಕ ಬೆಳವಣಿಗೆಯ ಗತಿಯಲ್ಲಿನ ಸಾಮಾನ್ಯ ಇಳಿಕೆಯು 2013–14ರ ತೆರಿಗೆ ಸಂಗ್ರಹದ ಮೇಲೆ ಪರಿಣಾಮ ಬೀರಿತು. ಆದರೆ ಅದರಲ್ಲಿನ ಸುಧಾರಣೆಯಿಂದಾಗಿ ಈ ವರ್ಷದಲ್ಲಿ ಧನಾತ್ಮಕ ಬೆಳವಣಿಗೆಯನ್ನು ನಿರೀಕ್ಷಿಸಲಾಗಿದೆ. (ಕೋಷ್ಟಕ–2).

ವೆಚ್ಚಗಳನ್ನು ಕುರಿತು ಗಮನಿಸುವುದಾದರೆ, ರಕ್ಷಣಾವೆಚ್ಚದ ಬಾಬ್ತು ಸ್ಥಿರವಾಗಿದ್ದರೆ, ಬಡ್ಡಿಯ ಪಾವತಿಯ ಮೊಬಲಗು ಸ್ಥೂಲದೇಶೀಯ ಉತ್ಪನ್ನದ ಶೇ.ಪ್ರಮಾಣದಲ್ಲಿ ಕಡಿಮೆಯಾಗುತ್ತಿದೆ. ಆದರೆ ಇದೇ ಮಾನದಲ್ಲಿ ಸಬ್ಸಿಡಿಯ ವೆಚ್ಚ ಮುಖ್ಯವಾಗಿ ಆಹಾರ ಸಬ್ಸಿಡಿಯಿಂದಾಗಿ ಹೆಚ್ಚಾಗುತ್ತಿದೆ. (ಕೋಷ್ಟಕ–3).

**ಪ್ರಮುಖ ನೀತಿ ಪ್ರಕಟಣೆಗಳು**

ಕೇಂದ್ರೀಯ ಬಜೆಟ್‌ನಲ್ಲಿ ಕೃಷಿಗೆ, ಮೂಲಸೌಲಭ್ಯದ ಕ್ಷೇತ್ರದ ಮುನ್ನಡೆಗಾಗಿ ಬಲವಾದ ಅಂಶವನ್ನಾಗಿಸಲು, ವಿವಿಧ ಕ್ರಿಯೆಗಳ ಮೂಲಕ ಉದ್ಯೋಗ ಸೃಷ್ಟಿ ಮಾಡಲು ಮತ್ತು ಒಟ್ಟಾರೆ ಆರ್ಥಿಕ ಅಭಿವೃದ್ಧಿ ಸಾಧಿಸಲು ಪ್ರಮುಖವಾದ ಒತ್ತನ್ನು ನೀಡಲಾಗಿದೆ. ಭಾರತದ ಬಹುಪಾಲು ಜನ, ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಜೀವನೋಪಾಯಕ್ಕೆ ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳನ್ನೇ ಅವಲಂಬಿಸುತ್ತಾರೆ ಎಂಬ ಹಿನ್ನೆಲೆಯಲ್ಲಿ ಕೃಷಿಯನ್ನು ಸ್ಪರ್ಧಾತ್ಮಕ ಮತ್ತು ಲಾಭದಾಯಕ ಚಟುವಟಿಕೆಯನ್ನಾಗಿಸಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವುದು ಅತ್ಯಾವಶ್ಯಕ ಎಂಬುದಕ್ಕೆ ಬಜೆಟ್ ಒತ್ತು ನೀಡಿದೆ.

ದೂರದರ್ಶನದ ಕಿಸಾನ್ ವಾಹಿನಿ, ಉಗ್ರಾಣ ಮೂಲಸೌಲಭ್ಯ ನಿಧಿ, ಬೆಲೆ ಸ್ಥಿರೀಕರಣ ನಿಧಿ, ಕಿಸಾನ್ ವಿಕಾಸ್ ಪತ್ರ, ಮತ್ತು ನಬಾರ್ಡಿನಲ್ಲಿ ದೀರ್ಘಾವಧಿ ಗ್ರಾಮೀಣ ಉದರಿ ನಿಧಿ ಮತ್ತು ಉತ್ತಮ ಉತ್ಪಾದಕತೆಯತ್ತ ಗಮನ ಕೇಂದ್ರೀಕರಿಸುವುದರ ಮೂಲಕ ಎರಡನೆಯ ಕೃಷಿ ಕ್ರಾಂತಿಗೆ ಎಡೆ ಮಾಡುವುದು

**ಕೋಷ್ಟಕ 1 : ವಿತ್ತೀಯ ಕೊರತೆ – ಸ್ಥೂಲದೇಶೀಯ ಉತ್ಪನ್ನದ ಶೇ.ಪ್ರಮಾಣ**

| ವರ್ಷ | ಆದಾಯ ಕೊರತೆ | ಸಾಮಾನ್ಯ ವಿತ್ತೀಯ ಕೊರತೆ | ಪ್ರಾಥಮಿಕ ಕೊರತೆ |
|---|---|---|---|
| 1980–81 | 1.4 | 5.7 | 4.1 |
| 1990–91 | 3.3 | 7.8 | 3.9 |
| 2000–01 | 4.1 | 5.7 | 0.9 |
| 2010–11 | 3.3 | 4.9 | 1.8 |
| 2012–13 | 3.6 | 4.9 | 1.8 |
| 2013–14 (ಪ.ಅಂ.) | 3.3 | 4.6 | 1.3 |
| 2014–15 (ಬ.ಅಂ.) | 3.0 | 4.1 | 0.8 |

**ಕೋಷ್ಟಕ 2 : ಆಯ್ದ ವಿತ್ತೀಯ ಸೂಚಕಗಳು ಸ್ಥೂಲದೇಶೀಯ ಉತ್ಪನ್ನದ ಶೇ.ಪ್ರಮಾಣದಲ್ಲಿ**

| ವರ್ಷ | ತೆರಿಗೆ ಆದಾಯ | ಬಡ್ಡಿ ಪಾವತಿ | ಸಬ್ಸಿಡಿ | ರಕ್ಷಣೆ |
|---|---|---|---|---|
| 1980–81 | 9.1 | 1.8 | 1.4 | 2.5 |
| 1990–91 | 10.1 | 3.8 | 2.1 | 2.7 |
| 2000–01 | 9.0 | 4.7 | 1.3 | 2.3 |
| 2010–11 | 10.3 | 3.1 | 2.3 | 2.0 |
| 2012–13 | 10.6 | 3.3 | 2.0 | 1.8 |
| 2013–14(ಪ.ಅಂ.) | 10.2 | 3.3 | 2.2 | 1.8 |
| 2014–15(ಬ.ಅಂ.) | 10.4 | 3.1 | 2.6 | 1.8 |

**ಕೋಷ್ಟಕ 3 : ಪ್ರಮುಖ ಸಬ್ಸಿಡಿಗಳು** ರೂ.ಗಳು( ಕೋಟಿಗಳಲ್ಲಿ)

| ವಿವರಗಳು | 2012–13 | 2013–14(ಪ. ಅಂ.) | 2014–15 (ಬ.ಅಂ) |
|---|---|---|---|
| ಪ್ರಮುಖ ಸಬ್ಸಿಡಿಗಳು | 247493 | 245452 | 251397 |
| ಗೊಬ್ಬರ ಸಬ್ಸಿಡಿಗಳು | 65613 | 67972 | 72970 |
| ಆಹಾರ ಸಬ್ಸಿಡಿಗಳು | 85000 | 92000 | 115000 |
| ಪೆಟ್ರೋಲಿಯಂ ಸಬ್ಸಿಡಿಗಳು | 96880 | 85480 | 63427 |
| ಬಡ್ಡಿ ಸಬ್ಸಿಡಿಗಳು | 7270 | 8175 | 8313 |
| ಇತರೆ ಸಬ್ಸಿಡಿಗಳು | 2316 | 1890 | 947 |
| ಒಟ್ಟು ಸಬ್ಸಿಡಿಗಳು | 257079 | 255516 | 260658 |

ಆಕರ : ಆರ್‌ಬಿಐ ಮತ್ತು ಕೇಂದ್ರ ಬಜೆಟ್, ಭಾರತಸರ್ಕಾರ

ಮುಂತಾದುವು ಆರ್ಥಿಕತೆಯಲ್ಲಿ ಕೃಷಿ ಕ್ಷೇತ್ರಕ್ಕೆ ಬೆಂಬಲ ನೀಡುವ ಪ್ರಾಮಾಣಿಕ ಪ್ರಯತ್ನಗಳಾಗಿವೆ.

ವಸತಿ, ನಿರ್ಮಾಣ ಮತ್ತು ಸ್ಥಿರಾಸ್ತಿ ವ್ಯವಹಾರಗಳು ಆರ್ಥಿಕ ಬೆಳವಣಿಗೆಯ ಕೇಂದ್ರ ವಿಷಯಗಳಾಗಿವೆ. ಈ ಕೈಗಾರಿಕಾ ವಲಯ ಉದ್ಯೋಗ ಸೃಷ್ಟಿಗೆ ಪ್ರೇರಣೆ ನೀಡಬಲ್ಲುದು, ಬೇಡಿಕೆಯನ್ನು ಹೆಚ್ಚಿಸಬಹುದು ಮತ್ತು ಇತರ ಸಂಬಂಧಿತ ಕ್ಷೇತ್ರಗಳ ಮೇಲೆ ಧನಾತ್ಮಕ ಪರಿಣಾಮವನ್ನು ಉಂಟುಮಾಡಬಲ್ಲುದು. ವಿನಿಯೋಜನಾ ಪರಿಯೋಜನೆಗಳಿಗೆ ದೊಡ್ಡ ಪ್ರಮಾಣದ ನಿಧಿಗಳನ್ನು ಆಕರ್ಷಿಸುವ ಉದ್ದೇಶದಿಂದ ಹಣಕಾಸು ಮಂತ್ರಿಗಳು ಸ್ಥಿರಾಸ್ತಿ ವಿನಿಯೋಜನಾ ಟ್ರಸ್ಟು ಮತ್ತು ಮೂಲಸೌಲಭ್ಯ ವಿನಿಯೋಜನಾ

ಟ್ರಸ್ಟುಗಳಿಗೆ ಅಗತ್ಯವಾದ ಉತ್ತೇಜನವನ್ನು ಒದಗಿಸುವ ಆಶಯವನ್ನು ವ್ಯಕ್ತಪಡಿಸಿದ್ದಾರೆ. ಮೂಲಸೌಲಭ್ಯ ವಿನಿಯೋಜನೆಗಳು ಲಾಭದಾಯಕವಾಗಲು ಅನೇಕ ವರ್ಷಗಳು ಹಿಡಿಯುತ್ತವೆ ಮತ್ತು ವಿಪುಲವಾದ ಸಂಪನ್ಮೂಲಗಳನ್ನು ಬೇಡುತ್ತವಾದುದರಿಂದ, ಸ್ಥಿರಾಸ್ತಿ ವಿನಿಯೋಜನಾ ಟ್ರಸ್ಟು ಮತ್ತು ಮೂಲಸೌಲಭ್ಯ ವಿನಿಯೋಜನಾ ಟ್ರಸ್ಟುಗಳು ಮೂಲಸೌಲಭ್ಯ ಕ್ಷೇತ್ರದಲ್ಲಿ ಚುರುಕು ಮೂಡಿಸಲು ಅಗತ್ಯವಾದ – ವಿದೇಶಿ ಹಣಕಾಸು ನೆರವೂ ಸೇರಿದಂತೆ – ಹಣಕಾಸಿನ ನೆರವನ್ನು ತಂದುಕೊಳ್ಳಬಹುದಾಗಿದೆ. ಭಾರತ ವಸತಿ ಕೊರತೆಯನ್ನು ತೀವ್ರವಾಗಿ ಅನುಭವಿಸುತ್ತಿದೆ. 2012ರಲ್ಲಿ ಭಾರತದ ನಗರಪ್ರದೇಶಗಳಲ್ಲಿ ಈ ಕೊರತೆ ಸುಮಾರು 19 ದಶಲಕ್ಷ ಘಟಕಗಳಷ್ಟಿತ್ತು ಎಂದು ಅಂದಾಜಿಸಲಾಗಿದೆ.

ವಸತಿ ಮತ್ತು ನಗರಪ್ರದೇಶದ ಬಡತನ ನಿರ್ಮೂಲನಾ ಸಚಿವಾಲಯಕ್ಕೆ ಕೇಂದ್ರೀಯ ಯೋಜನೆಯ ಮೊಬಲಗನ್ನು ದ್ವಿಗುಣಗೊಳಿಸಲಾಗಿದೆ. ಹಾಗೂ ಅರ್ಥಸಚಿವರು ಕಡಿಮೆ ವೆಚ್ಚದ, ಸುಲಭಲಭ್ಯತೆಯ ವಸತಿ ಯೋಜನೆಗಾಗಿ ಒಂದು ದೀಕ್ಷಾದಳ ರಚನೆ ಪ್ರಕಟಿಸಿದ್ದಾರೆ. ಇದನ್ನು ರಾಷ್ಟ್ರೀಯ ಹೌಸಿಂಗ್ ಬ್ಯಾಂಕು ನಿರ್ವಹಿಸುತ್ತದೆ. ಉತ್ತಮ ಜೀವನ ಮಟ್ಟ ಮತ್ತು ಸೂಕ್ತ ಅವಕಾಶಗಳ ಬಯಕೆ ಆರ್ಥಿಕ ಅಭಿವೃದ್ಧಿ ಮತ್ತು ಬೆಳವಣಿಗೆಗಳ ಒಂದು ಉಪೋತ್ಪನ್ನವಾಗಿದೆ.

ನೂರು ಆಧುನಿಕ ನಗರಗಳ ಅಭಿವೃದ್ಧಿ ಮತ್ತು ತತ್ಪರಿಣಾಮವಾಗಿ ಉದ್ಭವವಾಗುವ ಆಧುನೀಕರಣ ಚಟುವಟಿಕೆಗಳು ಸ್ಥಿರಾಸ್ತಿ ಮತ್ತು ಒಟ್ಟಾರೆ ಮೂಲಸೌಲಭ್ಯಗಳ ಕುರಿತು ಧನಾತ್ಮಕ ಪರಿಣಾಮ ಬೀರಬಲ್ಲವಾಗಿವೆ. ಇದು ಆಧುನಿಕ ಸಂವಹನ ಕೇತ್ರದಲ್ಲಿ ಹೆಚ್ಚಿನ ವಿನಿಯೋಜನೆಗೆ ಎಡೆಮಾಡಿಕೊಡುತ್ತವೆ ಮತ್ತು ಈ ಪ್ರಕ್ರಿಯೆಯಲ್ಲಿ ದೂರಸಂಪರ್ಕ ಕ್ಷೇತ್ರ ಮತ್ತು ಮಾಹಿತಿ ತಂತ್ರಜ್ಞಾನ ಮೂಲಸೌಲಭ್ಯಗಳು ಔನ್ನತ್ಯಕ್ಕೇರುತ್ತವೆ.

ಸರಕು ಮತ್ತು ಸೇವಾ ತೆರಿಗೆಯಲ್ಲಿನ ನಮ್ಯತೆ ಮತ್ತು ಅದರ ಅಡಿಯಲ್ಲಿ ಸೇರಬಹುದಾದ ಬಾಬುಗಳ ವ್ಯಾಪ್ತಿಯ ಪ್ರಕಟಣೆ ಅದರ ಅನುಷ್ಠಾನ ಸುಗಮವಾಗಿ ಮತ್ತು ಶೀಘ್ರವಾಗಿರುತ್ತದೆ ಎಂಬುದನ್ನು ಬಿಂಬಿಸುತ್ತದೆ. ದರಗಳಲ್ಲಿ ಏಕರೂಪತೆ ಮತ್ತು ಸರಕುಸೇವಾತೆರಿಗೆಯ ನಿರ್ವಹಣೆಯ ಸುಗಮತೆ ರಾಜ್ಯ ಮತ್ತು ಕೇಂದ್ರಗಳೆರಡಕ್ಕೂ ಅನುಕೂಲಕರವಾಗಿರುತ್ತದೆ. ಒಟ್ಟುಗೂಡಿಸಿದ ಮುನಿಸಿಪಲ್ ಋಣ ಬಾಧ್ಯತೆ ಸೌಲಭ್ಯವು ಮೂಲಸೌಲಭ್ಯ ಯೋಜನೆಗಳಿಗೆ ಹಣಕಾಸು ಒದಗಿಸುವ ಮಾರ್ಗಗಳನ್ನು ವಿಸ್ತರಿಸುವುದು ಮಾತ್ರವಲ್ಲದೆ ಸ್ಥಳೀಯ ಸಂಸ್ಥೆಗಳನ್ನು ಬಲಪಡಿಸಲು ಸಹಾಯಕವೂ ಆಗುತ್ತದೆ.

ಸ್ವಚ್ಛ ಭಾರತ ಅಭಿಯಾನವು ಭಾರತೀಯರ ಆರೋಗ್ಯದ ಮೇಲೆ ಇತ್ಯಾತ್ಮಕ ಪರಿಣಾಮವನ್ನು ಬೀರುತ್ತದೆ. ಡಯೇರಿಯಾದಂತಹ ಕಾಯಿಲೆಗಳನ್ನು ನಿರ್ಮೂಲಮಾಡುವುದರತ್ತ ನೇರವಾಗಿ ತೊಡಗಿಕೊಳ್ಳುವುದರ ಮೂಲಕ ವಿಶೇಷವಾಗಿ ಅದು ಶಿಶುಮರಣದ ದರವನ್ನು ತಗ್ಗಿಸುತ್ತದೆ.

ಅಂತಿಮವಾಗಿ ಬೇಟಿ ಬಚಾವ್ ಮತ್ತು ಬೇಟಿ ಪಢಾವ್ ಮುಂತಾದ ಯೋಜನೆಗಳೂ ಸೇರಿದಂತೆ ಮಹಿಳಾ ಉದ್ಯೋಗಿಗಳ ಭದ್ರತೆ ಮತ್ತು ರಕ್ಷಣೆಗಳ ಕುರಿತಾದ ಅನೇಕ ಪ್ರಕಟಣೆಗಳು ಎಲ್ಲರಿಂದ ಮೆಚ್ಚುಗೆಗೆ ಪಾತ್ರವಾಗಿವೆ ಮತ್ತು ಅವಳಿಗೆ ಸಿಗುವ ಯೋಗ್ಯ ಶಿಕ್ಷಣ, ಯೋಗ್ಯ ವೃತ್ತಿ ಮತ್ತು ಆರ್ಥಿಕತೆಗೆ ಅವಳ ಯೋಗ್ಯ ಕೊಡುಗೆಯ ಹಿನ್ನೆಲೆಯಲ್ಲಿ ಹೆಮ್ಮೆಯನ್ನು ಮೂಡಿಸುತ್ತದೆ. ಇದು ದೇಶದ ಅರ್ಧದಷ್ಟು ಉದ್ಯೋಗಸ್ಥ ಸಮುದಾಯವನ್ನು ಬೆಳವಣಿಗೆಯ ಪ್ರಕ್ರಿಯೆಯಲ್ಲಿ ಆತ್ಮವಿಶ್ವಾಸದಿಂದ ಮತ್ತು ಸ್ಪರ್ಧಾತ್ಮಕವಾಗಿ ಪಾಲ್ಗೊಳ್ಳಲು ಪ್ರೋತ್ಸಾಹಿಸುತ್ತದೆ.

**ಬಜೆಟ್‌ನ ಆರ್ಥಿಕ ಪರಿಣಾಮ**

ಕೇಂದ್ರದ ಬಜೆಟ್ಟಿನ ಪರಿಣಾಮವನ್ನು ವಿಶ್ಲೇಷಿಸಲು ದೇಶದ ಆರ್ಥಿಕತೆಯನ್ನು ಕಾಡುತ್ತಿರುವ ಹಾಗೂ ಚುನಾವಣೆಯ ಸಮಯದಲ್ಲಿ ವ್ಯಾಪಕವಾಗಿ ಚರ್ಚಿತವಾದ ವಿಚಾರ – ಆರ್ಥಿಕ ಬೆಳವಣಿಗೆ, ಉದ್ಯೋಗ ಮತ್ತು ಹಣದುಬ್ಬರ. ಬಜೆಟ್ಟು ಈ ಮೂರೂ ವಿದ್ಯಮಾನಗಳನ್ನೂ ಬಹಳ ಗಂಭೀರವಾಗಿ ಚರ್ಚಿಸುತ್ತದೆ.

ಸ್ಥಿರಾಸ್ತಿ ವಿನಿಯೋಜನಾ ಟ್ರಸ್ಟು ಮತ್ತು ಮೂಲಸೌಲಭ್ಯ ವಿನಿಯೋಜನಾ ಟ್ರಸ್ಟುಗಳ ನಿರ್ಮಾಣ, ವಸತಿ ಕ್ಷೇತ್ರಕ್ಕೆ ಒದಗಿಸಿರುವ ತೆರಿಗೆ ರಿಯಾಯಿತಿ ಮತ್ತು ರಾಷ್ಟ್ರೀಯ ವಸತಿ ಬ್ಯಾಂಕಿನಿಂದ ಸುಲಭ ಲಭ್ಯ ವಸತಿಗೆ ಹೆಚ್ಚಿನ ಮೊತ್ತವನ್ನು ಒದಗಿಸಿರುವುದು, ಆಧುನಿಕ ನಗರ ನಿರ್ಮಾಣ ಹಾಗೂ ಒಂದು ಮತ್ತು ಎರಡನೇ ಹಂತದ ನಗರಗಳಲ್ಲಿ ವಿಮಾನ ನಿಲ್ದಾಣಗಳ ನಿರ್ಮಾಣ ಮುಂತಾದ ವಿವಿಧ ಯೋಜನೆಗಳಿಂದ ವಸತಿಗೃಹ ನಿರ್ಮಾಣ ಕ್ಷೇತ್ರ ಹೊಸ ಉತ್ಸಾಹ ಪಡೆಯುತ್ತದೆ.

ಸಮಾಜದ ದುರ್ಬಲವರ್ಗದವರನ್ನು ಅದರಲ್ಲಿಯೂ ವಿಶೇಷವಾಗಿ ಗ್ರಾಮೀಣ ಪ್ರದೇಶದವರನ್ನು ಸ್ವಾವಲಂಬಿಗಳನ್ನಾಗಿ ಮಾಡಲೋಸುಗ 2014ರ ಆಗಸ್ಟ್ 15ರಂದು ಪ್ರಾರಂಭಿಸುತ್ತಿರುವ ಆರ್ಥಿಕ ಸೇರ್ಪಡೆ ದೀಕ್ಷಾದಳ ಬಡಜನರಿಗೆ ಅಗತ್ಯವಾದ ಆರ್ಥಿಕ ಸೇವೆಗಳನ್ನು ವಿಸ್ತರಿಸುವುದರಲ್ಲಿ ನೆರವು ನೀಡುತ್ತದೆ.

ಬಜೆಟ್ಟಿನಲ್ಲಿ ಇನ್ನೂ ಎರಡು ಉಪಕ್ರಮಗಳು ಪ್ರಸ್ತಾಪಿತವಾಗಿವೆ. ಇವು ಕಲ್ಯಾಣ ಯೋಜನೆಗಳತ್ತ ಗುರಿ ಇರಿಸಿದ್ದು ಉದ್ಯೋಗಾವಕಾಶಗಳನ್ನು ಹೆಚ್ಚಿಸುತ್ತವೆ. ಉದಾಹರಣೆ: ವಿಮಾ ಕ್ಷೇತ್ರದಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆ. ಸ್ಥೂಲ ದೇಶೀಯ ಉತ್ಪನ್ನದಲ್ಲಿ ವಿಮೆಯ ಕಂತಿನ ಪ್ರಮಾಣವನ್ನನುಸರಿಸಿ ವಿಮೆಯ ವಿಸ್ತರಣೆಯನ್ನು ಅಳೆಯಲಾಗುತ್ತದೆ.

ಕಳೆದ ದಶಕದಲ್ಲಿ ಸರ್ಕಾರದ ವತಿಯಿಂದ ಕೈಗೊಂಡ ಖಾಸಗಿ ವಿಮಾಕಂಪನಿಗಳ ನಿರ್ವಹಣೆಗೆ ನೀಡಿದ ಅನುಮತಿಯೂ ಸೇರಿದಂತೆ ಅನೇಕ ಪ್ರಯತ್ನಗಳ ಹೊರತಾಗಿಯೂ ಭಾರತದಲ್ಲಿ ಸದ್ಯ ಅದು ಶೇ. 4ರಷ್ಟಿದೆ. ಜೀವವಿಮಾಕ್ಷೇತ್ರದಲ್ಲಿ ಈವರೆಗೆ ವಿಮಾ ವ್ಯಾಪ್ತಿಗೆ ಬಂದಿರುವ ಶೇಕಡಾ 25ಕ್ಕಿಂತ ಕಡಿಮೆ ಪ್ರಮಾಣದ ಜನಸಂಖ್ಯೆಯು ಯುವಜನತೆಯೇ ಹೆಚ್ಚಾಗಿರುವ ಭಾರತದಂತಹ ದೇಶದಲ್ಲಿ ಇನ್ನೂ ಹೆಚ್ಚಿನ ಉದ್ಯೋಗಾವಕಾಶಗಳಿವೆ ಎಂಬುದನ್ನು ತಿಳಿಸುತ್ತದೆ. ಪ್ರತಿ ರಾಜ್ಯದಲ್ಲಿಯೂ ಉನ್ನತ ಶಿಕ್ಷಣ ಸಂಸ್ಥೆಗಳಿರಬೇಕೆಂಬ ಸ್ತುತ್ಯಾರ್ಹವಾದ ದೂರದೃಷ್ಟಿಯಿಂದ ಹೊಸ ಐಐಟಿ, ಐಐಎಂಗೂ, ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾನಿಲಯಗಳನ್ನು ಕೂಡಲೇ ಸ್ಥಾಪಿಸುವುದು ನಮ್ಮ ಯುವಜನತೆಗೆ ಭಾರತದಲ್ಲಿ ಮತ್ತು ವಿದೇಶಗಳಲ್ಲಿನ ಉದ್ಯೋಗಾವಕಾಶಗಳನ್ನು ಹೆಚ್ಚಿಸುತ್ತದೆ. ಕಳೆದ ಕೆಲವು ತಿಂಗಳುಗಳಲ್ಲಿ ಸ್ಪಷ್ಟವಾಗಿ ಕಾಣಿಸಿದಂತೆ ಹಣದುಬ್ಬರ ವಿಶೇಷವಾಗಿ ಆಹಾರದ ಹಣದುಬ್ಬರ

ಸರಕು ಪೂರೈಕೆಯಿಂದಾದ ಸಂಗತಿಯೇ ಹೊರತು ಸಡಿಲವಾದ ಹಣಕಾಸು ನೀತಿಯ ಕಾರಣದಿಂದ ಆಗಿರುವುದಲ್ಲ. ಪೂರೈಕೆಯ ಕುರಿತಾದ ಕಳವಳಗಳನ್ನು ಪರಿಹರಿಸಲು ಕೃಷಿ ಮತ್ತು ಗ್ರಾಮೀಣ ಕ್ಷೇತ್ರದ ಉಗ್ರಾಣ ನಿರ್ವಹಣೆಯಂತಹ ಕೆಲಸಗಳನ್ನು ಪ್ರೋತ್ಸಾಹಿಸಲಾಗಿದೆ. ಆಹಾರ ಪದಾರ್ಥಗಳ ಸೋರಿಕೆಯನ್ನು ತಪ್ಪಿಸಲುಭಾರತೀಯ ಆಹಾರ ನಿಗಮ ಮತ್ತು ಸಾರ್ವಜನಿಕ ವಿತರಣಾ ವ್ಯವಸ್ಥೆಗಳ ಸುಧಾರಣೆಯು ಕೃಷಿಪದಾರ್ಥಗಳ ಬೆಲೆಯನ್ನು ಸ್ಥಿರವಾಗಿರಿಸಲು ಸಹಾಯವಾಗುತ್ತದೆ. ಹಾಗೂ ಪದೇ ಪದೇ ಆ ಬೆಲೆಗಳ ಮುಖ್ಯ ಕಾರಣದಿಂದಾಗಿ ಉಂಟಾಗುವ ಹಣದುಬ್ಬರವನ್ನು ನಿಯಂತ್ರಿಸಲೂ ಸಹಾಯವಾಗುತ್ತದೆ.

**ನೀತಿ ಸಂಗತಿಗಳ ಕುರಿತಾದ ಸಲಹೆಗಳು**

ಆರ್ಥಿಕತೆಯ ಅಭಿವೃದ್ಧಿಯ ಪ್ರಕ್ರಿಯೆಯನ್ನು ಪುನರುಜ್ಜೀವನಗೊಳಿಸುವಲ್ಲಿ ಎಲ್ಲರಲ್ಲಿ ಒಂದು ಬಗೆಯ ಸಹಭಾಗಿತ್ವವನ್ನು ಮೂಡಿಸಲು ಪ್ರಯತ್ನಿಸಿರುವ ಈ ಬಜೆಟ್ಟು ಅನನ್ಯವಾದುದಾಗಿದೆ. ಆದುದರಿಂದ ವಿವಿಧ ಯೋಜನೆಗಳ ಅನುಷ್ಠಾನದ ಕುರಿತ ಕೆಲವು ಸೂಚನೆಗಳು ಇಲ್ಲಿವೆ –

1. ಆಹಾರ ಸಬ್ಸಿಡಿಯನ್ನು ಕುರಿತಂತೆ, ಆಹಾರ ಮತ್ತು ಪೌಷ್ಟಿಕಾಂಶಗಳ ಕೊರತೆ ಇರುವವರಿಗೆ ಅದನ್ನು ಪೂರೈಸಲು ಆಹಾರ ಪೂರೈಕೆಯಲ್ಲಿ ಸ್ಥಳೀಯ ಪ್ರಾಧಿಕಾರಗಳನ್ನು ಬಳಸಿಕೊಳ್ಳಬೇಕು. ನಿಜವಾಗಿ ಅಗತ್ಯವಿರುವವರನ್ನು ಗುರುತಿಸಲು ಲಭ್ಯವಿರುವ ಸ್ಥಳೀಯ ಜ್ಞಾನದ ಪ್ರಯೋಜನವನ್ನು ಮಾಡಿಕೊಳ್ಳಬೇಕು

2. ಕಿಸಾನ್‌ವಿಕಾಸ ಪತ್ರದ ಮರು ಆರಂಭದ ಕುರಿತು ಮತ್ತೊಮ್ಮೆ ಚಿಂತಿಸಬೇಕು. ಏಕೆಂದರೆ ಹಿಂದಣ ಕಿಸಾನ್ ವಿಕಾಸ್ ಪತ್ರ ಯೋಜನೆಯಲ್ಲಿ ರೈತರಲ್ಲದವರೇ ಹೆಚ್ಚಿನ ಮಟ್ಟದಲ್ಲಿ ಭಾಗಿಗಳಾಗಿದ್ದ ಸಂದರ್ಭಗಳಿದ್ದವು. ಆದುದರಿಂದ ಈ ಹಣಕಾಸು ಸಂಲೇಖದ ಮರು ಆರಂಭ ಅದರ ಸಾಧ್ಯತೆ ಮತ್ತು ಅಪೇಕ್ಷಣೀಯತೆಗಳ ಕುರಿತ ಅನೇಕ ಬಗೆಯ ಚರ್ಚೆಗೆ ಅವಕಾಶ ಒದಗಿಸಬಹುದು.

3. ವಿತ್ತೀಯ ಸೇರ್ಪಡೆ ನಿಯೋಗ ಯೋಜಿಸಿರುವಂತೆ ಪ್ರತಿ ಮನೆಗೂ ಎರಡು ಬ್ಯಾಂಕ್ ಖಾತೆಗಳು ಮತ್ತು ಆರಂಭಿಕವಾಗಿ ಸ್ವಲ್ಪ ಮೊತ್ತದ ಉದರಿ ಸೌಲಭ್ಯವು ಬ್ಯಾಂಕಿನ ಪರಿಚಯವಿಲ್ಲದವರಿಗೆ ಅದನ್ನು ರೂಢಿ ಮಾಡಿಸಬಹುದು. ಆದರೆ ಇದು ಅನೇಕ ಬಗೆಯ ಟೀಕೆಗಳಿಗೆ ಪಕ್ಕಾಗಬಹುದಾಗಿದೆ. ಅನನ್ಯ ಗುರುತು ಸಂಖ್ಯೆ ಪ್ರತಿ ಭಾರತೀಯರಿಗೆ ಲಭ್ಯವಿಲ್ಲದಿರುವಾಗ ಈ ಹೊಸ ಖಾತೆಗಳ ಮೂಲಕ ಬ್ಯಾಂಕಿಂಗ್ ಸೌಲಭ್ಯವಿಲ್ಲದಿರುವವರಿಗೆ ಉದರಿ ಸೌಲಭ್ಯವನ್ನು ಒದಗಿಸುವಾಗ, ಅವು ಸೋರಿಕೆಯಾಗದಂತೆ ವಿಶೇಷ ಎಚ್ಚರಿಕೆಯ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ.

4. ಸಾರ್ವಜನಿಕ ಪಡಿತರ ವ್ಯವಸ್ಥೆಯಲ್ಲಿ ಸುಧಾರಣೆ ತರುವ ಸಮಯದಲ್ಲಿ ಉತ್ತಮ ಆರೋಗ್ಯಕ್ಕಾಗಿ ಸೋಪು, ಅಗತ್ಯ ಔಷಧಗಳು ಮತ್ತು ಸೊಳ್ಳೆ ಪರದೆಯಂತಹ ಸಲಕರಣೆಗಳನ್ನು ಈಗಿರುವ ಐದು ಲಕ್ಷ ನ್ಯಾಯಬೆಲೆ ಅಂಗಡಿಗಳ ಮೂಲಕ ಸಾರ್ವಜನಿಕರಿಗೆ ಒದಗಿಸುವುದನ್ನು ಪರಿಶೀಲಿಸಬಹುದು.

5. ಕಂಪನಿಗಳ ಸಾಮಾಜಿಕ ಹೊಣೆಗಾರಿಕೆಯಅಡಿಯಲ್ಲಿಆಗುವವೆಚ್ಚವನ್ನು ಅದು ಲೋಕೋಪಕಾರದ ಚಟುವಟಿಕೆಯ ಅಥವಾ ಸಮುದಾಯದ ಅಭಿವೃದ್ಧಿಯ ದೃಷ್ಟಿಯದಾದರೂ, ಉದ್ಯೋಗಾವಕಾಶಗಳ ಸೃಷ್ಟಿಗೆ ಬಳಸಿಕೊಳ್ಳಬಹುದಾಗಿದೆ. 2013ರ ಕಂಪನಿ ಅಧಿನಿಯಮದ ಅನ್ವಯ ನಿರ್ದಿಷ್ಟ ಕಂಪನಿಗಳು ಅವರ ಲಾಭದ ಶೇ. 2ರಷ್ಟನ್ನು ಕಂಪನಿಗಳ ಸಾಮಾಜಿಕ ಹೊಣೆಗಾರಿಕೆಯ ಅಡಿಯಲ್ಲಿಯೇ ವೆಚ್ಚ ಮಾಡಲು ಬಳಸಬೇಕು. ಕಂಪನಿಗಳ ಸಾಮಾಜಿಕ ಹೊಣೆಗಾರಿಕೆ ಮಾನಕಗಳು ಕನಿಷ್ಠ 500 ಕೋಟಿ ರೂಗಳ ನಿವ್ವಳ ಮೌಲ್ಯ ಹೊಂದಿರುವ ಅಥವಾ ಒಂದು ಆರ್ಥಿಕ ವರ್ಷದಲ್ಲಿ 1000 ಕೋಟಿ ರೂ.ಗಳ ವಹಿವಾಟು ಇರುವ ಅಥವಾ ಐದು ಕೋಟಿ ನಿವ್ವಳ ಲಾಭ ಇರುವ ಕಂಪನಿಗಳಿಗೆ ಅನ್ವಯವಾಗುತ್ತವೆ. ಕಂಪನಿಗಳ ಸಾಮಾಜಿಕ ಹೊಣೆಗಾರಿಕೆ ಅಡಿಯಲ್ಲಿ ಬರುವ ಚಟುವಟಿಕೆಗಳ ವ್ಯಾಪ್ತಿ ವಿಸ್ತಾರವಾಗಿದೆ. ಹಾಗೂ ಅವನ್ನು ಆಯಾ ಕಂಪನಿಗಳು ಅವರದೇ ಆದ ವಿವಿಧ ವಿಧಾನಗಳಲ್ಲಿ ಅನುಷ್ಠಾನಗೊಳಿಸಬಹುದು ಅಥವಾ ಲಾಭೋದ್ದೇಶರಹಿತ ಸಂಸ್ಥೆಗಳಿಗೆ ಅಂತಹ ಕೆಲಸಗಳನ್ನು ವಹಿಸಿಕೊಡಬಹುದು. ಕೈಗಾರಿಕಾ ಮೂಲಗಳ ಪ್ರಕಾರ ಭಾರತದಲ್ಲಿ ಸುಮಾರು ಆರು ಸಾವಿರ ಕಂಪನಿಗಳು ಮತ್ತು ಐದು ಕೋಟಿಗಿಂತ ಹೆಚ್ಚು ನಿವ್ವಳ ಲಾಭ ಗಳಿಸುವ ಅನೇಕ ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ಯಮಗಳು ಇಂತಹ ಚಟುವಟಿಕೆಗಳನ್ನು ಕೈಗೊಳ್ಳಬೇಕಾಗಿದೆ. ಕಂಪನಿಗಳ ಸಾಮಾಜಿಕ ಹೊಣೆಗಾರಿಕೆ ಅಡಿಯಲ್ಲಿ ವೆಚ್ಚವಾಗಬೇಕಾದ ಮೊಬಲಗು ರೂ.20,000 ಕೋಟಿ ರೂ. ಗಳ ಸ್ಥೂಲ ಅಂದಾಜಿನಿಂದ ಹಿಡಿದು ಸುಮಾರು ಒಂದು ಲಕ್ಷ ಕೋಟಿರೂ. ಗಳ ವರೆಗೆ ಇರುತ್ತದೆ. ಆದುದರಿಂದ ಕಂಪನಿಗಳ ಸಾಮಾಜಿಕ ಹೊಣೆಗಾರಿಕೆ ಅಡಿಯಣ ವೆಚ್ಚವನ್ನು ರಾಷ್ಟ್ರ ನಿರ್ಮಾಣದ ಕೆಲಸದಲ್ಲಿ ಪರಿಣಾಮಕಾರಿಯಾಗಿ ಬಳಸಿಕೊಳ್ಳುವ ಉದ್ದೇಶದಿಂದ ಸರ್ಕಾರವು ಈ ಸಂಪನ್ಮೂಲವನ್ನು ನಿರ್ದಿಷ್ಟ ಕ್ಷೇತ್ರಗಳಲ್ಲಿ ವೆಚ್ಚ ಮಾಡಲು ನಿರ್ದೇಶಿಸಲು ಅನುಕೂಲವಾಗುವಂತೆ ಒಂದು ನಿಯಂತ್ರಣ ಪ್ರಾಧಿಕಾರವನ್ನು ರಚಿಸುವುದನ್ನು ಪರಿಶೀಲಿಸಬಹುದಾಗಿದೆ.

6. ನಿಷ್ಕ್ರಿಯ ಅಸ್ತಿಗಳು ಹೆಚ್ಚುತ್ತಿರುವ ಸಮಯದಲ್ಲಿ ಹೊಸದಾದ ಸಾಲ ವಸೂಲಾತಿ ಮಂಡಳಿಯ ರಚನೆಯ ಘೋಷಣೆಯಾಗಿದೆ. ಇದು ಸೂಕ್ತ ಪುನರುಜ್ಜೀವನ ಮಾರ್ಗಸೂಚಿಯನ್ನು ಯೋಜಿಸಲು ಮತ್ತು ತ್ವರಿತವಾಗಿ ಅನುಷ್ಠಾನಕ್ಕೆ ತರಲು ನೆರವಾಗಬೇಕಾಗಿದೆ.

ಈಗಿರುವ ಸಾಲ ವಸೂಲಾತಿ ಮಂಡಳಿಗಳನ್ನು ಬಲಪಡಿಸಬೇಕಾಗಿರುವುದು ಇಂದಿನ ಅಗತ್ಯವಾಗಿದೆ. ಜೊತೆಗೆ, ಸಾಮಾನ್ಯವಾಗಿ ಬ್ಯಾಂಕಿಂಗ್ ಸಮುದಾಯದಲ್ಲಿ ಇಂತಹ ಮಂಡಳಿಗಳು ಹೆಚ್ಚು ಗ್ರಾಹಕ ಸ್ನೇಹಿಯಾಗಿರುತ್ತವೆ; ಹಾಗಾಗಿ ಬ್ಯಾಂಕಿಂಗ್ ವ್ಯವಸ್ಥೆಗೆ ಸಾಕಷ್ಟು ಪ್ರಮಾಣದ ಸಾಲವಸೂಲಾತಿ ಮಾಡಿಕೊಡುವಲ್ಲಿ ಯಶಸ್ಸು ಸಾಧಿಸಿಲ್ಲ ಎಂಬ ಭಾವನೆ ಇದೆ.

7. ಹೊಸ ವಿದ್ಯಾ ಸಂಸ್ಥೆಗಳ ಮತ್ತು ವಿಶ್ವವಿದ್ಯಾನಿಲಯಗಳ ಮೂಲಕ ನಮ್ಮ ಯುವಜನತೆಗೆ ಶಿಕ್ಷಣ ನೀಡುವ ಉದ್ದೇಶವಿದ್ದರೆ ಅದನ್ನು ವಿದೇಶಿ ವಿಶ್ವವಿದ್ಯಾನಿಲಯಗಳಿಗೂ ಭಾರತದಲ್ಲಿ ಕಾರ್ಯ ನಿರ್ವಹಿಸಲು ಅನುಮತಿ ನೀಡುವುದರ ಮೂಲಕ ಬಲಪಡಿಸಬಹುದು.

ಅಲ್ಲದೆ, ಭಾರತದ ಯುವಕರು ವಿದೇಶಗಳಿಗೆ ಹೋಗುವ ಬಗೆಬಗೆಯ

ಅವಕಾಶಗಳನ್ನು ಕಂಡುಕೊಳ್ಳುತ್ತಾರೆ. ಆದರೆ ಅವರಿಗೆ ವಿಶೇಷ ಶಿಕ್ಷಣ ಇಲ್ಲದ್ದರಿಂದ ಕಡಿಮೆ ವೇತನದ ಕೆಲಸಗಳನ್ನೇ ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ. ಸರ್ಕಾರ ಇಂಥವರಿಗೆ ವಿಶೇಷ ಕೌಶಲ ನಿರ್ಮಾಣದ ಅವಕಾಶವನ್ನು ಮಾಡಿಕೊಟ್ಟು ಜೊತೆಗೇ ಬೇರೆ ದೇಶಗಳಿಗೆ ಹೋಗಿ, ಅಲ್ಲಿಯ ಮಾನವ ಸಂಪನ್ಮೂಲದ ಕೊರತೆ ತುಂಬಲು ಎಲ್ಲಾ ಬಗೆಯ ನೆರವನ್ನೂ ನೀಡಬೇಕು. ಮಾನವಸಂಪನ್ಮೂಲದ ಅಗತ್ಯವಿರುವ ಆ ದೇಶಗಳಲ್ಲಿ ಬೇಕಾದ ರೀತಿಯ ಗಣಕ ತರಬೇತಿ ಮತ್ತು ಇತರ ವೃತ್ತಿಪರ ಪರಿಣತಿಯನ್ನು ಒದಗಿಸಲು ದೇಶಗಳ ವಿಶ್ವವಿದ್ಯಾನಿಲಯಗಳನ್ನು ಭಾರತಕ್ಕೆ ಆಹ್ವಾನಿಸಬಹುದು.

ಈ ಬಗೆಯಲ್ಲಿ ಶಿಕ್ಷಣ ಪಡೆದ ವಲಸಿಗರು ದೇಶದ ಶೈಕ್ಷಣಿಕ ಮಾದರಿಯ ರಾಯಭಾರಿಗಳಾಗಿ ಮತ್ತು ನಗದು ರವಾನೆಯ ಸಂಪದ್ಯುಕ್ತ ಆಕರವಾಗಿ ಎರಡು ಮುಖ್ಯ ಉದ್ದೇಶಗಳನ್ನು ಈಡೇರಿಸುತ್ತಾರೆ.

**ಉಪಸಂಹಾರ**

ಕೇಂದ್ರ ಬಜೆಟ್ ಚತುರ ಚಿಂತಕ ಮತ್ತು ಪಕ್ವ ವಿಚಾರಗಳ ಸಂಸದರಿಂದ ಸುಮಾರು ಆರು ವಾರಗಳಲ್ಲಿ ಸಿದ್ಧವಾಗಿದೆ. ಮತ್ತು ಗರಿಷ್ಠ ಸಹಕಾರ ಮತ್ತು ಕನಿಷ್ಠ ವಿರೋಧವಿರುವ ಪ್ರಾಯೋಗಿಕ ದೃಷ್ಟಿಕೋನದಿಂದ ಕೂಡಿದೆ. ಅಂತಾರಾಷ್ಟ್ರೀಯ ಮತ್ತು ದೇಶೀಯ ನೆಲೆಗಳ ಕಷ್ಟಕರ ಆರ್ಥಿಕ ಸ್ಥಿತಿಯಲ್ಲಿ ಬಹುಶಃ ಅದು ಯುಕ್ತವಾದ ತಂತ್ರವಿಧಾನವೇ ಆಗಿದೆ. ಇತ್ತೀಚಿನ ತಿಂಗಳುಗಳಲ್ಲಿ ಹೆಚ್ಚುತ್ತಿದ್ದ ಚಾಲ್ತಿ ಖಾತೆಯ ಕೊರತೆಯ ಕಾರಣದಿಂದಾಗಿ ಚಿನ್ನದ ಆಮದಿಗೆ ತೀವ್ರವಾದ ನಿರ್ಬಂಧಗಳಿದ್ದವು. ಹೊಸ ಸರ್ಕಾರದಿಂದ ಈ ನಿರ್ಬಂಧಗಳ ತೆರವು ಮತ್ತು ಚಿನ್ನದ ಮಾರುಕಟ್ಟೆಗೆ ಚೇತರಿಕೆ ನೀಡಲೆಂಬ ನಿರೀಕ್ಷೆ ಬಲವಾಗಿತ್ತು.

ಆದಾಗ್ಯೂ ಜುಲೈ2014ರ ತುಂಬ ಕಾತುರದಿಂದ ನಿರೀಕ್ಷಿಸಿದ ಬಜೆಟ್‌ನಲ್ಲಿ ಚಿನ್ನದ ಕುರಿತು ಪ್ರಸ್ತಾಪವಿರಲೇ ಇಲ್ಲ. ಅರ್ಥಸಚಿವರು ಈ ಅವಕಾಶವನ್ನು ಸರ್ಕಾರದ ನಿಲುವನ್ನು ಪ್ರಕಟಿಸಲು ಬಳಸಿಕೊಳ್ಳಬಹುದಿತ್ತು. ಮುಂದಕ್ಕೆ ಗಮನಿಸಿದರೆ, ದೇಶದ ಸಮಾಜದ ಒಂದು ಸದ್ದಿಲ್ಲದ ಭಾಗವಾದ ಹಿರಿಯ ನಾಗರಿಕರ ಬಗ್ಗೆ ಸರ್ಕಾರದ ಬಹುತೇಕ ನೀತಿ ನಿಯಮಗಳಲ್ಲಿ ಹೆಚ್ಚಿನ ಲಕ್ಷ್ಯ ವಹಿಸಬೇಕಾಗಿದೆ. ಭಾರತದಲ್ಲಿ ಹನ್ನೊಂದು ಕೋಟಿಗಿಂತ ಹೆಚ್ಚು ಸಂಖ್ಯೆಯ 60 ವರ್ಷ ಮೀರಿದ ಹಿರಿಯ ನಾಗರಿಕರಿದ್ದಾರೆ. ಇವರಲ್ಲಿ ಬಹುಪಾಲು ಜನ ಅಸಂಘಟಿತ ಕ್ಷೇತ್ರದಲ್ಲಿದ್ದು ಯಾವುದೇ ಸಾಮಾಜಿಕ ಭದ್ರತಾ ಕಾರ್ಯಕ್ರಮದ ಸೌಲಭ್ಯ ಇಲ್ಲದವರಾಗಿದ್ದಾರೆ. ಸುಮಾರು ಮೂರು ಕೋಟಿ ಜನ ಹಿರಿಯರು ಬಡತನದ ರೇಖೆಗಿಂತ ಕೆಳಗಿದ್ದು 500 ರೂಗಳನ್ನು ವೃದ್ಧಾಪ್ಯ ಪಿಂಚಣಿಯಾಗಿ ಪಡೆಯುತ್ತಾರೆ. ಮಿಕ್ಕ ಎಂಟು ಕೋಟಿ ಜನ ವೃದ್ಧರು ತಮ್ಮ ಜೀವನವೆಚ್ಚವನ್ನು ತಾವೇ ತೂಗಿಸಿಕೊಳ್ಳಬೇಕಾಗಿದೆ. ಅನೇಕ ಸಂಶೋಧನಾ ಅಧ್ಯಯನಗಳು ತಿಳಿಸಿರುವಂತೆ ದುರ್ಬಲ ಮತ್ತು ಅಸಮರ್ಪಕ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ಹಿನ್ನೆಲೆಯಲ್ಲಿ ವೃದ್ಧರು ವೈದ್ಯಕೀಯ ಸೇವೆಗಳನ್ನು ಪಡೆದುಕೊಳ್ಳುವುದು ಕಷ್ಟಕರವಾಗಿದೆ.

ಹಿರಿಯ ನಾಗರಿಕರಿಗಾಗಿ ಮಾಡುವ ವೆಚ್ಚ ಐರೋಪ್ಯ ದೇಶಗಳಲ್ಲಿ ಸ್ಥೂಲ ದೇಶೀಯ ಉತ್ಪನ್ನದ ಶೇ.8–10 ಇದ್ದರೆ ಪ್ರತಿಯಾಗಿ ಭಾರತದಲ್ಲಿ ಅದು ಶೇ.1ಕ್ಕೂ ಕಡಿಮೆ ಇದೆ. ಹಿರಿಯ ನಾಗರಿಕರಿಗೆ ಸಹಾಯ ಮಾಡಲೋಸುಗ ಕೈಗೊಳ್ಳುವ ಉಪಕ್ರಮಗಳಲ್ಲಿ ಗೌರವಾರ್ಹ ಸಾರ್ವತ್ರಿಕ ಪಿಂಚಣಿ ಮತ್ತು ಅವರು ತಮ್ಮ ಜೀವನದ ಸಂಧ್ಯಾಕಾಲವನ್ನು ಗೌರವಯುತವಾಗಿ ಕಳೆಯಲು ಅನುಕೂಲವಾಗುವಂತಹ ಸಾರ್ವತ್ರಿಕ ವಿಮಾಯೋಜನೆಗಳು ಸೇರಬಹುದಾಗಿವೆ. ಸಾರ್ವತ್ರಿಕ ಪಿಂಚಣಿಯು ವಯಸ್ಸು ಹೆಚ್ಚಿದಂತೆಲ್ಲಾ ಹೆಚ್ಚಬಹುದು. ಅದರಲ್ಲಿಯೂ ವಿಶೇಷವಾಗಿ ಹಿರಿಯ ಮಹಿಳೆಯರಿಗೆ. ಅಂತಿಮವಾಗಿ ಭಾರತದಲ್ಲಿ ಬದಲಾಗುತ್ತಿರುವ ಜನಸಂಖ್ಯಾ ಸ್ವರೂಪಕ್ಕೆ ಸಂಬಂಧಿಸಿದಂತೆ ಎರಡು ಅಂಶಗಳತ್ತ ಗಮನ ಹರಿಸಬೇಕಾಗಿದೆ. ಮೊದಲನೆಯದು ಹಿರಿಯ ನಾಗರಿಕರ ಹಣಕಾಸು ಅರ್ಥಶಾಸ್ತ್ರ ಸಮಸ್ಯೆಗಳನ್ನು ಅಧ್ಯಯನ ಮಾಡಲು ಒಂದು ಚಿಂತಕರ ವೇದಿಕೆಯ ಅಗತ್ಯವಿದೆ.

ಎರಡನೆಯದು ಭಾರತದಲ್ಲಿ ನಿರ್ಲಕ್ಷ್ಯಕ್ಕೀಡಾಗಿರುವ ವೈದ್ಯಕೀಯ ವೃದ್ಧಾಪ್ಯ ವಿಜ್ಞಾನ ಕ್ಷೇತ್ರವನ್ನು ಅಭಿವೃದ್ಧಿಪಡಿಸಬೇಕಾಗಿದೆ.

ಹೊಸ ಸರ್ಕಾರದ ಬಜೆಟ್ ಹಿಂದಿನ ಸರ್ಕಾರದ ನೀತಿಗಳನ್ನು ಮುಂದುವರೆಸಿಕೊಂಡು ಹೋಗುವಂತೆ ತೋರುತ್ತದೆ ಆದರೆ ವಿಶ್ಲೇಷಣಾತ್ಮಕವಾಗಿ ಗಮನಿಸಿದರೆ ಹೆಚ್ಚಿನದನ್ನು ನೀಡುವ ಹಾಗಿದೆ. ಬಜೆಟ್ಟಿನ ಅಂಶಗಳನ್ನು ಅನುಷ್ಠಾನಕ್ಕೆ ತಂದರೆ ಅದು ಭಾರತೀಯ ನೀತಿಯ ಸ್ವರೂಪ ಮತ್ತು ಉದ್ಯಮ ಚಿಂತನೆಗಳಲ್ಲಿ ಮೂಲಭೂತ ಬದಲಾವಣೆಗಳ ಅಗಮನವನ್ನು ಸಾರುತ್ತವೆ.

ಹಣಕಾಸು ಸಚಿವಾಲಯವು ಕೇಂದ್ರೀಯ ಬಜೆಟ್ ಅನ್ನು ನಿಗೂಢತೆಯಿಂದ ಮುಕ್ತಗೊಳಿಸುವ ವಿಧಾನವನ್ನು ಬಹಳ ಸರಿಯಾಗಿ ಕೈಗೆತ್ತಿಕೊಂಡಿದೆ. ಹಲವಾರು ದೇಶಗಳಲ್ಲಿ ಬಜೆಟ್ ದಿನ ಒಂದು ಪ್ರಮುಖ ಘಟನೆಯಾಗಿರುವುದಿಲ್ಲ ಹಾಗೂ ವಿತ್ತೀಯ ನೀತಿಯನ್ನು ರೂಪಿಸುವುದು ಸರ್ಕಾರದ ನಿಯತವಾದ ಚಟುವಟಿಕೆಯಾಗಿರುತ್ತದೆ ಮತ್ತು ಅಂತಹ ನೀತಿ ರಾಷ್ಟ್ರದ ಹಣಕಾಸು ಖಾತೆಗಳ ಲೆಕ್ಕಾಚಾರದಿಂದಲ್ಲ.


ಅತಿ ಕಡಿಮೆ ಕಾಲದಲ್ಲಿ ಸಿದ್ಧವಾಗಿರುವ ಈ ಬಜೆಟ್ಟಿನಲ್ಲಿ ಹಣಕಾಸು ನೀತಿಯ ಉಪಕ್ರಮಗಳು ಮತ್ತು ಸಮುದಾಯ ಕಲ್ಯಾಣದ ಕುರಿತಾದ ಅಪೌಷ್ಟಿಕತೆ ಮುಂತಾದವನ್ನು ಪ್ರತ್ಯೇಕವಾಗಿ ಚರ್ಚಿಸಲಾಗುವುದು ಮತ್ತು ಒಂದು ಆಯೋಗದ ನೆರವಿನಿಂದ ಸಬ್ಸಿಡಿ ಮುಂತಾದ ಸರ್ಕಾರಿ ವೆಚ್ಚವನ್ನು ಕ್ರಮೇಣ ನೈಜತೆಯ ಮಟ್ಟಕ್ಕೆ ತರಲಾಗುವುದು ಎಂಬ ಘೋಷಣೆ ಸರ್ಕಾರಕ್ಕಿರುವ ವಿತ್ತೀಯ ಅಂಶಗಳ ಕುರಿತಾದ ತೀವ್ರ ಕಾಳಜಿಯನ್ನು ತೋರಿಸುತ್ತದೆ.

ಹೆಚ್ಚಿನ ಹಣಕಾಸನ್ನು ಪಡೆದುಕೊಳ್ಳಲು ಅವಕಾಶವಿದ್ದಾಗ್ಯೂ ಹೆಚ್ಚಿನ ಸಾಲ ಮಾಡಿ ಹೆಚ್ಚಾಗುವ ಋಣದ ಹೊಣೆಗೆ ಪ್ರತಿರೋಧ ತೋರಿರುವುದು ಸರ್ಕಾರ ವಿತ್ತೀಯ ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತರುವ ಕುರಿತಾದ ಬದ್ಧತೆಯನ್ನು ತೋರುತ್ತದೆ. ಸರ್ಕಾರಕ್ಕಿದ್ದ ಬಹುಮತದಿಂದ ವಿತ್ತೀಯ ದುಂದುಗಾರಿಕೆಗೆ ಎಡಮಾಡಿಕೊಡಬಹುದಾದ್ದ ಆದರೆ ಸಮರ್ಥನೆ ಮಾಡಿಕೊಳ್ಳಲಾರದ ಸಂದರ್ಭದಲ್ಲಿ ಈ ಬಜೆಟ್ಟನ್ನು ರೂಪಿಸುವಲ್ಲಿ ಮೃದುವಾದ ಆದರೆ ಪಕ್ವತೆಯ ವಿಧಾನವನ್ನು ಕಂಡುಕೊಳ್ಳಲಾಗಿದೆ. ಬಜೆಟ್ಟು ಆ ಅರ್ಥದಲ್ಲಿ ನಿಜವಾಗಿ ಶ್ಲಾಘನೀಯವಾಗಿದೆ ಮತ್ತು ಹೊಸ ಮಾರ್ಗವನ್ನು ತುಳಿದಿದೆ ಹಾಗೂ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಒಮ್ಮತವನ್ನು ಮೂಡಿಸುವ ಕ್ರಮಗಳಿಂದ ಹೆಚ್ಚಿನ ಸುಧಾರಣೆಗಳಿಗೆ ಹೊಸ ದಾರಿಯನ್ನು ಸೃಜಿಸುತ್ತದೆ. ❑

ವಿಮರ್ಶೆ

# ಬದಲಾಗುತ್ತಿರುವ ಆರ್ಥಿಕತೆ : ಆದ್ಯತೆಗಳ ರಚನೆ

ಪ್ರೊ. ರವೀಂದ್ರ ಧೋಲಾಕಿಯಾ
ಕನ್ನಡಕ್ಕೆ : ವಿ. ಕೃಷ್ಣ



ಬಂಡವಾಳ ಹೂಡಿಕೆಯ ದೃಷ್ಟಿಯಿಂದ ಸಾಲಗಳನ್ನು ತೀರಿಸುವ ಸಾಮರ್ಥ್ಯವನ್ನು ಅಳೆಯುವ ಅಂತಾರಾಷ್ಟ್ರೀಯ ಸಂಸ್ಥೆಗಳು ಈ ಬಜೆಟ್‌ನ್ನು ಶ್ಲಾಘನೀಯವೆಂದು ಪರಿಗಣಿಸಬಹುದು. ಅಷ್ಟೇ ಅಲ್ಲದೆ, ಬಜೆಟ್‌ನಲ್ಲಿ ನಿರೀಕ್ಷಿಸಿರುವ ಹಾಗೆ ಆರ್ಥಿಕತೆಯು ಅಭಿವೃದ್ಧಿಯ ದಾರಿಯಲ್ಲಿ ಕ್ರಮಿಸಿದರೆ, ಈ ಸಂಸ್ಥೆಗಳು ಭಾರತದ ಸಾಮರ್ಥ್ಯದ ರೇಟಿಂಗ್‌ನ್ನು ಹೆಚ್ಚಿಸುವ ಸದವಕಾಶಗಳು ಇರುತ್ತವೆ.

ವಾಸ್ತವವಾಗಿ ಈ ಆಯವ್ಯಯವು ಪ್ರಸಕ್ತ ಆರ್ಥಿಕ ಸಾಲಿನ ಮುಂದಿನ ಎಂಟು ತಿಂಗಳಿಗಾಗಿ ರೂಪಿಸಲಾದ ಆರ್ಥಿಕ ಹಂಚಿಕೆಯಾಗಿದೆ. ಆಮೂಲಾಗ್ರ ಬದಲಾವಣೆಗಾಗಲಿ ಅಥವಾ ಕಳೆದ ಫೆಬ್ರವರಿಯಲ್ಲಿ ಮಂಡಿಸಿದ್ದ ತಾತ್ಕಾಲಿಕ ಆಯವ್ಯಯದಿಂದ ಬೇರೆಯಾಗಿ ತನ್ನದೇ ಆದ ಸ್ವತಂತ್ರ ಚಿಂತನೆಯನ್ನು ಅಳವಡಿಸಲಾಗಲಿ, ಇದಕ್ಕೆ ಇದ್ದ ಅವಕಾಶಗಳು ಕಡಿಮೆ. ಪ್ರಸಕ್ತ ಸರ್ಕಾರದಿಂದ ಜನಸಾಮಾನ್ಯರ ನಿರೀಕ್ಷೆಗಳು ಗಗನವನ್ನು ಮುಟ್ಟುತ್ತಿದ್ದರೂ, ಹಿಂದಿನ ಹಣಕಾಸಿನ ನಿರ್ವಹಣೆಯು ಸೃಷ್ಟಿಸಿದ್ದ ಇಕ್ಕಟ್ಟುಗಳು ಈಗಿನ ಅರ್ಥಸಚಿವರಿಗೆ ಉಂಟುಮಾಡಿರುವ ಪರಿಸ್ಥಿತಿಯನ್ನು ಆರ್ಥಿಕ ಹಾಗೂ ಹಣಕಾಸು ತಜ್ಞರು ಅರ್ಥಮಾಡಿಕೊಂಡಿದ್ದರು. ಇದಲ್ಲದೆ, ಹಿಂದಿನ ಸರ್ಕಾರವು ವಿದ್ಯಾಭ್ಯಾಸದ ಹಕ್ಕು, ಉದ್ಯೋಗ ಮತ್ತು ಆಹಾರ ಭದ್ರತೆ ಮುಂತಾದ ಕಾಯಿದೆಗಳನ್ನು ಜಾರಿಗೆ ತಂದಿದ್ದಿತು. ಈ ಕಾಯಿದೆಗಳ ಸ್ವರೂಪದಲ್ಲಿ ಮತ್ತು ಅವುಗಳನ್ನು ಜಾರಿಗೆ ತರುವಲ್ಲಿ ಸಾಕಷ್ಟು ಬದಲಾವಣೆಗಳನ್ನು ಮಾಡದೆ ಇರುವವರೆಗೆ, ಅರ್ಥಸಚಿವರ ಪಾಲಿಗೆ ಇರುವ ಸ್ವಾತಂತ್ರ್ಯವು ಸೀಮಿತವಾಗಿರುತ್ತದೆ. ನಮ್ಮ ಸಂಸದೀಯ ಹಾಗೂ ಕಾನೂನು ವ್ಯವಸ್ಥೆಗಳ ಅಡಿಯಲ್ಲಿ ಇಂತಹ ಬದಲಾವಣೆಗಳನ್ನು ಜಾರಿಗೆ ತರಲು ಸಾಕಷ್ಟು ಕಾಲಾವಕಾಶಬೇಕಾಗುತ್ತದೆ ಮತ್ತು ಸದ್ಯದ ಬಜೆಟ್‌ನಲ್ಲಿ ಅವುಗಳನ್ನು ಅಳವಡಿಸುವುದು ಸಾಧ್ಯವೂ ಇರಲಿಲ್ಲ. ಅಲ್ಲದೆ, ದೂರಗಾಮಿ ಪರಿಣಾಮಗಳನ್ನು ತರುವಂತಹ ಸುಧಾರಣೆಗಳನ್ನಾಗಲಿ ಅಥವಾ ಬದಲಾವಣೆಗಳನ್ನಾಗಲಿ ಮಾಡಲು 45 ದಿನಗಳ ಅವಧಿ ಬಹಳ ಕಡಿಮೆಯೆ. ಇಂತಹ ವಿಷಯಗಳಲ್ಲಿ ಆತುರದಿಂದ ವರ್ತಿಸಿ ಅನಗತ್ಯ ದುಷ್ಪರಿಣಾಮಗಳನ್ನು ಆಹ್ವಾನಿಸುವ ಬದಲಿಗೆ, ಎಚ್ಚರಿಕೆಯಿಂದ ಹಾದಿಯನ್ನು ಆಯ್ದುಕೊಳ್ಳುವುದು ಸಹಜವಾಗಿಯೇ ಇದೆ.

ಇಂದಿನ ಪರಿಸ್ಥಿತಿಯಲ್ಲಿ, ಪ್ರಸ್ತುತ ಸರ್ಕಾರವು ತಾನು ಮಂಡಿಸಲು ಅವಕಾಶ ಪಡೆದಿರುವ ಐದು ವಾರ್ಷಿಕ ಬಜೆಟ್‌ಗಳಲ್ಲಿ ಇದು ಮೊದಲನೆಯದು. ಪ್ರಸಕ್ತ ಬಜೆಟ್ಟನ್ನು ಈ ದೃಷ್ಟಿಕೋನದಿಂದ ನೋಡಿ ವಿಶ್ಲೇಷಿಸಬೇಕು. ಎರಡನೆಯ ಅಂಶವೆಂದರೆ, ಬಜೆಟ್ಟನ್ನು ಮಂಡಿಸಬೇಕಾಗಿರುವ ಸಮಯದಲ್ಲಿ ಅದಕ್ಕೆ ಹಿಂದೆ ಇದ್ದ ಮತ್ತು ಬದಲಾಗುತ್ತಿರುವ ಆರ್ಥಿಕ ಪರಿಸ್ಥಿತಿಗಳನ್ನೂ ನಾವು ಗಮನಿಸಬೇಕು. ಏಕೆಂದರೆ, ಅವು ಬಜೆಟ್‌ನ ಗುರಿ ಮತ್ತು ಆದ್ಯತೆಗಳನ್ನು ನಿರ್ಧರಿಸುತ್ತವೆ.

**ಆರ್ಥಿಕ ಪರಿಸ್ಥಿತಿ ಮತ್ತು ಆಯವ್ಯಯದ ಆದ್ಯತೆಗಳು**

ಕಳೆದ ಎರಡು ವರ್ಷಗಳಲ್ಲಿ ಅಭಿವೃದ್ಧಿಯ ದರವು ಶೇ. 4.5 ಮತ್ತು 4.7ಕ್ಕೆ ಕುಸಿದಾಗಿನಿಂದ ದೇಶದ ಆರ್ಥಿಕತೆಯ ವಿಷಯದ ಮೇಲೆ ಸಾಕಷ್ಟು ಚರ್ಚೆಗಳು ನಡೆದಿವೆ. ಆದರೂ ಈ ಅವಧಿಯಲ್ಲಿ ಕೃಷಿಕ್ಷೇತ್ರದಲ್ಲಿನ ಅಭಿವೃದ್ಧಿಯ ದರ ಶೇ. 3ರಷ್ಟು ಇದ್ದಿತು. ಇದು ಅಷ್ಟು ನಿರಾಶಾದಾಯಕವಾದ ದರವಲ್ಲ. ಗಣಿಗಾರಿಕೆಯಲ್ಲಿ ಅಭಿವೃದ್ಧಿಯ ದರ ಹಿಮ್ಮೊಗನಾಗಿ ಸಾಗಿತ್ತು; ಉತ್ಪಾದನೆ ಮತ್ತು ನಿರ್ಮಾಣಕ್ಷೇತ್ರಗಳ ಚಟುವಟಿಕೆಗಳಲ್ಲಿ ಬೆಳವಣಿಗೆಯು ನಿಲುಗಡೆಗೆ ಬಂದಿತ್ತು ಮತ್ತು ವ್ಯಾಪಾರ ಹಾಗೂ ಸಾರಿಗೆ ಕ್ಷೇತ್ರಗಳಲ್ಲಿನ ವೇಗ ಮಂದವಾಯಿತು. ಯಾವ ಕ್ರಮಕ್ಕೂ ಜಗ್ಗದೆ ಹಣದುಬ್ಬರ ಸಹ್ಯವಾದ ಮಟ್ಟವನ್ನು ಮೀರಿ ಹೋಗುವುದನ್ನು ಮುಂದುವರಿಸಿತು. ಬಳಕೆವಸ್ತುಗಳ ಬೆಲೆ ಗಗನವನ್ನು

ಐ.ಐ.ಎಂ., ಅಹಮದಾಬಾದ್. email : rdholkia@iimahd.ernet.in

ಮುಟ್ಟುತ್ತಿದ್ದು, ಇದರಿಂದ ಆರ್ಥಿಕತೆಯು ಹಣದುಬ್ಬರ ಮತ್ತು ಅಭಿವೃದ್ಧಿಯ ಸ್ಥಗಿತತೆಗಳ ನಡುವೆ ಸಿಲುಕಿಕೊಂಡಿದೆ ಎಂದು ಜನರು ಯೋಚಿಸುವ ಹಾಗೆ ಆಗಿದೆ. ವಿದೇಶಿ ವಿನಿಮಯ ಪಾವತಿಯ ನಿಟ್ಟಿನಲ್ಲಿ ಚಾಲ್ತಿ ಖಾತೆಯಲ್ಲಿನ ಕೊರತೆ ವ್ಯಾವಹಾರಿಕ ವಿವೇಕದ ಮಿತಿಯಾದ ದೇಶದ ಒಟ್ಟು ಉತ್ಪನ್ನದ (ಜಿ.ಡಿ.ಪಿ.ಯ) ಶೇ. ಮೂರನ್ನು ಮೀರಿ, ಅಸಹನೀಯವಾದ ಎತ್ತರವನ್ನು ಮುಟ್ಟಿತ್ತು ಕಳೆದ ವರ್ಷ ಆಮದು ಕಡಿಮೆಯಾಗಿದ್ದುದರಿಂದ ಮತ್ತು ರಫ್ತಿನ ಮಟ್ಟವನ್ನು ಹಿಂದಿನ ವರ್ಷಗಳ ಮಟ್ಟದಲ್ಲಿಯೇ ಕಾಯ್ದುಕೊಂಡಿದ್ದುದರಿಂದ ಅದು ಶೇ. 1.7ರಷ್ಟಕ್ಕೆ ಇಳಿಯಿತು.

ಆರ್ಥಿಕತೆಯಲ್ಲಿ ಅಭಿವೃದ್ಧಿದರದಲ್ಲಿನ ಸಾಕಷ್ಟು ಕುಸಿತ ಮತ್ತು ಉತ್ಪಾದನಾ ಕ್ಷೇತ್ರದಲ್ಲಿನ ಚಟುವಟಿಕೆಗಳಲ್ಲಿನ ಸ್ಥಗಿತಗಳು ಕುಶಲಕರ್ಮಿಗಳಿಗೆ ಹಾಗೂ ಇತರರಿಗೆ ಇರುವ ಉದ್ಯೋಗಾವಕಾಶಗಳಲ್ಲಿ ಗಮನಾರ್ಹವಾದ ಇಳಿತಕ್ಕೆ ಎಡೆಮಾಡಿಕೊಡುತ್ತದೆ. ಉತ್ಪಾದನೆಯಲ್ಲಿನ ಶೇ. ಒಂದರ ಕುಸಿತ, ಉದ್ಯೋಗಾವಕಾಶಗಳಲ್ಲಿ ಶೇ. 0.18ರಷ್ಟು ಇಳಿತ ಮತ್ತು ಬಡತನದ ರೇಖೆಯಡಿಯಲ್ಲಿ ಇರುವವರ ಸಂಖ್ಯೆಯಲ್ಲಿ ಶೇ. 0.19ರಷ್ಟು ಏರಿಕೆಗೆ ಕಾರಣವಾಗುತ್ತದೆ ಎಂದು ಲೆಕ್ಕ ಹಾಕಲಾಗಿದೆ. ಅಂದರೆ, ಉತ್ಪಾದನೆಯ ದರದಲ್ಲಿನ ಶೇ. ಒಂದರ ಕುಸಿತವು 22 ಲಕ್ಷ ಜನರು ತಮ್ಮ ಉದ್ಯೋಗವನ್ನು ಕಳೆದುಕೊಳ್ಳುವಂತೆ ಮಾಡುತ್ತದೆ. ಮತ್ತು ಅಷ್ಟೇ ಸಂಖ್ಯೆಯ ಜನರನ್ನು ಬಡತನದ ರೇಖೆಯ ಕೆಳಕ್ಕೆ ತಳ್ಳುತ್ತದೆ. ಬಳಕೆವಸ್ತುಗಳ ಬೆಲೆ ಏರಿಕೆಯಿಂದ ಬಡವರಿಗೆ ಭಾರಿ ಪೆಟ್ಟಾಗುತ್ತದೆ. ಈ ಹಿಂದೆ ಮಾಡಲಾದ ದುಂದುಗಾರಿಕೆ ಹಾಗೂ ಜನಪ್ರಿಯವಾದ ಮತ್ತು ಅನುತ್ಪಾದಕ ಕ್ರಮಗಳಿಂದಾಗಿ ಹಣಕಾಸಿನ ವ್ಯವಸ್ಥೆಯಲ್ಲಿ ಗಂಭೀರವಾದ ವೈಫಲ್ಯವುಂಟಾಗಿದೆ. ಈ ಕಾರಣದಿಂದ, ಬೆಳವಣಿಗೆಗೆ ಸಹಕಾರಿಯಾಗಲು ಮತ್ತು ಬಡತನವನ್ನು ಕಡಿಮೆ ಮಾಡಲು ಸರ್ಕಾರಕ್ಕೆ ತನ್ನ ವೆಚ್ಚಗಳನ್ನು ಹೆಚ್ಚುಮಾಡಲು ಸಾಧ್ಯವಿಲ್ಲ. ವಾಸ್ತವವಾಗಿ, 2014ರ ಫೆಬ್ರವರಿಯಲ್ಲಿ ಸರ್ಕಾರವು ನಿಗದಿಗೊಳಿಸಿದ್ದ ಹಣಕಾಸಿನ ಬಲವರ್ಧನೆಯ ಗುರಿಗಳು, ಅವು ಎಷ್ಟೇ ನಂಬಲನರ್ಹವಾಗಿದ್ದರೂ, ಹಾಲಿ ಅರ್ಥಸಚಿವರು ಅವುಗಳನ್ನೇ ಅನಿವಾರ್ಯವಾಗಿ ಅವಲಂಬಿಸಬೇಕಾದಂತಹ ಪರಿಸ್ಥಿತಿ ಇತ್ತು. ಮಂದಗತಿಯ ಬೆಳವಣಿಗೆಯು ಸಮಾಜದ ಮೇಲೆ ಹೊರಿಸಿರುವ ಅಧಿಕ ಹೊರೆಯನ್ನು ಗಮನದಲ್ಲಿಟ್ಟುಕೊಂಡು ಅರ್ಥಸಚಿವರು ಹಣಕಾಸಿನ ವಿಷಯದಲ್ಲಿ ಶಿಸ್ತನ್ನು ಕಾಪಾಡಿಕೊಂಡು ಆರ್ಥಿಕ ಅಭಿವೃದ್ಧಿಗೆ ಮೊದಲ ಆದ್ಯತೆಯನ್ನು ಕೊಡಬೇಕಾಗಿತ್ತು, ಮತ್ತು ಅದೇ ಸಮಯದಲ್ಲಿ ಹಣದುಬ್ಬರವನ್ನೂ ನಿಯಂತ್ರಿಸಿ ಕೆಳಕ್ಕೆ ತರಬೇಕಾಗಿತ್ತು. ಬಂಡವಾಳ ಹೂಡಿಕೆದಾರರಿಗೆ ವ್ಯವಸ್ಥೆಯ ಮೇಲೆ ವಿಶ್ವಾಸ ಮೂಡಿಸುವುದರ ಮೂಲಕ ಮತ್ತು ಸಾಮಾನ್ಯರು, ಖಾಸಗಿ ಕಂಪನಿಗಳು ಮತ್ತು ಸಾರ್ವಜನಿಕ ಉದ್ದಿಮೆಗಳಲ್ಲಿ ಹೆಚ್ಚಿನ ಉಳಿತಾಯಕ್ಕೆ ಒತ್ತುಕೊಡುವ ಮೂಲಕ ಇದನ್ನು ಸಾಧಿಸಬಹುದು.

**ಬಜೆಟ್‌ನ ಬಗೆಗೆ ಇರುವ ನಿರೀಕ್ಷೆಗಳು**

ವ್ಯಾಪಾರಗಾರರು, ಬಂಡವಾಳ ಹೂಡಿಕೆದಾರರು ಮತ್ತು ಅಂತಾರಾಷ್ಟ್ರೀಯ ಸಾಲದ ಅರ್ಹತೆಯನ್ನು ಪರೀಕ್ಷಿಸುವ ಸಂಸ್ಥೆಗಳು, ಈ ಸರ್ಕಾರದ ಮೊದಲ ಬಜೆಟ್‌ನಲ್ಲಿ ಭವಿಷ್ಯದ ಬೆಳವಣಿಗೆಗೆ ತೋರಿಸಿರುವ ಒಂದು ಸ್ಥೂಲ ದಿಕ್ಕನ್ನು, ಮತ್ತು ಅಭಿವೃದ್ಧಿಗೆ ಮತ್ತು ಹಣದುಬ್ಬರದ ನಿಯಂತ್ರಣಕ್ಕೆ ನೀಡಿರುವ ಒತ್ತನ್ನು, ನೀತಿ ನಿರೂಪಣೆಯ ಚೌಕಟ್ಟಿನಲ್ಲಿ ಸ್ಥಿರತೆಯನ್ನು ಕಾಪಾಡಿಕೊಂಡು ಬರಲು ಸರ್ಕಾರದ ಬದ್ಧತೆಯನ್ನು,ಹಾಗೂ ಸರ್ಕಾರದ ಆಡಳಿತದಲ್ಲಿ ಪಾರದರ್ಶಕತೆ ಮತ್ತು ಕಾರ್ಯಕ್ಷಮತೆಗಳನ್ನು ನೋಡಲು ಬಯಸುತ್ತಾರೆ. ಅದೇ ಸಮಯದಲ್ಲಿ, ತೆರಿಗೆಗಳ ಮೂಲಕ ಸರ್ಕಾರದ ಖಜಾನೆಯನ್ನು ತುಂಬುವ ಮಧ್ಯಮವರ್ಗದವರು ಸರ್ಕಾರದಿಂದ ಸ್ವಲ್ಪ ಹೆಚ್ಚಿನ ವಿನಾಯತಿಯನ್ನು ಪಡೆಯಲು ಬಯಸುತ್ತಾರೆ.

2013–14ರ ಆರ್ಥಿಕ ಸಮೀಕ್ಷೆಯ ಬಗೆಗೆ ಬಜೆಟ್‌ನಲ್ಲಿ ಪ್ರಕಟವಾಗಿ ಏನನ್ನೂ ಹೇಳಿಲ್ಲವಾದರೂ, ಯಾವ ಅರ್ಥಮಂತ್ರಿಯೇ ಆದರೂ ಅದನ್ನು ಬಜೆಟ್‌ನ್ನು ಸಿದ್ಧಗೊಳಿಸಲು ಅಗತ್ಯವಾದ ಮೂಲ ದಾಖಲೆಯೆಂದೇ ಪರಿಗಣಿಸುತ್ತಾರೆ. ಹಣಕಾಸು ಸಚಿವರು ತಮ್ಮ ಎರಡು ಗಂಟೆಗಳ ಭಾಷಣದಲ್ಲಿ, ಆರ್ಥಿಕ ಸಮೀಕ್ಷೆಯು ನೀಡಿರುವ ಸಲಹೆಗಳೂ ತಮಗೆ ಸಂಪೂರ್ಣವಾಗಿ ಒಪ್ಪಿಗೆಯಾಗಿದೆಯೆಂಬುದನ್ನು ಮತ್ತು ಅದು ತೋರಿಸಿರುವ ಹಾದಿಯಲ್ಲಿ ನಡೆಯಲು



ತಮ್ಮ ಸರ್ಕಾರವು ಬದ್ಧವಾಗಿದೆಯೆಂಬುದರ ಸೂಚನೆಯನ್ನು ಒಂದೆರಡು ವಾಕ್ಯಗಳಲ್ಲಿ ನೀಡಿದ್ದಿದ್ದರೆ ಅವರು ತಮ್ಮ ವಿರುದ್ಧ ಈಗ ಬರುತ್ತಿರುವ ಅನಗತ್ಯ ಟೀಕೆಗಳಿಂದ ತಪ್ಪಿಸಿಕೊಳ್ಳಬಹುದಿತ್ತು.

ಆದರೂ, ಬಹಿರಂಗವಾಗಿ ಹೇಳದಿದ್ದರೂ, ಹಣಕಾಸಿನ ಸಚಿವರು ಸಮೀಕ್ಷೆಯ ಹಲವಾರು ಸಲಹೆಗಳಿಗೆ ಸಮ್ಮತಿಸಿದ್ದಾರೆ. ಇದು ಸರ್ಕಾರವು ಸಮೀಕ್ಷೆಯಲ್ಲಿ ಹೇಳಿರುವ ಇತರ ಸಲಹೆಗಳನ್ನೂ ಒಪ್ಪಿಕೊಂಡ ಸೂಚನೆಯೆಂದು ನಾವು ಅರ್ಥೈಸಿದರೆ, ಭವಿಷ್ಯದ ಸುಧಾರಣೆಗಳು ಸಾಗಬೇಕಾಗಿರುವ ದಿಕ್ಕಿನ ಬಗೆಗಿನ ತಿಳಿವಳಿಕೆಯು ಸರ್ಕಾರಕ್ಕೆ ಸ್ಪಷ್ಟವಾಗಿದೆಯೆಂದು ಹೇಳಬಹುದು. ಮಾರುಕಟ್ಟೆಯ ವೈಫಲ್ಯಗಳನ್ನು ಸರಿಪಡಿಸಲು, 'ಅನುಮತಿಯನ್ನು ನೀಡಿಲ್ಲದ ಚಟುವಟಿಕೆಗಳು ನಿಷೇಧಿಸಲ್ಪಟ್ಟಿವೆ' ಎಂಬ ಪರಂಪರಾಗತ ನೀತಿಯನ್ನು ಬಿಟ್ಟು, 'ನಿಷೇಧಿಸಿಲ್ಲದ ಚಟುವಟಿಕೆಗಳಿಗೆ ಅನುಮತಿ ಇದೆ' ಎಂಬ ನೀತಿಯನ್ನು ಕೇಂದ್ರೀಯ ಯೋಜನಾ ತತ್ವವನ್ನು ಕಾನೂನು, ಸಂಸ್ಥೆಗಳು ಮತ್ತು ಪ್ರಕ್ರಿಯಾ ವಿಧಾನಗಳು ಅನುಸರಿಸಬೇಕೆಂದು ಸಮೀಕ್ಷೆಯು ಸ್ಪಷ್ಟವಾಗಿ ಹೇಳುತ್ತದೆ. ಈ ಚಿಂತನೆಯನ್ನು ಮತ್ತು ಆರ್ಥಿಕ ಆಡಳಿತದಲ್ಲಿ ಅಗತ್ಯವಾದ ಬದಲಾವಣೆಗಳ ಮೇಲೆ ಅದರ ತಾರ್ಕಿಕ ಪರಿಣಾಮಗಳನ್ನು ಸಮೀಕ್ಷೆಯಲ್ಲಿ ವಿವರವಾಗಿ ಚರ್ಚಿಸಲಾಗಿದೆ.

ನೀತಿಗಳ ಹಂದರದಲ್ಲಿ, ಅದರಲ್ಲಿಯೂ ತೆರಿಗೆಯ ನೀತಿಯಲ್ಲಿ ಮತ್ತು ಪೂರ್ವಾನ್ವಯವಾಗುವಂತಹ ನೀತಿಗಳಲ್ಲಿ, ಬದಲಾವಣೆಯನ್ನು ತರುವಲ್ಲಿ ಸ್ಥಿರತೆಯನ್ನು ಕಾಪಾಡುವ ಆಶ್ವಾಸನೆಯನ್ನು ಹಣಕಾಸಿನ ಸಚಿವರು ತಮ್ಮ ಬಜೆಟ್ ಭಾಷಣದಲ್ಲಿ ನೀಡಿದ್ದಾರೆ. ಹಾಗೆಯೇ, ಪ್ರಸಕ್ತ ಸರ್ಕಾರವು ನೀತಿಯನ್ನು ರೂಪಿಸುವಲ್ಲಿದ್ದ ನಿಷ್ಕ್ರಿಯತೆಯನ್ನು ಮುರಿಯುವಲ್ಲಿ

ವೇಗವಾಗಿಯೇ ತನ್ನ ಕೆಲಸವನ್ನು ಪ್ರಾರಂಭಿಸಿದೆ ಮತ್ತು ಬಹಳ ದಿನಗಳಿಂದ ಕಾಯುತ್ತಿದ್ದ ಹಲವಾರು ಯೋಜನೆಗಳಿಗೆ ಇದ್ದ ಅಡಚಣೆಗಳನ್ನು ನಿವಾರಿಸಿ ಅವುಗಳಿಗೆ ಹಸಿರು ನಿಶಾನೆಯನ್ನು ತೋರಿಸುವಂತಹ ಪರಿಣಾಮಕಾರಿ ನಿರ್ಣಯಗಳನ್ನು ಬಜೆಟ್‌ನ ಪರಿಧಿಯ ಹೊರಗೆ ತೆಗೆದುಕೊಂಡಿದೆ. ಆರ್ಥಿಕ ಅಭಿವೃದ್ಧಿಗೆ ತಮ್ಮ ಸರ್ಕಾರವು ಬದ್ಧವಾಗಿದೆಯೆಂಬುದನ್ನು ಸೂಚಿಸುವಂತಹ ಹಲವಾರು ಕ್ರಮಗಳನ್ನು ಅರ್ಥಸಚಿವರು ತಮ್ಮ ಬಜೆಟ್‌ನಲ್ಲಿ ಸೇರಿಸಿದ್ದಾರೆ.

## ಆರ್ಥಿಕತೆ ಪುನರುಜ್ಜೀವನ

ಉಳಿತಾಯವನ್ನು ವಿನಿಯೋಗಿಸಿ ಕೊಂಡ ಹೆಚ್ಚುವರಿ ಬಂಡವಾಳವನ್ನು ಅಧಿಕ ಉತ್ಪಾದನೆಗಾಗಿ ಪರಿಣಾಮಕಾರಿಯಾಗಿ ಬಳಸಿಕೊಳ್ಳುವ ಮೂಲಕ ಪಡೆಯುವ ಫಲವೇ ಆ ವರ್ಷದ ಆರ್ಥಿಕ ಅಭಿವೃದ್ಧಿ. ಹೆಚ್ಚುವರಿ ಬಂಡವಾಳದ ಉತ್ಪಾದಕತೆಯನ್ನು ಹೆಚ್ಚುವರಿ ಬಂಡವಾಳ ಮತ್ತು ಉತ್ಪಾದನೆಯ ನಡುವಿನ ಅನುಪಾತ (ಐ.ಸಿ.ಓ.ಆರ್) ಮೇಲೆ ಅಳೆಯಲಾಗುತ್ತದೆ. ಈ ಪ್ರಮಾಣವು ಒಂದು ಕನಿಷ್ಠ ಮಾನದಷ್ಟು ಉತ್ಪಾದನೆಯನ್ನು ಮಾಡಲು ಅಗತ್ಯವಾಗಿರುವ ಬಂಡವಾಳವನ್ನು ಸೂಚಿಸುತ್ತದೆ. 2009–11ರ ಅವಧಿಯಲ್ಲಿ ನಮ್ಮ ಹೂಡಿಕೆ ಶೇ. 36.7ರಷ್ಟು ಇದ್ದಿತು ಮತ್ತು ಉತ್ಪಾದನೆಯಲ್ಲಿನ ಸರಾಸರಿ ಹೆಚ್ಚಳವು ಶೇ. 9ರಷ್ಟು ಇದ್ದಿತು. ಅಂದರೆ ಐ.ಸಿ.ಓ.ಆರ್ ಶೇ 4.1ರಷ್ಟು ಹೆಚ್ಚುವರಿ ಬಂಡವಾಳವು ದೇಶದ ಒಟ್ಟು ಉತ್ಪಾದನೆಯಲ್ಲಿ ಶೇ 1ರಷ್ಟನ್ನು ಈ ಅವಧಿಯಲ್ಲಿ ಹೆಚ್ಚಿಸಿತು. ಅಭಿವೃದ್ಧಿಯ ದರವು ಈ ಹಿಂದೆ ಶೇ. 8ರಿಂದ 9ರವರೆಗೆ ಇದ್ದಾಗ ಐ.ಸಿ.ಓ.ಆರ್. ಕೂಡ 4ರಿಂದ 4.1ರಷ್ಟೇ ಇದ್ದಿತು. ಆದರೆ, ಕಳೆದ ಮೂರು ವರ್ಷಗಳಲ್ಲಿ, ನಮ್ಮ ನೀತಿಯನ್ನು ರೂಪಿಸುವಲ್ಲಿದ್ದ ನಿಷ್ಕ್ರಿಯತೆಯಿಂದಾಗಿ, ಬಂಡವಾಳದ ಪೂರ್ಣಪ್ರಯೋಜನವನ್ನು ಪಡೆಯಲಾಗದುದರಿಂದ, ಐ.ಸಿ.ಓ.ಆರ್. ಗಮನಾರ್ಹವಾಗಿ ಹೆಚ್ಚಾಗುತ್ತಾ ಬಂದಿದೆ. ಇದರ ಪರಿಣಾಮವಾಗಿ ನಮ್ಮ ಬಂಡವಾಳ ಹೂಡಿಕೆಯಲ್ಲಿ ಶೇ. 34–35ರಷ್ಟು ಹೆಚ್ಚಳವಿದ್ದರೂ, ನಮ್ಮ ಅಭಿವೃದ್ಧಿಯ ದರ ಇಳಿಯಿತು. ಬಂಡವಾಳದ ಹೂಡಿಕೆಯಲ್ಲಿನ ಹೆಚ್ಚಳದ ದರವು ಈಗಿರುವಷ್ಟರಲ್ಲಿಯೇ ಇದ್ದರೂ, ಶೀಘ್ರ ಹಾಗೂ ಪರಿಣಾಮಕಾರಿ ಕ್ರಮಗಳನ್ನು ತೆಗೆದುಕೊಂಡರೆ, ಐ.ಸಿ.ಓ.ಆರ್‌ನ ದರವನ್ನು ಕಡಿಮೆ ಮಾಡಬಹುದು, ಅಂದರೆ, ಉತ್ಪಾದಕತೆಯ ದರವನ್ನು ಹೆಚ್ಚಿಸಬಹುದು. ಇದು ಬಜೆಟ್‌ನ ಪರಿಧಿಯ ಹೊರಗೆ ನಡೆಯುತ್ತಿದೆ. ಆದರೂ, ವ್ಯಕ್ತಿಗತ ನೆಲೆಯಲ್ಲಿ ತೆರಿಗೆ ವಿನಾಯತಿಗಳನ್ನು ನೀಡುವ ಮೂಲಕ ಹಾಗೂ ಕಾರ್ಪೊರೇಟ್ ವಲಯಕ್ಕೆ ನಿರ್ದಿಷ್ಟ ಬಗೆಯ ಉತ್ತೇಜನಗಳನ್ನು ನೀಡುವ ಮೂಲಕ ಉಳಿತಾಯವನ್ನು ಹೆಚ್ಚಿಸಿ ಅಭಿವೃದ್ಧಿಗೆ ನೆರವಾಗುವ ಕಾರ್ಯಕ್ರಮಗಳು ಬಜೆಟ್‌ನಲ್ಲಿವೆ. ಹಣಕಾಸಿನ ಶಿಸ್ತಿನಿಂದ, ವಾಣಿಜ್ಯದ ವಾತಾವರಣವು ಚೇತರಿಸಿಕೊಳ್ಳುತ್ತಿರುವುದರಿಂದ ಹಾಗೂ ಆದಾಯವನ್ನು ಹೆಚ್ಚಿಸಲು ಸಹಾಯಧನವನ್ನು ಕಡಿಮೆಮಾಡುವುದರಿಂದ ಸರ್ಕಾರಿ ವಲಯವು ಕೂಡ ಹೆಚ್ಚಿನ ಉಳಿತಾಯವನ್ನು ಮಾಡಲು ಸಮರ್ಥವಾಗುತ್ತದೆ.

ಹೆಚ್ಚಿನ ಉಳಿತಾಯದಿಂದ ಬಂಡವಾಳ ಹೂಡಿಕೆಗೆ ಅಧಿಕ ಹಣವು ದೊರಕುವುದರಿಂದ, ಬಡ್ಡಿಯ ದರದ ಮೇಲಿನ ಒತ್ತಡವು ಕಡಿಮೆಯಾಗುತ್ತದೆ. ಹಣಕಾಸಿನ ಕೊರತೆಗೆ ನಿಗದಿಗೊಳಿಸಿರುವ ಕಟ್ಟುನಿಟ್ಟಾದ ಹಾಗೂ ಸವಾಲಿನಂತಿರುವ ಗುರಿಗೆ ಬಜೆಟ್ ಬದ್ಧವಾಗಿರುವುದರಿಂದ ಹೆಚ್ಚುವರಿ ಬಂಡವಾಳದ ಪರಿಣಾಮಕಾರಿ ಹೂಡಿಕೆಗೆ ಖಾಸಗಿ ವಲಯದಿಂದಲೂ ಸಾಕಷ್ಟು ಉಳಿತಾಯದ ಹಣವು ಹರಿದು ಬರುತ್ತದೆ. ಇದು ಕೂಡ ಬಡ್ಡಿಯ ದರದ ಮೇಲಿನ ಒತ್ತಡವನ್ನು ಕಡಿಮೆಗೊಳಿಸಲು ಸಹಾಯಕವಾಗುತ್ತದೆ. ಇಂತಹ ವಾತಾವರಣವು ಆಂತರಿಕ ಹಾಗೂ ವಿದೇಶಿ ಬಂಡವಾಳದ ಹೂಡಿಕೆಗೆ ಉತ್ತೇಜಕವಾಗಿರುತ್ತದೆ. ಪೂರ್ವಾನ್ವಯವಾಗುವ ಹಾಗೆ ನೀತಿಗಳನ್ನು ರೂಪಿಸುವುದಿಲ್ಲ ಅಥವಾ ಬದಲಾಯಿಸುವುದಿಲ್ಲ ಎಂಬ ಮತ್ತು ಸ್ಥಿರವಾದ ನೀತಿಗಳ ಹಂದರವನ್ನು ರೂಪಿಸುವ ಆಶ್ವಾಸನೆಯನ್ನು ನೀಡಿರುವುದು ನೀತಿಗಳಿಗೆ ಸಂಬಂಧಿಸಿದಂತೆ ಹೂಡಿಕೆದಾರರಲ್ಲಿ ಸಂಭವನೀಯ ಅಪಾಯದ ಬಗೆಗೆ ಇರುವ ಹೆದರಿಕೆಯನ್ನು ಕಡಿಮೆಮಾಡುತ್ತದೆ. ಇದು ಕೂಡ ಬಂಡವಾಳ ಹೂಡಿಕೆಯ ವಾತಾವರಣವನ್ನು ಉತ್ತಮಗೊಳಿಸುತ್ತದೆ.

ಅದೇ ಸಮಯದಲ್ಲಿ, ವೆಚ್ಚದ ಬಾಬ್ತುಗಳ ಬಗೆಗೆ ಬಜೆಟ್‌ನಲ್ಲಿ ಮಾಡಿರುವ ಘೋಷಣೆಗಳು, ಆರ್ಥಿಕ ಬೆಳವಣಿಗೆಗೆ ಒಳ್ಳೆಯ ಆರಂಭವನ್ನು ನೀಡುತ್ತವೆ. 8,500 ಕಿಲೋಮೀಟರ್ ಉದ್ದದ ರಸ್ತೆಗಳ



ನಿರ್ಮಾಣ, ವಿಶೇಷ ಆರ್ಥಿಕ ವಲಯಗಳಿಗೆ ಅನುಮತಿಯನ್ನು ನೀಡುವುದು, ಕಲ್ಲಿದ್ದಲಿನ ಅಧಿಕ ಸರಬರಾಜು, 100 ಹೊಸ ಸುಸಜ್ಜಿತ ನಗರಗಳ ನಿರ್ಮಾಣ, ವಸ್ತ್ರೋದ್ಯಮ, ನಿರ್ಮಾಣದ ಉದ್ದಿಮೆ, ದಾಸ್ತಾನು ಮಳಿಗೆ, ಸಣ್ಣ, ಅತಿಸಣ್ಣ ಮತ್ತು ಮಧ್ಯಮ ಗಾತ್ರದ ಕೈಗಾರಿಕೆಗಳು, ಸಾಗರೋತ್ತರವ್ಯಾಪಾರ, ವಿಮಾನನಿಲ್ದಾಣಗಳು, ಪರ್ಯಾಯ ಶಕ್ತಿಮೂಲಗಳನ್ನೂ ಸೇರಿಕೊಂಡಂತೆ ಎಲ್ಲಾ ಶಕ್ತಿಮೂಲಗಳು, ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ, ಬ್ಯಾಂಕಿಂಗ್, ರಕ್ಷಣಾ ಇಲಾಖೆಗೆ ಅಗತ್ಯವಾದ ವಸ್ತುಗಳ ಉತ್ಪಾದನೆ, ಮತ್ತು ಪ್ರವಾಸೋದ್ಯಮ – ಇವುಗಳಿಗೆ ಪ್ರೋತ್ಸಾಹಧನಗಳನ್ನು ನೀಡಿರುವುದು ಆರ್ಥಿಕ ಚಟುವಟಿಕೆಗಳಿಗೆ ನಿಜವಾದ ನೆರವನ್ನು ನೀಡಿ ಅಭಿವೃದ್ಧಿಯನ್ನು ಸಾಧಿಸಲು ಸಹಾಯವಾಗುತ್ತವೆ.

## ಭವಿಷ್ಯದ ಹಣದುಬ್ಬರದ ನಿಯಂತ್ರಣ

ಭಾರತದಲ್ಲಿ ಬಳಕೆದಾರರ ಪದಾರ್ಥಗಳ, ಅದರಲ್ಲಿಯೂ ಆಹಾರಪದಾರ್ಥಗಳ, ಬೆಲೆಯ ಏರಿಕೆಗೆ, ಪೂರೈಕೆಯ ನಿಟ್ಟಿನಲ್ಲಿ ಇರುವ ಅಂಶಗಳೇ ಬಹುತೇಕ ಕಾರಣ ಎಂಬುದು ಎಲ್ಲರಿಗೂ ತಿಳಿದ ವಿಷಯವಾದುದರಿಂದ, ಹಣ್ಣು, ತರಕಾರಿ ಮತ್ತು ಆಹಾರಧಾನ್ಯಗಳನ್ನು ದಾಸ್ತಾನು ಮಾಡಲು ಅಗತ್ಯವಾದ ಅನುಕೂಲಗಳನ್ನು ಒದಗಿಸಲು ಬಜೆಟ್ ಕೆಲವೊಂದು ವಿಶೇಷ ಪ್ರಯತ್ನಗಳನ್ನು ಮಾಡಿದೆ. ಅಲ್ಲದೆ, ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿಗಳ ವ್ಯವಸ್ಥೆಯಲ್ಲಿ ಸುಧಾರಣೆಯನ್ನು ಜಾರಿಗೆ ತರುವ ಮತ್ತು ಅವುಗಳಲ್ಲಿ ರೈತರಿಗೆ ಹೆಚ್ಚಿನ ಸ್ವಾತಂತ್ರ್ಯವನ್ನು ನೀಡುವ ಆಶ್ವಾಸನೆಗಳನ್ನು ಬಜೆಟ್‌ನಲ್ಲಿ ನೀಡಲಾಗಿದೆ. ಇವುಗಳು, ಆರ್ಥಿಕ ಸಮೀಕ್ಷೆಯಲ್ಲಿ ಮಾಡಿರುವ ಸಲಹೆಯ ಪ್ರಕಾರವೇ ಇವೆ. ಬಜೆಟ್‌ನಲ್ಲಿ ಹೇಳಿರುವ ಹಾಗೂ ಬಜೆಟ್‌ನ ಪರಿಧಿಯ ಹೊರಗೆ ತೆಗೆದುಕೊಂಡಿರುವ ಕ್ರಮಗಳಿಂದಾಗಿ, ಅಭಿವೃದ್ಧಿಯ ದರವು ಈಗ

ಇರುವ ಶೇ. 4.7ರ ಮಟ್ಟದಿಂದ ಮೇಲೇರಿ ಶೇ. 6ರ ಮಟ್ಟವನ್ನು ಮುಟ್ಟುತ್ತದೆ ಎಂಬ ನಂಬಿಕೆಯನ್ನು ಬಜೆಟ್ ವ್ಯಕ್ತಪಡಿಸುತ್ತಿದೆ. ಆದರೆ ಪ್ರಕೃತ ವರ್ಷದಲ್ಲಿ ಇನ್ನು ಉಳಿದಿರುವುದು ಕೇವಲ ಎಂಟು ತಿಂಗಳು ಮಾತ್ರವಾಗಿರುವುದರಿಂದ. ಈ ನಂಬಿಕೆ ಮೇಲುನೋಟಕ್ಕೆ ಮಾತ್ರ ವಾಸ್ತವವೆಂದು ತೋರಬಹುದು. ಅಭಿವೃದ್ಧಿಯ ದರವು [ನಿರೀಕ್ಷಿಸಿದುದರ] ಕಾಲುಭಾಗದಷ್ಟಾದರೂ ಹೆಚ್ಚಾದರೆ, ಅದು ಪೂರೈಕೆಯ ವಾತಾವರಣವನ್ನು ಸಡಿಲಗೊಳಿಸಿ, ಬೆಲೆಗಳ ಮೇಲಿನ ಒತ್ತಡವನ್ನು ಕಡಿಮೆಮಾಡುತ್ತದೆ.

ಸರ್ಕಾರದ ವೆಚ್ಚವನ್ನು ಹಿಂದಿನ ದರವಾದ ಜಿ.ಡಿ.ಪಿ.ಯ ಶೇ. 14ರಿಂದ 13.7ಕ್ಕೆ ಇಳಿಸುವ ಮೂಲಕ ಖಾಸಗಿ ವಲಯವು ತನ್ನ ವೆಚ್ಚವನ್ನು ಹೆಚ್ಚುಮಾಡಲು ಅವಕಾಶವನ್ನು ಬಜೆಟ್‌ನಲ್ಲಿ ಕಲ್ಪಿಸಲಾಗಿದೆ. ತೆರಿಗೆ ವಿನಾಯ್ತಿಗಳು ಉಳಿತಾಯದಲ್ಲಿನ ಹೆಚ್ಚಳಕ್ಕೂ ಮತ್ತು ವೆಚ್ಚಕ್ಕೂ ಅವಕಾಶಮಾಡಿಕೊಟ್ಟು ಬಳಕೆ ಮತ್ತು ಹೂಡಿಕೆಗಳನ್ನು ಅಧಿಕಗೊಳಿಸುತ್ತದೆ. ಹಣಕಾಸಿನ ಕೊರತೆಯನ್ನು ಹಿಂದಿನ ದರವಾದ ಜಿ.ಡಿ.ಪಿ.ಯ ಶೇ. 4.6ರಿಂದ ಶೇ. 4.1ಕ್ಕೆ ಇಳಿಸಿರುವುದರಿಂದ, ಒಟ್ಟಾರೆ ಬೇಡಿಕೆಯು ಕಡಿಮೆಯಾಗುತ್ತದೆಯೇ ಹೊರತು ಹೆಚ್ಚಾಗುವುದಿಲ್ಲ. ಇದು ನಿರೀಕ್ಷಿತ ಹಣದುಬ್ಬರದ ದರವನ್ನು ಕಡಿಮೆ ಮಾಡಿ ತನ್ಮೂಲಕ ಮುಂದಿನ ದಿನಗಳಲ್ಲಿ ವಾಸ್ತವ ಹಣದುಬ್ಬರದ ದರವನ್ನು ಕಡಿಮೆ ಮಾಡಲು ಸಹಾಯಕವಾಗುತ್ತದೆ.

**ಹಣಕಾಸುನ ಶಿಸ್ತು**

ಸಾಮಾನ್ಯವಾಗಿ ಎಲ್ಲಾ ಬಜೆಟ್‌ಗಳಲ್ಲಿಯೂ, ಅದರಲ್ಲಿಯೂ ವಿಶೇಷವಾಗಿ ಈ ಬಜೆಟ್‌ನಲ್ಲಿ ಕೂಡ, ಹಣಕಾಸಿನ ಶಿಸ್ತು ನಿರ್ಣಾಯಕವಾಗಿರುತ್ತದೆ. ಸಾಲಗಳನ್ನು ತೀರಿಸುವ ಸಾಮರ್ಥ್ಯವನ್ನು ಅಳೆಯುವ ಸಂಸ್ಥೆಗಳ ಮತ್ತು ಅಂತಾರಾಷ್ಟ್ರೀಯ ಹೂಡಿಕೆದಾರರ ದೃಷ್ಟಿಯಲ್ಲಿ ದೇಶದ ಸಮಷ್ಟಿ ಆರ್ಥಿಕತೆಯನ್ನು ಅವ್ಯವಸ್ಥೆಯಿಂದ ಪಾರುಮಾಡುವ ಈ ಸರ್ಕಾರದ ಸಾಮರ್ಥ್ಯವು ಮತ್ತು ಅದರ ವಿಶ್ವಾಸಾರ್ಹತೆಯು ಹಣಕಾಸಿನ ಶಿಸ್ತಿನ ಮೇಲೆ ಅವಲಂಬಿತವಾಗಿರುತ್ತದೆ. ಹಣಕಾಸಿನ ಹೊಣೆ ಮತ್ತು ಬಜೆಟ್ ನಿರ್ವಹಣೆಯ ಗುರಿಗಳನ್ನು ಸಾಧಿಸಬೇಕಾದರೆ ಅರ್ಥಸಚಿವರು, ಹಣಕಾಸಿನ ಬಲಸಂವರ್ಧನೆಯ ಹಾದಿಗೆ

**ಕೋಷ್ಟಕ 1 : ಹಣಕಾಸಿನ ಕೆಲವು ಅಂಶಗಳು – ಜಿ.ಡಿ.ಪಿ.ಯ ಶೇಕಡಾವಾರು (ಮಾರುಕಟ್ಟೆಯ ಪ್ರಸಕ್ತ ದರಗಳಲ್ಲಿ)**

| ವಿವರಗಳು | 2013–14 ಪರಿಷ್ಕೃತ ಅಂದಾಜು | 2014–15 ಬಜೆಟ್ ಅಂದಾಜು | 2015–16 ಗುರಿ | 2016–17 ಗುರಿ |
|---|---|---|---|---|
| ತೆರಿಗೆ ಆದಾಯ – ಒಟ್ಟು | 10.2 | 10.6 | 10.9 | 11.2 |
| ತೆರಿಗೆ ಆದಾಯ – ನಿವ್ವಳ | 7.4 | 7.6 | 7.4 | 7.6 |
| ಇತರ ಆದಾಯ – ನಿವ್ವಳ | 1.7 | 1.4 | 1.4 | 1.2 |
| ಒಟ್ಟು ವೆಚ್ಚ | 14.0 | 13.7 | 13.1 | 12.5 |
| ಸಹಾಯಧನ | 2.3 | 2.0 | 1.7 | 1.6 |
| ಆದಾಯ ಕೊರತೆ | 3.3 | 2.9 | 2.2 | 1.6 |
| ಸ್ಥಿರಾಸ್ತಿಗಳಿಗೆ ಕೊಡುಗೆ | 1.3 | 1.3 | 2.2 | 1.6 |
| ಒಟ್ಟಾರೆ ಆದಾಯ ಕೊರತೆ | 2.0 | 1.6 | 2.2 | 1.6 |
| ಬಂಡವಾಳದ ಹಿಂತೆಗೆತ + ವಸೂಲಿ | 0.3 | 0.6 | 0.7 | 0.7 |
| ಹಣಕಾಸಿನ ಕೊರತೆ | 4.6 | 4.1 | 3.6 | 3.0 |
| ಸಾಲ/ಜಿಡಿಪಿ | 46.0 | 45.4 | 43.6 | 41.5 |

(ಮಧ್ಯಮಾವಧಿ ಆರ್ಥಿಕ ನೀತಿ ಹೇಳಿಕೆ)

ಬಲವಾಗಿ ಅಂಟಿಕೊಂಡಿರಬೇಕಾದುದು ಬಹಳ ಮುಖ್ಯವಾದುದು. ಹಣಕಾಸಿನ ಬಲಸಂವರ್ಧನೆ ಹಾಗೂ ಆ ಗುರಿಗಳನ್ನು ಸಾಧಿಸಲು ಮೂರು ವರ್ಷಗಳ ಆವರ್ತ ಯೋಜನೆಯನ್ನು ರೂಪಿಸಲು ಅದು ಅವಕಾಶವನ್ನು ನೀಡಿದೆ.

ಈ ಹಾದಿಯನ್ನು 2014ರ ಫೆಬ್ರವರಿಯಲ್ಲಿ ಮಂಡಿಸಿದ ತಾತ್ಕಾಲಿಕ ಬಜೆಟ್‌ನಲ್ಲಿಯೇ ಅಳವಡಿಸಲಾಗಿತ್ತು. ಅಲ್ಲಿ ನೀಡಿರುವ ಗುರಿಗಳು ಕೇವಲ ತೀವ್ರವಾದ ಹಣಕಾಸಿನ ಶಿಸ್ತನ್ನು ಕುರಿತದ್ದಾಗಿದ್ದರೂ, ಮೇಲುನೋಟಕ್ಕೇ ಕಾಣುವ ಕಾರಣಗಳಿಂದಾಗಿ ಅವುಗಳು ವಿಶ್ವಾಸಾರ್ಹತೆಯನ್ನು ಹೊಂದಿರಲಿಲ್ಲ. ಈ ಕಾರಣಕ್ಕಾಗಿ ಅವು ಹೊಸ ಸರ್ಕಾರಕ್ಕೆ ನಿಜವಾದ ಸವಾಲನ್ನು ಹಾಕಿದ್ದವು. ಅರ್ಥಸಚಿವರು ಆ ಸವಾಲುಗಳನ್ನು ಧೈರ್ಯದಿಂದ ಒಪ್ಪಿಕೊಂಡಿದ್ದಾರೆ. ಮೂರುವರ್ಷಗಳ ಆವರ್ತ ಹಣಕಾಸಿನ ಗುರಿಗಳನ್ನು ಸಾಧಿಸಬೇಕಾದರೆ, ಅವು ಸರ್ಕಾರವು ಹಲವಾರು ನೀತಿಗಳ ವಿಷಯದಲ್ಲಿ ತೆಗೆದುಕೊಳ್ಳುವ, ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಹೂಡಿಕೆದಾರ ಸಮುದಾಯಕ್ಕೆ ಅನುಕೂಲಕರವಾಗಿರುವಂತಹ, ನಿರ್ಣಯ ಗಳನ್ನು ಅವಲಂಬಿಸಿರುತ್ತವೆ. (ಕೋಷ್ಟಕ 1ನ್ನು ನೋಡಿ).

ಸ್ಥೂಲವಾಗಿ ತಮ್ಮ ಪಕ್ಷದ ಸಿದ್ಧಾಂತದ ಮೇಲೆ ಅರ್ಥಸಚಿವರು ಈ ಹಣಕಾಸಿನ ಸವಾಲನ್ನು ಸ್ವೀಕರಿಸಿದ್ದಾರೆ. ಸಾಮಾನ್ಯವಾಗಿ ಸರ್ಕಾರದ ಸಾಮರ್ಥ್ಯ ಅಳೆಯಲು ಸರ್ಕಾರದ ವೆಚ್ಚ ಮತ್ತು ಜಿ.ಡಿ.ಪಿ.ಗಳ ನಡುವೆ ಇರುವ ಅನುಪಾತವನ್ನು ಉಪಯೋಗಿಸುತ್ತಾರೆ. ವರ್ಷಗಳು ಕಳೆದಂತೆ ಅನುಪಾತವು ಕಡಿಮೆಯಾಗುತ್ತಾ ಸಾಗುವುದು ಮೇಲಿನ ಕೋಷ್ಟಕ 1ರಿಂದ ಸ್ಪಷ್ಟವಾಗುತ್ತದೆ. ಶೇ. 14ರಿಂದ ಈ ವರ್ಷದ ಅಂತ್ಯದ ವೇಳೆಗೆ ಶೇ. 13.7ಕ್ಕೂ ಮತ್ತು 2016–17ರ ಕೊನೆಯ ವೇಳೆಗೆ ಅದು ಶೇ. 12.5ಕ್ಕೂ ಇಳಿಯುವ ನಿರೀಕ್ಷೆಯಿದೆ. ಸರ್ಕಾರಿ ವೆಚ್ಚದಲ್ಲಿನ ಇಳಿಕೆಯಾದರೂ ಅದರ ಸೇವೆಯಲ್ಲಿ ಇಳಿತವಾಗುವುದಿಲ್ಲ. ಏಕೆಂದರೆ, ಸಾರ್ವಜನಿಕ ಮತ್ತು ಖಾಸಗಿ ಪಾಲುದಾರಿಕೆಯ (ಪಿಪಿಪಿ) ಮೂಲಕ ಖಾಸಗಿ ವಲಯವನ್ನೂ ಒಳಗೊಳ್ಳುವ ಪ್ರಸ್ತಾಪವನ್ನು ಹೊಂದುವ ಉದ್ದೇಶವು ಬಜೆಟ್‌ನಲ್ಲಿದೆ. ಹೀಗೆ, ಸರ್ಕಾರವು ಅನಗತ್ಯ ವೆಚ್ಚವನ್ನು ಮಾಡದೆ ಇರುವ ತನ್ನ ಉದ್ದೇಶವನ್ನು ಘೋಷಿಸಿ, ಖಾಸಗಿ ವಲಯಕ್ಕೆ ವೆಚ್ಚವನ್ನು ಮಾಡುವ ಅವಕಾಶವನ್ನು ಕಲ್ಪಿಸಿಕೊಟ್ಟಿದೆ.

ತೆರಿಗೆಯಿಂದ ಬರುವ ಆದಾಯವು 2013–14ರಲ್ಲಿ ಜಿ..ಡಿ.ಪಿ.ಯ ಶೇ.10.2 ಇದ್ದು ಇದನ್ನು 2016–17ರ ವೇಳೆಗೆ 11.2 ರಷ್ಟಕ್ಕೆ ಏರಿಸುವ ಯೋಜನೆಯನ್ನು

ಬಜೆಟ್‌ನಲ್ಲಿ ಹಾಕಿಕೊಂಡಿದ್ದರೂ, ಈ ಹೆಚ್ಚಳವು ತೆರಿಗೆಯನ್ನು ಹೆಚ್ಚಿಸುವುದರ ಮೂಲಕವೇ ಆಗಬೇಕೆಂದಿಲ್ಲ. ಸೇವಾ ತೆರಿಗೆ ಮತ್ತು ಅಂತರ್ಜಾಲ ತೆರಿಗೆಗಳ ಮೂಲಕ ತೆರಿಗೆಯ ತಳಪಾಯವನ್ನು ವಿಸ್ತರಿಸಿ ಮತ್ತು ತೆರಿಗೆಯ ವ್ಯವಸ್ಥೆಯ ಸಾಮರ್ಥ್ಯವನ್ನು ಹೆಚ್ಚಿಸಿ, ತೆರಿಗೆಗಳಿಂದ ಬರುವ ಆದಾಯವನ್ನು ಪುನಶ್ಚೇತನಗೊಳಿಸುವ ಸಾಧ್ಯತೆಗಳು ಇವೆ. ಆರ್ಥಿಕತೆಯು ತಾವು ನಿರೀಕ್ಷಿಸಿದುದಕ್ಕಿಂತ ಉತ್ತಮವಾಗಿ ಚೇತರಿಸಿಕೊಂಡರೆ, ಹೆಚ್ಚಿನ ಆದಾಯವನ್ನು ಸರಕಾರದ ವೆಚ್ಚಕ್ಕೆ ಉಪಯೋಗಿಸಿಕೊಳ್ಳದೆ, ಮಧ್ಯಮವರ್ಗದವರಿಗೆ ಇನ್ನೂ ಹೆಚ್ಚಿನ ವಿನಾಯತಿಗಳನ್ನು ಕೊಡುವುದಾಗಿ ಅರ್ಥಸಚಿವರು ಆಶ್ವಾಸನೆಯನ್ನು ಇತ್ತಿದ್ದಾರೆ. ಹಿಂದಿನ ವರ್ಷಗಳ ದಾಖಲೆಗಳನ್ನು ನೋಡಿದರೆ, ತೆರಿಗೆಯಿಂದ ಬರುವ ಆದಾಯದಲ್ಲಿ ಹೆಚ್ಚಳವು ಅರ್ಥಸಚಿವರ ನಿರೀಕ್ಷೆಯು ಸಂಭವನೀಯವೆಂದು ತೋರುತ್ತದೆ.

ಪ್ರಕೃತ ವೆಚ್ಚದ ಬಾಬ್ತಿನ ಮುಖ್ಯವಾದ ಅಂಶವೆಂದರೆ ಸರ್ಕಾರ ನೀಡುವ ಸಹಾಯಧನ ಮತ್ತು ಸಾಲದ ಮೇಲೆ ನೀಡಬೇಕಾಗಿರುವ ಬಡ್ಡಿ. ಹಣಕಾಸಿನ ಶಿಸ್ತು ಕ್ರಮವಾಗಿ ಹಣಕಾಸಿನ ಕೊರತೆಯನ್ನು ಕಡಿಮೆ ಮಾಡುತ್ತಾ ಹೋಗುವುದರಿಂದ, ಸಾಲ ಮತ್ತು ಜಿ.ಡಿ.ಪಿ.ಯ ಅನುಪಾತವೂ ಸಾಕಷ್ಟು ಕಡಿಮೆಯಾಗಲೇ ಬೇಕು. ಇದಲ್ಲದೆ, ನಿರೀಕ್ಷಿತ ಹಣದುಬ್ಬರದ ದರದಲ್ಲಿ ಇಳಿಕೆಯಿರುವುದರಿಂದ ಸರ್ಕಾರದ ಸಾಲಗಳ ಮೇಲಿನ ಬಡ್ಡಿಯ ದರವೂ ಕಡಿಮೆಯಾಗುತ್ತದೆ. ಸಾಲದ ಪ್ರಮಾಣ ಹಾಗೂ ಬಡ್ಡಿಯ ದರಗಳು ಕಡಿಮೆಯಾಗುವುದರಿಂದ ಸರ್ಕಾರವು ನೀಡಬೇಕಾಗಿರುವ ಬಡ್ಡಿ ಮತ್ತು ಜಿ.ಡಿ.ಪಿಗಳ ನಡುವಿನ ಅನುಪಾತವೂ ಮುಂದಿನ ವರ್ಷಗಳಲ್ಲಿ ಕಡಿಮೆಯಾಗುತ್ತದೆ.

ಹಣಕಾಸಿನ ನಿರ್ವಹಣೆಯಲ್ಲಿ ದೊಡ್ಡ ಸವಾಲಾಗಿರುವಂತಹುದು ಸಹಾಯಧನದ ಕೊಡುಗೆ. ನೀಡುತ್ತಿರುವ ಒಟ್ಟು 2.6 ಟ್ರಿಲಿಯನ್ ರೂಗಳ ಸಹಾಯಧನದಲ್ಲಿ ಆಹಾರ, ರಸಗೊಬ್ಬರ ಮತ್ತು ಪೆಟ್ರೋಲಿಯಂಗಳ ಪಾಲು 2.5 ಟ್ರಿಲಿಯನ್ ಇದೆ. ಪೆಟ್ರೋಲಿಯಂ ಸಹಾಯಧನವನ್ನು 2013–14ರಲ್ಲಿ ಇರುವ 0.85480 ಟ್ರಿಲಿಯನ್‌ನಿಂದ 2014–15ರ ವೇಳೆಗೆ 0.63427 ಟ್ರಿಲಿಯನ್‌ಗೆ ಇಳಿಸಲಾಗುವುದು. ಉಳಿದೆರಡು ಬಾಬ್ತಿನ ಸಹಾಯಧನಗಳು ಅಲ್ಪ ಪ್ರಮಾಣದಲ್ಲಿ ಏರಬಹುದು, ಪರಿಣಾಮವಾಗಿ ಒಟ್ಟಾರೆ ಸಹಾಯಧನದಲ್ಲಿನ ಏರಿಕೆಯ ಪ್ರಮಾಣ ಕಳೆದ ವರ್ಷದ ಪ್ರಮಾಣದ ಶೇ. 1.5ರಷ್ಟು ಮಾತ್ರ ಇರುತ್ತದೆ. ಆದರೆ, ಮುಂದಿನ ವರ್ಷ ಸಹಾಯಧನದ ನೀಡಿಕೆಯ ಪ್ರಮಾಣವು ಶೇ. 4ರಷ್ಟೂ, ಹಾಗೂ ನಂತರದ ವರ್ಷಗಳಲ್ಲಿ ಶೇ. 5ರಷ್ಟೂ ಇರುತ್ತದೆ. ಇದು 2013–14ರಲ್ಲಿ ಜಿ.ಡಿ.ಪಿ.ಯ ಶೇ. 2.3ರಷ್ಟು ಇರುವ ಸಹಾಯಧನದ ಬಾಬ್ತಿನ ವೆಚ್ಚವು 2016–17ರ ವೇಳೆಗೆ ಶೇ. 1.6ರಷ್ಟಕ್ಕೆ ಇಳಿಯುತ್ತದೆ. ಇದನ್ನು ಸಾಧಿಸುವುದಕ್ಕೆ ಸಾರ್ವಜನಿಕ ವೆಚ್ಚ ನಿರ್ವಹಣಾ ಸಮಿತಿಯೊಂದನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಈ ಸಮಿತಿಯು ನಿರ್ದಿಷ್ಟ ಗುರಿಗಳನ್ನು ಇಟ್ಟುಕೊಂಡು, ಸೋರಿಕೆಗಳನ್ನು ತಡೆಗಟ್ಟಿ, ಸಹಾಯಧನವನ್ನು ನೀಡುವ ರೀತಿಯಲ್ಲಿ ಬದಲಾವಣೆಗಳನ್ನು ತಂದು ವಿವಿಧ ಸಹಾಯಧನಗಳ ನೀಡಿಕೆಯನ್ನು ಸುವ್ಯವಸ್ಥೆಗೆ ತರುತ್ತದೆ.

ಆವರ್ತ ಯೋಜನೆಯ ಮತ್ತೊಂದು ಸಾಧನೆಯೆಂದರೆ, ಆದಾಯ ಕೊರತೆಯನ್ನು ಮುಂದಿನ ವರ್ಷದಿಂದ, ಅಂದರೆ 2015–16ರಿಂದ, ಶೂನ್ಯಕ್ಕೆ ಇಳಿಸುವುದನ್ನು ತನ್ನ ಗುರಿಯನ್ನಾಗಿಸಿಕೊಂಡಿರುವುದು. ಅನುದಾನಗಳನ್ನು ಸ್ಥಿರಾಸ್ತಿಗಳಿಗಾಗಿ ಉದ್ದೇಶಿಸಿರುವ ಮೊತ್ತದಿಂದ ಕಳೆದರೆ ಸಿಗುವ ಆದಾಯ ಕೊರತೆಯೇ ಎಫ್.ಆರ್.ಬಿ.ಎಂ.ನ ಪರಿಷ್ಕೃತ ಗುರಿಯಾಗಿರುತ್ತದೆ.

ಸ್ಥಿರಾಸ್ತಿಗಳಿಗಾಗಿ ಇರುವ ಅನುದಾನಗಳ ವಿಷಯದಲ್ಲಿ ಆವರ್ತ ಯೋಜನೆಯ ಗುರಿಯು ಪ್ರಸಕ್ತವರ್ಷದಲ್ಲಿ ಜಿ.ಡಿ.ಪಿಯ ಶೇ. 1.3ರಷ್ಟು ಇರುವ ಅನುದಾನವನ್ನು ಮುಂದಿನ ವರ್ಷದಲ್ಲಿ ಶೇ. 2.2ರಷ್ಟಕ್ಕೆ ಏರಿಸುವುದು. ಅರ್ಥ ಸಚಿವರು ಹೇಳಿರುವ ಹಾಗೆ, ಅನುದಾನ ನೀಡುವ 'ನರೇಗಾ'ದಂತಹ ಯೋಜನೆಗಳನ್ನು ಉಪಭೋಗಗಳಿಗೆ ವೆಚ್ಚಮಾಡುವುದಕ್ಕಿಂತ ಸ್ಥಿರಾಸ್ತಿಗಳನ್ನು ಸೃಷ್ಟಿಸುವಂತೆ ನೀತಿನಿಯಮಗಳನ್ನು ಬದಲಾಯಿಸುವ ಮೂಲಕ ಸಾಧಿಸಬಹುದು.

**ಮುಕ್ತಾಯದ ಟಿಪ್ಪಣಿ**

ಕೇವಲ 45 ದಿನಗಳಲ್ಲಿ ಸಿದ್ಧಗೊಳಿಸಬೇಕಾಗಿ ಬಂದುದಷ್ಟೇ ಅಲ್ಲದೆ, ಹಣಕಾಸಿನ ಹಾಗೂ ಸಮಷ್ಟಿ ಆರ್ಥಿಕತೆಯಲ್ಲಿನ ಅವ್ಯವಸ್ಥೆಯನ್ನು



ಸರಿದಾರಿಗೆ ತರಬೇಕಾಗಿದ್ದುದರಿಂದ ಪ್ರಸಕ್ತ ಬಜೆಟ್ ನಿಜವಾಗಿಯೂ ಒಂದು ಸವಾಲಿನ ಕೆಲಸವೇ ಆಗಿತ್ತು. ಈಗಿನ ಆರ್ಥಿಕ ಪರಿಸ್ಥಿತಿಯ ಅಗತ್ಯಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಅರ್ಥ ಸಚಿವರು ಇಟ್ಟುಕೊಂಡಿರುವ ಗುರಿಗಳನ್ನು ಸಾಧಿಸಲು ಅನುಕೂಲವಾಗುವಂತಹ ಮತ್ತು ಅರ್ಥಪೂರ್ಣ ಹಲವಾರು ಕಾರ್ಯಕ್ರಮಗಳನ್ನು ಈ ಬಜೆಟ್ ಒಳಗೊಂಡಿದೆ.

ತಮ್ಮ ಸರ್ಕಾರದ ಕಾರ್ಯಕ್ರಮಗಳಿಗಾಗಿ ರೂಪಿಸಿರುವ ಭವಿಷ್ಯದ ಕಾರ್ಯಸೂಚಿ ಹಾಗೂ ಮಾರ್ಗದರ್ಶನದ ವಿಷಯದಲ್ಲಿ ಆರ್ಥಿಕ ಸಮೀಕ್ಷೆಯ ಪ್ರಸ್ತಾಪವನ್ನು ಅರ್ಥಸಚಿವರು ಸ್ಪಷ್ಟವಾಗಿ ಮಾಡಬೇಕಿತ್ತು, ಆದರೆ ಮಾಡಿಲ್ಲ. ಇದರಿಂದಾಗಿ, ಭವಿಷ್ಯದ ವಿಷಯದಲ್ಲಿ ದೃಷ್ಟಿಕೋನ ಹಾಗೂ ಸ್ಪಷ್ಟತೆ ಇಲ್ಲ ಎಂಬ ಆಪಾದನೆಯನ್ನು ಅವರ ಮೇಲೆ ಮಾಡಲಾಗಿದೆ. ಆದರೆ ಈ ಆಪಾದನೆಗಳಿಗೆ ವಿರುದ್ಧವಾಗಿ ಅವರು ಸಮೀಕ್ಷೆಯು ನೀಡಿರುವ ಹಲವು ಸಲಹೆಗಳನ್ನು, ತಮ್ಮ ಬಜೆಟ್‌ನಲ್ಲಿ ಅಳವಡಿಸಿಕೊಂಡಿದ್ದಾರೆ, ಆದರೆ ಅವನ್ನು ಉಲ್ಲೇಖಿಸಿಲ್ಲ ಅಷ್ಟೆ.

ಹೂಡಿಕೆಯಲ್ಲಿನ ಪರಿಸ್ಥಿತಿಯ ಮೇಲೆ, ವ್ಯವಹಾರದ ವಾತಾವರಣದ ಮೇಲೆ, ಅಭಿವೃದ್ಧಿಯನ್ನು ಪುನರುಜ್ಜೀವಿಸುವುದರ ಮೇಲೆ ಹಾಗೂ ನಿರೀಕ್ಷಿತ ಹಣದುಬ್ಬರವನ್ನು ನಿಯಂತ್ರಿಸುವುದರ ಮೇಲೆ ಬಜೆಟ್ ಮತ್ತು ಆವರ್ತ ಯೋಜನೆಗಳಲ್ಲಿನ ಹಣಕಾಸಿನ ಬಲವರ್ಧನಾ ಕಾರ್ಯಕ್ರಮಗಳ ಒಟ್ಟಾರೆ ಪರಿಣಾಮವು ಅನುಕೂಲಕರವಾಗಿರುತ್ತದೆ. ಬಂಡವಾಳ ಹೂಡಿಕೆಯ ದೃಷ್ಟಿಯಿಂದ ಸಾಲಗಳನ್ನು ತೀರಿಸುವ ಸಾಮರ್ಥ್ಯವನ್ನು ಅಳೆಯುವ ಅಂತಾರಾಷ್ಟ್ರೀಯ ಸಂಸ್ಥೆಗಳು ಈ ಬಜೆಟ್‌ನ್ನು ಶ್ಲಾಘನೀಯವೆಂದು ಪರಿಗಣಿಸಬಹುದು. ಅಷ್ಟೇ ಅಲ್ಲದೆ, ಬಜೆಟ್‌ನಲ್ಲಿ ನಿರೀಕ್ಷಿಸಿರುವ ಹಾಗೆ ಆರ್ಥಿಕತೆಯು ಅಭಿವೃದ್ಧಿಯ ದಾರಿಯಲ್ಲಿ ಕ್ರಮಿಸಿದರೆ, ಈ ಸಂಸ್ಥೆಗಳು ಭಾರತದ ಸಾಮರ್ಥ್ಯದ ರೇಟಿಂಗ್‌ನ್ನು ಹೆಚ್ಚಿಸುವ ಸದವಕಾಶಗಳು ಇರುತ್ತವೆ. ❑

# ರೈಲ್ವೆ ಮುಂಗಡ ಪತ್ರ–2014 : ವಾಸ್ತವಿಕತೆಯತ್ತ ?

**ಡಾ. ಎಸ್. ಶ್ರೀರಾಮನ್**
**ಕನ್ನಡಕ್ಕೆ : ಎಸ್. ಎಸ್. ಜೋಶಿ**



**ದೇಶದಲ್ಲಿ ಆಗಬೇಕಾಗಿರುವ ರೈಲ್ವೆ ಯೋಜನೆಗಳ ಬಗ್ಗೆ ಕೂಲಂಕಷ ವಿಮರ್ಶೆ ನಡೆಸುವ ಅಗತ್ಯವಿದೆ. ಜತೆಗೆ ಇದುವರೆಗೆ ಬೆಳಕು ಕಾಣದ ಯೋಜನೆಗಳು ನಿಜವಾಗಲೂ ಅನಗತ್ಯ ಎನಿಸಿದರೆ ರದ್ದು ಮಾಡಬೇಕಾದ ಅವಶ್ಯವಿದೆ.**

ರೈಲ್ವೆ ಸಚಿವ ಶ್ರೀ ಡಿ.ವಿ. ಸದಾನಂದ ಗೌಡ ಅವರು ಸಂಸತ್ತಿನಲ್ಲಿ ಜುಲೈ 8ರಂದು ಮಂಡಿಸಿದ ಪ್ರಸಕ್ತ ವರ್ಷದ ರೈಲ್ವೆ ಬಜೆಟ್‌ಗೆ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ. ಒಂದೆಡೆ ಈ ಮುಂಗಡ ಪತ್ರವನ್ನು ಕೆಲವರು ‘ಉತ್ತಮ ಆರಂಭ’ ಎಂದು ಬಣ್ಣಿಸಿದ್ದರೆ, ಇನ್ನು ಕೆಲವರು ‘ವಾಸ್ತವದತ್ತ ಸಾಗುತ್ತಿರುವ ಲಕ್ಷಣ’ ಎಂದು ಹಾಗೂ ಇನ್ನು ಕೆಲವರು ‘ಸರಿಯಾದ ದಾರಿಯಲ್ಲಿ ಇಟ್ಟಿರುವ ದಿಟ್ಟ ಹೆಜ್ಜೆ’ ಎಂದು ವರ್ಣಿಸಿದ್ದಾರೆ. ಇನ್ನೊಂದೆಡೆ ಇನ್ನೂ ಕೆಲವರು ಇದು ಅಷ್ಟೇನೂ ಹೇಳಿಕೊಳ್ಳುವ ಆದಾಯವಿಲ್ಲದ ಸಾಮಾನ್ಯ ಜನರಿಗೆ ಸಹಕಾರಿ ಆಗದ ಬಜೆಟ್ ಎಂಬ ನೀರಸ ಪ್ರತಿಕ್ರಿಯೆ ನೀಡಿದ್ದಾರೆ.

ರೈಲ್ವೆ ಬಜೆಟ್‌ನ ವಾಸ್ತವ ಮತ್ತು ಅದರ ಶಿಫಾರಸುಗಳ ಸಂಕ್ಷಿಪ್ತ ವಿಮರ್ಶೆಯ ಮೂಲಕ ಅದರ ಬಗ್ಗೆ ವಿವಿಧ ವರ್ಗದ ಜನರು ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ಪರೀಕ್ಷಿಸುವುದು ಇದರ ಉದ್ದೇಶ. ಮೊಟ್ಟ ಮೊದಲಿಗೆ ರೈಲ್ವೆ ಸಚಿವರು ಹೇಳಿರುವ ರೈಲ್ವೆ ಇಲಾಖೆಯ ಈಗಿನ ಸ್ಥಿತಿಗತಿ, ಅದರ ಕಾರ್ಯ ಚಟುವಟಿಕೆಗಳು ಮತ್ತು ಅದರ ಮುಂದಿರುವ ಸವಾಲುಗಳನ್ನು ಒಂದು ಬಾರಿ ಪರಾಮರ್ಶಿಸಿ ನಂತರ ರೈಲ್ವೆ ಬಜೆಟ್‌ನ ಕೆಲವು ಮಹತ್ವದ ಶಿಫಾರಸುಗಳ ಬಗ್ಗೆ ಪರೀಕ್ಷಿಸೋಣ.

### ವಿಷಯಗಳು

ಈ ಮುಂಗಡ ಪತ್ರದಲ್ಲಿ ರೈಲ್ವೆ ಸಚಿವರು ಕಳೆದ 10 ವರ್ಷಗಳ ಅವಧಿಯಲ್ಲಿ ಮೊಟ್ಟ ಮೊದಲನೆಯ ಬಾರಿಗೆ ರೈಲ್ವೆ ಇಲಾಖೆಯು ಎದುರಿಸುತ್ತಿರುವ ನೈಜ ಸಮಸ್ಯೆಗಳ ಬಗ್ಗೆ ತಿಳಿಯಪಡಿಸಿದ್ದಾರೆ. ದೇಶದ ವಿವಿಧ ಭಾಗಗಳಲ್ಲಿ ಈಗಲೂ ಕೂಡ ದೂರದ ಊರುಗಳಿಗೆ ಸರಕು ಸಾಮಗ್ರಿಗಳನ್ನು ಸಾಗಿಸಲು ಸರಿಯಾದ ವ್ಯವಸ್ಥೆ ಇಲ್ಲದಿರುವ ಬಗ್ಗೆ ರೈಲ್ವೆ ಸಚಿವರು ಮುಕ್ತ ಕಂಠದಿಂದ ಒಪ್ಪಿಕೊಂಡಿದ್ದಾರೆ. ಇದು ಅಭಿವೃದ್ಧಿಯ ಪಥದಲ್ಲಿ ತೊಡಕಾಗುತ್ತಿದ್ದು ಈ ವಿಷಯವನ್ನು ಈ ಹಿಂದೆ ಅನೇಕ ಬಾರಿ ನೀತಿ ನಿರೂಪಕರ ಗಮನಕ್ಕೆ ತರಲಾಗಿತ್ತು. ಹಿಂದುಳಿದ ಭಾಗಗಳನ್ನು ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ ಈ ದಿಸೆಯಲ್ಲಿ ಸರ್ಕಾರ ಸ್ಪಂದಿಸಿದ್ದರೆ ಉತ್ತಮವಾಗುತ್ತಿತ್ತು. ಅಂದರೆ ಹಲವು ವರ್ಷಗಳಿಂದ ನೆನೆಗುದಿಗೆ ಬಿದ್ದಿರುವ ಈ ಯೋಜನೆಗಳಿಗೆ ಮುಂಗಡಪತ್ರದಲ್ಲಿ ಇನ್ನಷ್ಟು ಹಣ ಮೀಸಲಿರಿಸಬೇಕಾಗಿತ್ತು. ಆದರೆ ಹಾಗಾಗಿಲ್ಲ. ಬದಲಾಗಿ ಇವುಗಳಿಗೆ ಒದಗಿಸಲಾದ ಅನುದಾನ ಕ್ರಮೇಣ ಕಡಿಮೆಯಾಗುತ್ತಿತ್ತು. ಇದನ್ನು ನೀತಿ ನಿರೂಪಕರು ಗಂಭೀರವಾಗಿ ಪರಿಗಣಿಸಿರಲಿಲ್ಲ.

ದೇಶದ ಎಲ್ಲೆಡೆ ವಿವೇಕಯುಕ್ತ ಬೆಲೆ ನಿಗದಿ ಇಲ್ಲದಿರುವುದು ಅಭಿವೃದ್ಧಿಯ ಪಥದಲ್ಲಿ ಇನ್ನೊಂದು ದೊಡ್ಡ ಅಡೆತಡೆ. ಹಾಗಾದರೆ ವಿವೇಕಯುಕ್ತ ನಿರ್ಧಾರ ಎಂದರೇನು? ಸ್ವಲ್ಪ ಗಮನ ಹರಿಸೋಣ. ಸರಕು ಸಾಗಣೆ ವೆಚ್ಚಕ್ಕೂ ಮತ್ತು ಸರಕು ಸರಬರಾಜಿಗೂ ಪರಸ್ಪರ ಸಂಬಂಧ ಇರಬೇಕಾಗುತ್ತದೆ. ಮಾರುಕಟ್ಟೆಯಲ್ಲಿ ಸರಕು ಸರಬರಾಜು ಹೆಚ್ಚಿದಂತೆ ಸರಕಿನ ಬೆಲೆ ಮತ್ತು ಸರಕು ಸಾಗಣೆ ವೆಚ್ಚ ಕಡಿಮೆ ಆಗಬೇಕು. ಅಂದಾಗ ಮಾತ್ರ ಅಂಥ ಸರಕು ಸಾಗಣೆ ಕಾರ್ಯ ಸಾಧುವಾಗುತ್ತದೆ. ಆದರೆ ಇಂಥ ವಿವೇಕಯುತ ಬೆಲೆ ನಿಗದಿ ವ್ಯವಸ್ಥೆ ಇಲ್ಲದಿರುವುದು ರೈಲ್ವೆ ಇಲಾಖೆಯ ದೊಡ್ಡ ಕೊರತೆ. ಇಲ್ಲಿರುವುದು ಸರಕು ಸರಬರಾಜು

ವಾಲ್ ಚಂದ್ ಹೀರಾಚಂದ್ ಪ್ರೊಫೆಸರ್ ಆಫ್ ಟ್ರಾನ್ಸ್ ಪೋರ್ಟ್ ಎಕನಾಮಿಕ್ಸ್, ಅರ್ಥಶಾಸ್ತ್ರ ವಿಭಾಗ, ಮುಂಬೈ ವಿಶ್ವವಿದ್ಯಾಲಯ.
email : sriraman_siva@hotmail.com

ಹೆಚ್ಚಾದಂತೆ ಸರಕು ಸಾಗಣೆ ವೆಚ್ಚ ಹೆಚ್ಚಾಗುವ ವಿಚಿತ್ರ ವ್ಯವಸ್ಥೆ. ಇದನ್ನು ರಾಮ್ಸೇ ಬೆಲೆ ವ್ಯವಸ್ಥೆ ಎಂದು ಆರ್ಥಿಕ ಪರಿಭಾಷೆಯಲ್ಲಿ ಕರೆಯುತ್ತಾರೆ. ಈ ವ್ಯವಸ್ಥೆಯ ಪ್ರಕಾರ ಮಾರುಕಟ್ಟೆಯಲ್ಲಿ ಸರಕು ಸರಬರಾಜು ಮತ್ತು ಬೇಡಿಕೆ ಹೆಚ್ಚಾಗುತ್ತಿದ್ದಂತೆ ಸರಕಿನ ಬೆಲೆ ಕೂಡ ಹೆಚ್ಚುವುದು. ಹೀಗಾಗಿ ರೈಲ್ವೆ ಇಲಾಖೆಯ ಸರಕು ಸಾಗಣೆ ವ್ಯವಸ್ಥೆ ಮಾರುಕಟ್ಟೆಯಲ್ಲಿ ಸ್ಪರ್ಧಾತ್ಮಕವಾಗಿ ಇರದೇ ಕುಂಠಿತಗೊಳ್ಳುತ್ತಿದೆ.

ಇದು ಭಾರತೀಯ ರೈಲ್ವೆ ಸೇರಿದಂತೆ ವಿವಿಧ ರೈಲ್ವೆ ಇಲಾಖೆಗಳಲ್ಲಿ ಸರಕು ಸಾಗಣೆ ವ್ಯವಸ್ಥೆಗೆ ವಿಧಿಸುವ ದರದ ನಿಗದಿಯ ಸಂದರ್ಭದಲ್ಲಿ ಅಳವಡಿಸುವ ದರ ನಿಗದಿ ವ್ಯವಸ್ಥೆಯಾಗಿತ್ತು. ಸರಕು ಸಾಗಣೆಗೆ ಪರ್ಯಾಯ ವ್ಯವಸ್ಥೆ ಇಲ್ಲದಿರುವಾಗ ಇದು ಉತ್ತಮ ಎನಿಸುತ್ತಿತ್ತು. ಆದರೆ, ಕಳೆದ ಕೆಲ ದಶಕಗಳ ಅವಧಿಯಲ್ಲಿ ಭೂಸಾರಿಗೆ ಸೇವೆ ಉತ್ತಮಗೊಂಡಿರುವ ಹಿನ್ನೆಲೆಯಲ್ಲಿ ಇದು ಪರಿಣಾಮ ರೈಲ್ವೆ ಸರಕು ಸಾಗಣೆ ವಹಿವಾಟಿನ ಮೇಲೆ ಪರಿಣಾಮ ಬೀರಿದೆ. ಸರಕು ಸಾಗಣೆ ದರವನ್ನು ಬೇಕಾಬಿಟ್ಟಿಯಾಗಿ ಹೆಚ್ಚಿಸಿದರೆ ಅದರಿಂದ ರೈಲ್ವೆಗೇ ನಷ್ಟ. ಸರಕು ಸಾಗಣೆ ದರ ತೀರಾ ಹೆಚ್ಚಳವಾದ ಹಿನ್ನೆಲೆಯಲ್ಲಿ ಸರಕು ಸಾಗಣೆಯ ವಹಿವಾಟು ರೈಲ್ವೆಯಿಂದ ರಸ್ತೆ ಸಾರಿಗೆ ವ್ಯವಸ್ಥೆಯತ್ತ ಹೊರಳುತ್ತಿದೆ. ಹೀಗಾಗಿ ರೈಲ್ವೆ ಇಲಾಖೆ ಸರಕು ಸಾಗಣೆ ದರವನ್ನು ನಿಗದಿಪಡಿಸುವ ಸಂದರ್ಭದಲ್ಲಿ ಇದನ್ನು ಗಮನದಲ್ಲಿ ಇಟ್ಟುಕೊಳ್ಳಬೇಕಾದ ಅಗತ್ಯವಿದೆ.

ಉನ್ನತ ಮಟ್ಟದ ಸಮಿತಿಯ ಶಿಫಾರಸಿನ ನಂತರ ಕಳೆದ ಮೂರು ದಶಕಗಳಲ್ಲಿ ಸರಕು ಸಾಗಣೆ ದರದಲ್ಲಿ ಭಾರಿ ಪ್ರಮಾಣದಲ್ಲಿ ಹೆಚ್ಚಳವಾಗಿದೆ. ಇದೇ ವೇಳೆಗೆ ಪ್ರಯಾಣ ದರವನ್ನು ಕಡಿಮೆಯಾಗಿಯೇ ಉಳಿಸಿಕೊಳ್ಳಲಾಗಿದೆ ಎಂದು ಬಜೆಟ್ ನಲ್ಲಿ ವಿವರಿಸಲಾಗಿದೆ. 2000–01ರಲ್ಲಿ ಪ್ರಯಾಣ ದರದಲ್ಲಿ ಆಗುತ್ತಿದ್ದ ಹಾನಿ ಪ್ರತಿ ಕಿಲೋಮೀಟರ್ ಗೆ 10 ಪೈಸೆಯಷ್ಟಿತ್ತು. 2012–13ರಲ್ಲಿ ಈ ಹಾನಿ ಪ್ರತಿ ಕಿಲೋಮೀಟರ್‌ಗೆ 23 ಪೈಸೆಯಷ್ಟು ಹೆಚ್ಚಳವಾಗಿದೆ. ಸರಕು ಸಾಗಣೆ ದರದ ಏರಿಕೆಗೆ ಹೋಲಿಸಿದರೆ ಪ್ರಯಾಣ ದರದಲ್ಲಿ ಆಗಿರುವ ಹೆಚ್ಚಳ ತೀರಾ ಕಡಿಮೆ. ಇದನ್ನು ಕಾಲಾನುಕ್ರಮದಲ್ಲಿ ಸರಿಪಡಿಸಬೇಕಾಗಿದೆ. ರೈಲ್ವೆ ಇಲಾಖೆಯಿಂದ ಒದಗಿಸಲಾಗುತ್ತಿರುವ ವಿವಿಧ ಸೌಲಭ್ಯಗಳಿಗೆ ತಗುಲುವ ವೆಚ್ಚದ ಸರಿಯಾದ ಅಂದಾಜು ವೆಚ್ಚ ತಯಾರಿಸಿದ ಬಳಿಕವಷ್ಟೇ ಪ್ರಯಾಣ ದರದಲ್ಲಿನ ಹೆಚ್ಚಳದ ಬಗ್ಗೆ ಯೋಚಿಸಬಹುದು. ಜತೆಗೆ ವಿವಿಧ ಸೌಲಭ್ಯಗಳಿಗೆ ತಗುಲುವ ವೆಚ್ಚದ ಅಂದಾಜು ವೆಚ್ಚವನ್ನೂ ಕೂಡ ಕಾಲಕಾಲಕ್ಕೆ ಪರಿಷ್ಕರಿಸಬೇಕು. ಅಂದಾಗ ಮಾತ್ರ ವಿವೇಕಯುಕ್ತ ದರ ವಿಧಿಸಲು ಸಾಧ್ಯವಾಗುತ್ತದೆ. ರೈಲ್ವೆಯು ಇತರ ರಸ್ತೆ ಸಾರಿಗೆ ಸೇರಿದಂತೆ ಇತರ ಸಾರಿಗೆ ಪ್ರಕಾರಗಳಿಗೆ ಹೋಲಿಸಿದರೆ ಪ್ರಯಾಣಿಕ ಸ್ನೇಹಿ. ಹೀಗಾಗಿ ಇಲ್ಲಿ ಪ್ರಯಾಣದ ದರ ಕಡಿಮೆ ಇಡುವುದು ಅನಿವಾರ್ಯ. ಆದರೆ ಇದರಿಂದಾಗುವ ಹಾನಿಯನ್ನು ಪರಿಸರಕ್ಕೆ ಹಾನಿಯಾಗುವಂಥ ಸಾರಿಗೆ ವಿಧಾನಗಳಿಂದ ಸರಿದೂಗಿಸಿಕೊಳ್ಳಬೇಕೆ ವಿನಾ ರೈಲ್ವೆಯದೇ ಇತರ ಬಳಕೆದಾರರ ಮೇಲೆ ಹೆಚ್ಚು ದರವನ್ನು ವಿಧಿಸುವ ಮೂಲಕ ಅಲ್ಲ ಎಂಬುದನ್ನು ಇಲಾಖೆ ಗಮನಿಸಬೇಕು. ಅಂದರೆ ಇಲಾಖೆಯಲ್ಲಿ ಒಂದು ಭಾಗದ ಹಾನಿಯನ್ನು ಸರಿದೂಗಿಸಲು ಇನ್ನೊಂದು ಭಾಗದ ಮೇಲೆ ಅದನ್ನು ವಿಧಿಸುವ ವಿಧಾನ (ಕ್ರಾಸ್ ಸಬ್ಸಿಡೈಸೇಷನ್) ತಪ್ಪಬೇಕು.

**ಮುಂಗಡ ಪತ್ರ : ಶಿಫಾರಸುಗಳು**

ದೇಶದಲ್ಲಿ ಬಾಕಿ ಉಳಿದಿರುವ ಬಹಳ ದೊಡ್ಡ ಪ್ರಮಾಣದ ಯೋಜನೆಗಳನ್ನು ಪರಿಗಣಿಸಿದರೆ (ಇವುಗಳಲ್ಲಿ ಬಹುತೇಕ ಯೋಜನೆಗಳು ಇನ್ನೂ ಪ್ರಾರಂಭವನ್ನೇ ಕಂಡಿಲ್ಲ) ಸಚಿವರು ಪ್ರಕಟಿಸಿರುವ ಹೊಸ ಯೋಜನೆಗಳಿಗೆ ವಿರಾಮ ಹೇಳಿರುವುದು ಸ್ವಾಗತಾರ್ಹ ಸಂಗತಿ. ಹಾಗೆ ನೋಡಿದರೆ ರೈಲ್ವೆ ಇಲಾಖೆಯು 2009ರಲ್ಲಿ ಪ್ರಕಟಿಸಿದ ಶ್ವೇತಪತ್ರವು ದೇಶದಲ್ಲಿ ಬಾಕಿ ಉಳಿದಿರುವ ಯೋಜನೆಗಳನ್ನು ಪೂರ್ಣಗೊಳಿಸುವ ನಿಟ್ಟಿನಲ್ಲಿ ಮಾರ್ಗದರ್ಶಿ ಪತ್ರವಾಗಿರಬೇಕಿತ್ತು. ಆದರೆ ಅಂಥ ಪ್ರಯತ್ನವೇ ನಡೆಯಲಿಲ್ಲ. ಈಗಲೂ ತಡವಾಗಿಲ್ಲ. ದೇಶದಲ್ಲಿ ಆಗಬೇಕಾಗಿರುವ ರೈಲ್ವೆ ಯೋಜನೆಗಳ ಬಗ್ಗೆ ಕೂಲಂಕಷ ವಿಮರ್ಶೆ ನಡೆಸುವ ಅಗತ್ಯವಿದೆ. ಜತೆಗೆ ಇದುವರೆಗೆ ಬೆಳಕು ಕಾಣದ ಯೋಜನೆಗಳು ನಿಜವಾಗಲೂ ಅನಗತ್ಯ ಎನಿಸಿದರೆ ರದ್ದು ಮಾಡಬೇಕಾದ ಅವಶ್ಯವಿದೆ.

ದೇಶದ ವಿವಿಧ ಭಾಗಗಳನ್ನು ಸಂಪರ್ಕಿಸಬಹುದಾದ ಇದುವರೆಗೆ



ಕಾರ್ಯಗತವಾಗದಿರುವ ರೈಲು ಮಾರ್ಗಗಳು, ಹಿಂದುಳಿದ ಭಾಗಗಳನ್ನು ಸಂಪರ್ಕಿಸುವ ಮಾರ್ಗಗಳು, ದೊಡ್ಡ ಪ್ರಮಾಣದಲ್ಲಿ ಸರಕು ಸಾಗಣೆಗೆ ಸಹಕಾರಿಯಾಗಬಲ್ಲ ಯೋಜನೆಗಳಿಗೆ ಆದ್ಯತೆ ನೀಡುವ ಅಗತ್ಯವಿದೆ. ಅಗಾಧ ಪ್ರಮಾಣದಲ್ಲಿ ಸರಕು ಸಾಗಣೆಯಾಗುವ ಪ್ರದೇಶಗಳಲ್ಲಿ ಈಗಿರುವ ಸೌಲಭ್ಯಗಳನ್ನು ಮೇಲ್ದರ್ಜೆಗೆ ಏರಿಸುವ ಜತೆಗೆ ರೈಲು ಗಾಡಿಗಳ ವೇಗವನ್ನು ಹೆಚ್ಚಿಸಬೇಕೆಂಬ ಬೇಡಿಕೆ ಇದೆ. ಸರಕು ಸಾಗಣೆ ಹೆಚ್ಚಾಗಿರುವ ಪ್ರದೇಶದಲ್ಲಿ ಇರುವ ರೈಲುಗಳ ವೇಗ ವರ್ಧನೆಗೆ ಹೆಚ್ಚಿನ ಹಣಕಾಸಿನ ನೆರವು ಒದಗಿಸಬೇಕೆಂಬುದು ಒಪ್ಪಬಹುದಾದ ವಾದವೇ. ಈ ದಿಸೆಯಲ್ಲಿ ಬಂಡವಾಳ ತೊಡಗಿಸಲು ಕೆಲವು ವಿದೇಶಿ ಕಂಪೆನಿಗಳೂ ಉತ್ಸಾಹವನ್ನೂ ತೋರಿವೆ. ಆದರೆ ಇದು ಹೆಚ್ಚು ಖರ್ಚುದಾಯಕ ಬಾಬ್ತು ಆದ ಕಾರಣ ಕಾರ್ಯ ಸಾಧುವಲ್ಲ. ರೈಲ್ವೆ ಇಲಾಖೆ ಈ ಯೋಜನೆಗಳಿಗೆ ಹಣಕಾಸಿನ ನೆರವು ಒದಗಿಸುವ ಸ್ಥಿತಿಯಲ್ಲಿ ಇಲ್ಲ. ಇನ್ನು ಪರ್ಯಾಯ ಎಂದರೆ ರಾಷ್ಟ್ರೀಯ ಹೆದ್ದಾರಿಗಳ ವಿಸ್ತರಣೆಯಲ್ಲಿ ಅನುಸರಿಸಿದಂತೆ ಸಾರ್ವಜನಿಕ ಖಾಸಗಿ ಸಹಭಾಗಿತ್ವದ ಯೋಜನೆಯನ್ನು ಅಳವಡಿಸಿಕೊಳ್ಳುವುದು. ಆದರೆ ದೇಶದಲ್ಲಿ ಈ ಹಿಂದೆ ಕೈಗೊಳ್ಳಲಾದ ಸುವರ್ಣ ಚತುಷ್ಕೋಣ ರಾಷ್ಟ್ರೀಯ ಹೆದ್ದಾರಿ ಯೋಜನೆಯಡಿ ಖಾಸಗಿ ಸಹಭಾಗಿತ್ವದಲ್ಲಿ ನಿರ್ಮಿಸಿರುವ ರಸ್ತೆಗಳು ಇನ್ನೂ ಕಾರ್ಯಸಾಧುವಾಗುತ್ತಿಲ್ಲ ಎಂಬುದು ಎಲ್ಲರಿಗೆ ಗೊತ್ತಿರುವ ಸಂಗತಿ. ಸರ್ಕಾರ ಈಗಲೂ ತನ್ನ ಬೊಕ್ಕಸದಿಂದ ಹಣ ಕೊಡಬೇಕಾಗಿದೆ. ಇದೆಲ್ಲ ಏಕಾಯಿತು ಎಂದರೆ ಈ ಯೋಜನೆಯಿಂದ ಆಗಬಹುದೆಂದು ನಿರೀಕ್ಷಿಸಿದಷ್ಟು ಸಂಚಾರ ಇಲ್ಲಿ ಕಂಡುಬರದಿರುವುದೇ ಇದಕ್ಕೆ ಕಾರಣ.

ಯೋಜನೆಗಳು ಜಾರಿಯಾದಾಗ ಹೆಚ್ಚಬಹುದಾದ ಸಂಚಾರದ ಪ್ರಮಾಣವನ್ನು ಕೊಂಚ ಅತಿಯಾಗಿಯೇ ಹೆಚ್ಚಿಸುವುದು ಇಲ್ಲಿರುವ ಮೂಲ ಸಮಸ್ಯೆ. ದೈನಂದಿನ ಸಂಚಾರ ಹೆಚ್ಚಳ ಸ್ವಲ್ಪ ಮಟ್ಟಿಗೆ ಹೆಚ್ಚಬಹುದು.



ಆದರೆ ಬುಲೆಟ್ ರೈಲಿನ ವಿಚಾರದಲ್ಲಿ ಇದು ನಿಜವಾಗದಿರಬಹುದು. ಉದ್ದೇಶಿತ ಬುಲೆಟ್ ರೈಲುಗಳಲ್ಲೂ ಸಹ ಸ್ವಲ್ಪ ಮಟ್ಟಿಗೆ ಸಂಚಾರದ ಪ್ರಮಾಣ ಸ್ವಲ್ಪ ಮಟ್ಟಿಗೆ ಹೆಚ್ಚಬಹುದಾದರೂ ಇಂಥ ರೈಲುಗಳ ಓಡಾಟಕ್ಕೆ ಮುನ್ನ ಅದಕ್ಕಾಗಿ ಹೂಡಬೇಕಾದ ಬಂಡವಾಳವನ್ನು ಗಮನಿಸಿದರೆ ಈ ಹೆಚ್ಚಳ ಅತ್ಯಲ್ಪ ಎನಿಸಿ ಇವು ಆರ್ಥಿಕವಾಗಿ ಕಾರ್ಯ ಸಾಧುವಾಗದೇ ಇರುವ ಸಾಧ್ಯತೆಗಳೇ ಹೆಚ್ಚು. ಹೀಗಾಗಿ ಇಂಥ ಯೋಜನೆಗಳನ್ನು ಖಾಸಗಿಯವರಿಗೆ ವಹಿಸಿದರೆ ಅವರು ವಾಣಿಜ್ಯದ ದೃಷ್ಟಿಯಿಂದ ಯೋಜನೆಯನ್ನು ರೂಪಿಸಿ ಅನುಷ್ಠಾನಗೊಳಿಸಿ ಲಾಭ ಪಡೆಯುವಲ್ಲಿ ಯಶಸ್ವಿಯಾಗಬಹುದು. ಸರಕು ಸಾಗಣೆಗೆ ಪ್ರತ್ಯೇಕ ವ್ಯವಸ್ಥೆ ಮಾಡಲು ಹೊರಟಿರುವ ರೈಲ್ವೆ ಬಜೆಟ್ ಶಿಫಾರಸು ಕೂಡ ಅಷ್ಟೊಂದು ಫಲಪ್ರದವಾಗಲಿಕ್ಕಿಲ್ಲ. ಭಾರತಕ್ಕೆ ಈಗ ಬೇಕಾಗಿರುವುದು ಏನೆಂದರೆ ಈಗಿರುವ ಸರಕು ಸಾಗಣೆ ವ್ಯವಸ್ಥೆಯನ್ನು ಅದರಲ್ಲೂ ದೂರದ ಪ್ರಯಾಣದ ಮಾರ್ಗಗಳನ್ನು ಮೇಲ್ದರ್ಜೆಗೆ ಏರಿಸುವುದು.

ಇದರ ಜತೆಗೆ ನಗರ ಪ್ರದೇಶಗಳಲ್ಲಿ ಪ್ರಯಾಣಿಕರ ಸಾರಿಗೆ ವ್ಯವಸ್ಥೆಯನ್ನೂ ವಿಸ್ತರಿಸುವುದು ಕೂಡ ಅಷ್ಟೇ ಮುಖ್ಯ. ಜತೆಗೆ ದೇಶದ ವಿವಿಧ ಭಾಗಗಳಿಗೆ ಸುಲಭವಾಗಿ ಮತ್ತು ಸುಗಮವಾಗಿ ಓಡಾಡುವ ದಿಸೆಯಲ್ಲಿ ಸಂಚಾರ ವ್ಯವಸ್ಥೆ ಬಲಪಡಿಸುವ ಅಗತ್ಯವಿದೆ. ಮೇಲ್ನೋಟಕ್ಕೆ ರಮ್ಯವೆಂಬಂತೆ ಅನಿಸುವ ಬುಲೆಟ್ ರೈಲುಗಳಿಗಿಂತ ಇಂಥ ಕ್ರಮಗಳನ್ನು ಜಾರಿಗೆ ತರುವುದು ಹೆಚ್ಚು ಫಲಪ್ರದವಾದೀತು.

ಬಜೆಟ್‌ನಲ್ಲಿ ಹೊಸ ರೈಲುಗಳನ್ನು ಓಡಿಸುವ ಪ್ರಸ್ತಾವ ಮಾಡಿರುವುದು ಈ ಹಿಂದಿನ ರೈಲ್ವೆ ಬಜೆಟ್‌ಗಳಲ್ಲಿ ಮಾಡಿದಂತೆಯೇ ಜನ ಬೆಂಬಲವನ್ನು ಹೆಚ್ಚಿಸಿಕೊಳ್ಳುವ ಒಂದು ತಂತ್ರ ಮಾತ್ರ. ಈ ದಿಸೆಯಲ್ಲಿ ಹೇಳಬಹುದಾದದ್ದು ಏನೆಂದರೆ ತಜ್ಞರು ಹೇಳುವಂತೆ ಈ ಹೊಸ ರೈಲುಗಳ ಓಡಾಟ ಅವಶ್ಯವಿದೆಯೇ ಎಂಬುದನ್ನು ಕೂಲಂಕಷವಾಗಿ ಪರಿಶೀಲಿಸುವುದು ಮತ್ತು ತೀರಾ ಅಗತ್ಯವಾದಲ್ಲಿ ಮಾತ್ರ ಆದ್ಯತೆಯ ಮೇರೆಗೆ ಓಡಿಸುವುದು ಇಂದಿನ ಅಗತ್ಯ. ರೈಲ್ವೆ ಜಾಲದ ವಿವಿಧ ಕಡೆಗಳಲ್ಲಿ ಪ್ರಯಾಣಿಕರು ಮತ್ತು ಸರಕು ಸಾಗಣೆಗೆ ಒಂದೇ ಸೌಲಭ್ಯ (ಒಂದೇ ಮಾರ್ಗ) ಬಳಸುವ ಕಾರಣ ಪ್ರಯಾಣಿಕರಿಗಾಗಿ ಹೊಸ ರೈಲುಗಳನ್ನು ಓಡಿಸುವುದು ಕೆಲವು ಬಾರಿ ಸರಕು ಸಾಗಣೆಯ ಸುಗಮ ಓಡಾಟಕ್ಕೆ ಅಡ್ಡಿಯಾಗಬಹುದು. ಹೀಗಾಗಿ ಸಣ್ಣ ಸಣ್ಣ ದೂರದ ಪ್ರಯಾಣಕ್ಕೆ ರೈಲನ್ನು ಅವಲಂಬಿಸದೇ ರಸ್ತೆ ಸಾರಿಗೆ ವ್ಯವಸ್ಥೆಯನ್ನು ಅವಲಂಬಿಸುವುದು ಹೆಚ್ಚು ಫಲಕಾರಿಯಾಗುತ್ತದೆ.

ದೇಶದ ವಿವಿಧ ಬೃಹತ್ ಮಹಾನಗರಗಳಲ್ಲಿ ಉಪ ನಗರಗಳನ್ನು ಪರಸ್ಪರ ಜೋಡಿಸುವ ನಿಟ್ಟಿನಲ್ಲಿ ಯೋಜನೆ ರೂಪಿಸಿರುವುದಕ್ಕೆ ಸಹಜವಾಗಿಯೇ ಈ ನಗರಗಳ ನಾಗರಿಕರಿಂದ ಸ್ವಾಗತ ವ್ಯಕ್ತವಾಗಿದೆ. ಈ ಹಿಂದೆ ಮೆಟ್ರೊಪಾಲಿಟನ್ ನಗರಗಳ ಉಪನಗರಗಳಿಗೆ ಪರಸ್ಪರ ಸಂಪರ್ಕ ಕಲ್ಪಿಸಲು ರಸ್ತೆ ಸಾರಿಗೆ ವ್ಯವಸ್ಥೆ ಕಲ್ಪಿಸುವ ಯೋಜನೆಗಳು ವಿಫಲವಾಗಿರುವ ಹಿನ್ನೆಲೆಯಲ್ಲಿ ರೈಲ್ವೆ ಬಜೆಟ್ ನಲ್ಲಿ ಪ್ರಸ್ತಾವಿಸಲಾಗಿರುವ ಉಪನಗರ ಸಂಪರ್ಕ ಜೋಡಣಾ ಯೋಜನೆಗೆ ವ್ಯಾಪಕ ಹರ್ಷ ವ್ಯಕ್ತವಾಗಿದೆ. ರೈಲ್ವೆ ಇಲಾಖೆಯು ಈ ದಿಸೆಯಲ್ಲಿ ಸೇವೆ ಒದಗಿಸಬಹುದಾದ ಸ್ಥಳೀಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಯೋಜನೆಗೆ ತ್ವರಿತ ಚಾಲನೆ ನೀಡುವ ಅಗತ್ಯವಿದೆ.

ಈಗಾಗಲೇ ಜಾರಿಯಲ್ಲಿರುವ ನಗರಗಳಲ್ಲಿ ಉಪನಗರ ರೈಲು ಸೇವೆಯನ್ನು ಸ್ಥಳೀಯರಿಗೆ ವಹಿಸುವುದು ಸೂಕ್ತವಾಗಬಹುದು. ಆದರೆ ಬೆಂಗಳೂರಿನಂಥ ನಗರಗಳಲ್ಲಿ ನಗರ ರೈಲು ವ್ಯವಸ್ಥೆ ನಗರಾಭಿವೃದ್ಧಿ ಸಚಿವಾಲಯದ ವ್ಯಾಪ್ತಿಗೆ ಒಳಪಟ್ಟಿದ್ದು ಅದೇ ವ್ಯವಸ್ಥೆಯನ್ನು ಮುಂದುವರಿಸುವುದು ಒಳ್ಳೆಯದು. ಸ್ಥಳೀಯ ಅವಶ್ಯಕತೆಗಳಿಗೆ ತಕ್ಕಂತೆ ಸ್ಥಳೀಯ ಸಂಸ್ಥೆಗಳು ಮತ್ತು ಸರ್ಕಾರಿ ಖಾಸಗಿ ಸಹಭಾಗಿತ್ವದಲ್ಲಿ ವ್ಯವಸ್ಥೆ ಕಲ್ಪಿಸಿಕೊಳ್ಳಲು ಇದು ಸಹಕಾರಿಯಾಗಲಿದೆ, ಇದನ್ನು ಭಾರತೀಯ ರೈಲ್ವೆಗೆ ವಹಿಸುವುದು ಅಷ್ಟು ಸಮಂಜಸವಾಗಲಾರದು.

ಯೋಜನೆಯ ಅನುಷ್ಠಾನಕ್ಕೆ ಸಂಬಂಧಪಟ್ಟಂತೆ ವಿವಿಧ ಇಲಾಖೆಗಳ ಮಧ್ಯೆ ಸಮನ್ವಯ ಸಮಿತಿ ನೇಮಿಸಲು ರೈಲ್ವೆ ಇಲಾಖೆ ಮುಂದಾಗಿದೆ. ಯೋಜನೆಗಳ ಅನುಷ್ಠಾನದ ಸಂದರ್ಭದಲ್ಲಿ ವಿವಿಧ ರಾಜ್ಯಗಳು ಮತ್ತು ಇಲಾಖೆಯ ನಡುವೆ ತೀರಾ ಅತ್ಯಲ್ಪ ಸಮನ್ವಯ ಇರುವ ಹಿನ್ನೆಲೆಯಲ್ಲಿ ಇಂಥದೊಂದು ಸಮಿತಿ ಅಗತ್ಯ ಮತ್ತು ಅನಿವಾರ್ಯ ಕೂಡ. ಆದರೆ ಕೇವಲ ಸಮಿತಿ ಇದ್ದರೆ ಸಾಲದು. ಭೂಸಾರಿಗೆ ಇಲಾಖೆಗೆ ಸಂಬಂಧಿಸಿದಂತೆ ಇರುವ ರಾಷ್ಟ್ರೀಯ ಸಮನ್ವಯ ಸಮಿತಿಯೊಂದನ್ನು ರೈಲ್ವೆ ಇಲಾಖೆಯೂ ಹೊಂದುವುದು ಸೂಕ್ತ.

ರೈಲ್ವೆ ಬಜೆಟ್ ಸಿದ್ಧಪಡಿಸುವಿಕೆಗೆ ಸಂಬಂಧಪಟ್ಟಂತೆ ರೈಲ್ವೆ ಯೋಜನೆಗಳ ನಿರೂಪಣೆ ಮತ್ತು ಅವುಗಳ ಅನುಷ್ಠಾನಕ್ಕೆ ಪ್ರತ್ಯೇಕ ವ್ಯವಸ್ಥೆ ತರಬೇಕೆಂದು ಸಚಿವಾಲಯ ನಿರ್ಧರಿಸಿದೆ. ಹಾಗೆ ನೋಡಿದರೆ ಇಂಥ ಎರಡು ಪ್ರತ್ಯೇಕ ವ್ಯವಸ್ಥೆ ರಚಿಸಬೇಕೆಂದು ಸಲಹೆ ಹೊಸದೇನಲ್ಲ. ಈ ಹಿನ್ನೆಲೆಯಲ್ಲಿ ಉನ್ನತ ಮಟ್ಟದ ಸಮಿತಿಗಳು ನೀಡಿರುವ ಶಿಫಾರಸಿನಂತೆ ಉತ್ತಮ ಯೋಜನಾ ಕಾರ್ಯತಂತ್ರವನ್ನು ರೂಪಿಸಬೇಕು. ರೈಲ್ವೆ ಯೋಜನೆಗಳ ಅನುಷ್ಠಾನದ ಉಸ್ತುವಾರಿಗೆ ಅನುಕೂಲ ಆಗುವಂತೆ ವಿವಿಧ ಹಂತದ ಉಸ್ತುವಾರಿ ಸಮಿತಿಗಳನ್ನು ರಚಿಸಿದರೆ ಹೆಚ್ಚು ಸಹಕಾರಿಯಾಗುತ್ತದೆ. ಇದು ಒಂದರ್ಥದಲ್ಲಿ ಖಾಸಗೀಕರಣವೇ. ಆದರೆ ಇದು ರೈಲ್ವೆ ಇಲಾಖೆಗೆ ಕಾರ್ಪೊರೇಟ್ ಸಂಸ್ಕೃತಿಯ ಸ್ವರೂಪವನ್ನು ತಂದುಕೊಡುತ್ತದೆ. ಇದು ಈಗಿರುವ ಮ್ಯಾನೇಜಿರಿಯಲ್ ವ್ಯವಸ್ಥೆಯನ್ನು ತೊಲಗಿಸಿ ಇಲಾಖೆಯಲ್ಲಿ ಆರ್ಥಿಕ ಶಿಸ್ತನ್ನು ತರಲು ಸಹಕಾರಿ ಆಗಲಿದೆ.

**ಮುಗಿಸುವ ಮುನ್ನ :** ಪ್ರಸಕ್ತ ಸಾಲಿನ ರೈಲ್ವೆ ಬಜೆಟ್ ಪತ್ರದಲ್ಲಿ ಯೋಜನೆಗಳ ಮುನ್ನೋಟ ಇದೆ. ಆದರೆ ಅವುಗಳನ್ನು ಅನುಷ್ಠಾನ ಮಾಡುವ ದಿಸೆಯಲ್ಲಿ ಗಂಭೀರವಾದ ಚಿಂತನೆ ಅಥವಾ ರೂಪುರೇಷೆ ಇಲ್ಲ. ಮುಂದಿನ ಬಜೆಟ್ ನಲ್ಲಿ ಇಂಥ ಕ್ರಮಬದ್ಧ ಚಿಂತನೆ ರೂಪಿಸುವುದು ಅಗತ್ಯವಾಗಿದೆ. ಆದರೆ ಯಾವುದೇ ಯೋಜನೆಯನ್ನು ರೂಪಿಸುವ ಸಂದರ್ಭದಲ್ಲಿ ಅಥವಾ ಅದನ್ನು ಅನುಷ್ಠಾನಗೊಳಿಸುವ ಸಂದರ್ಭದಲ್ಲಿ ರೈಲ್ವೆ ಇಲಾಖೆಯ ಸುಸ್ಥಿರತೆಯ ಬಗ್ಗೆ ಯೋಚಿಸುವ ಬಗ್ಗೆ ಹೆಚ್ಚು ಆದ್ಯತೆ ನೀಡಬೇಕಾದ್ದು ಇಂದಿನ ಅಗತ್ಯವಾಗಿದೆ. ❑

# ಕೇಂದ್ರ ಮುಂಗಡ ಪತ್ರ ಅವಲೋಕನ

**ಸೋನಾ ಮಿತ್ರ**
**ಕನ್ನಡಕ್ಕೆ : ವಿ. ನಾಗರಾಜು**



**ಸರ್ಕಾರದ ಹಣಕಾಸು ವ್ಯವಹಾರದಲ್ಲಿ ಪಾರದರ್ಶಕತೆ ಮತ್ತು ಉತ್ತರದಾಯಿತ್ವದ ವಿಚಾರ ಬಂದಾಗ, ರಾಜ್ಯ ಸರ್ಕಾರಗಳ ಬಜೆಟ್‌ಗಳನ್ನು ಗಣನೆಗೆ ತೆಗೆದುಕೊಳ್ಳದೆ ಯೋಜನೆಗಳಿಗೆ ಹಣ ಒದಗಿಸುತ್ತಿದ್ದ ವಿವಾದಾತ್ಮಕ ಪದ್ಧತಿಯನ್ನು ಈ ವರ್ಷದ ಬಜೆಟ್‌ನಲ್ಲಿ ಕೈಬಿಟ್ಟಿರುವುದು ಸ್ವಾಗತಾರ್ಹ ಕ್ರಮವಾಗಿದೆ. ಇದರಿಂದ ಸರ್ಕಾರದ ಹಣಕಾಸು ವ್ಯವಹಾರದಲ್ಲಿ ಪಾರದರ್ಶಕತೆ ಮತ್ತು ಉತ್ತರದಾಯಿತ್ವಕ್ಕೆ ಅನುಕೂಲವಾಗುತ್ತದೆ.**

ಶ್ರೀ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ 2014–15 ನೇ ಸಾಲಿನ ಮೊದಲ ಬಜೆಟ್, ನೂತನ ಸರ್ಕಾರದ ನೀತಿ ನಿರೂಪಣೆಯನ್ನು ಬಿಂಬಿಸುವ ಹೊತ್ತಿಗೆಯಾಗಿದ್ದು, ಇದು ದೇಶ ಎದುರಿಸುತ್ತಿರುವ ವಿತ್ತೀಯ ಸಮಸ್ಯೆಗಳನ್ನು ಎದುರಿಸಲು ತೆಗೆದುಕೊಂಡ ಕ್ರಮಗಳ ನೀತಿ ನಿರೂಪಣಾ ಪುಸ್ತಿಕೆ ಎಂದು ಹೇಳಬಹುದು. ಬಜೆಟ್ ಮುಖಾಂತರ ದೇಶದ ಜನರ ಭಾರಿ ನಿರೀಕ್ಷೆಗಳನ್ನು ಈಡೇರಿಸುವ ಮಹತ್ತರವಾದ ಜವಾಬ್ದಾರಿಯನ್ನು ಸರ್ಕಾರ ಎದುರಿಸುತ್ತಿದೆ. ದೇಶದ ಆರ್ಥಿಕ ಪರಿಸ್ಥಿತಿಯು ಎದುರಿಸುತ್ತಿರುವ ಭಾರಿ ಸವಾಲುಗಳನ್ನು ಸಮರ್ಪಕವಾಗಿ ನಿಭಾಯಿಸುವುದು ನೂತನ ಸರ್ಕಾರದ ಮುಂದಿರುವ ಭಾರಿ ಸವಾಲಾಗಿದೆ. ನೂತನ ಸರ್ಕಾರದ ಮೊದಲ ಬಜೆಟ್ ಮಂಡನೆ ಸಮೀಪಿಸುತ್ತಿದ್ದಂತೆ, ನೂತನ ಸರ್ಕಾರ ರಕ್ಷಣಾ ಕ್ಷೇತ್ರದ ಉತ್ಪಾದನೆಯ ಕ್ಷೇತ್ರದಲ್ಲಿ ವಿದೇಶ ಬಂಡವಾಳದ ಹೂಡಿಕೆಯನ್ನು ಶೇಕಡ 49 ಕ್ಕೆ ಹೆಚ್ಚಿಸುವುದು, ಪರಿಸರ ನಿರಪೇಕ್ಷಣಾ ಪತ್ರ ನೀಡುವಲ್ಲಿ ಸುಧಾರಣೆ, ರಿಯಾಯಿತಿ ನೀಡದೆ ಇರುವ ಎಲ್‌ಪಿಜಿ ಸಿಲಿಂಡರ್‌ನ ಬೆಲೆಯ ಹೆಚ್ಚಳ, ರೈಲು ಪ್ರಯಾಣ ದರದ ಶೇಕಡಾ 14.2 ಮತ್ತು ಸರಕು ಸಾಗಾಣೆಯ ದರಗಳ ಶೇಕಡಾ 6.5 ರಷ್ಟು ಹೆಚ್ಚಳ, ಈರುಳ್ಳಿ ಮತ್ತು ಆಲೂಗಡ್ಡೆಗಳನ್ನು ಅಗತ್ಯ ವಸ್ತುಗಳೆಂದು ಘೋಷಿಸಿ, ಅವುಗಳನ್ನು ಅಗತ್ಯ ಸೇವೆಗಳ ಕಾಯಿದೆಯಡಿಯಲ್ಲಿ ತರುವುದು ಮತ್ತಿತರ ಕ್ರಮಗಳನ್ನು ಕೇಂದ್ರ ಸರ್ಕಾರ ತನ್ನ ಚೊಚ್ಚಲ ಬಜೆಟ್ ಮಂಡಿಸುವುದಕ್ಕೆ ಮೊದಲು ಪ್ರಕಟಿಸಿತು.

### ಆರ್ಥಿಕಾಭಿವೃದ್ಧಿಯ ಬೃಹತ್ ಸವಾಲುಗಳು

ಪ್ರಸಕ್ತ ನಮ್ಮ ದೇಶದ ಆರ್ಥಿಕತೆ ಮೂರು ಪ್ರಮುಖ ಸಮಸ್ಯೆಗಳಿಂದ ನರಳುತ್ತಿದೆ. ದೇಶ ಎದುರಿಸುತ್ತಿರುವ ಮೊದಲನೆಯ ಸವಾಲು, ಆಹಾರ ವಸ್ತುಗಳ ಬೆಲೆ ಏರಿಕೆ ಎರಡು ಅಂಕಿಗಳನ್ನು ತಲುಪಿರುವುದು; ತರಕಾರಿ, ಈರುಳ್ಳಿ, ಆಲೂಗಡ್ಡೆ ಮತ್ತು ಧಾನ್ಯಗಳ ಬೆಲೆ ಏರಿಕೆ ಎರಡಂಕಿ ದಾಟಿ ಒಟ್ಟಾರೆ ಹಣದುಬ್ಬರ ಕಳೆದ ಒಂದು ವರ್ಷದಲ್ಲಿ ಶೇಕಡಾ 9.5 ರಷ್ಟು ಹೆಚ್ಚಾಗಿರುವುದು.

ಎರಡನೆಯದು ಒಟ್ಟಾರೆ ದೇಶದ ಜಿಡಿಪಿ ಬೆಳವಣಿಗೆ ಕುಗ್ಗಿರುವುದು. ಕಳೆದೆರಡು ವರ್ಷಗಳಲ್ಲಿ ಕೈಗಾರಿಕಾ ಬೆಳವಣಿಗೆ ಸಾಕಷ್ಟು ಪ್ರಮಾಣದಲ್ಲಿ ಕಡಿಮೆಯಾಗಿರುವುದರಿಂದ ದೇಶದ ಒಟ್ಟಾರೆ ಆರ್ಥಿಕ ಬೆಳವಣಿಗೆ 2012–13 ರಲ್ಲಿ ಶೇಕಡಾ 4.5 ಮತ್ತು 2013–14 ನೇ ಸಾಲಿನಲ್ಲಿ ಶೇಕಡಾ 4.7 ಕ್ಕೆ ಕುಸಿದಿರುವುದು. ಕಳೆದ ವರ್ಷಕ್ಕೆ ಹೋಲಿಸಿದರೆ 2013–14 ನೇ ಸಾಲಿನಲ್ಲಿ ಕೈಗಾರಿಕಾ ಬೆಳವಣಿಗೆ ಶೇಕಡಾ 0.5 ರಷ್ಟು ಬೆಳವಣಿಗೆಯಾಗಿದ್ದು ನಿಜವಾದ ಅರ್ಥದಲ್ಲಿ ಇದು ಬೆಳವಣಿಗೆಯೇ ಅಲ್ಲ ಎಂದು ಹೇಳಬಹುದು. ಕಳೆದ ವರ್ಷ ಕೃಷಿ ಕ್ಷೇತ್ರದ ಬೆಳವಣಿಗೆ ಶೇಕಡಾ 4 ರ ಆಜುಬಾಜಿನಲ್ಲಿಯೇ ಇದೆ. ಇದಕ್ಕೆ ಹೋಲಿಸಿದರೆ ಸೇವಾ ಕ್ಷೇತ್ರದ ಬೆಳವಣಿಗೆ ಶೇಕಡಾ 9 ರಷ್ಟು ಬೆಳವಣಿಗೆ ಕಂಡಿದ್ದರೂ, ಅದರ ಬೆಳವಣಿಗೆ ಹೇಳಿಕೊಳ್ಳುವಂತಹದ್ದಾಗಿಲ್ಲ.

ಮೂರನೆಯದು ಹಾಗೂ ಕೊನೆಯ ಸಮಸ್ಯೆ ಎಂದರೆ ಆರ್ಥಿಕ ಸಮಸ್ಯೆಯಾಗಿದ್ದು,

ಮುಖ್ಯಸ್ಥ, ಸಂಶೋಧನಾ ಗುಂಪು, ಬಜೆಟ್ ಮತ್ತು ಆಡಳಿತದ ಉತ್ತರದಾಯಿತ್ವ ಕೇಂದ್ರ, ನವದೆಹಲಿ. email : sona@cbgaindia.org

ಅದು ವಿದೇಶಿ ವಿನಿಮಯವಾಗಿದೆ. ಚಾಲ್ತಿ ಲೆಕ್ಕದಲ್ಲಿ ಹೆಚ್ಚಾಗಿರುವ ಕೊರತೆಯಾಗಿದ್ದು ಇದಕ್ಕೆ ಮುಖ್ಯ ಕಾರಣ ಕಳೆದ ವರ್ಷ ಆಮದುವಿನಲ್ಲಾಗಿರುವ ವಿಪರೀತ ಹೆಚ್ಚಳ. 2013–14 ನೇ ಸಾಲಿನ ಆರ್ಥಿಕ ಸಮೀಕ್ಷೆಯ ವರದಿ ಪ್ರಕಾರ ಚಾಲ್ತಿ ಲೆಕ್ಕದ ಕೊರತೆ 2012–13 ರಲ್ಲಿ ಜಿಡಿಪಿಯ ಶೇಕಡಾ 4.7 ರಷ್ಟಿದ್ದದ್ದು, 2013–14 ರಲ್ಲಿ ಶೇಕಡಾ 1.7 ಕ್ಕೆ ಇಳಿದಿದೆ. ಆದರೆ ಈ ಇಳಿಕೆಗೆ ಚಿನ್ನದ ಆಮದಿನ ಮೇಲೆ ವಿಧಿಸಿದ ಹೆಚ್ಚುವರಿ ತೆರಿಗೆ ಕಾರಣವಾಗಿದ್ದು, ಈ ಕ್ರಮದಿಂದಲೇ ಚಾಲ್ತಿ ಲೆಕ್ಕದ ಕೊರತೆ ಕಡಿಮೆಯಾಗಿರುವುದು ತಾತ್ಕಾಲಿಕವಾಗಿರುತ್ತದೆ.

ಆರ್ಥಿಕ ಕ್ಷೇತ್ರದ ಈ ಸಮಸ್ಯೆಗಳು, ಆರ್ಥಿಕ ಮತ್ತು ಸಾಮಾಜಿಕ ಅಸಮಾನತೆಗಳನ್ನು ಹೋಗಲಾಡಿಸುವಲ್ಲಿ ದೊಡ್ಡ ಸವಾಲಾಗಿ ಸರ್ಕಾರವನ್ನು ಕಾಡುತ್ತಿವೆ. ಕಳೆದ ಐದು ವರ್ಷಗಳಲ್ಲಿ ದೇಶದಲ್ಲಿ ಶ್ರೀಮಂತರು ಮತ್ತು ಬಡವರು ಖರ್ಚು ಮಾಡುವ ಹಣದ ವ್ಯತ್ಯಾಸ ದುಪ್ಪಟ್ಟಾಗಿದೆ. ಇತರೆ ಅಭಿವೃದ್ಧಿ ಹೊಂದಿರುವ ದೇಶಗಳಿಗೆ ಹೋಲಿಸಿದರೆ, ಭಾರತದಲ್ಲಿ ಶಿಕ್ಷಣ ಮತ್ತು ಆರೋಗ್ಯದಂತಹ ಕ್ಷೇತ್ರಗಳಿಗೆ ಖರ್ಚು ಮಾಡುತ್ತಿರುವ ಹಣ ತೀರಾ ಕಡಿಮೆಯಾಗುತ್ತಿದೆ. ವಿಶ್ವದ ಮೂರು ಜನ ಅನಕ್ಷರಸ್ಥರಲ್ಲಿ ಒಬ್ಬನು ಭಾರತದಲ್ಲಿದ್ದಾನೆ. ಭಾರತದಲ್ಲಿರುವ 6–14 ವರ್ಷ ವಯಸ್ಸಿನ 200 ದಶಲಕ್ಷ ಮಕ್ಕಳಲ್ಲಿ 120 ದಶಲಕ್ಷ ಮಕ್ಕಳು ಶಾಲೆಯಲ್ಲಿ ನೊಂದಣಿಗೊಂಡಿದ್ದಾರೆ. ಇವರಲ್ಲಿ ಶೇಕಡಾ 35 ರಷ್ಟು ಮಕ್ಕಳು ಎಂಟನೇ ತರಗತಿ ಮುಟ್ಟುವ ವೇಳೆಗೆ ಶಾಲೆಯಿಂದ ಹೊರಗಿರುತ್ತವೆ. ವಿಶ್ವದಲ್ಲಿ ಕಾಯಿಲೆಗಳಿಂದ ನರಳುತ್ತಿರುವವರಲ್ಲಿ ಶೇಕಡಾ 21 ರಷ್ಟು ಮಂದಿ ಭಾರತೀಯರೇ ಆಗಿದ್ದಾರೆ. ವಿಶ್ವದಲ್ಲಿ ಹುಟ್ಟಿದ ತಕ್ಷಣ ಮತ್ತು ಹೆಣ್ಣು ಮಕ್ಕಳ ಸಾವಿನಲ್ಲಿ ಭಾರತ ಮೊದಲ ಸ್ಥಾನದಲ್ಲಿದೆ. 2011 ರ ಅಂಕಿ ಅಂಶಗಳ ಪ್ರಕಾರ 1000 ಮಕ್ಕಳು ಹುಟ್ಟಿದರೆ ಅವುಗಳಲ್ಲಿ 44 ಮಕ್ಕಳು ಹುಟ್ಟಿದ ತಕ್ಷಣ ಸಾಯುತ್ತವೆ. 2010–12 ರ ಅವಧಿಯಲ್ಲಿ 1000 ಮಕ್ಕಳಲ್ಲಿ 178 ಹೆಣ್ಣುಮಕ್ಕಳು ಸಾವನ್ನಪ್ಪಿವೆ. ಶಿಶುಗಳ ಸಾವನ್ನು ಕಡಿಮೆ ಮಾಡುವಲ್ಲಿ ಭಾರತ ವಿಶ್ವದಲ್ಲೇ ತೀರಾ ಹಿಂದುಳಿದಿದೆ ಎಂಬುದನ್ನು ಈ ಅಂಕಿ ಅಂಶಗಳು ಸಾಬೀತುಪಡಿಸಿವೆ.

ಶಿಕ್ಷಣ ಮತ್ತು ಆರೋಗ್ಯಗಳ ಹೊರತಾಗಿಯೂ, ಭೂ ಒಡೆತನ ಮತ್ತು ಜೀವನ ನಿರ್ವಹಣೆಗೆ ಬೇಕಾದ ಸವಲತ್ತುಗಳನ್ನು ಪಡೆದುಕೊಳ್ಳಲು ದೇಶದ ಗ್ರಾಮಾಂತರ ಪ್ರದೇಶದ ಬಹುತೇಕ ಜನ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಭೂಮಿಯ ಒಡೆತನವು ನೇರವಾಗಿ ಆಹಾರದ ಭದ್ರತೆ, ಪರಿಸರದ ಮುಂದುವರೆಯುವಿಕೆ ಮತ್ತು ಬಡತನಗಳ ಒಂದು ಚಕ್ರವಿದ್ದಂತೆ. ಭಾರತದಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಅನೇಕರು ಭೂಮಿಯ ಒಡೆತನ ಹೊಂದಿಲ್ಲದಿರುವುದು ಸರ್ಕಾರದ ಅಂಕಿ ಅಂಶಗಳಿಂದ ತಿಳಿಯುತ್ತದೆ. ಜಾತಿ ಮತ್ತು ಲಿಂಗ ಅಧಾರಿತ ಅಸಮಾನತೆಯಿಂದ ಸಮಾಜದಿಂದ ಹೊರಗಿಡುವುದು, ತಾರತಮ್ಯ ಮತ್ತು ಶೋಷಣೆಗಳು ಇನ್ನೂ ಮುಂದುವರೆದಿವೆ. ಈ ಅಂಶಗಳ ಅಧಾರದ ಮೇಲೆ ಆರ್ಥಿಕಾಭಿವೃದ್ಧಿಯ ಲಾಭಗಳು ಇನ್ನೂ ಅಸಮಾನತೆಯ ಅಧಾರದಲ್ಲಿ ಮರುವಿಂಗಡಣೆಯಾಗುತ್ತಿವೆ. ಅಗತ್ಯ ಸೇವೆಗಳು ಮತ್ತು ಇತರೆ ಸಾಮಾಜಿಕ ಮತ್ತು ಆರ್ಥಿಕಾಭಿವೃದ್ಧಿಯಲ್ಲಿ ಪಾಲು ಪಡೆದುಕೊಳ್ಳುವಲ್ಲಿ ಈ ವರ್ಗಗಳು ಹೊರಗಿರುವುದು ಕಣ್ಣಿಗೆ ರಾಚುತ್ತದೆ.

ಈ ರೀತಿಯ ತಾರತಮ್ಯವನ್ನು ಹೋಗಲಾಡಿಸಲು ಪ್ರಮುಖ ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳನ್ನು ಗಮನದಲ್ಲಿಟ್ಟುಕೊಂಡು ಜನಪರವಾದ ನೀತಿ ಹಾಗೂ ಕಾರ್ಯಕ್ರಮಗಳೊಂದಿಗೆ ಸರ್ಕಾರ ಮಧ್ಯೆ ಪ್ರವೇಶಿಸಬೇಕಾಗಿದೆ. ಈ ಗುರಿ ಸಾಧಿಸಲು ಬಜೆಟ್‌ನಲ್ಲಿ ಸಾಕಷ್ಟು ಪ್ರಮಾಣದಲ್ಲಿ ಸಾಮಾಜಿಕ ಕಾರ್ಯಕ್ರಮಗಳಿಗೆ ಹಣವನ್ನು ಒದಗಿಸಬೇಕಾಗುತ್ತದೆ. ನಮ್ಮ ದೇಶದಲ್ಲಿ ಸಾಮಾಜಿಕ ಕ್ಷೇತ್ರಗಳಿಗೆ 2004–05 ರ ಬಜೆಟ್‌ನಲ್ಲಿ ಜಿಡಿಪಿಯ ಶೇಕಡಾ 5.3 ರಷ್ಟು ಹಣವನ್ನು ಖರ್ಚು ಮಾಡಲಾಗಿದೆ. ನಂತರದ ವರ್ಷಗಳಲ್ಲಿ ಈ ಕ್ಷೇತ್ರಕ್ಕೆ ಹೆಚ್ಚಿನ ಹಣವನ್ನು ಖರ್ಚು ಮಾಡಲಾಗುತ್ತಿದ್ದರೂ, ಒಟ್ಟಾರೆ ಖರ್ಚು ಮಾಡಿರುವ ಹಣ ಜಿಡಿಪಿಯ ಶೇಕಡಾ 7 ರಷ್ಟನ್ನು ಮೀರಿಲ್ಲ. ಈ ಶೇಕಡಾ 7 ರಷ್ಟು ಖರ್ಚಿನಲ್ಲಿ ಕೇಂದ್ರ ಸರ್ಕಾರದ ಪಾಲು ಕೇವಲ ಶೇಕಡಾ 2 ರಷ್ಟು ಮಾತ್ರ. ಈ ರೀತಿ ನಮ್ಮ ದೇಶದಲ್ಲಿ ಸಾಮಾಜಿಕ ಕ್ಷೇತ್ರಗಳಿಗೆ ಖರ್ಚು ಮಾಡುವ ಹಣ ಅಭಿವೃದ್ಧಿ ಹೊಂದಿರುವ ಮತ್ತು ಅಭಿವೃದ್ಧಿ ಹೊಂದುತ್ತಿರುವ ದೇಶಗಳು ಖರ್ಚು ಮಾಡುವ ಹಣಕ್ಕೆ ಹೋಲಿಸಿದರೆ ತೀರ ಕಡಿಮೆ ಎಂದು ಹೇಳಬೇಕಾಗುತ್ತದೆ.



ಸಾಮಾಜಿಕ ಕ್ಷೇತ್ರದ ಮೂಲ ಸೌಲಭ್ಯಗಳಾದ ಶಾಲೆಗಳು, ಆಸ್ಪತ್ರೆಗಳು, ಅಂಗನವಾಡಿ ಕೇಂದ್ರಗಳಲ್ಲಿ ತೀರಾ ಕಳಪೆ ಮಟ್ಟದ ಮೂಲಸೌಲಭ್ಯಗಳಿವೆ. ಉತ್ತಮ ಸೇವೆ ಒದಗಿಸಲು ಉತ್ತಮ ಗುಣಮಟ್ಟದ ಶಿಕ್ಷಣ ಮತ್ತು ತರಬೇತಿ ಪಡೆದಿರುವ ಶಿಕ್ಷಕರು, ವೈದ್ಯರು, ಅರೆ ವೈದ್ಯಕೀಯ ಸಿಬ್ಬಂದಿ, ಅಂಗನವಾಡಿ ಕಾರ್ಯಕರ್ತರು ಹಾಗೂ ಈ ವ್ಯವಸ್ಥೆಗಳನ್ನು ಸರಿಯಾಗಿ ನೋಡಿಕೊಂಡು ಕಾರ್ಯನಿರ್ವಹಿಸಲು ಬೇಕಾಗಿರುವ ನುರಿತ ಸಿಬ್ಬಂದಿಯ ಕೊರತೆ ಎದ್ದು ಕಾಣುತ್ತಿದೆ. ಈ ಸೇವೆಗಳನ್ನು ಜನರಿಗೆ ಮುಟ್ಟಿಸಲು ಬೇಕಾಗಿರುವ ಸರಿಯಾದ ಹಣಕಾಸಿನ ನೆರವು ಒದಗಿಸದೆ ಇರುವುದರಿಂದ ಈ ಸೇವೆಗಳನ್ನು ಅಗತ್ಯವಿರುವ ಜನರಿಗೆ ಸಕಾಲದಲ್ಲಿ ತಲುಪಿಸದೆ ಇರುವ ಲೋಪವೂ ಎದ್ದು ಕಾಣುತ್ತದೆ.

ಸಾಮಾಜಿಕ ಭದ್ರತೆಯನ್ನು ಅಗತ್ಯವಿರುವವರಿಗೆ ಒದಗಿಸುವ ವ್ಯವಸ್ಥೆಗೆ ಖರ್ಚು ಮಾಡುತ್ತಿರುವ ಹಣ ತೀರಾ ಕಡಿಮೆ ಪ್ರಮಾಣದ್ದಾಗಿದೆ. ಸಾಮಾಜಿಕ ಭದ್ರತೆಯಡಿಯಲ್ಲಿ ಬಡವರಿಗೆ ಪಿಂಚಣಿ, ವಿಧವಾವೇತನ, ಅಂಗವಿಕಲರಿಗೆ ಮಾಸಾಶನ ಮತ್ತಿತರ ಸೌಲಭ್ಯಗಳನ್ನು ಒದಗಿಸಲು ಖರ್ಚು ಮಾಡುತ್ತಿರುವ ಹಣ ತೀರಾ ನಗಣ್ಯ. ಇದಕ್ಕಾಗಿ ಜಿಡಿಪಿಯಲ್ಲಿ ಶೇಕಡಾ 0.15 ರಷ್ಟು ಹಣವನ್ನು ಮಾತ್ರ ಇತ್ತೀಚಿನ ವರ್ಷಗಳಲ್ಲಿ ಖರ್ಚು ಮಾಡಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಈ ಕ್ಷೇತ್ರಕ್ಕೆ ಕೇಂದ್ರ ಸರ್ಕಾರದ 2014–15 ನೇ ಸಾಲಿನ ಬಜೆಟ್‌ನಲ್ಲಿ ಹೆಚ್ಚಿನ ಹಣ ಒದಗಿಸಿರುವುದು ಸಮಾಧಾನದ ಸಂಗತಿಯಾಗಿದೆ.

### 2014–15 ನೇ ಸಾಲಿನ ಬಜೆಟ್‌ನಲ್ಲಿ ಆದ್ಯತೆಯ ನೀತಿಗಳು

ಕೇಂದ್ರ ಸರ್ಕಾರದ 2014–15 ನೇ ಸಾಲಿನ ಬಜೆಟ್‌ನ ಭಾಷಣದಲ್ಲಿ ಮೇಲೆ

| ಟೇಬಲ್ – ಎ : ಕೇಂದ್ರದ ಬಜೆಟ್‌ನ ಒಟ್ಟು ವೆಚ್ಚ (ಕೋಟಿ ರೂಪಾಯಿಗಳಲ್ಲಿ) | | | | | |
|---|---|---|---|---|---|
| | 2012–13 (ವಾಸ್ತವ) | 2013–14 (ಬಜೆಟ್ ಅಂದಾಜು) | 2013–14 (ಪರಿಷ್ಕೃತ ಅಂದಾಜು) | 2014–15 (ಮಧ್ಯಂತರ ಬಜೆಟ್) | 2014–15 (ಬಜೆಟ್ ಅಂದಾಜು) |
| ಜಿಡಿಪಿ(ಪ್ರಸಕ್ತ ಮಾರುಕಟ್ಟೆ ಬೆಲೆಯಲ್ಲಿ) | 10113281 | 11355073 | 11355073 | 12876653 | 12876653 |
| ಒಟ್ಟು ಕೇಂದ್ರ ಬಜೆಟ್ | 1410367 | 1665297 | 1590434 | 1763214 | 1794892 |
| ಜಿಡಿಪಿಯ ಶೇಕಡಾವಾರು | 13.9 | 14.7 | 14.0 | 13.7 | 13.9 |
| ಒಟ್ಟು ಯೋಜನಾ ವೆಚ್ಚ | 413625 | 555322 | 475532 | 555322 | 575000 |
| ಜಿಡಿಪಿಯ ಶೇಕಡಾವಾರು | 4.1 | 4.9 | 4.2 | 4.3 | 4.5 |
| ಒಟ್ಟು ಯೋಜನೇತರ ವೆಚ್ಚ | 996747 | 1109975 | 1114902 | 1207892 | 1219892 |
| ಜಿಡಿಪಿಯ ಶೇಕಡಾವಾರು | 9.9 | 9.8 | 9.8 | 9.4 | 9.5 |

ಮೂಲ : ಕೇಂದ್ರದ ಬಜೆಟ್ 2014–15

ಹೇಳಿರುವ ಬಹುತೇಕ ಸವಾಲುಗಳನ್ನು ನಮೂದಿಸಲಾಗಿದೆ. ಆದರೆ ಈ ಸವಾಲುಗಳನ್ನು ಸಮರ್ಪಕವಾಗಿ ಎದುರಿಸಲು ನೀತಿ ನಿಯಮಗಳನ್ನು ರೂಪಿಸಿ ಜಾರಿಗೆ ತರಲು ಮತ್ತು ಅವುಗಳನ್ನು ಜಾರಿಗೆ ತರಲು ಬೇಕಾಗಿರುವ ಹಣಕಾಸಿನ ನೆರವನ್ನು ಒದಗಿಸುವ ನಿಟ್ಟಿನಲ್ಲಿ ಹಿಂದಿನ ಸರ್ಕಾರಗಳು ನಡೆದುಕೊಂಡಿರುವುದಕ್ಕಿಂತ ಭಿನ್ನವಾಗಿಯೇನೂ ನಡೆದುಕೊಂಡಿಲ್ಲ. ಸಮಾಜದಲ್ಲಿ ತುಳಿತಕ್ಕೊಳಗಾಗಿರುವವರಿಗೆ ಅಗತ್ಯ ಸೇವೆಗಳು ಮತ್ತು ಸಾಮಾಜಿಕ ಭದ್ರತೆ ಒದಗಿಸಲು ಕಳೆದ ಐದು ವರ್ಷಗಳಿಂದ ಶಾಶ್ವತವಾದ ವ್ಯವಸ್ಥೆಯನ್ನು ಜಾರಿಗೆ ತರುವ ಬದಲು ತಾತ್ಕಾಲಿಕ ವ್ಯವಸ್ಥೆಯನ್ನೇ ಅಳವಡಿಸಿಕೊಂಡಿರುವುದಕ್ಕೆ ಅಂತಿಮ ಹಾಡಿ ಹೊಸ ನೀತಿ ನಿರೂಪಣೆ ಜಾರಿಗೆ ಬರಬೇಕಾಗಿದೆ. ತೆರಿಗೆ–ಜಿಡಿಪಿ ಅನುಪಾತವನ್ನು ಹೆಚ್ಚಿಸಲು ಸರ್ಕಾರಕ್ಕೆ ಸಾಧ್ಯವಾಗದ ಹಿನ್ನೆಲೆಯಲ್ಲಿ, ವಿತ್ತೀಯ ಕೊರತೆಯನ್ನು ಕಡಿಮೆಮಾಡಲು ಈ ಕ್ಷೇತ್ರಗಳಿಗೆ ಖರ್ಚು ಮಾಡುವ ಹಣದಲ್ಲಿ ಕಡಿಮೆ ಮಾಡುವ ನೀತಿಯನ್ನು ಸರ್ಕಾರ ಅನುಸರಿಸುತ್ತಾ ಬಂದುದರಿಂದ ಸಾಮಾಜಿಕ ಕ್ಷೇತ್ರಗಳಿಗೆ ಸಮರ್ಪಕವಾಗಿ ಹಣಕಾಸಿನ ನೆರವು ಒದಗಿಸುವುದು ಕಡಿಮೆಯಾಯಿತು.

ಇನ್ನೊಂದು ಕಡೆ, ಹೊಸ ಸರ್ಕಾರ, ದೀರ್ಘಾವಧಿಯಲ್ಲಿ ಜಿಡಿಪಿಯ ಬೆಳವಣಿಗೆಯು ಸತತವಾಗಿ ವೃದ್ಧಿಯಾಗುತ್ತಾ ಹೋಗಬೇಕು ಎಂಬ ಖಾಸಗಿ ವಲಯದ ಒತ್ತಡದಿಂದ ಸಾಮಾಜಿಕ ನ್ಯಾಯ ಒದಗಿಸುವ ವಲಯಗಳಿಗೆ ಹೆಚ್ಚಿನ ಹಣವನ್ನು ತೆಗೆದಿರಿಸಲು ಸಾಧ್ಯವಾಗದ ಹಿಂದಿನ ಸರ್ಕಾರದ ಅಸಹಾಯಕತೆಯ ಹಾದಿಯನ್ನು ತುಳಿಯುತ್ತಿದೆ. ಆದಾಗ್ಯೂ, ಹೊಸ ಸರ್ಕಾರದ 2014–15 ನೇ ಸಾಲಿನ ಬಜೆಟ್‌ನ್ನು ಎಚ್ಚರಿಕೆಯಿಂದ ಗಮನಿಸಿ, ಅದು ಅನುಸರಿಸಿರುವ ವಿಶಾಲವಾದ ನೀತಿಯನ್ನು ಅವಲೋಕಿಸಿದಾಗ ಅದು ಅನುಸರಿಸಬಹುದಾದ ಮುಂದಿನ ನೀತಿಗಳ ದಾರಿಯು ಗೋಚರಿಸುತ್ತದೆ.

### ಕೇಂದ್ರ ಸರ್ಕಾರದ ಬಜೆಟ್‌ನ ಮಹತ್ವ

2014–15 ನೇ ಸಾಲಿನ ಬಜೆಟ್‌ನ್ನು 17.94 ಲಕ್ಷ ಕೋಟಿಗೆ ನಿಗದಿ ಪಡಿಸಲಾಗಿದ್ದು, ಮಧ್ಯಂತರ ಬಜೆಟ್‌ಗಿಂತ 31,000 ಕೋಟಿ ಹೆಚ್ಚಿಗೆ ತೋರಿಸಲಾಗಿದೆ. ಈ ಹೆಚ್ಚುವರಿಯಾದ ಮೊತ್ತದಲ್ಲಿ ಬಹುತೇಕ ಹಣವನ್ನು ಯೋಜನಾ ವೆಚ್ಚಕ್ಕೆ ಬಳಸಿಕೊಳ್ಳಲಾಗಿದೆ. ಯೋಜನಾ ವೆಚ್ಚವನ್ನು ಮಧ್ಯಂತರ ಬಜೆಟ್‌ನಲ್ಲಿ ರೂ.5.55 ಲಕ್ಷ ಕೋಟಿಗೆ ನಿಗದಿಪಡಿಸಿದ್ದರೆ, ಬಜೆಟ್‌ನಲ್ಲಿ ಅದನ್ನು ರೂ.5.75 ಲಕ್ಷ ಕೋಟಿಗೆ ಹೆಚ್ಚಿಸಲಾಗಿದೆ. ಹೆಚ್ಚುವರಿಯಾದ ಮೂರನೇ ಒಂದು ಭಾಗದ ಹಣವನ್ನು ಯೋಜನೇತರ ವೆಚ್ಚವಾಗಿ ತೋರಿಸಲಾಗಿದೆ.

2014–15 ನೇ ಸಾಲಿನ ಬಜೆಟ್‌ನ ಒಟ್ಟು ಅಂದಾಜು ವೆಚ್ಚ ರೂ.13,9 ಲಕ್ಷ ಕೋಟಿ ರೂಪಾಯಿ. ಮಧ್ಯಂತರ ಬಜೆಟ್‌ನಲ್ಲಿ 13.7 ಲಕ್ಷ ಎಂದು ತೋರಿಸಲಾಗಿತ್ತು. (ಟೇಬಲ್–ಎ)

### ಸಂಪನ್ಮೂಲ ಕ್ರೋಢೀಕರಣ ನೀತಿಗಳು

ಸಂಪನ್ಮೂಲಗಳ ಕ್ರೋಢೀಕರಣಕ್ಕೆ ಸಂಬಂಧಿಸಿದಂತೆ, ಈ ವರ್ಷ ಹೆಚ್ಚುವರಿಯಾಗಿ ಖರ್ಚು ಮಾಡಬೇಕಾಗಿರುವ ಹಣವನ್ನು ಮುಖ್ಯವಾಗಿ ತೆರಿಗೆಯೇತರ ಬಾಬುಗಳಿಂದ ಸಂಗ್ರಹಿಸುವುದಾಗಿ ಬಜೆಟ್‌ನಲ್ಲಿ ಹೇಳಲಾಗಿದೆ. ಯೋಜನೇತರ ಬಾಬುಗಳಿಂದ ಒಟ್ಟು 2.12 ಲಕ್ಷ ಕೋಟಿ ರೂಪಾಯಿಗಳನ್ನು ಸಂಗ್ರಹಿಸುವ ಗುರಿ ಹಾಕಿಕೊಳ್ಳಲಾಗಿದೆ. ಮಧ್ಯಂತರ ಬಜೆಟ್‌ನಲ್ಲಿ ಈ ಗುರಿ 1.8 ಲಕ್ಷ ಕೋಟಿ ರೂಪಾಯಿಗಳಷ್ಟಿತ್ತು. ಈ ಹೆಚ್ಚುವರಿ ಹಣವನ್ನು ಡಿವಿಡೆಂಡ್‌ಗಳು ಮತ್ತು ಲಾಭಗಳಿಂದ ಪಡೆದುಕೊಳ್ಳಲು ಹೊಸ ಸರ್ಕಾರ ಗುರಿ ಹಾಕಿಕೊಂಡಿದೆ. (ಮಧ್ಯಂತರ ಬಜೆಟ್‌ನಲ್ಲಿ ಈ ಬಾಬುಗಳಲ್ಲಿ 77,229 ಕೋಟಿ ಸಂಗ್ರಹಿಸಲು ಗುರಿ ಹಾಕಿಕೊಂಡಿದ್ದರೆ, ಹೊಸ ಸರ್ಕಾರ 90,229 ಕೋಟಿ ಸಂಗ್ರಹಿಸಲು ಗುರಿ ಹಾಕಿಕೊಂಡಿದ್ದು, ಕೇಂದ್ರ ಸರ್ಕಾರದ ಸಾರ್ವಜನಿಕ ಉದ್ಯಮಗಳು, ಆರ್‌ಬಿಐ ನ ಹೆಚ್ಚುವರಿ ಹಣ, ರಾಷ್ಟ್ರೀಕೃತ ಬ್ಯಾಂಕ್‌ಗಳು ಮತ್ತು ಸಂಸ್ಥೆಗಳಿಂದ ಸಂಗ್ರಹಿಸಲಾಗುತ್ತದೆ. ಇದರ ಜೊತೆಗೆ ಸಂಪರ್ಕ ಸೇವೆಗಳು, ರಸ್ತೆಗಳು ಮತ್ತು ಸೇತುವೆಗಳು, ವಿದ್ಯುತ್, ಪೆಟ್ರೋಲಿಯಂ ಉತ್ಪನ್ನಗಳು, ಕಲ್ಲಿದ್ದಲು ಮತ್ತು ಲಿಗ್ನೈಟ್, ಹೊಸ ಮತ್ತು ಪುನರ್‌ಬಳಕೆಯ ಇಂಧನಗಳು ಮತ್ತಿತರ ಬಾಬುಗಳಿಂದ).

ಹಣದುಬ್ಬರ ಹೆಚ್ಚಾಗಿರುವ ಈಗಿನ ಪರಿಸ್ಥಿತಿಯಲ್ಲಿ ತೆರಿಗೆಯೇತರ ಬಾಬುಗಳಿಂದ

ಇಷ್ಟು ದೊಡ್ಡ ಪ್ರಮಾಣದಲ್ಲಿ ಆದಾಯವನ್ನು ಸಂಗ್ರಹಿಸಲು ಹೊರಟಿರುವುದರ ಪರಿಣಾಮಗಳ ಬಗ್ಗೆಯೂ ನಮಗೆ ಅರಿವಿರಬೇಕಾಗುತ್ತದೆ. ಸಾರ್ವಜನಿಕ ಉದ್ಯಮಗಳ ಶೇರುಗಳನ್ನು ಮಾರಾಟ ಮಾಡುವುದರ ಮುಖಾಂತರವೂ 58,425 ಕೋಟಿ ರೂಪಾಯಿ ಸಂಗ್ರಹಿಸಲು ಕ್ರಮ ತೆಗೆದುಕೊಳ್ಳಲಾಗಿದೆ. ಈ ಮೊತ್ತ ಮಧ್ಯಂತರ ಬಜೆಟ್‌ನಲ್ಲಿ ರೂ.51,925 ಕೋಟಿ ಇತ್ತು. 2013–14 ನೇ ಸಾಲಿನಲ್ಲಿ ಸಾರ್ವಜನಿಕ ಉದ್ಯಮಗಳ ಶೇರುಗಳನ್ನು ಮಾರಾಟ ಮಾಡುವುದರಿಂದ 20,841 ಕೋಟಿ ಸಂಗ್ರಹಿಸಿರುವ ಹಿನ್ನೆಲೆಯಲ್ಲಿ ಈ ವರ್ಷದ ಗುರಿಯನ್ನು ಮುಟ್ಟಲು ಸಾಧ್ಯವಾಗುವುದೇ ಎಂಬುದನ್ನು ಗಮನದಲ್ಲಿಟ್ಟು ಕೊಳ್ಳಬೇಕಾಗುತ್ತದೆ. ಸರ್ಕಾರದ ಆದಾಯಕ್ಕೆ ಪ್ರಮುಖವಾದ ಕೊಡುಗೆ ತೆರಿಗೆ ಸಂಗ್ರಹಣೆಯಾಗಿದ್ದು, ಈ ವರ್ಷ ಒಟ್ಟು ರೂ 977,258 ಕೋಟಿ ಸಂಗ್ರಹಿಸಲು ಗುರಿ ಹಾಕಿಕೊಳ್ಳಲಾಗಿದೆ. ಆದರೆ ಮಧ್ಯಂತರ ಬಜೆಟ್‌ನಲ್ಲಿ ಈ ಗುರಿ ರೂ 986,417 ಕೋಟಿಗೆ ಇಟ್ಟುಕೊಳ್ಳಲಾಗಿತ್ತು. ಸ್ಥಿರವಾದ ಮತ್ತು ಗುರಿಸಾಧಿಸಬಹುದಾದ ತೆರಿಗೆ ವ್ಯವಸ್ಥೆಯಲ್ಲಿ, ಬಂಡವಾಳ ಹೂಡಿಕೆಯ ಪರವಾದ ವಾತಾವರಣದಲ್ಲಿ ಅಭಿವೃದ್ಧಿಗೆ ಹೆಚ್ಚು ಇಂಬುಗೊಡುವ ನೀತಿಗೆ ಹೆಚ್ಚಿನ ಆದ್ಯತೆಯನ್ನು ನೂತನ ಸರ್ಕಾರ ನೀಡಿದೆ. ಈ ಹಿನ್ನೆಲೆಯಲ್ಲಿ ತೆರಿಗೆ–ಜಿಡಿಪಿ ಅನುಪಾತವನ್ನು ಹೆಚ್ಚಿಸಲು ತೆರಿಗೆ ಸಂಗ್ರಹವನ್ನು ಹೆಚ್ಚಿಸಲು ಮೊದಲ ಆಧ್ಯತೆ ನೀಡಬೇಕಾಗುತ್ತದೆ. ಪ್ರಸಕ್ತ ದೇಶದ ತೆರಿಗೆ–ಜಿಡಿಪಿ ಅನುಪಾತ ಶೇಕಡಾ 17 ರಷ್ಟಿದ್ದು, ಹೆಚ್ಚು ಅಭಿವೃದ್ಧಿ ಹೊಂದಿದ ದೇಶಗಳಿಗೆ ಮತ್ತು ಇತರೆ ಅಭಿವೃದ್ಧಿಶೀಲ ದೇಶಗಳಿಗೆ ಹೋಲಿಸಿದರೆ ತೀರಾ ಕಡಿಮೆ ಇದೆ. ಈ ಅನುಪಾತವನ್ನು ಹೆಚ್ಚಿಸಲು ಅವಕಾಶವಿದ್ದು, ಹೆಚ್ಚು ತೆರಿಗೆ ಸಂಗ್ರಹಿಸಿ, ಅಗತ್ಯವಿರುವ ಸಾಮಾಜಿಕ ಸೇವೆಗಳು ಮತ್ತು ಬಡವರು ಹಾಗೂ ತುಳಿತಕ್ಕೊಳಗಾಗಿರುವವರಿಗೆ ಸಾಮಾಜಿಕ ಭದ್ರತೆ ಒದಗಿಸಲು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಜಿಡಿಪಿ ಹಾಗೂ ಆದಾಯದ ಅನುಪಾತವನ್ನು ಟೇಬಲ್–ಬಿಯಲ್ಲಿ ಕೊಡಲಾಗಿದೆ. ಈ ಟೇಬಲ್‌ನಲ್ಲಿ ಜಿಡಿಪಿ–ಆದಾಯದ ಅನುಪಾತ ಕೆಲವು ವರ್ಷಗಳಿಂದ ನಿಂತನೀರಾಗಿದ್ದು ಅನುಪಾತವನ್ನು ಹೆಚ್ಚಿಸಲು ಅವಕಾಶವಿರುವುದನ್ನು ತೋರಿಸುತ್ತದೆ.

**ಟೇಬಲ್–ಬಿ: ಜಿಡಿಪಿಯಲ್ಲಿ ಆದಾಯ ಮತ್ತು ಬಂಡವಾಳಗಳ ಪಾಲು**

| | 2012–13 ವಾಸ್ತವ ಅಂದಾಜು | 2013–14 ಬಜೆಟ್ ಅಂದಾಜು | 2013–14 ಪರಿಷ್ಕೃತ ಬಜೆಟ್ | 2014–15 ಮಧ್ಯಂತರ ಅಂದಾಜು | 2014–15 ಬಜೆಟ್ |
|---|---|---|---|---|---|
| ಎ. ಆದಾಯ | 879232 | 1056331 | 1029252 | 1167131 | 1189763 |
| ಜಿಡಿಪಿಯಲ್ಲಿ ಶೇಕಡಾ | 8.7 | 9.3 | 9.1 | 9.1 | 9.2 |
| ಅವುಗಳಲ್ಲಿ | | | | | |
| ನಿವ್ವಳ ತೆರಿಗೆ ಆದಾಯ | 741877 | 884078 | 836026 | 986417 | 977258 |
| ಜಿಡಿಪಿಯಲ್ಲಿ ಶೇಕಡಾ | 7.3 | 7.8 | 7.4 | 7.7 | 7.6 |
| ತೆರಿಗೆಯೇತರ ಆದಾಯ | 137355 | 172252 | 193226 | 180714 | 212505 |
| | | 1.5 | 1.7 | 1.4 | 1.7 |
| ಬಿ. ಬಂಡವಾಳ ಸಂಗ್ರಹ (ನಿವ್ವಳ ಸಾಲಗಳು ಮತ್ತು ಇತರೆ ಹೊಣೆಗಾರಿಕೆಗಳು) | 40950 | 66468 | 36643 | 67452 | 73952 |
| ಜಿಡಿಪಿಯಲ್ಲಿ ಶೇಕಡಾ | 0.40 | 0.59 | 0.32 | 0.52 | 0.57 |
| ಸಿ. ವಿತ್ತೀಯ ಕೊರತೆ | 490190 | 542499 | 524539 | 528631 | 531177 |
| ಜಿಡಿಪಿಯಲ್ಲಿ ಶೇಕಡಾ | 4.8 | 4.8 | 4.6 | 4.1 | 4.1 |

ಮೂಲಗಳು : ಕೇಂದ್ರದ ಬಜೆಟ್, 2014–15

ಟಿಪ್ಪಣಿ : ಎ+ಬಿ+ಸಿ, ಒಟ್ಟು 13.9ಶೇಕಡಾ, ಇದು ಪ್ರಸಕ್ತ ಸಾಲಿನ ಬಜೆಟ್‌ನ ಗಾತ್ರ. ತೆರಿಗೆ ಆದಾಯದ ಅಂಕಿಅಂಶಗಳು ರಾಜ್ಯಗಳ ನಿವ್ವಳ ಆದಾಯದ ಪಾಲು. ಜಿಡಿಪಿಯ ಒಟ್ಟು ಆದಾಯದಲ್ಲಿ ಭಾರತದ್ದು ಕಳೆದ ಕೆಲವು ವರ್ಷಗಳಲ್ಲಿ ಶೇಕಡಾ 17ರಷ್ಟು.

2014–15 ನೇ ಸಾಲಿನ ಬಜೆಟ್ ಪ್ರಕಾರ, ಕೇಂದ್ರದ ತೆರಿಗೆಗಳಲ್ಲಿ ಎಲ್ಲಾ ರೀತಿಯ ರಿಯಾಯಿತಿಗಳನ್ನು ನೀಡುವುದರಿಂದ ಒಟ್ಟು ಆದಾಯದಲ್ಲಿ ಆಗುವ ನಷ್ಟ ರೂ.5.73 ಲಕ್ಷ ಕೋಟಿಗಳು. ಈ ಮೊತ್ತ 1013–14 ರ ಜಿಡಿಪಿಯ ಶೇಕಡಾ 5 ರಷ್ಟಕ್ಕೆ ಸಮನಾಗುತ್ತದೆ. ಈ ಮೊತ್ತ 2012–13 ನೇ ಸಾಲಿನ ಶೇಕಡಾ 6 ಕ್ಕಿಂತ ಕಡಿಮೆ. ತೆರಿಗೆ ಕೊಡುವುದನ್ನು ತಪ್ಪಿಸಿಕೊಳ್ಳಲು ಹಾಗೂ ಸತಾಯಿಸುವುದನ್ನು ತಡೆಯಲು ಹಿಂದಿನಿಂದ ಜಾರಿಗೆ ಬರುವ ತೆರಿಗೆ ಕಾಯಿದೆಯನ್ನು ಉಳಿಸಿಕೊಂಡು ಮುಂದುವರೆಸಿಕೊಂಡು ಹೋಗುವುದಾಗಿ ತಿಳಿಸಿದೆ. ಆದರೂ, ರಿಯಾಯಿತಿಗಳನ್ನು ನೀಡುವುದರ ಮುಖಾಂತರ ಆದಾಯವನ್ನು ಕಳೆದುಕೊಳ್ಳುವುದನ್ನು ಕಡಿಮೆ ಮಾಡಲು ಬಿಗಿಯಾದ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದೆ. ಹಣಕಾಸು ಸಚಿವರು ತಮ್ಮ ಬಜೆಟ್ ಭಾಷಣದಲ್ಲಿ ಸರಕು ಮತ್ತು ಸೇವೆಗಳ ತೆರಿಗೆ ಹಾಗೂ ನೇರ ತೆರಿಗೆ ಕೋಡ್ ಬಗ್ಗೆ ವಿವರವಾಗಿ ಪ್ರಸ್ತಾಪಿಸಿ, ನಾವು ಬದಲಾವಣೆಯ ಕಾಲಘಟ್ಟದಲ್ಲಿದ್ದೇವೆ ಎಂದು ತಿಳಿಸಿದ್ದಾರೆ. ಖಾಸಗಿ ಬಂಡವಾಳಗಾರರು ಒತ್ತಾಯಿಸಿರುವಂತೆ ತರಲು ಉದ್ದೇಶಿಸಿರುವ ಈ ಬದಲಾವಣೆಗಳು ತೆರಿಗೆ ಕಾಯಿದೆಗಳ ವ್ಯವಸ್ಥೆಯಲ್ಲಿ ಸ್ಥಿರತೆಯನ್ನು ತರುತ್ತವೆ. ಆದರೆ, ಈ ಕಾಯಿದೆಗಳು ಈಗಿರುವ ರೀತಿಯಲ್ಲಿ ಜಾರಿಗೆ ಬಂದರೆ, ದೇಶದ ತೆರಿಗೆ–ಜಿಡಿಪಿ ಅನುಪಾತವನ್ನು ಹೆಚ್ಚಿಸಲು ಅಷ್ಟು ಸಹಕಾರಿಯಾಗುವುದಿಲ್ಲ.

### ಸಾರ್ವಜನಿಕ ಖರ್ಚುಗಳ ಆದ್ಯತೆಗಳು

ಖರ್ಚಿನ ಬಾಬುಗಳಲ್ಲಿ, ಅನೇಕ ಅಭಿವೃದ್ಧಿ ಕ್ಷೇತ್ರಗಳಿಗೆ ಮಧ್ಯಂತರ ಬಜೆಟ್‌ನಲ್ಲಿ ತೆಗೆದಿರಿಸಿದ್ದ ಮೊತ್ತವನ್ನೇ ಈ ಬಜೆಟ್‌ನಲ್ಲಿ ಮುಂದುವರೆಸಲಾಗಿದೆ ಅಥವಾ ಸ್ವಲ್ಪ ಮಟ್ಟಿಗೆ ಹೆಚ್ಚಿಸಲಾಗಿದೆ. ಮಧ್ಯಂತರ ಬಜೆಟ್‌ನಲ್ಲಿ ಈ ಬಾಬುಗಳಿಗೆ ಕೊಟ್ಟಿರುವ ಹಣಕ್ಕಿಂತ 31,000 ಕೋಟಿ ಹೆಚ್ಚಿಗೆ ಹಣವನ್ನು ಬಜೆಟ್‌ನಲ್ಲಿ ಕೊಡಲಾಗಿದೆ. ಈ ಹಣವನ್ನು ರಕ್ಷಣೆ, ರಸ್ತೆ ಸಾರಿಗೆ ಮತ್ತು

| ಟೇಬಲ್–ಸಿ : ಕೆಲವು ಆಯ್ದ ಸಚಿವಾಲಯಗಳಿಗೆ ಬಜೆಟ್‌ನಲ್ಲಿ ಒದಗಿಸಿರುವ ಹಣ(ಕೋಟಿ ರೂಗಳಲ್ಲಿ) | | | | | |
|---|---|---|---|---|---|
| | 2012–13 (ವಾಸ್ತವ ಅಂದಾಜು) | 2013–14 (ಬಜೆಟ್ ಅಂದಾಜು) | 2013–14 (ಪರಿಷ್ಕೃತ ಬಜೆಟ್) | 2014–15 (ಮಧ್ಯಂತರ ಅಂದಾಜು) | 2014–15 ಬಜೆಟ್ |
| 1 ಕೃಷಿ (ಕೆಆರ್‌ವಿವೈ ಸೇರಿದಂತೆ ರಾಜ್ಯಗಳ ಯೋಜನೆಗಳಿಗೆ ವಿಶೇಷ ಅನುದಾನ) | 24254.42 | 29772.83 | 26070.87 | 29962.94 | 31062.94 |
| ಜಿಡಿಪಿ ಶೇಕಡಾವಾರು | 0.24 | 0.26 | 0.23 | 0.23 | 0.24 |
| 2 ಗ್ರಾಹಕರ ವ್ಯವಹಾರಗಳು, ಆಹಾರ ಮತ್ತು ಸಾರ್ವಜನಿಕ ವಿತರಣೆ | 86676.52 | 91591.45 | 93339.86 | 115948.99 | 115952.63 |
| ಜಿಡಿಪಿ ಶೇಕಡಾವಾರು | 0.86 | 0.81 | 0.82 | 0.90 | 0.90 |
| 3 ರಕ್ಷಣೆ (ರಕ್ಷಣೆ ಸೇರಿದಂತೆ–ನಾಗರಿಕ ಅಂದಾಜು) | 230642.11 | 253346.51 | 253788.01 | 279202.87 | 285202.87 |
| ಜಿಡಿಪಿ ಶೇಕಡಾವಾರು | 2.28 | 2.23 | 2.24 | 2.17 | 2.21 |
| 4 ಕುಡಿಯುವ ನೀರು ಮತ್ತು ಸ್ಯಾನಿಟೇಷನ್ | 12968.63 | 15265.70 | 12006.24 | 15266.85 | 15266.85 |
| ಜಿಡಿಪಿ ಶೇಕಡಾವಾರು | 0.13 | 0.13 | 0.11 | 0.12 | 0.12 |
| 5 ಆರೋಗ್ಯ ಮತ್ತು ಕುಟುಂಬ ಕಲ್ಯಾಣ | 27885.19 | 37330.00 | 30847.31 | 38737.82 | 39237.82 |
| ಜಿಡಿಪಿ ಶೇಕಡಾವಾರು | 0.28 | 0.33 | 0.27 | 0.30 | 0.30 |
| 6 ವಸತಿ ಮತ್ತು ನಗರ ಬಡತನ ನಿರ್ಮೂಲನೆ (ಅಂಕಿ ಅಂಶಗಳು 2014–15 ನೇ ಸಾಲಿನ ಮಧ್ಯಂತರ ಮತ್ತು ಬಜೆಟ್ ಅಂದಾಜು ಬಿಎಸ್ಯುಪಿ ಮತ್ತು ಜೆಎನ್‌ಎನ್‌ನಯುಆರ್‌ಎಂ ನ ಐಎಚ್‌ಎಸ್‌ಡಿಪಿ ಭಾಗ. ಇವು ಮೊದಲು ಹಣಕಾಸು ಇಲಾಖೆಗೆ ಸೇರಿದ್ದವು) | 933.18 | 1468.02 | 1207.72 | 6008.62 | 6008.62 |
| ಜಿಡಿಪಿ ಶೇಕಡಾ ವಾರು | 0.01 | 0.01 | 0.01 | 0.05 | 0.05 |
| 7 ಮಾನವ ಅಭಿವೃದ್ಧಿ | 66054.67 | 79451.00 | 74621.30 | 81441.10 | 82771.10 |
| ಜಿಡಿಪಿ ಶೇಕಡಾವಾರು | 0.65 | 0.70 | 0.66 | 0.63 | 0.64 |
| 8 ಅಲ್ಪಸಂಖ್ಯಾತರ ವ್ಯವಹಾರಗಳು | 2174.29 | 3530.98 | 3130.84 | 3734.01 | 3734.01 |
| ಜಿಡಿಪಿ ಶೇಕಡಾವಾರು | 0.02 | 0.03 | 0.03 | 0.03 | 0.03 |
| 9 ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ | 97423.04 | 65188.41 | 85566.13 | 63543.00 | 63543.00 |
| ಜಿಡಿಪಿ ಶೇಕಡಾವಾರು | 0.96 | 0.57 | 0.75 | 0.49 | 0.49 |
| 10 ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳು (ರಾಜ್ಯದ ಯೋಜನೆಗಳಿಗೆ ಕೇಂದ್ರ ನೀಡುವ ವಿಶೇಷ ನೆರವಿನ ಅಂಕಿ ಅಂಶಗಳು) | 22536.58 | 31302.14 | 30338.53 | 31257.20 | 34345.20 |
| ಜಿಡಿಪಿ ಶೇಕಡಾವಾರು | 0.22 | 0.28 | 0.27 | 0.24 | 0.27 |
| 11 ಗ್ರಾಮೀಣ ಅಭಿವೃದ್ಧಿ | 53180.99 | 80250.50 | 61863.93 | 82261.46 | 83852.46 |
| ಜಿಡಿಪಿ ಶೇಕಡಾವಾರು | 0.53 | 0.71 | 0.54 | 0.64 | 0.65 |
| 12 ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ | 4939.72 | 6725.32 | 5723.35 | 6845.63 | 6845.63 |
| ಜಿಡಿಪಿ ಶೇಕಡಾವಾರು | 0.05 | 0.06 | 0.05 | 0.05 | 0.05 |
| 13 ಗುಡ್ಡಗಾಡು ಜನರ ವ್ಯವಹಾರಗಳು (ರಾಜ್ಯಗಳ ಯೋಜನೆಗಳಿಗೆ ಕೇಂದ್ರದ ವಿಶೇಷ ನೆರವು) | 3072.63 | 4295.94 | 3896.05 | 4397.96 | 4497.96 |
| ಜಿಡಿಪಿ ಶೇಕಡಾವಾರು | 0.03 | 0.04 | 0.03 | 0.03 | 0.03 |
| 14 ನಗರಾಭಿವೃದ್ಧಿ | 8465.00 | 10363.75 | 9548.20 | 19589.46 | 20009.46 |
| ಜಿಡಿಪಿ ಶೇಕಡಾವಾರು | 0.08 | 0.09 | 0.08 | 0.15 | 0.16 |
| 15 ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ | 17035.72 | 20440.00 | 18285.65 | 21093.88 | 21193.88 |
| ಕೇಂದ್ರದ ಒಟ್ಟಾರೆ ಬಜೆಟ್‌ನ ಶೇಕಡಾವಾರು | 1.21 | 1.23 | 1.15 | 1.20 | 1.18 |
| ಜಿಡಿಪಿ ಶೇಕಡಾವಾರು | 0.17 | 0.18 | 0.16 | 0.16 | 0.16 |

ಮೂಲ : ಕೇಂದ್ರದ 2014–15 ನೇ ಸಾಲಿನ ಬಜೆಟ್

| ಟೇಬಲ್ ಡಿ:ಕೇಂದ್ರ ಸರ್ಕಾರ ಪ್ರಾಯೋಜಿತ ಪ್ರಮುಖ ಯೋಜನೆಗಳಿಗೆ ಒದಗಿಸಿರುವ ಹಣ (ಕೋಟಿ ರೂಪಾಯಿಗಳಲ್ಲಿ) | | | | |
|---|---|---|---|---|
| ಪ್ರಮುಖ ಯೋಜನೆಗಳು | 2012–13 (ವಾಸ್ತವಿಕ) | 2013–14 (ಪರಿಷ್ಕೃತ ಅಂದಾಜು) | 2014–15 (ಮಧ್ಯಂತರ ಬಜೆಟ್) | 2014–15 (ಬಜೆಟ್ ಅಂದಾಜು) |
| ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯಿದೆ (ಎಂಜಿಎನ್‌ಆರ್‌ಇಜಿಎ) | 30274 | 33000 | 34000 | 34000 |
| ಆಜೀವಿಕ/ರಾಷ್ಟ್ರೀಯ ಜೀವನ ನಿರ್ವಹಣಾ ಮಿಷನ್ (ಎನ್‌ಆರ್‌ಎಲ್‌ಎಂ) | 2195 | 2600 | 3859 | 4000 |
| ಇಂದಿರಾ ಆವಾಜ್ ಯೋಜನಾ (ಐಎವೈ) | 7869 | 13184 | 16000 | 16000 |
| ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನಾ (ಪಿಎಂಜಿಎಸ್‌ವೈ) | 8884 | 9700 | 13000 | 14391 |
| ಜವಾಹರ್‌ಲಾಲ್ ನೆಹರು ರಾಷ್ಟ್ರೀಯ ನಗರ ಮುಂದುವರೆದ ಮಿಷನ್ (ಜೆಎನ್‌ಎನ್‌ಯುಆರ್‌ಎಂ) | 5357 | 1040 | 11247 | 11270 |
| ಸ್ವರ್ಣ ಜಯಂತಿ ಷಹರಿ ರೋಜ್‌ಗಾರ್ ಯೋಜನೆ (ಎಸ್‌ಜೆಎಸ್‌ಆರ್‌ವೈ/ಎನ್‌ಯುಎಲ್‌ಎಂ) | 794 | 778 | 1003 | 1003 |
| ರಾಷ್ಟ್ರೀಯ ಸ್ವರ್ಣ ಭೀಮಾ ಯೋಜನಾ (ಆರ್‌ಎಸ್‌ಬಿವೈ) | 1002 | 789 | 1434 | 1434 |
| ಸರ್ವ ಶಿಕ್ಷಣ ಅಭಿಯಾನ (ಎಸ್‌ಎಸ್‌ಎ) | 23873 | 26608 | 27758 | 28258 |
| ಮಧ್ಯಾಹ್ನ ಊಟ (ಎಂಡಿಎಂ) | 10849 | 12189 | 13125 | 13215 |
| ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಾ ಅಭಿಯಾನ (ಆರ್‌ಎಂಎಸ್‌ಎ) | 3172 | 3123 | 5000 | 5000 |
| ರಾಷ್ಟ್ರೀಯ ಆರೋಗ್ಯ ಮಿಷನ್ (ಎನ್‌ಎಚ್‌ಎಂ) | 18047 | 16396 | 24691 | 21912 |
| ಪ್ರಧಾನ ಮಂತ್ರಿ ಸ್ವಾಸ್ಥ್ಯ ಸುರಕ್ಷಾ ಯೋಜನಾ (ಪಿಎಂಎಸ್‌ಎಸ್‌ವೈ) | 989 | 1377 | 1456 | 1906 |
| ರಾಷ್ಟ್ರೀಯ ಸ್ವಾಸ್ಥ್ಯ ಭಿಮಾ ಯೋಜನಾ (ಆರ್‌ಎಸ್‌ಬಿವೈ) | 1002 | 789 | 1434 | 1434 |
| ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಯೋಜನೆ ಕಾರ್ಯಕ್ರಮ (ಎನ್‌ಆರ್‌ಡಿಡಬ್ಲ್ಯುಪಿ) | 10490 | 9700 | 11000 | 11000 |
| ನಿರ್ಮಲ್ ಭಾರತ್ ಅಭಿಯಾನ (ಎನ್‌ಬಿಎ) | 2474 | 2300 | 4260 | 4260 |
| ರಾಷ್ಟ್ರೀಯ ಕೃಷಿ ವಿಕಾಸ್ ಯೋಜನಾ (ಎನ್‌ಎಫ್‌ಎಸ್‌ಎಂ) | 8400 | 7089 | 9864 | 9954 |
| ರಾಷ್ಟ್ರೀಯ ಆಹಾರ ಭದ್ರತೆ ಮಿಷನ್ (ಎನ್‌ಎಫ್‌ಎಸ್‌ಎಂ) | 1723 | 1738 | 2205 | 2030 |
| ಮಹಿಳಾ ಸಬಲೀಕರಣ ರಾಷ್ಟ್ರೀಯ ಮಿಷನ್ (ಎನ್‌ಎಂಇಡಬ್ಲ್ಯು) | 10 | 31 | 90 | 90 |
| ಸಮಗ್ರ ಮಕ್ಕಳಾಭಿವೃದ್ಧಿ ಸೇವೆಗಳು (ಐಸಿಡಿಎಸ್) | 15712 | 16432 | 18691 | 18691 |

ಮಿಷನ್‌ಮೂಲ : ಕೇಂದ್ರದ ಬಜೆಟ್‌ನ ದಾಖಲೆಗಳು, 2014–15, 2013–14 (ಐ)

ಹೈವೇಸ್‌ಗಳಿಗೆ ಕ್ರಮವಾಗಿ ರೂ. 6000 ಮತ್ತು 3000 ಕೋಟಿ ಒದಗಿಸಲಾಗಿದೆ. ಇದರ ಜೊತೆಗೆ ಸಾಮಾಜಿಕ ವಲಯದ ಕ್ಷೇತ್ರಗಳಿಗೆ ಮಧ್ಯಂತರ ಬಜೆಟ್‌ನಲ್ಲಿ ಕೊಟ್ಟಿರುವಷ್ಟೇ ಅಥವಾ ಸ್ವಲ್ಪಮಟ್ಟಿಗೆ ಹೆಚ್ಚಿನ ಹಣವನ್ನು ಒದಗಿಸಲಾಗಿದೆ. ಬಹುತೇಕ ಸಮಾಜ ಕಲ್ಯಾಣ ವಲಯದ ಸಚಿವಾಲಯಗಳಾದ ನಗರಾಭಿವೃದ್ಧಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿಗೆ ರೂ.500 ಕೋಟಿ ಹೆಚ್ಚಿಗೆ ಕೊಡಲಾಗಿದೆ. ಕೃಷಿ ಮತ್ತು ಮಾನವ ಸಂಪನ್ಮೂಲ ಸಚಿವಾಲಯಗಳಿಗೆ ರೂ. 1000 ಕೋಟಿ ಹೆಚ್ಚಿಗೆ ನೀಡಲಾಗಿದೆ. ರಕ್ಷಣೆ, ರಸ್ತೆ ಮತ್ತು ಸಾರಿಗೆ ಕ್ಷೇತ್ರಗಳಿಗೆ ಹೊಸ ಸರ್ಕಾರ ನೀಡಿರುವ ಹೆಚ್ಚಿನ ಆದ್ಯತೆಯ ನೀತಿಯು ಸಿ ಟೇಬಲ್‌ನಲ್ಲಿ ವ್ಯಕ್ತವಾಗುತ್ತದೆ. ಕೇಂದ್ರ ಸರ್ಕಾರ ಪ್ರಾಯೋಜಿತ ಪ್ರಮುಖ ಯೋಜನೆಗಳಾದ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆ(ಎನ್‌ಆರ್‌ಇಜಿಎಸ್), ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಮಿಷನ್ (ಎನ್‌ಆರ್‌ಎಚ್‌ಎಂ), ಸರ್ವ ಶಿಕ್ಷ ಅಭಿಯಾನ(ಎಸ್‌ಎಸ್‌ಎ) ಮತ್ತಿತರ ಯೋಜನೆಗಳು. ಈ ಯೋಜನೆಗಳಿಗೆ ಮಧ್ಯಂತರ ಬಜೆಟ್‌ನಲ್ಲಿ ಒದಗಿಸಿರುವ ಹಣವನ್ನೇ ಬಜೆಟ್‌ನಲ್ಲಿ ಒದಗಿಸಲಾಗಿದೆ. ಈ ಅಂಕಿ ಅಂಶಗಳು 2013–14ರ ಪರಿಷ್ಕೃತ ಅಂದಾಜಿಗಿಂತ ಸಾಕಷ್ಟು ಪ್ರಮಾಣದಲ್ಲಿ ಹೆಚ್ಚಿಸದಿರುವುದು ಕಂಡುಬರುತ್ತದೆ. (ಟೇಬಲ್–ಡಿ)

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಭರವಸೆ ಕಾಯಿದೆ (ಎಂಜಿಎನ್‌ಆರ್‌ಇಜಿಎ)ಗೆ 34,000 ಕೋಟಿಗೆ ಇಳಿಸಿ, ಆಹಾರ ಸಬ್ಸಿಡಿಗೆ 1.15 ಲಕ್ಷ ಕೋಟಿ ಒದಗಿಸಲಾಗಿದೆ. ಆದರೆ ದೇಶದ ಕೆಲವು ಭಾಗಗಳಲ್ಲಿ ಮಳೆಯ ಕೊರತೆಯಿಂದ ಬರಗಾಲ ತಲೆದೋರಬಹುದೆಂಬ ಆತಂಕವಿರುವುದರಿಂದ ಈ ಎರಡೂ ಯೋಜನೆಗಳಿಗೆ ಹೆಚ್ಚಿನ ಹಣವನ್ನು ಒದಗಿಸುವ ಅಗತ್ಯ ಕಂಡುಬರುತ್ತದೆ. ಇದರ ಜೊತೆಗೆ (ಎಂಜಿಎನ್‌ಆರ್‌ಇಜಿಎ)ಗೆ ಕಳೆದ ವರ್ಷದಲ್ಲಿ ಪಾವತಿ ಮಾಡಬೇಕಾಗಿರುವ ಹಣ ಸುಮಾರು ರೂ. 5000 ಕೋಟಿಗಳನ್ನು ಬಿಡುಗಡೆ ಮಾಡಬೇಕಾಗಿದೆ. ಈ ಹಣವನ್ನು ಬಜೆಟ್‌ನಲ್ಲಿ ಒದಗಿಸಿರುವ ಹಣದಲ್ಲಿ ಕಳೆದರೆ ಉಳಿದ ಹಣ ಬಹಳ ಕಡಿಮೆ ಎಂದು ಹೇಳಬೇಕಾಗುತ್ತದೆ. ಆಹಾರ ಭದ್ರತೆಯಡಿಯಲ್ಲಿ ರಾಷ್ಟ್ರೀಯ ಆಹಾರ ಭದ್ರತೆ ಕಾಯಿದೆಯ ಜಾರಿಗೆ 1.37 ಲಕ್ಷ ಕೋಟಿ ರೂಪಾಯಿಗಳು ಈ ವರ್ಷದ ಬಜೆಟ್‌ನಲ್ಲಿ ದೊರೆಯಲಿದೆ.

ದೇಶದಲ್ಲಿ ಆರೋಗ್ಯ ಸೇವೆಯನ್ನು ಎಲ್ಲ ಜನರಿಗೆ ದೊರಕಿಸಿಕೊಡುವ ನಿಟ್ಟಿನಲ್ಲಿ ಆರೋಗ್ಯ ಸೌಲಭ್ಯಗಳ ವಿಸ್ತರಣೆಯ ಕಾರ್ಯಕ್ರಮದಲ್ಲಿ ಎಲ್ಲರಿಗೂ ಉಚಿತವಾಗಿ ಔಷಧಿಗಳನ್ನು ಒದಗಿಸಲಾಗುವುದು ಎಂದು ಬಜೆಟ್‌ನಲ್ಲಿ ತಿಳಿಸಲಾಗಿದೆ. ಎಲ್ಲರಿಗೂ ಆರೋಗ್ಯ ಸೇವೆಯನ್ನು ಒದಗಿಸಲು ಹೊಸ ನಾಲ್ಕು ಎಐಐಎಂಎಸ್ ಗಳು, ಗ್ರಾಮೀಣ ಆರೋಗ್ಯ ಸಂಶೋಧನಾ ಕೇಂದ್ರಗಳು ಮತ್ತು ಹೊಸ ವೈದ್ಯಕೀಯ ಕಾಲೇಜುಗಳನ್ನು ಸ್ಥಾಪಿಸಲು ಬಜೆಟ್‌ನಲ್ಲಿ ಪ್ರಸ್ತಾಪಿಸಿರುವುದು ಸ್ವಾಗತಾರ್ಹವಾದುದು. ಬಜೆಟ್‌ನಲ್ಲಿ ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿ ಸಿಬ್ಬಂದಿಯ ಕೊರತೆ ಇರುವುದನ್ನು ಒಪ್ಪಿಕೊಳ್ಳಲಾಗಿದ್ದು, ಈ ಕೊರತೆಯನ್ನು ತುಂಬಲು ಯಾವುದೇ ಕ್ರಮವನ್ನು ತೆಗೆದುಕೊಳ್ಳುವ ಪ್ರಸ್ತಾವನೆ ಮಾಡಿಲ್ಲ. ಉತ್ತಮವಾದ ಆರೋಗ್ಯ ಸೇವೆಯನ್ನು ಒದಗಿಸಲು ವೃತ್ತಿನಿಪುಣರು, ವಿಶೇಷ ತರಬೇತಿ ಪಡೆದ ವೈದ್ಯರು ಮತ್ತು ದಾದಿಯರ ಮತ್ತು ಶಾಲಾ ಶಿಕ್ಷಣದಲ್ಲಿ ಶಿಕ್ಷಕರ ಕೊರತೆ ಇರುವುದುನ್ನು ಇತ್ತೀಚಿನ ಆರ್ಥಿಕ ಸಮೀಕ್ಷೆಯಲ್ಲಿ ಗುರುತಿಸಲಾಗಿದ್ದರೂ, ಈ ಕೊರತೆಯನ್ನು ನೀಗಿಸಲು ಬಜೆಟ್‌ನಲ್ಲಿ ಕ್ರಮ ತೆಗೆದುಕೊಂಡಿಲ್ಲ.

ಬಜೆಟ್ ಭಾಷಣದಲ್ಲಿ ಮಹಿಳೆಯರ ಸುರಕ್ಷತೆಗೆ ಮತ್ತು ಲಿಂಗ ತಾರತಮ್ಯವನ್ನು ಹೋಗಲಾಡಿಸಲು ಅನೇಕ ಹೊಸ ಯೋಜನೆಗಳು ಮತ್ತು ಪೈಲಟ್ ಯೋಜನೆಗಳನ್ನು ಪ್ರಸ್ತಾಪಿಸಲಾಗಿದೆ. ಆದರೆ ಈ ಯೋಜನೆಗಳಿಗೆ ತೀರಾ ಕಡಿಮೆ ಪ್ರಮಾಣದಲ್ಲಿ ಹಣ ಒದಗಿಸಲಾಗಿದೆ. ಬಜೆಟ್‌ನಲ್ಲಿ ಪ್ರಕಟವಾಗಿರುವುದನ್ನು ನೋಡಿದರೆ ಈ ಕಾರ್ಯಕ್ರಮಗಳಿಗೆ 'ನಿರ್ಭಯಾ ನಿಧಿ' ಯಲ್ಲಿ ಒದಗಿಸಿರುವ ಹಣವನ್ನು ಖರ್ಚು ಮಾಡಲು ಸಾಧ್ಯವಾಗುತ್ತದೆಯೇ ಎಂಬ ಅನುಮಾನ ಬರುತ್ತದೆ. ಮಹಿಳೆಯ ಮೇಲೆ ನಡೆಯುತ್ತಿರುವ ದೌರ್ಜನ್ಯಗಳ ವಿರುದ್ಧ ಹೋರಾಡಲು ಈ ಹಣವನ್ನು ಬಳಸಿಕೊಳ್ಳುವಲ್ಲಿ ಕೇಂದ್ರ ಸರ್ಕಾರದ ಸಚಿವಾಲಯಗಳು ಕೆಲವೇ ಕೆಲವು ಪ್ರಯತ್ನಗಳನ್ನು ಮಾಡಿವೆ. ಹಿರಿಯ ನಾಗರಿಕರು, ಗುಡ್ಡಗಾಡು ಅಭಿವೃದ್ಧಿ,



ಗ್ರಾಮೀಣ ಯುವಕರು, ಬಾಲಕಿಯರ ಕ್ಷೇಮಾಭಿವೃದ್ಧಿ, ಮಹಿಳೆಯರ ರಕ್ಷಣೆ ಮತ್ತು ಲಿಂಗತಾರತಮ್ಯ, ಅಲ್ಪಸಂಖ್ಯಾತರು, ನಗರ ಸಾರಿಗೆ, ಉತ್ತಮ ಆಡಳಿತ, ಹವಾಮಾನ ಬದಲಾವಣೆ, ಕೃಷಿ ಕ್ಷೇತ್ರದಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿ, ಪ್ರವಾಸೋದ್ಯಮ ಹಾಗೂ ಮತ್ತಿತರೆ ಹಲವಾರು ಕ್ಷೇತ್ರಗಳು ಸೇರಿದಂತೆ ಹೆಚ್ಚು ಜನಸಂಖ್ಯೆ ಹಾಗೂ ಕ್ಷೇತ್ರಗಳಿಗೆ ಅನೇಕ ಯೋಜನೆಗಳನ್ನು ಈ ಬಜೆಟ್‌ನಲ್ಲಿ ಪ್ರಕಟಿಸಿದರೂ ಅವುಗಳನ್ನು ಅನುಷ್ಠಾನಕ್ಕೆ ತರಲು ಸ್ಪಷ್ಟವಾದ ಮಾರ್ಗಸೂಚಿಗಳನ್ನು ನೀಡದೆ ರೂ.100 ಕೋಟಿ ಒದಗಿಸಲಾಗಿದೆ. ಈ ಪ್ರಕಟಣೆಗಳು ಬಹಳ ಅಗತ್ಯವಿರುವ ಕ್ಷೇತ್ರಗಳ ಜನರಿಗೆ ಅಗತ್ಯವಾಗಿದ್ದು ಸರಿಯಾದ ದಾರಿಯಲ್ಲಿದ್ದರೂ, ತೀರಾ ಕಡಿಮೆ ಹಣವನ್ನು ಒದಗಿಸಿರುವುದರ ಜೊತೆಗೆ ಯಾವುದೇ ರೀತಿಯ ಮಾರ್ಗಸೂಚಿಗಳನ್ನು ನೀಡದೆ ಇರುವುದರಿಂದ ತಕ್ಷಣ ಹೆಚ್ಚಿನ ಹಣ ಒದಗಿಸಿ, ಮಾರ್ಗಸೂಚಿಗಳನ್ನು ರೂಪಿಸಿ ಯೋಜನೆಗಳನ್ನು ಜಾರಿಗೆ ತರುವ ಕೆಲಸ ಆಗಬೇಕಿದೆ. ಕೃಷಿ ಮತ್ತು ಅದಕ್ಕೆ ಪೂರಕವಾದ ಕ್ಷೇತ್ರಗಳಿಗೆ ಸಂಬಂಧಿಸಿದಂತೆ, ಬೇಳೆ ವಿಮೆ, ಮಣ್ಣಿನ ಆರೋಗ್ಯ, ಕೃಷಿ ಮಾರಾಟ, ಪಶು ಸಂಗೋಪನೆ ಮತ್ತು ಮೀನುಗಾರಿಕೆ ಮತ್ತಿತರ ಕ್ಷೇತ್ರಗಳಿಗೆ ಹೆಚ್ಚಿನ ಮಹತ್ವ ಕೊಟ್ಟಿರುವುದು ಸ್ವಾಗತಾರ್ಹವಾದುದು. ಆದರೂ, ಕೃಷಿಕರಿಗೆ ಆದಾಯ ಭದ್ರತೆ ಒದಗಿಸುವ ವಿಷಯ ಬಜೆಟ್‌ನಲ್ಲಿ ಪ್ರಸ್ತಾಪಿಸದೆ ಇರುವುದು ಎದ್ದು ಕಾಣುತ್ತದೆ. ಅಗತ್ಯ ವಸ್ತುಗಳ ಬೆಲೆಗಳು ಏರುವುದನ್ನು ತಡೆಯಲು ಬೆಲೆ ಸ್ಥಿರೀಕರಣ ನಿಧಿಗೆ (ಏಕದಳ ಧಾನ್ಯಗಳಿಗೆ ಮತ್ತು ತರಕಾರಿಗಳಿಗೆ) ರೂ.500 ಕೋಟಿ ಒದಗಿಸಿರುವುದು ಒಂದು ಸ್ಪಷ್ಟವಾದ ಕ್ರಮವಾಗಿದ್ದು, ಅದನ್ನು ಸರಿಯಾಗಿ ಸಾಕಾರಗೊಳಿಸಲು ಕೂಡಲೇ ಮಾರ್ಗಸೂಚಿಗಳನ್ನು ರೂಪಿಸಬೇಕು.

ಕಪ್ಪುಹಣದ ಬಗ್ಗೆ ವ್ಯವಹರಿಸಲು ಸಹಾಯವಾಗುವಂತೆ ಕೇಂದ್ರದ ನೇರ

ತೆರಿಗೆಯ ಮಂಡಳಿ (ಸಿಬಿಡಿಟಿ) ರಚಿಸುವಾಗ, ಅಬ್ಕಾರಿ ಮತ್ತು ಕಸ್ಟಮ್ಸ್‌ನ ಕೇಂದ್ರ ಮಂಡಳಿ(ಸಿಬಿಇಸಿ), ಹಣಕಾಸು ವಿಶ್ಲೇಷಣಾ ಘಟಕ, ಹಾಗೂ ಜಾರಿ ನಿರ್ದೇಶನಾಲಯ ಮತ್ತಿತರ ಹಣಕಾಸು ಸಂಸ್ಥೆಗಳ ಆಡಳಿತ ವ್ಯವಸ್ಥೆಯನ್ನು ಬಲಪಡಿಸಲು ಹೆಚ್ಚುವರಿ ಹಣಕಾಸಿನ ಅಗತ್ಯಗಳನ್ನು ಪೂರೈಸಬೇಕಾಗಿದೆ. ಸಿಬಿಡಿಟಿ ನೀಡಿರುವ ಅಂಕಿ ಅಂಶಗಳ ಪ್ರಕಾರ 2012 ರಲ್ಲಿ ಈ ಸಂಸ್ಥೆಗಳು ಸುಮಾರು 30,000 ಸಿಬ್ಬಂದಿ ಕೊರತೆಯನ್ನು ಅನುಭವಿಸುತ್ತಿವೆ. ಭ್ರಷ್ಟಾಚಾರದ ಸಮಸ್ಯೆಯನ್ನು ಎದುರಿಸಲು ಅನೇಕ ಕ್ರಮಗಳನ್ನು ತೆಗೆದುಕೊಳ್ಳಬಹುದೆಂದು ನಿರೀಕ್ಷಿಸಲಾಗಿತ್ತು.

ಕೊನೆಯದಾಗಿ, ಪಿಪಿಪಿ ಮಾದರಿಗೆ ಪುನಃ ಹೆಚ್ಚಿನ ಆದ್ಯತೆ ಕೊಟ್ಟಿರುವ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ತನ್ನ 2014–15 ನೇ ಸಾಲಿನ ಬಜೆಟ್‌ನಲ್ಲಿ ಮೂಲಸೌಲಭ್ಯಗಳು ಮತ್ತು ಸಾರಿಗೆ ಕ್ಷೇತ್ರಗಳಿಗೆ ಹೆಚ್ಚಿನ ಗಮನಕೊಟ್ಟಿದೆ ಎಂದು ಹೇಳಬಹುದು. ಆದರೆ, ನಗರೀಕರಣ ಮತ್ತು ಭೂಸ್ವಾಧೀನಗಳಿಂದ ನೆಲೆ ಕಳೆದುಕೊಳ್ಳುವವರಿಗೆ ಪುನರ್ವಸತಿ ಕಲ್ಪಿಸುವ ಸಂದರ್ಭದಲ್ಲಿ ಎದುರಾಗುವ ಸಮಸ್ಯೆಗಳನ್ನು ನಿಭಾಯಿಸುವುದರ ಬಗ್ಗೆ ನಿಖರವಾದ ನೀತಿಗಳು ಬಜೆಟ್ ಭಾಷಣದಲ್ಲಿ ಕಂಡುಬರುವುದಿಲ್ಲ.

### ಕೇಂದ್ರ–ರಾಜ್ಯಗಳ ನಡುವೆ ಸಂಪನ್ಮೂಲಗಳ ಹಂಚಿಕೆ

ಕೇಂದ್ರ ಸರ್ಕಾರದ ದೀರ್ಘಾವಧಿ ವೆಚ್ಚಗಳನ್ನು ಮುಂದುವರೆಸಿಕೊಂಡು ದೇಶಕ್ಕೆ ಸುಭದ್ರವಾದ ಹಾಗೂ ಸಂವೇದನಾತ್ಮಕ ಆಡಳಿತವನ್ನು ಕೊಡಬೇಕಾದರೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ಸಂಪನ್ಮೂಲಗಳ ಹಂಚಿಕೆಯು ಮಹತ್ತರವಾದ ಪಾತ್ರ ವಹಿಸುತ್ತದೆ. ಕಳೆದೆರಡು ದಶಕಗಳಿಂದ ಅಂದರೆ, 1990 ರ ದಶಕದಿಂದ ದೇಶದಲ್ಲಿ



ವಿತ್ತೀಯ ಸಂಪನ್ಮೂಲಗಳ ಮೇಲೆ ರಾಜ್ಯ ಸರ್ಕಾರಗಳು ಮತ್ತು ಕೇಂದ್ರ ಸರ್ಕಾರ ಹೊಂದಿರುವ ಹಿಡಿತವನ್ನು ನೋಡಿದರೆ ರಾಜ್ಯ ಸರ್ಕಾರಗಳಿಗಿಂತ ಕೇಂದ್ರ ಸರ್ಕಾರವೇ ಹೆಚ್ಚು ಹಿಡಿತ ಹೊಂದಿರುವುದು ಕಂಡು ಬರುತ್ತದೆ.. ರಾಜ್ಯಗಳ ಹೆಚ್ಚುತ್ತಿರುವ ವೆಚ್ಚಗಳಿಗೆ ಸರಿಸಮಾನವಾಗಿ ದೇಶದ ಒಟ್ಟಾರೆ ವಿತ್ತೀಯ ಸಂಪನ್ಮೂಲಗಳಲ್ಲಿ ರಾಜ್ಯಗಳಿಗೆ ಹಂಚಿಕೆಯಾಗದಿರುವುದು ಎದ್ದು ಕಾಣುತ್ತದೆ. ದೇಶದ ಒಟ್ಟಾರೆ ವಿತ್ತೀಯ ಸಂಪನ್ಮೂಲಗಳ ಹಂಚಿಕೆಯಲ್ಲಿ ರಾಜ್ಯಗಳಿಗೆ ನ್ಯಾಯವಾಗಿ ದೊರೆಯಬೇಕಿದ್ದ ಸಂಪನ್ಮೂಲಗಳ ಹಂಚಿಕೆಯಲ್ಲಿ ಕಳೆದ ಒಂದೂವರೆ ದಶಕಗಳಿಂದ ಕಡಿಮೆಯಾಗುತ್ತಾ ಬಂದಿರುವುದು ಎದ್ದು ಕಾಣುತ್ತದೆ. ದೇಶದ ಒಟ್ಟಾರೆ ವಿತ್ತೀಯ ಸಂಪನ್ಮೂಲಗಳನ್ನು ರಾಜ್ಯ ಸರ್ಕಾರಗಳು ಮತ್ತು ಕೇಂದ್ರ ಸರ್ಕಾರಗಳ ನಡುವೆ ಹಂಚಿಕೆಯ ನೀತಿಯಲ್ಲೇ ರಾಜ್ಯಗಳನ್ನು ನಿರ್ಲಕ್ಷ್ಯಿಸಿರುವುದು ಕಂಡುಬರುತ್ತದೆ.

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಸಂಪನ್ಮೂಲಗಳ ಹಂಚಿಕೆಯ (ಸಿಎಸ್‌ಎಸ್) ಬಿ.ಕೆ.ಚತುರ್ವೇದಿ ಪುನರ್‌ನಿರೂಪಣಾ ಸಮಿತಿ, ತನ್ನ ವರದಿಯನ್ನು 2011 ರಲ್ಲಿ ಸಲ್ಲಿಸಿದ್ದು, ಅದರಲ್ಲಿ ರಾಜ್ಯ ಸರ್ಕಾರಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಕೇಂದ್ರ ನೀಡುವ ಸಹಾಯವನ್ನು ಹೆಚ್ಚಿಸಬೇಕೆಂದು ಶಿಫಾರಸ್ಸು ಮಾಡಿದೆ. ಈ ವರದಿಯ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಹಿಂದಿನ ಸರ್ಕಾರ ತನ್ನ ಮಧ್ಯಂತರ ಬಜೆಟ್‌ನಲ್ಲಿ ರಾಜ್ಯಗಳಿಗೆ ಹೆಚ್ಚಿನ ಸಂಪನ್ಮೂಲಗಳನ್ನು ತೆಗೆದಿರಿಸಿತ್ತು. ಅದನ್ನು ನೂತನ ಸರ್ಕಾರ ತನ್ನ 2014–15 ನೇ ಸಾಲಿನ ಬಜೆಟ್‌ನಲ್ಲಿ ರಾಜ್ಯಗಳ ಯೋಜನೆಗಳಿಗೆ ಹೆಚ್ಚಿನ ನೆರವು ನೀಡುವುದನ್ನು ಮುಂದುವರಿಸಿದೆ.

ಇದರಿಂದ ರಾಜ್ಯಗಳ ಯೋಜನೆಗಳಿಗೆ ಕೇಂದ್ರದಿಂದ ಹಂಚಿಕೆಯಾಗುತ್ತಿದ್ದ ಹಣದಲ್ಲಿ ಗಣನೀಯವಾಗಿ ಹೆಚ್ಚಿದೆ. ಇದರ ಪ್ರಕಾರ 2013–14 ನೇ ಸಾಲಿನಲ್ಲಿ ರೂ.1,111.313 ಕೋಟಿ ಹಂಚಿಕೆಯಾಗಿದ್ದರೆ, 2014–15 ನೇ ಸಾಲಿನಲ್ಲಿ ರೂ.3,30,764 ಕೋಟಿಗೆ ಹೆಚ್ಚಳವಾಗಿದೆ. ಈ ಕ್ರಮದಿಂದ ಕೇಂದ್ರದ ನೆರವಿನಲ್ಲಿ ಗಣನೀಯವಾಗಿ ಹೆಚ್ಚಳವಾಗಿರುವುದು ಮೇಲು ನೋಟಕ್ಕೆ ಕಂಡು ಬಂದರೂ, ವಾಸ್ತವವಾಗಿ ಕೇಂದ್ರದ



ನೆರವಿನಲ್ಲಿ ಕೇವಲ ಶೇಕಡಾ 10 ರಷ್ಟು ಮಾತ್ರ ಹೆಚ್ಚಳವಾಗಿದೆ. ಉಳಿದ ಹಣ ಯೋಜನೆಗಳಿಗೆ ನಿರೂಪಿಸಿರುವ ಮಾರ್ಗಸೂಚಿಯನ್ನು ಅವಲಂಬಿಸಿ ನಿಗದಿಯಾಗುತ್ತದೆ.

ಸರ್ಕಾರದ ಹಣಕಾಸು ವ್ಯವಹಾರದಲ್ಲಿ ಪಾರದರ್ಶಕತೆ ಮತ್ತು ಉತ್ತರದಾಯಿತ್ವದ ವಿಚಾರ ಬಂದಾಗ, ರಾಜ್ಯ ಸರ್ಕಾರಗಳ ಬಜೆಟ್‌ಗಳನ್ನು ಗಣನೆಗೆ ತೆಗೆದುಕೊಳ್ಳದೆ ಯೋಜನೆಗಳಿಗೆ ಹಣ ಒದಗಿಸುತ್ತಿದ್ದ ವಿವಾದಾತ್ಮಕ ಪದ್ಧತಿಯನ್ನು ಈ ವರ್ಷದ ಬಜೆಟ್‌ನಲ್ಲಿ ಕೈಬಿಟ್ಟಿರುವುದು ಸ್ವಾಗತಾರ್ಹ ಕ್ರಮವಾಗಿದೆ. ಇದರಿಂದ ಸರ್ಕಾರದ ಹಣಕಾಸು ವ್ಯವಹಾರದಲ್ಲಿ ಪಾರದರ್ಶಕತೆ ಮತ್ತು ಉತ್ತರದಾಯಿತ್ವಕ್ಕೆ ಅನುಕೂಲವಾಗುತ್ತದೆ.

ಹೆಚ್ಚುತ್ತಿರುವ ಹಣದುಬ್ಬರ ಮತ್ತು ಜಿಡಿಪಿ ಬೆಳವಣಿಗೆ ಕಡಿಮೆಯಾಗಿರುವ ಈಗಿನ ಸಂದರ್ಭದಲ್ಲಿ, ಎಲ್ಲರೂ ದುಡಿಯುವ ಅವಕಾಶಗಳನ್ನು ಸೃಷ್ಟಿಸುವುದರ ಜೊತೆಗೆ ಅಗತ್ಯ ಸೇವೆಗಳು ಮತ್ತು ಸಾಮಾಜಿಕ ರಕ್ಷಣೆಯ ಕ್ರಮಗಳ ಗುಣಮಟ್ಟವನ್ನು ಹೆಚ್ಚಿಸಲು ಗಮನ ಕೊಡಬೇಕಾಗಿದೆ.

ಬಡವರಿಗೆ ಪುಕ್ಕಟೆಯಾಗಿ ಕೆಲವು ಸೌಲಭ್ಯಗಳನ್ನು ಒದಗಿಸುವಂತಹ ಜನಪ್ರಿಯತೆಗೆ ಸಮನಾದ ತಪ್ಪುತಿಳಿವಳಿಕೆಯ ಆಧಾರದಲ್ಲಿ ರೂಪಿತವಾದ ಕ್ರಮಗಳನ್ನು ಬಡವರಿಗೆ ಕೊಡುವುದರಿಂದ ವಿತ್ತೀಯ ಕೊರತೆ ಹೆಚ್ಚುವುದರ ಜೊತೆಗೆ ಜಿಡಿಪಿಯ ಬೆಳವಣಿಗೆಯಲ್ಲೂ ಕುಂಠಿತವಾಗುತ್ತದೆ. ಇದರ ಬದಲಿಗೆ ಅಗತ್ಯ ಸೌಲಭ್ಯಗಳನ್ನು ಬಡವರಿಗೆ ಒದಗಿಸುವುದರಿಂದ ಒಟ್ಟಾರೆ ಆರ್ಥಿಕ ಬೆಳವಣಿಗೆಯಲ್ಲಿ ಸುಧಾರಣೆಯಾಗಿ ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆ ಕಡಿಮೆಯಾಗುತ್ತದೆ ಮತ್ತು ಅದು ಸುಸಂಬದ್ಧ ಅಭಿವೃದ್ಧಿಗೆ ಸಹಾಯಕವಾಗುತ್ತದೆ. ❑

# ಬಂಡವಾಳ ಹೂಡಿಕೆಗೆ ಪೂರಕ ನಿಲುವು

ಡಾ. ಶಶಾಂಕ ಭಿಡೆ

ಕನ್ನಡಕ್ಕೆ : ಡಾ॥ ಕೌಸ್ತುಭ ಉಪಾಧ್ಯಾಯ



**ಮುಂಗಡ ಪತ್ರದಲ್ಲಿ ಹಣಕಾಸಿನ ಆಯ-ವ್ಯಾಯಕ್ಕೆ ಸಂಬಂಧಿಸಿದ ನೇರ ಕ್ರಮಗಳ ಆಯ್ಕೆಗಿಂತಲೂ, ಸರ್ಕಾರದ ನೀತಿ-ನಿಲುವುಗಳ ಬದಲಾವಣೆ, ಯೋಜನೆಗಳ ರೀತಿ-ನೀತಿ, ನೀತಿ-ನಿಲುವನ್ನು ಜಾರಿಗೊಳಿಸುವ ಆಡಳಿತಾತ್ಮಕ ಕ್ರಮ ಹಾಗೂ ಯೋಜನೆಗಳು - ಈ ರೀತಿ ಒಟ್ಟಿನಲ್ಲಿ ಆಡಳಿತದ ಸಮಗ್ರ ತಂತ್ರಗಾರಿಕೆಯ ಪ್ರತಿಬಿಂಬ ಗೋಚರವಾಗುತ್ತದೆ.**

ಒಟ್ಟು ದೇಶೀಯ ಉತ್ಪನ್ನ (ಜಿ.ಡಿ.ಪಿ) ದರ ಶೇ.7–8 ಕ್ಕಿಂತಲೂ ಕಡಿಮೆ ಇದ್ದು, ಯಥಾಸ್ಥಿತಿ ಮುಂದುವರೆಯುತ್ತಿರುವ ಪ್ರಸ್ತುತ ಸನ್ನಿವೇಶದಲ್ಲಿ, ಹೊಸ ಸರ್ಕಾರದ ವಾರ್ಷಿಕ ಕಾರ್ಯಯೋಜನೆಗಳಿಗೆ ಆರ್ಥಿಕ ಚೌಕಟ್ಟನ್ನು ಒದಗಿಸುವ ಸವಾಲನ್ನು 2014–15ನೇ ಸಾಲಿನ ಮುಂಗಡ ಪತ್ರ ಪ್ರಸ್ತಾಪ ಎದುರಿಸಬೇಕಾಗಿದೆ. ಕೈಗಾರಿಕೋತ್ಪನ್ನಗಳ ಏರಿಕೆ ವಸ್ತುಶಃ ಸ್ಥಗಿತಗೊಂಡಿದ್ದು, ಮೂಲ ಸೌಕರ್ಯಗಳು ನಿರೀಕ್ಷಿತ ಮಟ್ಟದಲ್ಲಿ ಬೆಳೆಯದ ಕಾರಣ ಬಂಡವಾಳ ಮಾರುಕಟ್ಟೆ ನಿರಾಶಾಪೂರ್ಣವಾಗಿದೆ. ಅತ್ಯಧಿಕ ಬೆಲೆ ಏರಿಕೆಯಿಂದ ಸ್ವಲ್ಪ ಮಟ್ಟಿನ ಚೇತರಿಕೆ ಕಂಡುಬರುತ್ತಿರುವಂತೆಯೇ, ದುರ್ಬಲ ಮುಂಗಾರು ಮತ್ತು ತೈಲ ದರ ಏರಿಕೆಯ ಕರಾಳ-ಛಾಯೆಯಿಂದ ಬೆಲೆ ಹತೋಟಿಯ ಸಾಧ್ಯತೆ ಮತ್ತಷ್ಟು ದೂರವಾಗುತ್ತಿದೆ. ಸರ್ಕಾರಿ ಆದಾಯದ ಏರುಪೇರುಗಳನ್ನು ಸರಿದೂಗಿಸುವುದು ಈ ವರ್ಷದ ಮುಂಗಡಪತ್ರದ ಪ್ರಮುಖ ಗುರಿ ಎಂಬುದು ಸ್ಪಷ್ಟವಾಗಿದೆ. ಆರ್ಥಿಕ ಪುನಶ್ಚೇತನವಾಗುವ ಲಕ್ಷಣಗಳು ಈಗಷ್ಟೇ ಕಂಡುಬರುತ್ತಿರುವ ಪ್ರಸ್ತುತ ಸನ್ನಿವೇಶದಲ್ಲಿ, ಅತ್ಯಧಿಕ ಸರ್ಕಾರಿ ಆರ್ಥಿಕ ಅಸಮತೋಲನ ಬಹಳ ಅಪಾಯಕಾರಿ. ನೇರ ತೆರಿಗೆ ಸೌಲಭ್ಯಗಳಲ್ಲಿನ ಸ್ವಲ್ಪ ಮಟ್ಟಿನ ಬದಲಾವಣೆ ಮಾತ್ರದಿಂದ ಸುಮಾರು 22,200 ಕೋಟಿ ರೂಪಾಯಿಗಳಷ್ಟು ಸರ್ಕಾರಿ ವರಮಾನ ಕಡಿಮೆಯಾಗುವ ಸಾಧ್ಯತೆಯು ಮುಂಗಡ ಪತ್ರದಲ್ಲಿ ಸೂಚಿತವಾಗಿದೆ. ಪರೋಕ್ಷ ತೆರಿಗೆಯಲ್ಲಿ ನಿವ್ವಳ 7525 ಕೋಟಿ ರೂಪಾಯಿಗಳಷ್ಟು ಹೆಚ್ಚಳ ಅಂದಾಜು ಮಾಡಿದ್ದರೂ ಸಹ, ಇನ್ನುಳಿದ 14,675 ಕೋಟಿ ರೂಪಾಯಿಗಳನ್ನು ಪೂರೈಕೆ ಮಾಡಲು ತೆರಿಗೆ ಆಧಾರವನ್ನು ಮತ್ತಷ್ಟು ವ್ಯಾಪಕ ಮತ್ತು ಅಧಿಕಗೊಳಿಸುವ ಕ್ರಮವನ್ನು ಯೋಜಿಸಲಾಗಿದೆ. ಸಂಕ್ಷೇಪದಲ್ಲಿ ಹೇಳುವುದಾದರೆ ಸರ್ಕಾರದ ಆರ್ಥಿಕ ಸ್ಥಿತಿಗತಿಯ ಸುಧಾರಣೆಯ ಉದ್ದೇಶ ಸಾಧನೆಗೆ, ಸರ್ಕಾರಿ ವರಮಾನದ ಹೆಚ್ಚಳ ನಿರ್ಣಾಯಕವಾಗಿದೆ.

ಮುಂಗಡಪತ್ರದಲ್ಲಿ ಉಲ್ಲೇಖವಾದ ಕೇಂದ್ರಸರ್ಕಾರದ ವೆಚ್ಚ ರೂ. 17.9 ಲಕ್ಷ ಕೋಟಿ ರೂಪಾಯಿಗಳು. ಇದರಂತೆ ಪ್ರತಿವ್ಯಕ್ತಿಗೆ ತಲಾ ರೂ.15,000/– ಖರ್ಚನ್ನು ಸರ್ಕಾರದ ವತಿಯಿಂದ ಮಾಡಲಾಗುತ್ತಿದೆ. ಇದು, 2014–15ರ ಇಸವಿಯ ಒಟ್ಟು ದೇಶೀಯ ಉತ್ಪನ್ನ (ಜಿ.ಡಿ.ಪಿ) ದರದ ಶೇ.13.9ರಷ್ಟು ಇದೆಯೆಂದು ಅಂದಾಜು ಮಾಡಲಾಗಿದೆ. ರಾಜ್ಯ ಸರ್ಕಾರಗಳ ಖರ್ಚನ್ನು ಕೂಡಿಸಿದಾಗ ಒಟ್ಟು ವೆಚ್ಚ ಒಟ್ಟು ದೇಶೀಯ ಉತ್ಪನ್ನದ ಶೇ. 20 ಕ್ಕಿಂತಲೂ ಹೆಚ್ಚಾಗುವ ಸಾಧ್ಯತೆ ಇದೆ. ಅಂದರೆ, ಪ್ರತಿವ್ಯಕ್ತಿಗೆ ತಲಾ 20,000 ರೂಪಾಯಿಗಳನ್ನು ಖರ್ಚು ಮಾಡಲಾಗುತ್ತದೆ. ಪ್ರತಿವ್ಯಕ್ತಿಗೆ ಮಾಡುತ್ತಿರುವ ಈ ಖರ್ಚು ವಿಶ್ವ ಮಟ್ಟದಲ್ಲಿ ಅತೀ ಹೆಚ್ಚೆಂದು ಪರಿಗಣಿತವಾಗದಿದ್ದರೂ ಸಹ ಬಹಳ ಗಮನಾರ್ಹವಾಗಿದೆ. ಒಟ್ಟು ವೆಚ್ಚದ ಕೇವಲ ಅರ್ಧ ಭಾಗದಷ್ಟು ಮಾತ್ರ ಕೇಂದ್ರ ಹಾಗೂ ರಾಜ್ಯಗಳಿಗೆ ವರ್ಗಾವಣೆಯಾಗುವ ತೆರಿಗೆಗಳ ಮೂಲಕ ಪೂರೈಕೆ ಮಾಡುವುದರಿಂದ, ಮತ್ತುಳಿದ ಅರ್ಧ ಖರ್ಚಿನ ಪೂರ್ತಿಗಾಗಿ ಇನ್ನಿತರ ಸಂಪನ್ಮೂಲಗಳ ಸದುಪಯೋಗ ಹಾಗೂ

ಹಿರಿಯ ಸಂಶೋಧನಾ ಸಲಹಾಕಾರ, ಎನ್.ಸಿ.ಎ.ಇ.ಆರ್., ನವದೆಹಲಿ. email : s.bhide@ncaer.org

ತೆರಿಗೆಯೇತರ ಆದಾಯ ಮೂಲಗಳನ್ನು ಹೊಂದಿಸಿಕೊಳ್ಳುವ ಮೂಲಕ ಮಾಡಬೇಕಾಗಿದೆ. ತೆರಿಗೆ ಮತ್ತು ಒಟ್ಟು ದೇಶೀಯ ಉತ್ಪನ್ನದ ಅನುಪಾತ 2008ರ ವಿಶ್ವ ಆರ್ಥಿಕ ಕುಸಿತದ ಸಮಯಕ್ಕಿಂತಲೂ ಶೇ. 2 ರಷ್ಟು ಕುಸಿದಿರುವುದರಿಂದ, ಸರ್ಕಾರಿ ಖರ್ಚಿನ ಪ್ರಭಾವೀ ಸದುಪಯೋಗ ಹಾಗೂ ಉತ್ತಮ ರೀತಿಯಲ್ಲಿ ಖರ್ಚು ಮಾಡುವುದು ಅತಿ ಮಹತ್ವದ್ದಾಗಿದೆಯೆಂದು ವಿತ್ತಮಂತ್ರಿಗಳು ಅಭಿಪ್ರಾಯ ಪಟ್ಟಿದ್ದಾರೆ. ಮುಂಗಡ ಪತ್ರದ ಮುಖೇನ ಆರ್ಥಿಕ ಬೆಳವಣಿಗೆ ಮಹತ್ವಪೂರ್ಣವಾಗಿ ಪುನರುಜ್ಜೀವನ ಗೊಂಡು, ಸಾಮಾಜಿಕ ವಲಯದ ಯೋಜನೆಗಳಿಗೆ ಅತ್ಯಗತ್ಯವಾದ ಸಂಪನ್ಮೂಲಗಳ ಅಭಿವೃದ್ಧಿ ಹಾಗೂ ದುಡಿಯುವ ಕೈಗಳಿಗೆ ಕೆಲಸ ನೀಡಬಲ್ಲದೆಂಬ ನಿರೀಕ್ಷೆಯನ್ನು ಹೊಂದಲಾಗಿದೆ.

ಈ ಹಿನ್ನೆಲೆಯಲ್ಲಿ, ಹೊಸ ಸರ್ಕಾರದ ಮುಂಗಡ ಪತ್ರವು ಸಮಗ್ರ ದೃಷ್ಟಿಯಲ್ಲಿ ಹಿಂದಿನ ಸರ್ಕಾರವು ಫೆಬ್ರವರಿ ತಿಂಗಳಲ್ಲಿ ಪ್ರಕಟಿಸಿದ ಮಧ್ಯಂತರ ಮುಂಗಡ ಪತ್ರಕ್ಕಿಂತ ವಿಭಿನ್ನವೆಂದು ಹೇಳಲಾಗದು. ಸರ್ಕಾರದ ವಿತ್ತೀಯ ಕೊರತೆಯನ್ನು ಒಟ್ಟು ದೇಶೀಯ ಉತ್ಪನ್ನದ ಶೇ. 4.1ಕ್ಕೆ ಇಳಿಸಬೇಕೆಂಬ ಹಿಂದಿನ ಗುರಿಯನ್ನು ಮುಂದುವರೆಸುತ್ತಾ, ಮುಂದಿನ ಇನ್ನೆರಡು ವರ್ಷಗಳಲ್ಲಿ ಅದನ್ನು ಶೇ.3ಕ್ಕೆ ಇಳಿಸಬೇಕೆಂದು ಗುರಿಯಿಟ್ಟುಕೊಳ್ಳಲಾಗಿದೆ.

### ಹೊಸ ಆದ್ಯತೆಗಳು

ಮುಂಗಡ ಪತ್ರದಲ್ಲಿ ಹಣಕಾಸಿನ ಆಯ–ವ್ಯಯಕ್ಕೆ ಸಂಬಂಧಿಸಿದ ನೇರ ಕ್ರಮಗಳ ಆಯ್ಕೆಗಿಂತಲೂ, ಸರ್ಕಾರದ ನೀತಿ–ನಿಲುವುಗಳ ಬದಲಾವಣೆ, ಯೋಜನೆಗಳ ರೀತಿ–ನೀತಿ, ನೀತಿ–ನಿಲುವನ್ನು ಜಾರಿಗೊಳಿಸುವ ಆಡಳಿತಾತ್ಮಕ ಕ್ರಮ ಹಾಗೂ ಯೋಜನೆಗಳು – ಈ ರೀತಿ ಒಟ್ಟಿನಲ್ಲಿ ಆಡಳಿತದ ಸಮಗ್ರ ತಂತ್ರಗಾರಿಕೆಯ ಪ್ರತಿಬಿಂಬ ಗೋಚರವಾಗುತ್ತದೆ. ವಿತ್ತಮಂತ್ರಿಗಳು ಮುಂಗಡಪತ್ರದ ಭಾಷಣದಲ್ಲಿ ಹೇಳಿದಂತೆ ಅಭಿವೃದ್ಧಿ ಪಥದಲ್ಲಿ ದೂರಗಾಮಿ ಪಯಣಕ್ಕೆ ಇದು ಆರಂಭ ಮಾತ್ರ. ಮುಂಗಡಪತ್ರದಲ್ಲಿ ತೆಗೆದುಕೊಂಡ ಕ್ರಮಗಳು ಕೇವಲ ದಿಕ್ಸೂಚಕ ಮಾತ್ರವೆಂದು ವಿತ್ತಮಂತ್ರಿಗಳು ಹೇಳುವ ಮೂಲಕ, ನಿರ್ದಿಷ್ಟ ಹಾಗೂ ಸಂಪೂರ್ಣ ಕ್ರಮಗಳು



ಇನ್ನೂ ಬಾಕಿ ಇದೆ ಎಂದು ನಿರ್ದೇಶಿಸಿದ್ದಾರೆ. ಹೀಗಾಗಿ ಸದ್ಯದ ಅಥವಾ ದೂರಗಾಮಿ ಉದ್ದೇಶಗಳ ಸಾಧನೆಗೆ ಸೂಕ್ತವಾದ ಮಾರ್ಗ ಹಾಗೂ ತಂತ್ರಗಾರಿಕೆಯನ್ನು ಅರ್ಥಮಾಡಿ ಕೊಳ್ಳುವುದು ಉಪಯುಕ್ತವಾಗಿದೆ.

ಹಿಂದಿನ ವರ್ಷಗಳಿಗೆ ಹೋಲಿಸಿದಾಗ ಈ ಸಾಲಿನ ಮುಂಗಡಪತ್ರದಲ್ಲಿ ಯೋಜನೇತರ ವೆಚ್ಚ ಹಾಗೂಆದಾಯ ವೆಚ್ಚಗಳಿಗಿಂತ ಯೋಜನಾ ವೆಚ್ಚ ಮತ್ತು ಬಂಡವಾಳ ವೆಚ್ಚ ನೂತನ ಮೂಲ ಸೌಕರ್ಯಗಳ ನಿರ್ಮಾಣಕ್ಕೆ ಮಾಡುವ ಹೂಡಿಕೆಗಳಲ್ಲಿ ಅಧಿಕ ಹೆಚ್ಚಳ ಮಾಡಿರುವುದು ಸ್ಪಷ್ಟ ಗೋಚರವಾಗಿದೆ. ಹೀಗಾಗಿ ಮುಂಗಡಪತ್ರವು ಬಂಡವಾಳ ಹೂಡಿಕೆಗೆ ಹೆಚ್ಚಿನ ಒತ್ತು ನೀಡುತ್ತಿದೆ. ಬಡ್ಡಿ ಕಟ್ಟಲಿಕ್ಕೆ ಮೀಸಲಾದ ಹಣವು 2012–13 ಮತ್ತು 2013–14ನೇ ಸಾಲಿಗೆ ಹೋಲಿಸಿದಾಗ ಕಡಿಮೆಯಾಗಿದ್ದು, ವಿತ್ತೀಯ ಕೊರತೆಯನ್ನು ಹಿಂದಿನ ವರ್ಷಗಳಿಗಿಂತಲೂ ಕಡಿತಗೊಳಿಸುವುದರಲ್ಲಿ ಸಹಾಯಕವಾಗಿದೆ. ಸಹಾಯಧನಕ್ಕೆ ನೀಡಲಾಗದ ಹಣವನ್ನು ವರ್ಷ 2013–14ರ ಪ್ರಮಾಣಕ್ಕೆ ಸೀಮಿತಗೊಳಿಸಿದ್ದು, ಇವುಗಳ ಪ್ರಭಾವಿ ಸದುಪಯೋಗಕ್ಕಾಗಿ ಅವಶ್ಯಕತೆಗಳಿಗೆ ಅನುಸಾರವಾಗಿ ಸುನಿಯೋಜಿತ ಗೊಳಿಸಬೇಕಾದ ಅಗತ್ಯವನ್ನು ಸಾರಿ ಹೇಳುತ್ತಿದೆ. ಒಟ್ಟಿನಲ್ಲಿ ಸಮಗ್ರ ವೆಚ್ಚದ ಹೆಚ್ಚಳವನ್ನು ಹಿಂದಿನ ವರ್ಷದಂತೆಯೇ ಶೇ. 12.9ಕ್ಕೇ ಸೀಮಿತಗೊಳಿಸಿ ಖಾಸಗೀಕರಣದ ಮೂಲಕ ರೂ.37,500 ಕೋಟಿಯನ್ನು ಕ್ರೋಢೀಕರಿಸಿ, ವಿತ್ತೀಯ ಕೊರತೆಯನ್ನು 2013–14ರ ಪರಿಷ್ಕೃತ ಅಂದಾಜಿಗಿಂತಲೂ ಸ್ವಲ್ಪ ಕಡಿಮೆ, ಅಂದರೆ, 53,000 ಕೋಟಿ ರೂಪಾಯಿಗಳಿಗೆ ನಿಗದಿ ಮಾಡಲಾಗಿದೆ. ವಿತ್ತೀಯ ಕೊರತೆಯಲ್ಲಿನ ಗುರಿಸಾಧನೆಗಾಗಿ ವೆಚ್ಚದಲ್ಲಿನ ಕಡಿವಾಣ ಸಾರ್ವಜನಿಕ ಉದ್ದಿಮೆಗಳ ಖಾಸಗೀಕರಣದ ಹಣಕಾಸನ್ನು ಹೊಂದಿಸಿಕೊಳ್ಳುವ ಯೋಜನೆ ಇದಾಗಿದೆ.

### ಬಂಡವಾಳ ಹೂಡಿಕೆಯ ವಾತಾವರಣದಲ್ಲಿ ಉತ್ತಮ ಮಾರ್ಪಾಡು

ಭಾರತ ದೇಶವು ರಾಜ್ಯಾಂಗ, ನ್ಯಾಯಾಂಗ ಹಾಗೂ ಕಾರ್ಯಾಂಗಗಳಿಗೆ ಸಂಬಂಧಿಸಿದ ಶಕ್ತಿಯುತ ಸಂಘ–ಸಂಸ್ಥೆಗಳ ಸ್ಥಾಪನೆಯ ಮುಖಾಂತರ ಉದ್ಯಮ ಹಾಗೂ ಸಾಮಂಜಸ್ಯವುಳ್ಳ ವಿವಿಧೋದ್ದೇಶ ಯೋಜನೆಗಳ ಅಭಿವೃದ್ಧಿಗೆ ಸಹಾಯಕವಾದ ವಾತಾವರಣ ಮೂಡಿಸುವಲ್ಲಿ ವಿಶ್ವದ ಮೆಚ್ಚುಗೆ ಪಡೆದಿದೆ. ಪ್ರಾದೇಶಿಕ ಹಾಗೂ ಸಾಮಾಜಿಕ ಅಸಮತೋಲನವು ಬಹಳ ಇದ್ದರೂ ಆರ್ಥಿಕ ನೀತಿಗಳ ಕಾರ್ಯಾನ್ವಯಕ್ಕೆ ಸಮಾನ ನೀತಿಯನ್ನು ಅನುಸರಿಸುತ್ತಿದೆ. ಹೆಚ್ಚಿನ ಆರ್ಥಿಕ ಅಭಿವೃದ್ಧಿಯ ಮೂಲಕ ಉದ್ಯೋಗದ ಹೆಚ್ಚಳ ಹಾಗೂ ಇನ್ನೂ ಹೆಚ್ಚು ಹೆಚ್ಚು ಜನಸಾಮಾನ್ಯರ ಸಂಪಾದನೆಯ ಮಾರ್ಗವನ್ನು ಸುಗಮಗೊಳಿಸುವ ಕಾರ್ಯಯೋಜನೆ ಹಾಕಿಕೊಳ್ಳಲಾಗಿದೆ. ಮುಂಗಡ ಪತ್ರದಲ್ಲಿ ಬಂಡವಾಳ ಹೂಡಿಕೆಯನ್ನು ಆಕರ್ಷಿಸಲು ಅನೇಕ ಕ್ರಮಗಳನ್ನು ಪ್ರಚುರ ಪಡಿಸಿದ್ದರೂ ಸಹ, ಬಂಡವಾಳ ಹೂಡಿಕೆಯ ವಾತಾವರಣದಲ್ಲಿ ಉತ್ತಮ ಮಾರ್ಪಾಡು ಹಾಗೂ ವಿಶ್ವಾಸ ನಿರ್ಮಿಸುವ ಕಾರ್ಯ ಒಂದು ಸವಾಲೇ ಆಗಿದೆ. ಆರ್ಥಿಕ ಮಿತವ್ಯಯ, ತೆರಿಗೆ ವಸೂಲಾತಿಯಲ್ಲಿನ ದಕ್ಷತೆ, ಉತ್ತಮ

ಆಡಳಿತದ ಭರವಸೆ, ಶೀಘ್ರ ಹಾಗೂ ಸಂತುಲಿತ ನಿರ್ಣಯ ಕೈಗೊಳ್ಳುವಿಕೆ ತೆರಿಗೆ ನೀತಿಯಲ್ಲಿನ ಸುಧಾರಣೆ – ಇತ್ಯಾದಿ ಕ್ರಮಗಳ ಬಗ್ಗೆ ಕೇವಲ ಮಾತನಾಡಿದ ಮಾತ್ರದಲ್ಲಿ ಹೂಡಿಕೆದಾರರಿಗೆ ತಮ್ಮ ವಹಿವಾಟಿನ ಖರ್ಚುವೆಚ್ಚಗಳು ಮೊದಲಿಗಿಂತಲೂ ಕಡಿಮೆಯಾಗುವುದೆಂಬ ವಿಶ್ವಾಸ ಮೂಡಿಸಬಹುದೇ ಎಂಬುದು ದೊಡ್ಡ ಪ್ರಶ್ನೆಯಾಗಿದೆ. ವಿದೇಶಿ ಬಂಡವಾಳ ಅಥವಾ ಸ್ವತಃ ಭಾರತದ ಖಾಸಗಿ ಬಂಡವಾಳವನ್ನು ಆಕರ್ಷಿಸಬಲ್ಲ ಪ್ರಪಂಚದ ಇನ್ನಿತರ ದೇಶಗಳಿಗೆ ಸರಿಸಮಾನವಾದ ವಿಶ್ವಾಸಾರ್ಹತೆಯನ್ನು ಈ ಕ್ರಮಗಳು ಮೂಡಿಸಬಲ್ಲವೇ ಎಂಬುದು ಮತ್ತೊಂದು ಮಹತ್ವದ ಪ್ರಶ್ನೆ. ಹೊಸ ತೆರಿಗೆ ಹೇರಿಕೆಯಲ್ಲಿನ 'ಪೂರ್ವಾನ್ವಯ ನೀತಿ' ಉದಾರಯುತವಾಗಿ ಪರಿಗಣಿಸಲಾಗುವ ಭರವಸೆ ಹಾಗೂ 40,000 ಕೋಟಿ ರೂಪಾಯಿಗಳಷ್ಟು ಅಥವಾ ಒಟ್ಟು ತೆರಿಗೆ ಮೂಲಕ ಆದಾಯದ ಅರ್ಧದಷ್ಟು ಇರುವಂತಹ ವಸೂಲಾತಿಗೆ ಬಾಕಿಯಿರುವ ತೆರಿಗೆಯನ್ನು ವಸೂಲು ಮಾಡುವ ಪ್ರಕಟಣೆ ಈ ನಿಟ್ಟಿನಲ್ಲಿ ಸರ್ಕಾರದ ನೀತಿಯನ್ನು ಮತ್ತಷ್ಟು ಸ್ಪಷ್ಟಗೊಳಿಸುತ್ತದೆ.

ಹೂಡಿಕೆದಾರರ ಭಾವನೆಗಳನ್ನು ಅರ್ಥಮಾಡಿಕೊಳ್ಳುವುದು ಕಷ್ಟ ಸಾಧ್ಯ. ವಾಸ್ತವಿಕ ಹೂಡಿಕೆಯ ಪ್ರಮಾಣವೇ ನಿಜವಾದ ಅಳತೆಗೋಲು. ಸರ್ಕಾರದ ಅನೇಕ ಪ್ರಕಟಣೆಗಳು ಹೂಡಿಕೆದಾರರ ಮನವನ್ನು ಎಷ್ಟರ ಮಟ್ಟಿಗೆ ಸಕಾರಾತ್ಮಕವಾಗಿ ಒಲಿಸಿಕೊಳ್ಳಬಹುದು ಹಾಗೂ ನೈಜ ಹೂಡಿಕೆಗೆ ಕಾರಣವಾಗಬಹುದೆಂಬ ಅಂದಾಜು ಮಾಡುವುದು ಸಾಧ್ಯವಷ್ಟೆ. 2007–08ರಲ್ಲಿ ಶೇ. 38ರಲ್ಲಿ ಇದ್ದ ಹೂಡಿಕೆ ಪ್ರಮಾಣ, 2010–11ರಲ್ಲಿ ಶೇ. 36.5ಕ್ಕೆ ಇಳಿಯಲು 'ವಿಶ್ವ ಆರ್ಥಿಕ ಕುಸಿತ'ವು ಕಾರಣವಾದರೆ, 2012–13 ಮತ್ತು ಕಳೆದೆರೆಡು ವರ್ಷಗಳಲ್ಲಿ ಇದು ಮತ್ತಷ್ಟು ಕುಸಿಯಲು "ಆರ್ಥಿಕ ನೀತಿಯ ಸ್ತಬ್ಧತೆ" ಕಾರಣವೆಂಬ ಅಭಿಪ್ರಾಯ ಅಳತೆಗೆ ಸಿಗುವುದಿಲ್ಲ. ಈ ಸಂಪೂರ್ಣ ಅವಧಿಯಲ್ಲಿ ಹೂಡಿಕೆಯ ಕುಸಿತ ಭಾರತಕ್ಕೆ ಮಾತ್ರ ಸೀಮಿತವಾಗಿಲ್ಲ.

ಉದ್ಯಮ ಸ್ಥಾಪನೆ ಹಾಗೂ ನಿರ್ವಹಣೆಯಲ್ಲಿನ ಆಡಳಿತಾತ್ಮಕ ಸಮಸ್ಯೆಗಳ ಕಗ್ಗಂಟು ಸಡಿಲಗೊಂಡು ಸರ್ಕಾರದೊಡನೆ ವ್ಯವಹಾರಗಳು ಸುಗಮವಾದೀತು ಎಂಬ



ಮಹತ್ವಪೂರ್ಣ ಬದಲಾವಣೆಯನ್ನು ಹೂಡಿಕೆದಾರರು ಹೊಸ ಸರ್ಕಾರದಿಂದ ನಿರೀಕ್ಷಿಸುತ್ತಿದ್ದಾರೆ. ಕೇಂದ್ರಸರ್ಕಾರವು ರಾಜ್ಯಸರ್ಕಾರಗಳ ಆಡಳಿತದಲ್ಲಿ ಹೆಚ್ಚಿನ ಪರಿವರ್ತನೆ ಮಾಡಲಾಗದೆಂಬ ವಾಸ್ತವಿಕತೆಯನ್ನು ಈಗಾಗಲೇ ಒಪ್ಪಿಕೊಂಡಿದೆ. ಆದರೂ ಸಹ ಕೇಂದ್ರದಲ್ಲಿನ ಉತ್ತಮಾಡಳಿತ ರಾಜ್ಯಗಳ ಮೇಲೆ ಪ್ರಭಾವ ಬೀರಬಹುದೆಂದು ನಿರೀಕ್ಷಿಸಲಾಗಿದೆ.

ಪರೋಕ್ಷ ತೆರಿಗೆಯ ನಿರ್ವಹಣೆಯಲ್ಲಿ "ಉತ್ಪನ್ನ ಹಾಗೂ ಸೇವೆ ಆಧಾರಿತ ಸಾಮಾನ್ಯ ತೆರಿಗೆ" (ಜಿ.ಎಸ್.ಟಿ.)ಯ ನಿಬಂಧನೆಗಳನ್ನು ಜಾರಿಗೊಳಿಸಲು ಅಗತ್ಯವಾದ ಶಾಸನಾತ್ಮಕ ಕ್ರಮಗಳನ್ನು ಕೈಗೊಳ್ಳುವ ಭರವಸೆ ನೀಡಲಾಗಿದೆ. ಪೂರ್ಣ ಬಹುಮತವಿರುವ ಪಕ್ಷದ ಸರ್ಕಾರದಿಂದ, ಈ ಬಾರಿ ಸಂಸತ್ತಿನಲ್ಲಿ ಜಿ.ಎಸ್.ಟಿ.ಗೆ ಸಂಬಂಧಿಸಿದ ಕಾನೂನನ್ನು ಜಾರಿ ಮಾಡುವ ಸಾಧ್ಯತೆ ಬಲವಾಗಿದೆ. ಈ ತೆರಿಗೆ ನೀತಿಯ ಸುಧಾರಣೆಯಿಂದ ವಹಿವಾಟಿನ ಕಟ್ಟಳೆಗಳು ಸಡಿಲಗೊಂಡು, ಹೂಡಿಕೆಯ ವಾತಾವರಣ ಉತ್ತಮಗೊಳ್ಳಬಹುದೆಂಬ ಭರವಸೆ ಮೂಡಿದೆ.

ವಿದೇಶಿ ನೇರ ಬಂಡವಾಳ ಹೂಡಿಕೆಗೆ ಸಂಬಂಧಿಸಿದ ಕ್ರಮಗಳು, ಹೂಡಿಕೆ ವಾತಾವರಣವನ್ನು ಬದಲಿಸುವಲ್ಲಿ ಎರಡನೇ ಪ್ರಮುಖ ಹಜ್ಜೆ. ವ್ಯಾಪಾರದ ಸ್ಪರ್ಧೆಯ ಮೇಲೆ ಪರಿಣಾಮ ಬೀರುವ ವಿದೇಶಿ ನೇರ ಬಂಡವಾಳ ಹೂಡಿಕೆಗಿಂತಲೂ ಸರ್ಕಾರ ಈ ವಿಷಯದಲ್ಲಿ ತನ್ನ 'ವಿವೇಚನಾಧಿಕಾರ' ಪ್ರಯೋಗಿಸುವುದರಲ್ಲಿ ಹೆಚ್ಚಿನ ಒತ್ತು ನೀಡಿದೆ. ಈ ಕ್ರಮದಿಂದ ಹೂಡಿಕೆಯಲ್ಲಿನ ಸ್ಪರ್ಧೆ ಹಾಗೂ ತನ್ಮೂಲಕ ದೇಶೀಯ ಉತ್ಪಾದನೆಯಲ್ಲೂ ಸ್ಪರ್ಧೆ ಉಂಟುಮಾಡಬಹುದೇ ಎಂದು ಕಾದು ನೋಡಬೇಕಾಗಿದೆ. ಈ ಬಾರಿ ವಿಮೆ ಹಾಗೂ ರಕ್ಷಣಾ ಉತ್ಪನ್ನಗಳಲ್ಲಿನ ವಿದೇಶಿ ನೇರಬಂಡವಾಳ ಹೂಡಿಕೆಯ ಗರಿಷ್ಠ ಮಿತಿಯನ್ನು ಏರಿಸಲಾಗಿದೆ. ಆದರೆ ನಗರ–ರಿಯಲ್ ಎಸ್ಟೇಟ್ ಯೋಜನೆಗಳ ಅಭಿವೃದ್ಧಿಗೆ ಈ ಹಿಂದೆ ಹೇರಲಾಗಿದ್ದ ಗರಿಷ್ಠ ಮಿತಿಯನ್ನು ಇಳಿಸಲಾಗಿದೆ.

ಕೈಗಾರಿಕೋತ್ಪನ್ನಗಳ ಮಾರಾಟ ಪ್ರಕ್ರಿಯೆಯಲ್ಲಿನ ನಿಬಂಧನೆಗಳನ್ನು ಸಡಿಲಿಸಲಾಗಿದೆ.

ಈ ರೀತಿ ಮುಂಗಡ ಪತ್ರದಲ್ಲಿ ಜಾರಿಗೊಳಿಸಿದ ವಿವಿಧ ಕ್ರಮಗಳಿಂದ, ಹೂಡಿಕೆದಾರರಲ್ಲಿ ಮೊದಲಿಗಿಂತ ಉತ್ತಮವಾದ ಹಾಗೂ ಪ್ರಭಾವಿಯಾದ ವ್ಯವಸ್ಥೆ ಮೂಡಿ, ಉದ್ಯಮ–ವಹಿವಾಟು ಸುಖಕರವಾಗಬಹುದೆಂಬ ಭರವಸೆ ಮೂಡಿದೆ. ಮುಂಬರುವ ವರ್ಷಗಳಲ್ಲಿ ಹೆಚ್ಚಿನ ಅಭಿವೃದ್ಧಿ ದರ, ಸರ್ಕಾರಿ ಆಯವ್ಯಯದ ಸಮತೋಲನ ಹಾಗೂ ಸಹಾಯಧನದ ನಿರ್ದಿಷ್ಟ ಹಾಗೂ ಪ್ರಭಾವೀ ಸದುಪಯೋಗ ಮೂಲಭೂತ ಆರ್ಥಿಕ ಸೂತ್ರಗಳಾಗಿವೆ. ಸರ್ಕಾರದ ನೀತಿ ಸಕಾರಾತ್ಮಕವಾಗಿದ್ದರೂ ಸಹ, ಈ ಸಕಾರಾತ್ಮಕ ಹೂಡಿಕೆಯ ವಾತಾವರಣವನ್ನು ವಾಸ್ತವಿಕ ಹೂಡಿಕೆಗೆ ಬದಲಿಸುವಲ್ಲಿ ವಸ್ತುಶಃ ಹೂಡಿಕೆ ಮಾಡುವಾಗ, ಆ ಬಗ್ಗೆ ಸರ್ಕಾರ ತೆಗೆದುಕೊಳ್ಳುವ ನೀತಿ–ನಿರ್ಧಾರಗಳು ಹೆಚ್ಚು ನಿರ್ಣಾಯಕವಾಗಿದೆ. ಹೂಡಿಕೆದಾರರ ವಿಶ್ವಾಸದ ಹೊರತಾಗಿಯೂ ಇನ್ನಿತರ ನೈಜ ಸಮಸ್ಯೆಗಳು ಅಭಿವೃದ್ಧಿ ಪಥಕ್ಕೆ ತೊಡಕಾಗಿವೆ. 2000ದ ಇಸವಿಯ ನಂತರ ಕೆಲವು ವರ್ಷ


ಕಂಡುಬಂದ 'ವಿಶ್ವ ಆರ್ಥಿಕ ಕುಸಿತ' ಹಾಗೂ ಇನ್ನಿತರ ಅನರ್ಥಕ ಅಡ್ಡಪರಿಣಾಮಗಳಿಂದಾಗಿ ಹಳಿ ತಪ್ಪಿಹೋಗಿದೆ.

### ಅಭಿವೃದ್ಧಿ ಯೋಜನೆಗಳಲ್ಲಿ ಖಾಸಗಿ ಹೂಡಿಕೆ ಹಾಗೂ ಖಾಸಗಿ ಪಾಲುದಾರಿಕೆ

ಅಧಿಕ ಅಭಿವೃದ್ಧಿ ಪಥದ ಅವಶ್ಯಕತೆಗೆ ಅಗತ್ಯವಾದ ಅತ್ಯಧಿಕ ಬಂಡವಾಳ ಪೂರೈಕೆಗಾಗಿ, ಖಾಸಗಿ ವಲಯದ ಹೂಡಿಕೆಗೆ ಉತ್ತೇಜನ ನೀಡುವುದು ಹಾಗೂ ಸಾರ್ವಜನಿಕ ವಲಯದಿಂದ ಅದಕ್ಕೆ ಪೂರಕವಾದ ಸಂಪನ್ಮೂಲಗಳನ್ನು ಮಾರುಕಟ್ಟೆ ಮತ್ತು ತನ್ನ ಉಳಿತಾಯದಿಂದ ಪೂರೈಕೆ ಮಾಡುವುದು, ಹೀಗೆ ಎರಡೂ ಕ್ರಮಗಳನ್ನು ಅನುಸರಿಸುವುದು ಸಂತುಲಿತ ನೀತಿಯಾಗಿದೆ. ಹೀಗಾಗಿ, ಸರ್ಕಾರಿ ಖರ್ಚನ್ನು ಮಿತಿಯಲ್ಲೇ ಹೆಚ್ಚಿಸಿ, ತನ್ಮೂಲಕ 'ಉಳಿತಾಯಿರಾಹಿತ್ಯ'ವನ್ನು ಕಡಿಮೆಗೊಳಿಸಲಾಗಿದೆ. ನೇರ ತೆರಿಗೆಯಲ್ಲಿ ರಿಯಾಯಿತಿ ನೀಡುವ ಮೂಲಕ ಪ್ರತಿವ್ಯಕ್ತಿಯ ವೈಯಕ್ತಿಕ ಆದಾಯ ಹೆಚ್ಚಿಸಿ, ಆ ಮೂಲಕ ಉಳಿತಾಯಕ್ಕೆ ಪ್ರೇರಣೆ ನೀಡುವ ಭರವಸೆ ಮೂಡಿಬಂದಿದೆ. 'ಕಿಸಾನ್ ವಿಕಾಸಪತ್ರ' ಮತ್ತೆ ಜಾರಿಯಾಗಿದೆ.

ಖಾಸಗಿ ವಲಯಕ್ಕೆ ಹೂಡಿಕೆಯನ್ನು ಮುಂಗಡ ಪತ್ರದಲ್ಲಿ ಉತ್ತೇಜಿಸಲಾಗಿದೆ. ಈ ಉತ್ತೇಜನಗಳಲ್ಲಿ ಕೆಲವು ನೇರ ಹಾಗೂ ಪರೋಕ್ಷ ಕ್ರಮಗಳನ್ನು ಮುಂಗಡಪತ್ರವು ಒಳಗೊಂಡಿದ್ದು, ಇವೆಲ್ಲಕ್ಕಿಂತ ಮಿಗಿಲಾಗಿ ಸರ್ಕಾರದ ಪ್ರಭಾವಿ ಕಾರ್ಯಶೈಲಿಯನ್ನು ಹೆಚ್ಚಿಸುವುದರಿಂದ ಹೆಚ್ಚಿನ ಪರಿಣಾಮ ನಿರೀಕ್ಷಿಸಲಾಗಿದೆ. ವಿಮೆ ಹಾಗೂ ರಕ್ಷಣಾ ಕ್ಷೇತ್ರಗಳಲ್ಲಿ ವಿದೇಶಿ ಬಂಡವಾಳ ಹೂಡಿಕೆಯ ಗರಿಷ್ಠ ಮಿತಿಯನ್ನು ಏರಿಸಲಾಗಿದೆ.

ತೆರಿಗೆ ನಿರ್ವಹಣೆ ನೀತಿಯಲ್ಲಿನ ಕೆಲವು ಬದಲಾವಣೆಗಳಿಂದ ಕೆಲವಾರು ವಿಕೃತಿಗಳನ್ನು ದೂರ ಮಾಡಿ ಶುಲ್ಕದಲ್ಲಿನ ಪರಿವರ್ತನೆಯಿಂದ ದೇಶೀಯ ಉತ್ಪನ್ನಗಳಿಗೆ ಪ್ರೋತ್ಸಾಹ ಪ್ರಕಟಿಸಲಾಗಿದೆ ಹಾಗೂ ತೆರಿಗೆ ವಿಚಾರದಲ್ಲಿನ ಅಸಂಬದ್ಧತೆಗಳ ನಿವಾರಣೆ ಮಾಡಲಾಗಿದೆ. ಮೂಲಸೌಕರ್ಯ, ನಗರಾಭಿವೃದ್ಧಿ ಹಾಗೂ ಜಲಸಂಪನ್ಮೂಲ ವಿಭಾಗಗಳಲ್ಲಿ ಅನೇಕ ಯೋಜನೆಗಳನ್ನು ಘೋಷಿಸುವ ಮೂಲಕ 'ಸಾರ್ವಜನಿಕ ಹಾಗೂ ಖಾಸಗಿ ಸಹಭಾಗಿತ್ವ'ಕ್ಕೆ ಹೆಚ್ಚಿನ ಅವಕಾಶಗಳನ್ನು ಕಲ್ಪಿಸಲಾಗಿದೆ.



ವಸತಿ ಖರೀದಿದಾರರಿಗೆ ತೆರಿಗೆ ವಿನಾಯಿತಿ ಹೆಚ್ಚಿಸುವ ಮೂಲಕ ವಸತಿ ಕ್ಷೇತ್ರಕ್ಕೆ ಹಾಗೂ ಮೂಲಸೌಕರ್ಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ ವಾಣಿಜ್ಯ ಬ್ಯಾಂಕುಗಳ ಸಾಲಕ್ಕೆ ಎಸ್.ಎಲ್.ಆರ್ ಹಾಗೂ ಸಿ.ಆರ್.ಆರ್. ದರಗಳನ್ನಾಧರಿಸಿದ ಶುಲ್ಕವನ್ನು ವಾಪಸ್ಸು ಪಡೆಯುವ ಮೂಲಕ ಹೂಡಿಕೆಗೆ ಉತ್ತೇಜನ ನೀಡಲಾಗಿದೆ.

ಕೃಷಿ, ಕೈಗಾರಿಕೋತ್ಪನ್ನ, ನಗರಾಭಿವೃದ್ಧಿ, ಮೂಲಸೌಕರ್ಯಾಭಿವೃದ್ಧಿ ಮತ್ತು ಜಲಸಂಪನ್ಮೂಲ ವಿಭಾಗಗಳಿಗೆ ಸಂಬಂಧಿಸಿದ ನೀತಿ ಹಾಗೂ ಯೋಜನೆಗಳಿಗೆ ಮುಂಗಡಪತ್ರದ ಭಾಷಣದಲ್ಲಿ ವಿಶೇಷ ಮುತುವರ್ಜಿ ವಹಿಸಲಾಗಿದೆ.

ನಗರ ಭಾರತದ ಆಧುನೀಕರಣಕ್ಕೆ ವೇಗ ನೀಡುವ ಒತ್ತಾಸೆ, 100 ಹೊಸ 'ಸುಂದರ ನಗರ' ನಿರ್ಮಾಣದ ಘೋಷಣೆಯ ಮೂಲಕ ವ್ಯಕ್ತವಾಗಿದೆ. ನಗರಾಭಿವೃದ್ಧಿಯಲ್ಲಿ ಮೂಲಸೌಕರ್ಯ ನಿರ್ಮಾಣ ಮತ್ತು ಅವುಗಳ ಯಶಸ್ವಿ ನಿರ್ವಹಣೆಯ ಸಮನ್ವಯ ಬಹುದೊಡ್ಡ ಸಮಸ್ಯೆಯಾಗಿದೆ. ಹಣಕಾಸಿನ ಅಡಚಣೆ ಮೂಲ ಸಮಸ್ಯೆಯಾಗಿದ್ದರೂ ಕೂಡ ನಗರ ಸೌಲಭ್ಯಗಳ ನಿರ್ವಹಣೆಗೆ ಅವಶ್ಯಕವಾದ ಸಾಂಸ್ಥಿಕ ಚೌಕಟ್ಟಿನ ಸ್ಥಾಪನೆ ಈ ದಿಶೆಯಲ್ಲಿ ಬಹುವಾಗಿ ಕಾಡುತ್ತಿದೆ. ಈ ಹೊಸ ಪ್ರಯತ್ನದಲ್ಲಿ ಕೇವಲ ಅಧಿಕ ಹಾಗೂ ಮಧ್ಯಮ ಆದಾಯದ ಪಂಗಡವನ್ನು ಮಾತ್ರ ಪರಿಗಣಿಸಿದೆ, ಕನಿಷ್ಠ ವರಮಾನವುಳ್ಳ ಬಡವರ್ಗದ ಜನರ ಅಗತ್ಯಗಳನ್ನೂ ಗಮನಿಸಿಕೊಳ್ಳಬೇಕಾದದ್ದು ಅತಿ ಮಹತ್ವದ್ದಾಗಿದೆ. ಈ ಹೊಸ ಚೊಕ್ಕ ನಗರಗಳಲ್ಲಿ ಕೆಳವರ್ಗದ ವಸತಿ ಹಾಗೂ ಪುನರ್ವಸತಿಗಳ ಅವಶ್ಯಕತೆಗಳನ್ನು ಪೂರೈಸಬೇಕಾಗಿದೆ. ಕಡಿಮೆ ವೆಚ್ಚದ ಕೈಗೆಟಕುವ ವಸತಿ ನಿರ್ಮಾಣದ ಉಪಕ್ರಮದ ಈ ನಿಟ್ಟಿನಲ್ಲಿ ಸಮಗ್ರ ದೃಷ್ಟಿಕೋನದ ಅಗತ್ಯವನ್ನು ಗುರುತಿಸಿದೆ. ನೂತನ ನಗರಗಳು ಮಾತ್ರವಲ್ಲದೆ, ಈಗಾಗಲೇ ಬೆಳೆದಿರುವಂತಹ ನಗರಗಳ ಪುನರುಜ್ಜೀವನವು, ಅವುಗಳ ಸೂಕ್ತ ಸದುಪಯೋಗ ಪ್ರಾಪ್ತಿಗೆ ಅತ್ಯವಶ್ಯಕವಾಗಿದೆ.

ಮೂಲಸೌಕರ್ಯದ ಪೂರೈಕೆ ಮಾತ್ರವಲ್ಲದೆ ಆರ್ಥಿಕ ಸದೃಢತೆಯ ಮೇಲೆ ನಗರಾಭಿವೃದ್ಧಿಯು ಅವಲಂಬಿತವಾಗಿದೆ. ಕೈಗಾರಿಕೋತ್ಪನ್ನಗಳ ಅಭಿವೃದ್ಧಿ ಹಾಗೂ ನಗರಾಭಿವೃದ್ಧಿಗಳ ಪರಸ್ಪರ ಸಾಮಂಜಸ್ಯವನ್ನು ಬಲಪಡಿಸಿ, ತನ್ಮೂಲಕ ಆರ್ಥಿಕ ಹಾಗೂ ಪರಿಸರಾತ್ಮಕ ಸುಧೃಡತೆಯನ್ನು ಕಾಯ್ದುಕೊಂಡು ಒಟ್ಟಾರೆ ಭಾರತದ ಸಮಗ್ರ ಅಭಿವೃದ್ಧಿಯನ್ನು ಸುಸ್ಥಿರಗೊಳಿಸಬೇಕಾದ ಅಗತ್ಯವಿದೆ. 'ವಿಶೇಷ ಆರ್ಥಿಕ ವಲಯ' ಹಾಗೂ 'ಕೈಗಾರಿಕಾ ವಲಯ'ಗಳ ಜೊತೆ ಜೊತೆಗೆ ಸಂಪೂರಕವಾದ ನಗರಾಭಿವೃದ್ಧಿ ಹಾಗೂ ಕೈಗಾರಿಕಾಭಿವೃದ್ಧಿಗಳ ಬೆಳವಣಿಗೆಗೆ ಮೂಲಸೌಕರ್ಯ ನಿರ್ಮಾಣ ಮಾತ್ರವಲ್ಲದೆ ನಗರಸೇವೆಗಳ ಅತ್ಯುತ್ತಮ ನಿರ್ವಹಣೆಯು ಅತ್ಯಗತ್ಯವಾಗಿದೆ.

ಕೈಗಾರಿಕೋತ್ಪನ್ನ ಕ್ಷೇತ್ರದಲ್ಲಿ ಹೊಸಹೂಡಿಕೆಗಳನ್ನು ಪ್ರೇರೇಪಿಸಲು,

ಮುಂಗಡಪತ್ರದಲ್ಲಿ ಕಳೆದ ವರ್ಷವೇ ಪ್ರಸ್ತಾಪಿಸಿದ್ದ ತೆರಿಗೆ ರಿಯಾಯಿತಿ ಯೋಜನೆ ಜಾರಿ ಮಾಡಲಾಗಿದೆ. ಇಂಧನ ವಲಯದಲ್ಲೂ ತೆರಿಗೆ ವಿನಾಯಿತಿಯನ್ನು ಘೋಷಿಸಲಾಗಿದೆ.

ಮೂಲ ಸೌಕರ್ಯ ಕ್ಷೇತ್ರದಲ್ಲಿ 'ಸಾರ್ವಜನಿಕ ಹಾಗೂ ಖಾಸಗಿ ಸಹಭಾಗಿತ್ವದ ಅಗತ್ಯವನ್ನು ಬಲವಾಗಿ ಎತ್ತಿಹಿಡಿಯಲಾಗಿದೆ. ಅವಕಾಶಗಳು ಸುಸ್ಪಷ್ಟವಾಗಿದೆ. ಈ ನಿಟ್ಟಿನಲ್ಲಿ ಕಳೆದ ದಶಕಕ್ಕಿಂತಲೂ ಹೆಚ್ಚಿನ ಅನುಭವ 'ಸಾರ್ವಜನಿಕ ಹಾಗೂ ಖಾಸಗಿ ಸಹಭಾಗಿತ್ವ'ವನ್ನು ಯಶಸ್ವಿಯಾಗಿ ಮೂಲಸೌಕರ್ಯ ಅಭಿವೃದ್ಧಿಗೆ ಉಪಯೋಗಿಸಿಕೊಳ್ಳಲು ಮಾರ್ಗದರ್ಶನ ನೀಡಬಲ್ಲದು. 'ಈ ಎಲ್ಲ ಕ್ರಮಗಳೂ ಹೊಸ ಬಂಡವಾಳ ಹೂಡಿಕೆಯನ್ನು ಆಕರ್ಷಿಸುವಲ್ಲಿ ಯಶಸ್ವಿಯಾಗಲು ಸಾಕೇ' ಎಂಬ ಪ್ರಶ್ನೆಗೆ ಆಡಳಿತದಲ್ಲಿನ ದಕ್ಷತೆಯೇ ಕೀಲಿ–ಕೈಯಾಗಿದೆ.

**ಸುಸ್ಥಿರ ಬಂಡವಾಳ ಹೂಡಿಕೆಯ ಹರಿವಿಗೆ ಪ್ರಮುಖ ಅಡಚಣೆಗಳು**

ಈ ಹಿಂದಿನ ಕೆಲವು ವರ್ಷಗಳ ಮುಂಗಡ ಪತ್ರಗಳಲ್ಲೂ ಸಹ ಕೃಷಿ ಹಾಗೂ ಮೂಲಸೌಕರ್ಯ ಕ್ಷೇತ್ರಗಳಿಗೆ ವಿಶೇಷ ಗಮನ ಹರಿಸಲಾಗಿದೆ. ಸರ್ವೇ ಸಾಮಾನ್ಯವಾಗಿ ಹೇಳುವುದಾದರೆ ಎಲ್ಲಾ ವರ್ಗಗಳನ್ನೂ ಒಳಗೊಂಡ ಸಮಗ್ರ ಬೆಳವಣಿಗೆ, ಬಡತನ ನಿರ್ಮೂಲನೆ, ಬಳಕೆದಾರರಿಗೆ ಆಹಾರದ ಸುಭದ್ರತೆ, ರೈತರಿಗೆ ನ್ಯಾಯವಾದ ಪ್ರತಿಫಲ, ಕೈಗಾರಿಕೋತ್ಪನ್ನಗಳ ಹೆಚ್ಚಳ ಇವೇ ಮೊದಲಾದವು ಈವರೆಗೆ ಗುರುತಿಸಲಾದ ಧ್ಯೇಯೋದ್ದೇಶಗಳಾಗಿವೆ.

ಪ್ರಸ್ತುತ ಒಟ್ಟು ದೇಶೀಯ ಉತ್ಪನ್ನದ ಶೇ. 17ರಷ್ಟು ಇರುವ ಕೈಗಾರಿಕೋತ್ಪನ್ನವನ್ನು ಶೇ.25ಕ್ಕೆ ಹೆಚ್ಚಿಸಿ, 10 ಕೋಟಿ ಉದ್ಯೋಗಗಳನ್ನು ನಿರ್ಮಿಸಿ, ಕೈಗಾರಿಕಾ ವಲಯದಲ್ಲಿ ಸಂಕ್ರಾಂತಿಯನ್ನು ತರುವ ಪರಿಕಲ್ಪನೆ ಕಳೆದೆರೆಡು ವರ್ಷಗಳಿಂದ ಕೇಳಿಬರುತ್ತಿದೆ. 11 ಮತ್ತು 12ನೇ ಪಂಚವಾರ್ಷಿಕ ಮೂಲಸೌಕರ್ಯದ ಅಭಿವೃದ್ಧಿ ಕ್ಷೇತ್ರವನ್ನು ಹೂಡಿಕೆ ವೃದ್ಧಿಗೆ ವಿಶೇಷ ವಲಯವೆಂದು ಪರಿಗಣಿಸಲಾಗಿದೆ.

ಆದರೆ ವಾಸ್ತವಿಕ ಸಾಧನೆ ಅತ್ಯಂತ ಕಳಪೆಯಾಗಿದೆ. ಭೂಸ್ವಾಧೀನ, ಪರಿಸರಾತ್ಮಕ



ಅನುಮತಿ ಹಾಗೂ ಭ್ರಷ್ಟಾಚಾರ, ಇವು ಪ್ರಮುಖ ತಡೆಗೋಡೆಗಳಾಗಿವೆ. ಕ್ಲಿಷ್ಟ ವಿಷಯಗಳಲ್ಲಿ ರಾಜಕೀಯ ಸಹಮತದ ನಿರ್ಮಾಣವೂ ಒಂದು ಸವಾಲೇ ಆಗಿದೆ.

12ನೇ ಪಂಚವಾರ್ಷಿಕ ಯೋಜನೆಯಲ್ಲಿ 3 ಸಂಭವನೀಯ ಪರ್ಯಾಯ ಪರಿಸ್ಥಿತಿಗಳನ್ನು ವಿಶ್ಲೇಷಿಸಲಾಗಿದೆ. ಆದರ್ಶ ಆರ್ಥಿಕ ಅಭಿವೃದ್ಧಿ ಚರ್ಚಿತವಾದರೆ, ಮಧ್ಯಮ ಸನ್ನಿವೇಶದಲ್ಲಿ ಮಧ್ಯಮ ಪ್ರಮಾಣದ ಆರ್ಥಿಕ ಅಭಿವೃದ್ಧಿ ದರವನ್ನು ಪರಿಗಣಿಸಲಾಗಿದೆ. ಮೂರನೇ ಸನ್ನಿವೇಶದಲ್ಲಿ ವಾರ್ಷಿಕ ಶೇ. 5ರಷ್ಟು ಮಾತ್ರ ಹೆಚ್ಚಳದಿಂದ ಅತ್ಯಲ್ಪ ಪ್ರಮಾಣದ ಅಭಿವೃದ್ಧಿ ದರವನ್ನು ಪರಿಗಣಿಸಿದ್ದಾರೆ. ವಿವಿಧ ಮಟ್ಟದಲ್ಲಿನ ಅಸಮತೋಲನವನ್ನು ಸರಿಪಡಿಸಲು ಸೂಕ್ತವಾದ ಸಾಂಸ್ಥಿಕ ಹಾಗೂ ಆಡಳಿತಾತ್ಮಕ ವ್ಯವಸ್ಥೆಯನ್ನು ಸ್ಥಾಪಿಸುವ ಅಗತ್ಯವನ್ನು ಒತ್ತಿಹೇಳಲಾಗಿದೆ. ಈ ವರ್ಷದ ಮುಂಗಡಪತ್ರದಲ್ಲಿ ಅಂತಹ ವ್ಯವಸ್ಥೆಯನ್ನು ಸ್ಥಾಪಿಸಿ, ಪ್ರಭಾವಿ ಹೂಡಿಕೆಗೆ ಇರುವ ಅಡೆತಡೆಗಳನ್ನು ನಿವಾರಿಸುವ ಪ್ರಸ್ತಾಪವನ್ನು ಮುಂದಿರಿಸಲಾಗಿದೆ. ಹೂಡಿಕೆಯಲ್ಲಿನ ಅಸಮಾನತೆ ಹಾಗೂ ಪ್ರಾದೇಶಿಕ ಅಸಮತೋಲನವನ್ನು ನಿವಾರಿಸಲು ರಾಜಕೀಯ ಅಥವಾ ಆಡಳಿತಾತ್ಮಕ ವ್ಯವಸ್ಥೆ ಮಧ್ಯಸ್ಥಿಕೆ ವಹಿಸಲು ಸಮರ್ಥವಾದರೆ ಇನ್ನುಳಿದ ಹೂಡಿಕೆಯ ದುಷ್ಪರಿಣಾಮಗಳಾದ ಪರಿಸರ ಹಾನಿ ಇತ್ಯಾದಿ ಅಂಶಗಳನ್ನು ಗಮನಿಸಲು ಸಾಂಸ್ಥಿಕ ವ್ಯವಸ್ಥೆಗಳ ಮಧ್ಯಸ್ಥಿಕೆ ಹೆಚ್ಚು ಸೂಕ್ತವಾಗಿರುತ್ತದೆ.

ಭೂಮಿ, ನೀರು, ಶುದ್ಧ ಗಾಳಿ ಮೊದಲಾದ ಮೂಲಭೂತ ಅಗತ್ಯಗಳ ಮೇಲಿನ ಒತ್ತಡ ಮತ್ತಷ್ಟು ಹೆಚ್ಚಾಗಲಿದ್ದು, ಹೂಡಿಕೆಗಳಿಂದಾಗುವ ಉತ್ಪಾದನೆ, ಅದಕ್ಕೆ ಒದಗಿಸಿದ ಸಂಪನ್ಮೂಲಗಳಿಗೆ ತಕ್ಕುದಾದ ಗೌಣ ಸಮಸ್ಯೆಗಳು ತಲೆದೋರಿ ಅವಕ್ಕೆ ಶೀಘ್ರ ಹಾಗೂ ಪ್ರಭಾವಿ ಪರಿಹಾರವನ್ನು ಒದಗಿಸಬೇಕಾಗುತ್ತದೆ.

ಸರ್ಕಾರಿ ವೆಚ್ಚದ ಸೂಕ್ತ ವಿಲೇವಾರಿಯಲ್ಲಿ ಮಹತ್ವಪೂರ್ಣ ಬದಲಾವಣೆಯಾದಾಗ ಮಾತ್ರ ನೇರವಾಗಿ ಅಥವಾ ಪರೋಕ್ಷವಾಗಿ ಖಾಸಗಿ ಹೂಡಿಕೆಯಾಗುವ ಸಾಧ್ಯತೆ ಕಂಡುಬರುತ್ತದೆ. ಅಲ್ಲಿಯವರೆಗೆ ಪ್ರಸ್ತುತ ಸಾಂಸ್ಥಿಕ ವ್ಯವಸ್ಥೆಯಲ್ಲಿ ಬದಲಾವಣೆ ಮಾಡುವ ಮುಖಾಂತರ ಎಲ್ಲಾ ಕ್ಷೇತ್ರಗಳಲ್ಲೂ ಖಾಸಗಿ ವಲಯದ ಹೂಡಿಕೆಯನ್ನೂ ಆಕರ್ಷಿಸಬೇಕಾಗಿದೆ.

ಈ ರೀತಿ ಅಧಿಕವಾಗಿ ಖಾಸಗಿ ಸಹಭಾಗಿತ್ವವಿರುವ ಹೆಚ್ಚು ಹೆಚ್ಚು ಹೂಡಿಕೆಯಿಂದ ಸಾಧ್ಯವಾಗುವ ಸುಸ್ಥಿರ–ಅಧಿಕ–ಆರ್ಥಿಕಾಭಿವೃದ್ಧಿಯ ಕಲ್ಪನೆ ಸಾಕಾರಗೊಳ್ಳಲಿಕ್ಕೆ ಅತ್ಯಂತ ಸಮನ್ವಿತ ಹಾಗೂ ಪ್ರಭಾವೀ ನೀತಿ ಹಾಗೂ ಅವುಗಳ ಯಶಸ್ವಿ ಕಾರ್ಯಾನ್ವಯತೆ ಅತ್ಯಗತ್ಯ. ಇದಕ್ಕೆ ಪೂರಕವಾದ ಶಾಸನಾತ್ಮಕ ಹಾಗೂ ಆಡಳಿತಾತ್ಮಕ ಕ್ರಮಗಳನ್ನು ಕೈಗೊಂಡಲ್ಲಿ ಮಾತ್ರ, ಈಗ ಹಿಂದೆಂದಿಗಿಂತಲೂ ಅತ್ಯಂತ ಅವಶ್ಯಕವಿರುವ ಗಮನಾರ್ಹವಾದ ಹಾಗೂ ಸುಸ್ಥಿರವಾದ ಆರ್ಥಿಕಾಭಿವೃದ್ಧಿಯನ್ನು ಸಾಧಿಸಲು ಸಾಧ್ಯವಾಗುತ್ತದೆ. ❑

# ಬಡತನ ಮತ್ತು ಅಪೌಷ್ಟಿಕತೆಯನ್ನು ಎದುರಿಸುವ ಬಗೆ

* ಆಶಾ ಕಪೂರ್ ಮೆಹ್ತಾ
** ಸಂಜಯ್ ಪ್ರತಾಪ್
ಕನ್ನಡಕ್ಕೆ : ಕೇಶವ ಮಳಗಿ



ಯೋಜನೆಯನ್ನು ಅನುಷ್ಠಾನಗೊಳಿಸುವ ವಿವಿಧ ಇಲಾಖೆ, ಸಚಿವಾಲಯಗಳ ನಡುವೆ ಉತ್ತಮ ರೀತಿಯ ಸಮನ್ವಯ ಅತಿ ಮುಖ್ಯವಾಗಿದೆ. ಪಂಚಾಯತ್‌ರಾಜ್ ಇಲಾಖೆ, ಆರೋಗ್ಯ, ಶಿಕ್ಷಣ, ನೀರು-ಒಳಚರಂಡಿ ಮುಂತಾದ ಇಲಾಖೆಗಳು ಒಟ್ಟಿಗೆ ಸೇರಿ ಕೆಲಸ ಮಾಡುವುದರಿಂದ ಪ್ರಗತಿ ಪರಿಶೀಲನೆ, ಜಂಟಿಯೋಜನೆ ಸಾಧ್ಯವಾಗುತ್ತದೆ.

ಇದೀಗ ಅಷ್ಟೇ ಅಧಿಕಾರಕ್ಕೆ ಬಂದಿರುವ ಹೊಸ ಸರ್ಕಾರವು ಕಡು ಬಡತನ ಮತ್ತು ಅಪೌಷ್ಟಿಕತೆ ನಿವಾರಣೆಯು ರಾಷ್ಟ್ರೀಯ ಆದ್ಯತೆಯ ವಿಷಯವೆಂದು ತಿಳಿಸಿದ್ದು ಆರೋಗ್ಯಕ್ಷೇತ್ರಕ್ಕೆ ವಿಶೇಷ ಗಮನವನ್ನು ನೀಡುವ ಇಚ್ಛಾಶಕ್ತಿಯನ್ನು ಪ್ರಕಟಿಸಿದೆ. ತನ್ನ ಆಶಯಗಳನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಸರ್ಕಾರ ಮಂಡಿಸಿದ 2014-2015ರ ಆಯವ್ಯಯದಲ್ಲಿ ಹಣಕಾಸನ್ನು ತೆಗೆದಿರಿಸಲು ಪ್ರಯತ್ನಿಸಿದೆ. ಆಯವ್ಯಯ ಮಂಡನೆಯ ಸಮಯದಲ್ಲಿ ಆನಂತರ ಭಾಷಣಗಳಲ್ಲಿ ಈ ಮಾತು ಪ್ರಸ್ತಾವನೆಯಾದುದು ಗಮನಾರ್ಹ ಅಂಶವಾಗಿದೆ. ಬಡತನವನ್ನು ನಿರ್ಮೂಲಗೊಳಿಸಲು, ಅಪೌಷ್ಟಿಕತೆಯ ಸಮಸ್ಯೆ ನಿವಾರಿರಣೆಗಾಗಿ ಸ್ವಾತಂತ್ರ್ಯದ ನಂತರ ಸರ್ಕಾರಗಳು ಅನೇಕ ಕಾರ್ಯಕ್ರಮ, ಯೋಜನೆಗಳನ್ನು ಅನುಷ್ಠಾನಗೊಳಿಸಲು ಪ್ರಯತ್ನಿಸಿವೆ. ಸಮಗ್ರ ಶಿಶು ಕಲ್ಯಾಣ ಅಭಿವೃದ್ಧಿ ಸೇವೆಗಳಂಥ (ಐಸಿಡಿಎಸ್) ಕಾರ್ಯಕ್ರಮಗಳನ್ನು ನಾಲ್ಕು ದಶಕಗಳಷ್ಟು ಹಿಂದೆಯೇ ಪರಿಚಯಿಸಿದ್ದರೆ, ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಮಿಶನ್‌ಗಳಂಥ (ಎನ್‌ಆರ್‌ಎಚ್‌ಎಂ) ಕಾರ್ಯಕ್ರಮಗಳು ಇತ್ತೀಚಿನವಾಗಿವೆ. ಕೆಲಸದ ಹಕ್ಕನ್ನು ಪ್ರತಿಪಾದಿಸುವ ಮಹಾತ್ಮಗಾಂಧಿ - ನರೇಗದಂಥ (ಎಂಜಿಎನ್‌ಆರ್‌ಇಜಿಎ) ಕಾರ್ಯಕ್ರಮಗಳು ರಾಷ್ಟ್ರೀಯ ಉದ್ಯೋಗ ಯೋಜನೆಗಳ ಅನುಷ್ಠಾನ ಅನುಭವದ ಆಧಾರದಿಂದ ರಚಿಸಲಾದ ಕಾರ್ಯಕ್ರಮವಾಗಿದೆ.

ಬಡತನ ನಿರ್ಮೂಲನೆಗಾಗಿ ಬೃಹತ್ಪ್ರಮಾಣದ ಯೋಜನೆ ಮತ್ತು ಕಾರ್ಯಕ್ರಮಗಳನ್ನು ವಿನ್ಯಾಸಗೊಳಿಸಿದಾಗ್ಯೂ ಬಡತನವೇಕೆ ಇನ್ನೂ ಭಾರಿ ಪ್ರಮಾಣದಲ್ಲಿ ನೆಲೆಯೂರಿದೆ? ಎರಡು ಬೃಹತ್ ಯೋಜನೆಗಳಾದ ಐಸಿಡಿಎಸ್ ಮತ್ತು ಎನ್‌ಆರ್‌ಎಚ್‌ಎಂ ಅನುಷ್ಠಾನದಲ್ಲಿ ಪ್ರಮುಖಾಂಶಗಳತ್ತ ಇನ್ನಷ್ಟು ಗಮನನೀಡಿದರೆ ಉತ್ತಮ ಫಲಿತಾಂಶವನ್ನು ಪಡೆಯಲು ಸಾಧ್ಯವಿದೆಯೇ? ಎಂಬ ಎರಡು ಅಂಶಗಳ ಮೇಲೆ ಈ ಲೇಖನವು ಬೆಳಕು ಚೆಲ್ಲಲಿದೆ.

### ಬೃಹತ್ ಪ್ರಮಾಣದ ಬಡತನ

ಬಡತನದ ವಿವಿಧ ಆಯಾಮಗಳನ್ನು ನಿವಾರಿಸಲು ಅನೇಕ ದೊಡ್ಡ ಮಟ್ಟದ ಕಾರ್ಯಕ್ರಮ, ಯೋಜನೆಗಳನ್ನು ನಾವು ಹೊಂದಿದ್ದೇವೆ. ಅದರಲ್ಲಿ ಕೆಲವನ್ನು ಕೋಷ್ಟಕ-1ರಲ್ಲಿ ನೀಡಲಾಗಿದೆ. ಆದಾಗ್ಯೂ, ಕೋಷ್ಟಕದ ಎರಡನೆಯ ಅಂಕಣವನ್ನು ನೋಡಿದಾಗ, ಸರ್ಕಾರದ ಯಾವುದೇ ಯೋಜನೆ ಅಥವ ಕಾರ್ಯಕ್ರಮವು ವ್ಯಕ್ತಿಗತವಾಗಿಯಾಗಲಿ, ಕುಟುಂಬಕ್ಕಾಗಲಿ ಕನಿಷ್ಠ ಜೀವನೋಪಾಯವನ್ನು ಒದಗಿಸುತ್ತಿಲ್ಲ ಎಂಬ ಅಂಶವನ್ನು ತೋರಿಸುತ್ತದೆ. ಒಂದು ಕುಟುಂಬವು ಬಡತನ ರೇಖೆಯಿಂದ ಆಚೆ ಬರಲು ಸಾಧ್ಯವಾಗುವಂತೆ ವಾರ್ಷಿಕ ಆದಾಯವನ್ನು ಪಡೆಯಬಲ್ಲ ಕಾರ್ಯಕ್ರಮವಾಗಿ ನರೇಗ ಕಾರ್ಯಕ್ರಮವನ್ನು ವಿನ್ಯಾಸಗೊಳಿಸಿಲ್ಲ. ಆದಾಯ ತರಬಲ್ಲ ಸ್ವಯಂ-ಉದ್ಯೋಗ ಮತ್ತು ಸ್ವ-ಸಹಾಯ ಗುಂಪುಗಳ ಕಾರ್ಯಕ್ರಮಗಳಲ್ಲಿ ಅಗೋಚರ ಅಪಾಯಕಾರಿ ಅಂಶಗಳಿದ್ದು ಬಡತನದಿಂದ ಹೊರಬರಲು ಸಾಧ್ಯವಾಗದು. ಈ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ವ್ಯಕ್ತಿಗಳು ಪಡೆಯುವ ನಿಜವಾದ ಆದಾಯವು ಹೂಡಿಕೆ

* ಅರ್ಥಶಾಸ್ತ್ರ ಪ್ರೊಫೆಸರ್. email : aashakapurmehta@gmail.com
** ಸಂಶೋಧನಾ ಅಧಿಕಾರಿ, ಭಾರತೀಯ ಸಾರ್ವಜನಿಕ ಆಡಳಿತ ಸಂಸ್ಥೆ. email : sanjay.prtp@gmail.com

| ಕೋಷ್ಟಕ 1 : ಬಡತನ ನಿರ್ಮೂಲನೆ ಯೋಜನೆ ಮತ್ತು ಕಾರ್ಯಕ್ರಮಗಳು : ಸಮರ್ಪಕತೆ ಮತ್ತು ಅರ್ಹತೆ | | | | |
|---|---|---|---|---|
| ಯೋಜನೆ/ಕಾರ್ಯಕ್ರಮ | ಕನಿಷ್ಠ ಜೀವನೋಪಾಯವನ್ನು ಒದಗಿಸುತ್ತದೆಯೇ? | ಅರ್ಹತೆಯನ್ನು ಪಡೆದಿರುವವರು: ಯಾರು?ವ್ಯಕ್ತಿಯೊ? ಕುಟುಂಬವೋ? | ಕೆಲಸದೊಂದಿಗೆ ಹೊಂದಿಕೊಂಡಿದೆಯೆ? | ಮಕ್ಕಳು ಇದರ ಫಲಾನುಭವಿಗಳೇ? |
| **ಉದ್ಯೋಗ-ಸ್ವಯಂ-ಉದ್ಯೋಗ** | | | | |
| ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯಿದೆ | ಇಲ್ಲ | ಕುಟುಂಬ | ಹೌದು | * |
| ಸ್ವರ್ಣ ಜಯಂತಿ: ಗ್ರಾಮ ಸ್ವಯಂ-ಉದ್ಯೋಗ ಯೋಜನೆ | ಯಾವುದೇ ಖಾಯಂ ಆದಾಯವಿಲ್ಲ | ವ್ಯಕ್ತಿಗತ/ ಸ್ವಸ.ಗುಂ | ಹೌದು | * |
| ಸ್ವರ್ಣ ಜಯಂತಿ ನಗರ ಉದ್ಯೋಗ ಯೋಜನೆ | | | | |
| (ಇ) ನಗರ-ಸ್ವ ಉದ್ಯೋಗ ಯೋಜನೆ | ಯಾವುದೇ ಖಾಯಂ ಆದಾಯವಿಲ್ಲ | ವ್ಯಕ್ತಿಗತ | ಹೌದು | * |
| (ಇಇ) ನಗರ ಕೂಲಿ ಉದ್ಯೋಗ ಯೋಜನೆ | ಇಲ್ಲ | ವ್ಯಕ್ತಿಗತ | ಹೌದು | * |
| (ಇಇಇ) ಮಹಿಳೆಯರ ತರಬೇತಿ ಮತ್ತು ಉದ್ಯೋಗಕ್ಕೆ ಬೆಂಬಲ | ಇಲ್ಲ | ವ್ಯಕ್ತಿಗತ | ಹೌದು | * |
| ಸ್ವಸಹಾಯ ಗುಂಪುಗಳು- ಸೂಕ್ಷ್ಮ ಹಣಕಾಸು ಚಟುವಟಿಕೆ | ಯಾವುದೇ ಖಾಯಂ ಆದಾಯವಿಲ್ಲ | ಸ್ವಸ.ಗುಂ | ಮಿತವ್ಯಯ/ ಕಡ/ಕೆಲಸಕ್ಕಾಗಿ ಸಾಲ | * |
| ಪೌಷ್ಟಿಕತೆ ಮತ್ತು ಶಿಕ್ಷಣ | | | | |
| ಗುರಿಹೊಂದಿದ ಸಾರ್ವಜನಿಕ ವಿತರಣಾ ವ್ಯವಸ್ಥೆ | ರಿಯಾಯಿತಿ ಆಹಾರ | ಕುಟುಂಬ | ಇಲ್ಲ | * |
| ಸಮಗ್ರ ಮಕ್ಕಳ ಕಲ್ಯಾಣ ಅಭಿವೃದ್ಧಿ ಮತ್ತು ಸೇವೆಗಳು | ಇಲ್ಲ | ವ್ಯಕ್ತಿಗತ | ಇಲ್ಲ | ಹೌದು |
| ಮಧ್ಯಾಹ್ನ ಬಿಸಿಯೂಟ | ಇಲ್ಲ | ವ್ಯಕ್ತಿಗತ | ಇಲ್ಲ | ಹೌದು |
| ಸರ್ವ ಶಿಕ್ಷಣ ಅಭಿಯಾನ | ಇಲ್ಲ | ವ್ಯಕ್ತಿಗತ | ಇಲ್ಲ | ಹೌದು |
| ಆರೋಗ್ಯ ಮತ್ತು ಆರೋಗ್ಯ ವಿಮೆ | | | | |
| ರಾಷ್ಟ್ರೀಯಆರೋಗ್ಯ ಮಿಶನ್ | ಇಲ್ಲ | ವ್ಯಕ್ತಿಗತ | ಇಲ್ಲ | ಹೌದು |
| ಜನನಿ ಸುರಕ್ಷಾ ಯೋಜನೆ | ಇಲ್ಲ | ವ್ಯಕ್ತಿಗತ | ಇಲ್ಲ | ಹೌದು |
| ರಾಷ್ಟ್ರೀಯ ಏಡ್ಸ್‌ನಿಯಂತ್ರಣ ಕಾರ್ಯಕ್ರಮ- III | ಇಲ್ಲ | ವ್ಯಕ್ತಿಗತ | ಇಲ್ಲ | ಹೌದು |
| ಆಮ್ ಆದ್ಮಿ ವಿಮಾ ಯೋಜನೆ | ಇಲ್ಲ | ವೈಯಕ್ತಿಕ | ಇಲ್ಲ | * |
| ರಾಷ್ಟ್ರೀಯ ಸ್ವಾಸ್ಥ್ಯ ವಿಮಾ ಯೋಜನೆ | ಇಲ್ಲ | ವೈಯಕ್ತಿಕ | ಹೌದು | * |
| **ಮೂಲಭೂತ ಸೌಕರ್ಯ ಮತ್ತು ಅಗತ್ಯ ಸೇವೆಗಳು** | | | | |
| ಪ್ರಧಾನಮಂತ್ರಿ ಗ್ರಾಮರಸ್ತೆ ಯೋಜನೆ | ಇಲ್ಲ | ಸಮುದಾಯ | ಇಲ್ಲ | * |
| ಇಂದಿರಾ ಆವಾಸ್‌ಯೋಜನೆ | ಇಲ್ಲ | ಕುಟುಂಬ | ಇಲ್ಲ | * |
| ಸಂಪೂರ್ಣ ಸ್ವಚ್ಛತಾ ಆಂದೋಲನ | ಇಲ್ಲ | ಕುಟುಂಬ | ಇಲ್ಲ | ಹೌದು |
| ಭಾರತ ನಿರ್ಮಾಣ | ಇಲ್ಲ | ಕುಟುಂಬ/ ಸಮುದಾಯ | ಇಲ್ಲ | * |
| ಜವಹರಲಾಲ್ ನೆಹರು ನಗರ ನವೀಕರಣ ಮಿಶನ್ | ಇಲ್ಲ | ಸಮುದಾಯ | ಇಲ್ಲ | * |
| ವೃದ್ಧಿಸಿದ ಗ್ರಾಮೀಣ ನೀರು ಸರಬರಾಜು | ಇಲ್ಲ | ಕುಟುಂಬ | ಇಲ್ಲ | ಹೌದು |
| ಸಮಗ್ರ ಜಲಾನಯನ ನಿರ್ವಹಣಾ ಕಾರ್ಯಕ್ರಮ | ಇಲ್ಲ | ಕುಟುಂಬ | ಇಲ್ಲ | * |
| ಹಿಂದುಳಿದ ಪ್ರದೇಶಗಳ ನಿಧೀ | ಇಲ್ಲ | ಸಮುದಾಯ | | |
| ನಿರ್ದಿಷ್ಟ ಗುಂಪುಗಳಿಗಾಗಿ ಕಾರ್ಯಕ್ರಮ | | | | |
| ಪರಿಶಿಷ್ಟ ಜಾತಿ ಉಪ-ಯೋಜನೆ ಮತ್ತು ಬುಡಕಟ್ಟು ಉಪ-ಯೋಜನೆ | ಇಲ್ಲ | ಸಮುದಾಯ | ಇಲ್ಲ | * |
| ಸಮಗ್ರ ಶಿಶು ರಕ್ಷಣಾ ಯೋಜನೆ | ಇಲ್ಲ | ವೈಯಕ್ತಿಕ | ಇಲ್ಲ | ಹೌದು |
| ರಾಷ್ಟ್ರೀಯ ವೃದ್ಧಾಪ್ಯ ವೇತನ ಯೋಜನೆ | ಇಲ್ಲ | ವೈಯಕ್ತಿಕ | ಇಲ್ಲ | ಇಲ್ಲ |
| ಕಿಶೋರಿ ಶಕ್ತಿ ಯೋಜನೆ | ಇಲ್ಲ | ವೈಯಕ್ತಿಕ | ಇಲ್ಲ | ಹೌದು |

ಸೂಚನೆ: * ಕುಟುಂಬದ ಭಾಗವಾಗಿ ಮಕ್ಕಳು ಫಲಾನುಭವಿಗಳಾಗಿದ್ದಾರೆಂಬುದನ್ನು ತಿಳಿಸುತ್ತದೆ.

ಮೂಲ: ಮೆಹ್ತ, ಆಶಾಕಪೂರ್ ಮತ್ತು ಪ್ರತಾಪ್ ಸಂಜಯ್, (2014). ಯೋಜನೆ ಮತ್ತು ಕಾರ್ಯಕ್ರಮಗಳು: ಯಾವುದು ಪರಿಣಾಮಕಾರಿಯಾಗಿದೆ, ಯಾವುದು ಕಾರ್ಯನಿರ್ವಹಿಸಿಲ್ಲ, ಏಕೆ? ಎಂದು ಅರಿತುಕೊಳ್ಳಲು ಐಸಿಡಿಎಸ್ ಮತ್ತು ಎನ್‌ಆರ್‌ಎಚ್‌ಎಂಗಳ ವಿಶ್ಲೇಷಣೆ. ಸಿಪಿಆರ್‌ಸಿ ಐಐಪಿಎ, ಕಾರ್ಯಕಾರಿ ಪ್ರಬಂಧ 48, ಐಐಪಿಎ

ವಿಧಾನ ಮತ್ತು ಮರಳಿ ಪಡೆಯುವ ವಿಧಾನ ಹೇಗಿದೆ ಎಂಬುದನ್ನು ಆಧರಿಸಿದೆ.

ಬಡವರಲ್ಲದ ಕುಟುಂಬವೊಂದರಲ್ಲಿ ಮಹಿಳೆ, ವಯಸ್ಸಾದವರು, ವಿಭಿನ್ನ ಸಾಮರ್ಥ್ಯದ ಜನರಿದ್ದು, ಪ್ರತಿಕೂಲ ಸ್ಥಿತಿಯಲ್ಲಿರಬಹುದು. ಹೀಗಾಗಿಯೇ ಬಡವರಾಗಿರಬಹುದು. ರಾಷ್ಟ್ರೀಯ ವೃದ್ಧಾಪ್ಯ ವೇತನ ಯೋಜನೆ ಅಥವ ವಿಧವಾ ಅಥವ ಈ ಬಗೆಯ ಪಿಂಚಣಿಗಳಿದ್ದು ಅವು ನೆಮ್ಮದಿಯಬದುಕು ನಡೆಸಲು ಸಾಕಾಗುವುದಿಲ್ಲ.

ಬಡತನವನ್ನು ನಿರ್ಮೂಲನೆ ಮಾಡಲು ಚಾಲನೆ ನೀಡುವ ಕಾರ್ಯಕ್ರಮಕ್ಕಾಗಿ ಎಲ್ಲ ಇಲಾಖೆಗಳೊಂದಿಗೆ ಸಂಯೋಜನೆ ಸಾಧಿಸುವ ಕಾರ್ಯದಲ್ಲಿ ಸರ್ಕಾರವು ವಿಫಲಗೊಂಡಿದೆ. ಕುಟುಂಬ, ವ್ಯಕ್ತಿಗಳ ಬಡತನವನ್ನು ತಡೆಗಟ್ಟಲು ಅಥವ ಬಡತನ ರೇಖೆಯಿಂದ ಆಚೆ ಬರಲು ಅಗತ್ಯವಾಗುವಂತೆ ಸಮುಚ್ಛಯ ಪ್ರಯತ್ನದಂತೆ ಯೋಜನಾನುಷ್ಠಾನ ಮಾಡದೆ ತುಣುಕುಗಳೆಂಬಂತೆ ಅನುಷ್ಠಾನಗೊಳಿಸಲಾಗುತ್ತದೆ. ನಮಗೀಗ ಬೇಕಿರುವುದೆಂದರೆ, ಬಡವರು ಯಾರು ಮತ್ತು ಹೇಗೆ ಎಂದು ವಸ್ತುನಿಷ್ಠವಾಗಿ ಪರಿಶೀಲಿಸಲು ಅಗತ್ಯವಾಗುವ ಗುರುತಿಸುವಿಕೆ. ಬಡತನರೇಖೆಯಿಂದ ಯಾರು ಹೊರಬಂದರು, ಹೇಗೆ? ಈ ಮೊದಲು ಬಡವರಾಗಿರದವರು ಈಗ ಬಡವರಾಗಿದ್ದರೆ ಅವರನ್ನು ಬಡತನದ ಅಂಚಿಗೆ ತಳ್ಳಿರುವ ಅಂಶಗಳಾವುವು? ಮತ್ತು ಆ ಅಂಶಗಳನ್ನು ತಡೆಗಟ್ಟುವುದು ಹೇಗೆ? ಬಡತನದ ಕುಟುಂಬದಲ್ಲಿ ಹುಟ್ಟಿರುವುದರಿಂದ ವ್ಯಕ್ತಿ ಬಡವರಾಗಿದ್ದಾರೆಯೇ? ಅಥವ ಅನಾರೋಗ್ಯ, ನಿರಕ್ಷರತೆ, ಕುಶಲತೆಯಿಲ್ಲದಿರುವುದು, ಅಥವ ಸ್ವತ್ತುಗಳನ್ನು ಕಳೆದುಕೊಂಡಿರುವುದರಿಂದ ಬಡವರಾಗಿದ್ದಾರೆಯೇ? ಇಂಥವರನ್ನು ಬಡತನದಿಂದ ಆಚೆ ತರಲು ಯಾವ ಬಗೆಯ ಮಧ್ಯವರ್ತನೆಗಳು ಅಗತ್ಯವಾಗಿವೆ ಅಥವ ರೂಪಿಸಲಾಗಿದೆ? ಪ್ರತಿ ಗ್ರಾಮದಲ್ಲೂ ಜನ ಬಡತನ ರೇಖೆಯಿಂದ ಹೊರ ಚಲಿಸಿರುವ ಪ್ರಗತಿಯನ್ನು ಸರ್ಕಾರ ಹೇಗೆ ನಿರ್ವಹಿಸುತ್ತದೆ? ಒಂದೊಮ್ಮೆ, 2014ರಲ್ಲಿ ಬಡತನದಲ್ಲಿದ್ದ ಕುಟುಂಬಗಳು 2015, 2016ರಲ್ಲಿ ಬಡತನ ರೇಖೆಯಿಂದ ಹೇಗೆ ಹೊರ ಸಾಗುತ್ತಿವೆ? ಬಡತನದಿಂದ ಹೊರ ಸಾಗಲು ಚಲನೆಯ ಸುಸ್ಥಿರತೆಯನ್ನು ನಿಗಾ ವಹಿಸಿ ಗ್ರಾಮ ಮತ್ತು ನಗರಗಳು ಬಡತನದಿಂದ ಮುಕ್ತವಾಗಿವೆ ಎಂದು ಘೋಷಿಸಬಲ್ಲ ಮಾನದಂಡಗಳನ್ನು ರೂಪಿಸಲಾಗಿದೆಯೇ? ಬಡವರಲ್ಲದವರು ಬಡವರಾಗುವುದನ್ನು ತಡೆಗಟ್ಟಬಲ್ಲ ಪ್ರಕ್ರಿಯೆಗಳನ್ನು ರೂಪಿಸಲಾಗಿದೆಯೆ? ಬಡತನಕ್ಕೆ ಕಾರಣವಾಗುವ ನಿರ್ದಿಷ್ಟ ಅಂಶಗಳನ್ನು ನಿವಾರಿಸಲು ವಿನ್ಯಾಸವಿದೆಯೆ? ಬಡತನ ಸಾಧ್ಯವಾಗಿಸುವಿಕೆಯ ಅಂಶ ವ್ಯಕ್ತಿಗತ ನೆಲೆಯಲ್ಲಿದೆಯೆ? ಅಥವ ಗುಂಪು, ಪ್ರಾದೇಶಿಕತೆ, ಉದ್ಯೋಗಗಳಿಗೆ ಸಂಬಂಧಿಸಿದ್ದಾಗಿದೆಯೆ? ಇಂಥವೇ ವಿಷಯಗಳನ್ನು ಆದ್ಯತೆಯ ಮೇಲೆ ಗಮನಹರಿಸಬೇಕಿದೆ.

**ಐಸಿಡಿಎಸ್ ಮತ್ತು ಎನ್‌ಆರ್‌ಎಚ್‌ಎಂ : ಮುಖ್ಯ ಕಾರ್ಯಕ್ರಮಗಳು**

ಬಡತನವನ್ನು ನಿವಾರಿಸುವ ನಿಟ್ಟಿನಲ್ಲಿ ರೂಪಿಸಲಾದ ಬೃಹತ್ ಪ್ರಮಾಣದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಾಗ ನಾವು ಉತ್ತಮ ಫಲಿತಾಂಶವನ್ನು ಪಡೆಯಲು ಹೇಗೆ ಸಾಧ್ಯವಾಗುತ್ತದೆ? ಅನುಷ್ಠಾನಗೊಳಿಸುವಾಗ ಆವಶ್ಯಕವಾಗಿ ಗಮನಿಸಬೇಕಾದ ಕೆಲವು ಮುಖ್ಯ ಅಂಶಗಳನ್ನು ಗಮನಿಸಲು ಲೇಖನವು ಎರಡು ಕಾರ್ಯಕ್ರಮಗಳನ್ನು ಅವಲೋಕಿಸುತ್ತದೆ. ಇಲ್ಲಿ ಗುರುತಿಸಲಾದ ಕೆಲವು ಅಂಶಗಳು ಉಳಿದ ಯೋಜನೆ–ಕಾರ್ಯಕ್ರಮಗಳ ಅನುಷ್ಠಾನದಲ್ಲಿಯೂ ಅನ್ವಯವಾಗುತ್ತವೆ.

ವೈದ್ಯಕೀಯ ಸೌಲಭ್ಯದ ಲಭ್ಯತೆಯಿಲ್ಲದಿರುವುದು, ಸೋಂಕು ತಡೆಗಟ್ಟಲು ಪ್ರತಿರಕ್ಷಣೆ ಒದಗಿಸುವಿಕೆ ವ್ಯವಸ್ಥೆ ಪರಿಣಾಮಕಾರಿಯಾಗಿಲ್ಲದಿರುವುದು; ಜನನ ಪೂರ್ವ ಮತ್ತು ಜನನಾನಂತರದ ಸೇವೆ ಮತ್ತು ತುರ್ತು ಸೇವೆಗಳ ಸೌಕರ್ಯವಿಲ್ಲದಿರುವುದು; ಸಾಂಸ್ಥಿಕ ಸೇವೆಗಳು ಕಳಪೆಯಾಗಿರುವುದು; ಭಾರಿಪ್ರಮಾಣದ ಕಾಯಿಲೆ ಹೊರೆ; ಪೌಷ್ಟಿಕ ಆಹಾರ, ಆರೋಗ್ಯ, ಶಿಕ್ಷಣಗಳ ಸೌಲಭ್ಯಗಳ ಕೊರತೆ; ಚಿಕ್ಕವಯಸ್ಸಿನಲ್ಲಿಯೇ ಮದುವೆ ಮತ್ತು ಮಗುವಾಗುವುದು; ಮಹಿಳೆಯರಲ್ಲಿ ರಕ್ತಹೀನತೆ, ನವಜಾತ ಶಿಶುಗಳ ತೂಕ ಕಡಿಮೆಯಾಗಿರುವುದು; ಪ್ರತಿಗಾಮಿ ಸಾಂಸ್ಕೃತಿಕ ಆಚರಣೆಗಳು, ಕಳಪೆ ಗುಣಮಟ್ಟದ ನೀರು, ಕಳಪೆ ಶೌಚ ವ್ಯವಸ್ಥೆ ಇತ್ಯಾದಿಗಳು ಅಪೌಷ್ಟಿಕತೆಗೆ ಎಡೆಮಾಡಿಕೊಡುತ್ತವೆ. ಅಪೌಷ್ಟಿಕತೆಯ



ಸಮಸ್ಯೆಯನ್ನು ಎದುರಿಸಲು ಅನೇಕ ನೆಲೆಯ ಕ್ರಮ ಅಗತ್ಯವೆಂದು ಗುರುತಿಸುತ್ತಲೇ, ಈಗಾಗಲೇ ಇರುವ ಐಸಿಡಿಎಸ್ ಮತ್ತು ಎನ್‌ಆರ್‌ಎಚ್‌ಎಂ ಯೋಜನೆಗಳು ಈ ನಿಟ್ಟಿನಲ್ಲಿ ಮಹತ್ವದ ಪಾತ್ರ ವಹಿಸಬಲ್ಲವು ಎಂಬುದನ್ನು ಮರೆಯಬಾರದಾಗಿದೆ. 2014–15ರ ಆಯವ್ಯಯದಲ್ಲಿ ಪ್ರಸ್ತಾಪಿಸಲಾದಂತೆ, ಐಸಿಡಿಎಸ್ ಕಾರ್ಯಕ್ರಮವನ್ನು ಆಮೂಲಾಗ್ರವಾಗಿ ಪರಿಷ್ಕರಿಸಿ ಸಮರ್ಥಗೊಳಿಸಲಾಗಿದ್ದು ಯೋಜನೆ ಇದೀಗ ಸಾರ್ವತ್ರಿಕವಾಗಿ ಲಭ್ಯವಿದೆ.

2014–15 ಆಯವ್ಯಯದಲ್ಲಿ ಪ್ರಸ್ತುತ ವರ್ಷಕ್ಕೆ ಐಸಿಡಿಎಸ್ ಯೋಜನೆಗಾಗಿ ರೂ. 18,195.00 ಕೋಟಿಗಳನ್ನು ಮೀಸಲಿರಿಸಲಾಗಿದೆ. ಕಾರ್ಯಕ್ರಮವನ್ನು ಸಾರ್ವತ್ರೀಕರಿಸಲು ಸರ್ಕಾರವು ಸಂಯೋಜಿತವಾಗಿ 7076 ಯೋಜನೆಗಳಿಗೆ ಅಂಗೀಕಾರ ನೀಡಿದೆ. ಮತ್ತು ಇಪ್ಪತ್ತು ಸಾವಿರ ಬೇಡಿಕೆಯಾಧಾರಿತ ಅಂಗನವಾಡಿಗಳನ್ನೂ ಒಳಗೊಂಡಂತೆ ಹದಿನಾಲ್ಕು ಲಕ್ಷ ಅಂಗನವಾಡಿ/ಮಿನಿ ಅಂಗನವಾಡಿಗಳನ್ನು ಯೋಜನೆಯ ವ್ಯಾಪ್ತಿಗೆ ತರಲಾಗಿದೆ. ಐಸಿಡಿಎಸ್ ಕಾರ್ಯಕ್ರಮವನ್ನು ಇದೀಗ ರಾಷ್ಟ್ರೀಯ ಪೌಷ್ಟಿಕತೆ ಮಿಶನ್‌ನೊಂದಿಗೆ (ಎನ್‌ಎನ್‌ಎಂ) ವಿಲೀನಗೊಳಿಸಲಾಗಿದೆ. ಮಾತ್ರವಲ್ಲ, ಐಸಿಡಿಎಸ್ ಸಾಂಸ್ಥಿಕ ಸಂವರ್ಧನೆ ಹಾಗೂ ಪೌಷ್ಟಿಕತೆ ಸುಧಾರಣಾ ಕಾರ್ಯಕ್ರಮಕ್ಕೆ (ಐಎಸ್‌ಎಸ್‌ಎನ್‌ಐಪಿ) ವಿಶ್ವಬ್ಯಾಂಕ್ ಸಹಯೋಗ ಒದಗಿಸಲಿದೆ. ಒಟ್ಟಿನಲ್ಲಿ, 2014ರ ವಾರ್ಷಿಕದಲ್ಲಿ ಇದಕ್ಕಾಗಿ ರೂ.18,691 ಕೋಟಿ ಒದಗಿಸಲಾಗಿದೆ. (ರೂ.300.00 ಕೋಟಿ ರಾಷ್ಟ್ರೀಯ ಪೌಷ್ಟಿಕತೆ ಮಿಶನ್‌ಗೆ; ರೂ.196 ಕೋಟಿಗಳು ಐಎಸ್‌ಎಸ್‌ಎನ್‌ಐಪಿಗಾಗಿ ಮೀಸಲಿರಿಸಲಾಗಿದೆ.)

ಈ ಹಿಂದಿನ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಮಿಶನ್ ಕಾರ್ಯಕ್ರಮವನ್ನೇ ರಾಷ್ಟ್ರೀಯ ಆರೋಗ್ಯ ಮಿಶನ್ (ಎನ್‌ಎಚ್‌ಎಂ) ಆಗಿ ಮರುನಾಮಕರಣ ಮಾಡಲಾಗಿದೆ.

ಈ ಮರುನಾಮಕರಣದ ಹಿಂದೆ, ಜನಸಾಮಾನ್ಯರ ಆರೋಗ್ಯ ಅಗತ್ಯಗಳಿಗೆ ಸಂವೇದನಾಶೀಲವಾಗಿರುತ್ತ, ಸರ್ವರಿಗೂ ತಲುಪಬಲ್ಲ, ಗುಣಾತ್ಮಕವಾದ ಆರೋಗ್ಯ ಸೇವೆ ಒದಗಿಸುವ ಹೊಣೆಗಾರಿಕೆಯನ್ನು ಹೊತ್ತುಕೊಳ್ಳುವ ಧ್ಯೇಯೋದ್ದೇಶಗಳು ಅಡಕವಾಗಿವೆ. ಶಿಶು ಮತ್ತು ಬಾಣಂತಿಯರ ಮರಣ ಪ್ರಮಾಣ ತಗ್ಗಿಸುವಿಕೆ ಮತ್ತು ಜನಸಂಖ್ಯಾ ಸ್ಥಿರತೆ ಸಾಧಿಸುವ ನಿಟ್ಟಿನಲ್ಲಿ ಗಮನಾರ್ಹ ಉಪಕ್ರಮಗಳನ್ನು ರೂಪಿಸಲಾಗಿದೆ. ಸೋಂಕು ಪ್ರತಿರಕ್ಷಣೆಯನ್ನು ಸಜ್ಜುಗೊಳಿಸಲಾಗಿದೆ. ಜತೆಗೆ, ಮಾನವ ಸಂಪನ್ಮೂಲ ಹೆಚ್ಚಿಸುವುದರೊಂದಿಗೆ, ವೈದ್ಯರು, ದಾದಿಯರು, ವೈದ್ಯಕೀಯ ಸಹಾಯಕರ ತರಬೇತಿಗಳಿಗೆ ಗಮನ ನೀಡಲಾಗಿದೆ. ಈಗಾಗಲೇ ಎಲ್ಲ ರಾಜ್ಯಗಳು ಈ ಮಿಶನ್‌ಗೆ ಚಾಲನೆ ನೀಡಿದ್ದು, ಹೆಚ್ಚುವರಿ ನಿರ್ವಹಣೆ, ಹಣಕಾಸು ಮತ್ತು ಯೋಜನಾ ಸಿದ್ಧಪಡಿಸುವಿಕೆಗೆ ಎಲ್ಲ ನೆಲೆಯಲ್ಲಿ ಬೆಂಬಲ ವ್ಯವಸ್ಥೆ ನಿರ್ಮಿಸಿ ಆರೋಗ್ಯ ಸೇವೆಗಳ ವಿತರಣಾ ವ್ಯವಸ್ಥೆಯನ್ನು ಪುನರುಜ್ಜೀವಗೊಳಿಸಲಾಗಿದೆ. ಎಲ್ಲ ಹಳ್ಳಿಗಳಲ್ಲಿಯೂ ಮಾನ್ಯತೆ ಪಡೆದ ಸಾಮಾಜಿಕ ಆರೋಗ್ಯ ಕಾರ್ಯಕರ್ತರ–ಆಶಾ–ಮೂಲಕ ಅನಾರೋಗ್ಯಕ್ಕೆ ತುತ್ತಾಗಬಲ್ಲ ಸಮುದಾಯಗಳಿಗೆ ಆರೋಗ್ಯ ಶಿಕ್ಷಣ ಮತ್ತು ಪ್ರಚಾರ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಆಯುಷ್ ವ್ಯವಸ್ಥೆಯನ್ನು ಎನ್‌ಆರ್‌ಎಚ್‌ಎಂನೊಂದಿಗೆ ಸಂಯೋಜನೆಗೊಳಿಸಲಾಗಿದೆ.

### ಉತ್ತಮ ಫಲಿತಾಂಶ ಹೊಮ್ಮುವಂತೆ ಕಾರ್ಯಕ್ರಮಗಳ ಅನುಷ್ಠಾನ

ಐಸಿಡಿಎಸ್ ಮತ್ತು ಎನ್‌ಎಂಎಚ್‌ಗಳ ಮೂಲಕ ಗರಿಷ್ಠ ಫಲಿತಾಂಶ ಸಾಧಿಸುವ ಬಗೆ ಹೇಗೆ?

**ಸ್ಥಳ ವಿಸ್ತಾರತೆಯ ನಕ್ಷೆ:** ಯಾವುದೇ ಗ್ರಾಮ ಅಥವ ಕೊಳಚೆ ಪ್ರದೇಶದಲ್ಲಿ ಅಂಗನವಾಡಿ ಕೇಂದ್ರ ಇರುವ ಸ್ಥಳವನ್ನು ಗುರುತು ಮಾಡುವ ಮೂಲಕ ಯಾರಿಗೆ ಸೇವೆ ಲಭ್ಯವಾಗುತ್ತಿದೆ, ಯಾರು ಸೇವೆಯಿಂದ ವಂಚಿತರಾದರು ಎಂದು ಕಂಡುಕೊಳ್ಳುವುದು ಸುಲಭವಾಗುತ್ತದೆ. ಒಂದೊಮ್ಮೆ ಅಂಗನವಾಡಿಯು ಮೇಲ್ಜಾತಿ ವರ್ಗಗಳು ವಾಸಿಸುವ ಸ್ಥಳದಲ್ಲಿದ್ದರೆ, ಅಲ್ಪಸಂಖ್ಯಾತರು, ಹಿಂದುಳಿದ ವರ್ಗಗಳು ಮತ್ತು ದಲಿತರು ಹಾಗೂ ಬುಡಕಟ್ಟು ಸಮುದಾಯಗಳ ಬಡ



ಮಕ್ಕಳು ಆ ಸೇವೆಯನ್ನು ಪಡೆದುಕೊಳ್ಳಲು ಅಡೆತಡೆ ಉಂಟಾಗುತ್ತದೆ. ಹಾಗೆಂದೇ, ಸ್ಥಳವಿಸ್ತಾರತೆಯ ನಕ್ಷೆಯು ಕೇವಲ ಬ್ಲಾಕ್, ಜಿಲ್ಲಾ ಮಟ್ಟದಲ್ಲಿ ಮಾತ್ರವಲ್ಲದೆ, ಪ್ರತಿ ಗ್ರಾಮ ಮಟ್ಟದಲ್ಲಿಯೂ ಅಗತ್ಯವಾಗುತ್ತದೆ. ಜನಸಂಖ್ಯೆಯನ್ನು ಆಧರಿಸಿ ಗ್ರಾಮ ಅಥವ ಕೊಳಚೆ ಪ್ರದೇಶದಲ್ಲಿ ಅಂಗನವಾಡಿ ನಿಯಮದಂತೆ ಪ್ರಸ್ತುತ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ? ಒಂದೊಮ್ಮೆ ಅಂಗನವಾಡಿ ನಿಯಮದಂತೆ ಕೇಂದ್ರದ ಸಂಖ್ಯೆಗಳು ಇಲ್ಲದೆ ಹೋದಲ್ಲಿ ಬಡವರು ವಾಸಿಸುವ ಪ್ರತಿ ಗ್ರಾಮ/ಕೊಳಚೆ ಪ್ರದೇಶದಲ್ಲಿ ಆದ್ಯತೆಯ ಮೇರೆಗೆ ಕೇಂದ್ರಗಳನ್ನು ತೆರೆಯಬೇಕು. ಇದೇ ರೀತಿ, ಅಂಗನವಾಡಿ ಉಪಕೇಂದ್ರಗಳು, ಪ್ರಾಥಮಿಕ ಆರೋಗ್ಯಕೇಂದ್ರ (ಪಿಎಚ್‌ಎಸ್) ಮತ್ತು ಆರೋಗ್ಯಸೇವೆ ಲಭ್ಯತೆ ಇರುವ ಸ್ಥಳಗಳ ನಕ್ಷೆಯನ್ನು ಆವಶ್ಯಕವಾಗಿ ಸಿದ್ಧಪಡಿಸಿದಾಗ ಕುಂದುಕೊರತೆಗಳನ್ನು ನಿವಾರಿಸಬಹುದು.

**ಅತಿ ಒತ್ತಡ ಅಥವ ತೀವ್ರ ಸಂಕಷ್ಟಕ್ಕೆ ಸಿಲುಕಿದ ಬ್ಲಾಕ್ ಮತ್ತು ಪಂಚಾಯಿತಿಗಳು:** ಪ್ರತಿ ಪಂಚಾಯಿತಿ, ಬ್ಲಾಕ್ ಮತ್ತು ಜಿಲ್ಲೆಗಳಲ್ಲಿ ಅತಿ ಒತ್ತಡಕ್ಕೆ ಸಿಲುಕಿದ ಸ್ಥಳಗಳತ್ತ ಗಮನ ಕೇಂದ್ರೀಕರಿಸಿ, ಸಂಪನ್ಮೂಲವನ್ನು ಆ ಸ್ಥಳಗಳಿಗೆ ಬಳಸುವುದು ಮುಖ್ಯವಾಗಿದೆ ಸಂಕಷ್ಟ ಎದುರಿಸುತ್ತಿರುವ ಬ್ಲಾಕ್‌ಗಳಲ್ಲಿ ಗಮನ ಕೇಂದ್ರೀಕರಿಸಿ ಪ್ರಕ್ರಿಯೆಗಳನ್ನು ಕೈಗೊಳ್ಳದಿದ್ದರೆ ಅಪೌಷ್ಟಿಕತೆ ಅಥವ ನಿರ್ದಿಷ್ಟ ಸ್ವರೂಪದ ಕಾಯಿಲೆಯ ನಿಯಂತ್ರಣ ಇಲ್ಲವೆ ಸಂಪೂರ್ಣನಿವಾರಣೆ ಅಸಾಧ್ಯವಾಗುತ್ತದೆ. ಉದಾಹರಣೆಗೆ, ಕುಷ್ಠರೋಗ ನಿಯಂತ್ರಣ, ನಿವಾರಣೆಯನ್ನು ತೆಗೆದುಕೊಳ್ಳುವುದಾದರೆ, ರಾಷ್ಟ್ರೀಯ ನೆಲೆಯಲ್ಲಿ 2005ರಲ್ಲಿ 1.8/10,000 ಇದ್ದುದನ್ನು 1/10,000 ಕ್ಕೆ ಸಾಧಿಸಲಾಗಿದೆ. ಆದಾಗ್ಯೂ, ಪ್ರತಿ ಬ್ಲಾಕ್‌ನಲ್ಲಿ ಈ ಸಾಧನೆಯನ್ನು ಮಾಡಲಾಗಿಲ್ಲ. ಇದೇರೀತಿ, ಹೆಚ್ಚುತ್ತಿರುವ ಔಷಧಿ ನಿರೋಧಕ ಕ್ಷಯರೋಗವನ್ನು ನಿಯಂತ್ರಿಸಬೇಕಿದೆ. ಪ್ರತಿ ಪ್ರಕರಣವನ್ನು, ಅದರಲ್ಲು ನಗರದ ಕೊಳಚೆ ಪ್ರದೇಶಗಳಲ್ಲಿನ ಪ್ರಕರಣಗಳ ನಿರ್ದಿಷ್ಟ ಸ್ಥಳವನ್ನು ಪತ್ತೆ ಹಚ್ಚಿ ಚಿಕಿತ್ಸೆ ಒದಗಿಸುವುದು ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿರುವವರನ್ನು ಗುರುತಿಸುವುದು ಪ್ರಮುಖ ಕ್ರಿಯೆಯಾಗಿದೆ. ಜನವಿದೂರ ಮತ್ತು ಕಠಿಣ ಭೂಪ್ರದೇಶಗಳಲ್ಲಿ ವಾಸಿಸುತ್ತಿರುವ ಸಮುದಾಯಗಳ ಆರೋಗ್ಯ ಅಗತ್ಯಗಳನ್ನು ತಲುಪಿಸುವ ಪ್ರಯತ್ನವಾಗಿ ಅಸ್ಸಾಂ ಮತ್ತು ಕೇರಳಗಳಲ್ಲಿ ಕೈಗೊಂಡ ಬೋಟ್ ಕ್ಲಿನಿಕ್ ಪರಿಕಲ್ಪನೆ ಹೊಸ ಮಾದರಿಯದ್ದಾಗಿದೆ. ಜನವಿದೂರ ಪ್ರದೇಶಗಳಲ್ಲಿ ಸಂಚಾರಿ ವೈದ್ಯಕೀಯ ಸೇವೆ ತ್ವರಿತವಾಗಿ ಮತ್ತು ಪರಿಣಾಮಕಾರಿಯಾಗಿ ಅಗತ್ಯ ಸೇವೆಯನ್ನು ನೀಡಬಲ್ಲುದು. ಆದಾಗ್ಯೂ, ಈಸೇವೆ ಒದಗಿಸುವಪ್ರಯತ್ನಗಳೇನೂ ಆಶಾದಾಯವಾಗಿಲ್ಲ.

**ಸಂಚಾರಿ ವೈದ್ಯಕೀಯ ಸೇವೆ ಘಟಕ:** ಆಂಧ್ರ: 488, ತಮಿಳುನಾಡು:385, ಒಡಿಶಾ: 329 (ಗ್ರಾಮೀಣ ಆರೋಗ್ಯ ಅಂಕಿಅಂಶ:20112).

**ಮೂಲಭೂತ ಸೌಕರ್ಯ:** ಅಂಗನವಾಡಿಗಳಿಗೆ ಒದಗಿಸುವ ಕಳಪೆ ಮೂಲಭೂತ ಸೌಕರ್ಯ ಅಥವ ಕಳಪೆ ಸ್ಥಳ ಉದ್ದೇಶ ಸಾಧನೆಗೆ ಮಾರಕವಾಗಿವೆ. ಶುದ್ಧ ನೀರು, ಶೌಚ ವ್ಯವಸ್ಥೆಯಿಲ್ಲದ ಕೊಳಕು, ತೆರೆದ ಒಳ ಚರಂಡಿಗಳಿರುವೆಡೆ ವರಾಂಡ ಮುಂತಾದ ಸ್ಥಳಗಳಲ್ಲಿ ಅಂಗನವಾಡಿಗಳನ್ನು ನಡೆಸುವುದು ನಿರರ್ಥಕ. ಅಂಗನವಾಡಿಯ ಸುತ್ತಮುತ್ತಲಿನ ಪರಿಸರ ಶುಚಿಯಾಗಿರುವುದು, ಆಟಿಕೆ, ಆಟಿಕೆ ಪೆಟ್ಟಿಗೆ, ತೂಕದ ಸ್ಕೇಲ್, ಅಳತೆ ಕೋಷ್ಟಕಗಳು ಇರುವುದು ಸೇವೆಯ ದೃಷ್ಟಿಯಿಂದ ಅತ್ಯಗತ್ಯವಾಗಿದೆ. ಅಂಗನವಾಡಿಗಳನ್ನು "ಸಂತಸದಾಯಕ ಕಲಿಕೆ" ಯ ಕೇಂದ್ರಗಳನ್ನಾಗಿಸಲು ಅವನ್ನು ಪುನರ್‌ಸಂಘಟಿಸುವ ಪ್ರಯತ್ನಗಳನ್ನು ಹನ್ನೆರಡನೆಯ ಯೋಜನೆಯಲ್ಲಿ ಮಾಡಲಾಗುತ್ತಿದೆ. ಈ ನಿಟ್ಟಿನಲ್ಲಿ, ಅಂಗನವಾಡಿಗಳನ್ನು ಸರ್ಕಾರಿ ಶಾಲೆಗಳಿಗೆ ಸ್ಥಳಾಂತರ ಮಾಡಿ, ಉತ್ತಮ ಮೂಲಭೂತ ಸವಲತ್ತು ನೀಡುವ ಸಿದ್ಧತೆಗಳು ನಡೆಯುತ್ತಿವೆ (ಹನ್ನೆರಡನೆಯ ಪಂಚವಾರ್ಷಿಕ ಯೋಜನೆ, ಸಂಪುಟ–ಮೂರು:190). ಅಂಗನವಾಡಿ ಸೇವೆಯನ್ನು ವಿತರಣಾ ಸೇವೆಯೆಂದು ಪರಿಗಣಿಸುವುದಕ್ಕಿಂತ ಬೇಡಿಕೆಯಾಧಾರಿತ ಸೇವೆಯಂತೆ ಗ್ರಹಿಸಲು ಈ ಹೆಜ್ಜೆ ಮುಖ್ಯವಾಗಿದೆ.

ಒಂದೊಮ್ಮೆ ಅಂಗನವಾಡಿಯನ್ನು ಖಾಯಂ ಸ್ಥಳದಲ್ಲಿ ಶುಚಿಯಾಗಿರುವೆಡೆ ಆರಂಭಿಸಲು ಸಾಧ್ಯವಿಲ್ಲದಿದ್ದರೆ ಸೂಕ್ತ ರೀತಿಯಲ್ಲಿ ಬಾಡಿಗೆಯನ್ನು ಪಾವತಿಸುವಂತೆ ಹಣಕಾಸು ಮಂಜೂರು ಮಾಡಬೇಕು. ಅದೇರೀತಿ, ತೀವ್ರ ಸಂಕಷ್ಟದಲ್ಲಿರುವ ಜಿಲ್ಲೆ ಮತ್ತು ಬ್ಲಾಕ್‌ಗಳಲ್ಲಿ ಆರೋಗ್ಯಸೇವೆಗಳ ಸೌಲಭ್ಯವಿಲ್ಲದಿರುವ ಹಿನ್ನೆಲೆಯಲ್ಲಿ ಉಪಕೇಂದ್ರಗಳು ಮತ್ತು ಪ್ರಾಥಮಿಕ ಆರೋಗ್ಯಕೇಂದ್ರಗಳು ಕಾರ್ಯನಿರ್ವಹಿಸಲು ಅನುವು ಮಾಡಿಕೊಡಬೇಕು. ದೇಶಾದ್ಯಂತ ಎಲ್ಲ ಭೌಗೋಳಿಕ ಪರಿಸರದಲ್ಲಿಯೂ ವೈದ್ಯರು, ದಾದಿಯರು ಮತ್ತು ವೈದ್ಯಕೀಯ ಸಿಬ್ಬಂದಿಯ ಕೊರತೆ ಕಾಯಿಲೆಗಳನ್ನು ಉಲ್ಬಣಗೊಳಿಸಿದೆ.

ವ್ಯಕ್ತಿ ಅನಾರೋಗ್ಯವಾಗಿರುವ ಸಂದರ್ಭದಲ್ಲಿ ಸಾರ್ವಜನಿಕ ಆರೋಗ್ಯ ಸೇವಾ ಸೌಕರ್ಯ ಲಭ್ಯತೆ ಇಲ್ಲದಿದ್ದರೆ ಅಂಥವರ ಮೇಲೆ ಹೆಚ್ಚುವರಿ ಆರ್ಥಿಕ ಹೊರೆ ಬೀಳುತ್ತದೆ. ಮೂಲಭೂತಸೌಕರ್ಯ



ಮತ್ತು ಔಷಧಗಳ ಅಲಭ್ಯತೆಯನ್ನು ಸರಿಪಡಿಸಬೇಕಾಗಿದೆ. ಹಣಸಂದಾಯ ಮಾಡುವ ಸಾಮರ್ಥ್ಯವಿಲ್ಲವೆಂಬ ಕಾರಣಕ್ಕಾಗಿ ಯಾವೊಬ್ಬ ವ್ಯಕ್ತಿಯೂ ವೈದ್ಯಕೀಯ ಚಿಕಿತ್ಸೆ ಪಡೆಯದೆ ಹೋಗುವ ಸನ್ನಿವೇಶವಿರಬಾರದು. ಸರ್ಕಾರಗಳು ಪ್ರತಿಯೊಬ್ಬರಿಗೂ, ವಿಶೇಷವಾಗಿ ದುರ್ಬಲ ಸಮುದಾಯಗಳಿಗೆ ಗುಣಮಟ್ಟದ ಆರೋಗ್ಯ ಸೇವೆ ಒದಗಿಸುವ (ನಿಯಂತ್ರಕ, ಉತ್ತೇಜಕ ಮತ್ತು ಪರಿಹಾರಕ) ಹೊಣೆಗಾರಿಕೆಯನ್ನು ಹೊತ್ತುಕೊಳ್ಳಬೇಕು.

**ಕಾರ್ಯಭಾರ, ಪ್ರೇರೇಪಣೆ ಮತ್ತು ತರಬೇತಿ:** ಐಸಿಡಿಎಸ್ ಮತ್ತು ಎನ್‌ಆರ್‌ಎಚ್‌ಎಂ ಯೋಜನೆಗಳ ಯಶಸ್ಸಿಗೆ ಪ್ರೇರೇಪಿತ ಮತ್ತು ನಿಷ್ಠೆಯನ್ನು ಹೊಂದಿರುವ ಸಿಬ್ಬಂದಿ ಅತ್ಯಂತ ಪ್ರಮುಖ ಅಂಶವಾಗಿದೆ. ಖಾಲಿಹುದ್ದೆ ತುಂಬುವುದು, ಕೆಲಸದ ಹೊರೆಯನ್ನು ಸಮಪ್ರಮಾಣದಲ್ಲಿ ಹಂಚುವುದು, ಬೆಂಬಲ ಒದಗಿಸುವ ಮೇಲುಸ್ತುವಾರಿಯನ್ನು ನೀಡುವುದು, ಶೋಷಣೆ ಮತ್ತು ಘಾಸಿಗೊಳಗಾಗಬಹುದಾದ ಅಂಶಗಳನ್ನು ನಿವಾರಿಸುವುದು ಕೂಡ ಅಗತ್ಯವಾಗಿದೆ. ಐಸಿಡಿಎಸ್ ಅಧಿಕಾರಿಗಳನ್ನು, ಮೇಲ್ವಿಚಾರಕರನ್ನು, ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕರನ್ನು ಅವರದಲ್ಲದ ಕಾರ್ಯಕ್ಕಾಗಿ ನಿಯೋಜಿಸುವುದು ಅವರು ಮಾಡಬೇಕಿರುವ ಪ್ರಾಥಮಿಕ ಕರ್ತವ್ಯವನ್ನು ಚ್ಯುತಿಗೊಳಿಸುತ್ತಿವೆ. ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಸೇವೆಯನ್ನು ಒದಗಿಸಬೇಕಾದ ವೈದ್ಯ, ದಾದಿ, ಆರೋಗ್ಯಕಾರ್ಯಕರ್ತರು, ಸಹಾಯಕ ದಾದಿ ಮತ್ತು ಪ್ರಸೂತಿ ಸಹಾಯಕಿಯರ ಅಲಭ್ಯತೆಯ ಕಡೆಗೆ ಗಮನ ನೀಡಬೇಕಿದೆ. ಐಸಿಡಿಎಸ್ ಕಾರ್ಯಕ್ರಮವು ಅಲ್ಲಿನ ಪ್ರತಿ ಮೇಲುಸ್ತುವಾರಿ ಅಧಿಕಾರಿ ವಿಸ್ತೃತ ಭೌಗೋಳಿಕ ಪರಿಸರದಲ್ಲಿ ಹರಡಿಕೊಂಡ 20–25 ಅಂಗನವಾಡಿ ಕೇಂದ್ರಗಳ ನಿರ್ವಹಣೆಯನ್ನು ಉಸ್ತುವಾರಿ ವಹಿಸಬಹುದು ಎಂದು ಗ್ರಹಿಸುತ್ತದೆ. ಜನವಿದೂರವಾಗಿ, ಸಾರಿಗೆ ವ್ಯವಸ್ಥೆಯಿಲ್ಲದೆಡೆ ಕೂಡ ಈ ಅಧಿಕಾರಿಗಳು ನಿಯಮಿತವಾಗಿ ಭೇಟಿ ನೀಡುತ್ತಾರೆಂಬ ನಂಬಿಕೆಯ ವಿನ್ಯಾಸದಲ್ಲಿಯೇ ಕೊರತೆಗಳಿದ್ದು, ಆ ಕಾರಣವಾಗಿಯೇ ಅಪೌಷ್ಟಿಕತೆ ನಿವಾರಣೆ ಫಲಿತಾಂಶ ಕಳವಳಕಾರಿಯಾಗಿದೆ. ಜನವಿದೂರ ಸ್ಥಳಗಳಲ್ಲಿ ಕಾರ್ಯನಿರ್ವಹಿಸುತ್ತ ಉತ್ತಮ ಸಾರಿಗೆ ಸಂಪರ್ಕ ಹೊಂದಿಲ್ಲದ ಅಂಗನವಾಡಿಗಳಿಗೆ ಭೇಟಿನೀಡುವ ಅಧಿಕಾರಿಗಳಿಗೆ ಸಾರಿಗೆ ವ್ಯವಸ್ಥೆ ಮತ್ತು ಸುರಕ್ಷತೆಯನ್ನು ಒದಗಿಸಬೇಕು. ಈ ಯೋಜನೆ ಯಶಸ್ವಿಯಾಗಿ ಅನುಷ್ಠಾನಗೊಳ್ಳಬೇಕೆಂದರೆ, ಮೇಲುಸ್ತುವಾರಿ ಅಧಿಕಾರಿಗಳಿಗೆ ವಹಿಸಿರುವ ಅಂಗನವಾಡಿ ಸಂಖ್ಯೆಗಳನ್ನು ಗಮನಾರ್ಹವಾಗಿ ಇಳಿಸಬೇಕು.

ಐಸಿಡಿಎಸ್ ಮತ್ತು ಎನ್‌ಆರ್‌ಎಚ್‌ಎಂ ಸಿಬ್ಬಂದಿಯ ಸಾಮರ್ಥ್ಯ, ಕೌಶಲಾಭಿವೃದ್ಧಿಗೆ ನಿಯಮಿತ ತರಬೇತಿಗಳನ್ನು ನೀಡಬೇಕು.

**ಸ್ವಯಂಸೇವಕ ಕಾರ್ಯ ಮತ್ತು ಕಡಿಮೆ ಸಂಭಾವನೆ:** ಸ್ವಯಂ ಸೇವಕರು

ಎಂದು ಕರೆಯಲಾಗುವ ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರು ಮತ್ತು ಆಶಾ ಕಾರ್ಯಕರ್ತೆಯರ ಮೇಲೆ ಐಸಿಡಿಎಸ್ ಮತ್ತು ಎನ್ಆರ್ಎಚ್ಎಂ ಸೇವಾ ವ್ಯವಸ್ಥೆಯ ದಕ್ಷ ವಿತರಣೆ ಅವಲಂಬಿತವಾಗಿದೆ. ಅವರಿಗೆ ಗೌರವ ಸಂಭಾವನೆಯನ್ನು ನೀಡಲಾಗುತ್ತಿದ್ದು ಕೆಲಸದ ಅಸುರಕ್ಷತೆ ಅನುಭವಿಸುತ್ತಿದ್ದಾರೆ. ಐಸಿಡಿಎಸ್‌ನ ಪರಿಣಾಮಕಾರಿ ಅನುಷ್ಠಾನಕ್ಕೆ, ಸುದೀರ್ಘಕಾಲದ ಬೇಡಿಕೆ ಈಡೇರಿಕೆ ಮತ್ತು ಲಿಂಗ ಸಮಾನತೆ ಸಾಧನೆಗೆ ಮೇಲಿನ ಎಲ್ಲ ಸ್ವಯಂಸೇವಕರ ಬೇಡಿಕೆಗಳನ್ನು ನೆರವೇರಿಸಲೇಬೇಕಿದೆ.

**ವಿಸ್ತರಣೆ ಪ್ರಮಾಣ:** ಸಮುದಾಯಗಳು ಅಂಗನವಾಡಿ ಅಥವ ಪ್ರಾಥಮಿಕ ಆರೋಗ್ಯಕೇಂದ್ರಗಳಿಗೆ ಬರುತ್ತಾರೆಂದು ಭಾವಿಸುವುದು ಸೂಕ್ತವಲ್ಲ. ಸಂಬಂಧಿಸಿದ ಜನರನ್ನು ತಲುಪಲು ಮಾಡುವ ಪ್ರಯತ್ನಗಳು ಬೇರೆಯದೇ ಪರಿಣಾಮ ಬೀರಬಲ್ಲವು. ಛತ್ತೀಸಗಢ ಮತ್ತು ಒಡಿಶಾದಲ್ಲಿ ಸ್ಥಳೀಯ ಸಮುದಾಯವನ್ನು (ಮಿತಾನಿನ್ ಕಾರ್ಯಕ್ರಮ) ಆಯ್ಕೆಮಾಡಿ ಅವರಿಗೆ ಬ್ಲಾಕ್ ತಂಡ, ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕ ಆರೋಗ್ಯ ಸಿಬ್ಬಂದಿ ತರಬೇತಿ ಮತ್ತು ಸಹಕಾರವನ್ನು ನೀಡುವ ಮೂಲಕ ಅಪೌಷ್ಟಿಕತೆಯನ್ನು ಗಣನೀಯ ಪ್ರಮಾಣದಲ್ಲಿ ತಗ್ಗಿಸಲಾಗಿದೆ.

'ಮಿತಾನಿನ್ ಕಾರ್ಯಕ್ರಮದಲ್ಲಿ ನಿಜಕ್ಕೂ ಸಹಾಯಮಾಡಿರುವುದೆಂದರೆ ಅದರ ವಿಸ್ತರಣೆ ಪ್ರಮಾಣವನ್ನು ಪುನಾವ್ಯಾಖ್ಯಾನಿಸಿರುವುದೇ ಆಗಿದೆ. ಕೇಂದ್ರೀಕೃತ ದೃಷ್ಟಿಕೋನಕ್ಕೆ ಬದಲಾಗಿ ರಾಜ್ಯದ ಪ್ರತಿ ಕುಟುಂಬದ ಮನೆ ಬಾಗಿಲಿಗೇ ಸೇವೆ ಒದಗಿಸಲು ಇದರಿಂದ ಸಾಧ್ಯವಾಗಿದೆ.' ಆದ್ದರಿಂದಲೇ, ಐಸಿಡಿಎಸ್ ಮತ್ತು ಎನ್ಆರ್ಎಚ್ಎಂ ಅಧಿಕಾರಿಗಳು ಈ ಕಾರ್ಯಕ್ರಮಗಳ ನಿರ್ವಹಣೆ ಮತ್ತು ಬೆಂಬಲವನ್ನು ಒದಗಿಸಲು ಪಂಚಾಯಿತಿ ನೆಲೆಯಲ್ಲಿ ವಿಶ್ಲೇಷಣೆ, ಸಹಕಾರಗಳ ಕಾರ್ಯತಂತ್ರವನ್ನು ರೂಪಿಸಬೇಕಿದೆ. ಆ ಮೂಲಕ ಸಮುದಾಯಗಳಿಂದ ಬೇಡಿಕೆ ಪಡೆದು, ಎಲ್ಲ ನೆಲೆಯ ಸ್ವಯಂಸೇವಕರ ಪ್ರೇರೇಪಣೆಯಿಂದ ಸೇವೆಗಳ ವಿತರಣಾ ವ್ಯವಸ್ಥೆಯಲ್ಲಿ ಗಮನಾರ್ಹ ಪ್ರಗತಿ ಸಾಧಿಸಿ, ವಿಸ್ತರಣೆಯ ಪ್ರಮಾಣವನ್ನೂ ಹೆಚ್ಚಿಸಬಹುದಾಗಿದೆ.

**ಸಮುದಾಯಗಳ ಒಡೆತನ, ಸ್ಥಳೀಯ ಸಂಸ್ಥೆಗಳು ಮತ್ತು ಸಾರ್ವಜನಿಕ–ಖಾಸಗಿ ಸಹಭಾಗಿತ್ವ:** ಮಧ್ಯಪ್ರದೇಶದ ರಟ್ಲಂ ಜಿಲ್ಲೆಯಲ್ಲಿ ಐಸಿಡಿಎಸ್‌ಗೆ ಬೆಂಬಲ ಒದಗಿಸುತ್ತ ಅಪೌಷ್ಟಿಕತೆಯನ್ನು ನಿವಾರಿಸಲು ನಾಂದಿ ಪ್ರತಿಷ್ಠಾನವು ಬಚಪನ್ ಎಂಬ ಐದು ಕವಲುಗಳ ಮಾದರಿಯನ್ನು ಅನುಸರಿಸಿತು. ಐಸಿಡಿಎಸ್ ಸೇವೆಗಾಗಿ ಸಾರ್ವಜನಿಕರಲ್ಲಿ ಅರಿವು ಮೂಡಿಸಿ ಬೇಡಿಕೆ ಸೃಷ್ಟಿಸುವುದು; ಸಮುದಾಯ ಆಧಾರಿತ ನಿರ್ವಹಣಾ ಸಮಿತಿ ರಚಿಸುವುದು, ಏಕತಾ ಸಮೂಹ ಎಂಬ ಈ ಸಮಿತಿಯಲ್ಲಿ ಚುನಾಯಿತ ಪಂಚಾಯಿತಿ ಪ್ರತಿನಿಧಿಗಳು, ಗ್ರಾಮಮಟ್ಟದಲ್ಲಿ ಸರ್ಕಾರಿ ಸೇವೆ ಒದಗಿಸುವವರು ಮತ್ತು ಸ್ಥಳೀಯ ನಾಗರಿಕರನ್ನು ಸದಸ್ಯರನ್ನಾಗಿ ಆಯ್ಕೆ ಮಾಡುವುದು; ಮತ್ತು ದತ್ತಾಂಶ ಸಂಗ್ರಹ, ವಿಶ್ಲೇಷಣೆಗಳು ಸುಲಭಸಾಧ್ಯವಾಗಿಸಲು ಬಳಕೆದಾರ ಸ್ನೇಹಿ ಪರಿಕರವನ್ನು ಸೃಷ್ಟಿಸುವುದು; ಯೋಜನೆ, ಅನುಷ್ಠಾನ, ನಿರ್ವಹಣೆ, ಬೆಂಬಲ ವ್ಯವಸ್ಥೆ ದೃಢಪಡಿಸಲು' ಕುಂದುಕೊರತೆ ಗಮನಿಸಿ, ನಿವಾರಿಸಲು ಜಿಲ್ಲೆ, ಬ್ಲಾಕ್ ಮತ್ತು ಕ್ಲಸ್ಟರ್ ಮಟ್ಟದಲ್ಲಿ ಎಲ್ಲ ಇಲಾಖೆಗಳ ಸಂಯೋಜನೆ ಸಾಧಿಸುವುದು; ವಿವಿಧ ಹಂತಗಳ ಸೇವೆ ಒದಗಿಸಬೇಕಾದ ಸಂಸ್ಥೆಗಳೊಂದಿಗೆ ವ್ಯವಹರಿಸಲು ವೇದಿಕೆಗಳನ್ನು ನಿರ್ಮಿಸುವುದು; ಗ್ರಾಮಮಟ್ಟದಲ್ಲಿ ಬದಲಾವಣೆಯ ಹರಿಕಾರರ ಕಾರ್ಯಕರ್ತರನ್ನಾಗಿ ಗ್ರಾಮಮಿತ್ರರನ್ನು ಉತ್ತೇಜಿಸುವುದು. ಇದೇ ರೀತಿ, ಒಡಿಶಾದಲ್ಲಿ ಗ್ರಾಮಮಟ್ಟದಲ್ಲಿ ಐಸಿಡಿಎಸ್ ಕಾರ್ಯ ನಿರ್ವಹಣೆಗೆಂದು ಶೋಧಕ ಸಮಿತಿಗಳಿದ್ದು, ಆಹಾರಧಾನ್ಯಗಳನ್ನು ಸ್ಥಳೀಯವಾಗಿಯೇ ಖರೀದಿಸಲಾಗುತ್ತದೆ; ಗ್ರಾಮಸ್ಥರೇ–ಸ್ವಸಹಾಯಗುಂಪು, ಮಹಿಳಾ ಮಂಡಳಗಳ ಸದಸ್ಯರೇ ಬಿಸಿಯೂಟವನ್ನು ಸಿದ್ಧಪಡಿಸುತ್ತಾರೆ. ಈ ಪ್ರಕ್ರಿಯೆ ಕಾರ್ಯಕ್ರಮದ ಸಮುದಾಯ ಒಡೆತನಕ್ಕೆ ಬೆಂಬಲವನ್ನು ನೀಡುತ್ತದೆ.

**ಹಣಕಾಸು:** ಅಸಮರ್ಪಕ ಹಣಕಾಸು ಮತ್ತು ನಿಗದಿತ ವೇಳೆಗೆ ಹಣವನ್ನು ಒದಗಿಸದಿರುವುದು ಕಾರ್ಯದಕ್ಷತೆಯನ್ನು ಕುಗ್ಗಿಸುತ್ತದೆ. ಕೇಂದ್ರದಿಂದ ರಾಜ್ಯಸರ್ಕಾರಗಳಿಗೆ ಹಣದ ಹರಿವು ತಡವಾಗಲು ಅನೇಕ ಕಾರಣಗಳಿದ್ದು, ಅವುಗಳಲ್ಲಿ–ಹಣಕಾಸು ಪ್ರಸ್ತಾವನೆ ಸಲ್ಲಿಸುವುದು; ಬಳಕೆ ಮಾಡಿಕೊಂಡ ಕುರಿತು ಪ್ರಮಾಣಪತ್ರಗಳನ್ನು ಒದಗಿಸುವುದು ಕೂಡ ಸೇರಿವೆ. ಒಂದೊಮ್ಮೆ ರಾಜ್ಯಗಳು



ತಮ್ಮ ಪಾಲನ್ನು ನೀಡದಿದ್ದರೆ ಕೇಂದ್ರದ ಅನುದಾನವನ್ನು ಬಳಸಿಕೊಳ್ಳುವುದು ಸಾಧ್ಯವಾಗುವುದಿಲ್ಲ.

ಅಪೌಷ್ಟಿಕತೆ ಮತ್ತು ಸಾಂಕ್ರಾಮಿಕ ಹಾಗೂ ಸಾಂಕ್ರಾಮಿಕವಲ್ಲದ ಕಾಯಿಲೆಗಳು ದೇಶಕ್ಕೆ ಅತಿ ಅಪಾಯಕಾರಿಯಾಗಿವೆ. ಸಾರ್ವಜನಿಕ ಆರೋಗ್ಯ ಸೇವೆಯ ಲಭ್ಯತೆಯಿಲ್ಲದಿರುವುದು ಮತ್ತು ಸೌಲಭ್ಯಗಳ ಒದಗಿಸುವಿಕೆಯ ವಾಗ್ದಾನವನ್ನು ಪೂರ್ಣಗೊಳಿಸದಿರುವುದು ಈ ಅತಿ ಅಪಾಯದ ಸ್ಥಿತಿಗೆ ಕಾರಣವಾಗಿವೆ.

ಒಟ್ಟಾರೆ ಆರೋಗ್ಯಸೇವೆಗಾಗಿ ಮಾಡುವ ಖರ್ಚು ಮತ್ತು ಸರಾಸರಿ ರಾಷ್ಟ್ರೀಯ ಉತ್ಪನ್ನಕ್ಕೆ ಹೋಲಿಸಿದರೆ ದೇಶದಲ್ಲಿ ಸಾರ್ವಜನಿಕ ಆರೋಗ್ಯಕ್ಕಾಗಿ ಖರ್ಚು ಮಾಡುತ್ತಿರುವ ಹಣವು ವಿಶ್ವದಲ್ಲಿಯೇ ಅತ್ಯಂತ ಕಡಿಮೆ ಮಟ್ಟದ್ದಾಗಿದೆ. ಆರೋಗ್ಯಸೇವೆಗಾಗಿ ದೇಶವು ವ್ಯಯಿಸುವ ಒಟ್ಟು ವೆಚ್ಚವು ಕೇವಲ ಶೇಕಡ 19.67ರಷ್ಟಿದ್ದು, ಕುಟುಂಬಗಳು ತಾವಾಗಿಯೇ ಶೇ.71.13ರಷ್ಟನ್ನು ಆರೋಗ್ಯಸೇವೆಗಾಗಿ ಖರ್ಚು ಮಾಡುತ್ತಾರೆ. ಇದಕ್ಕೆ ವ್ಯತಿರಿಕ್ತವಾಗಿ ಬ್ರಿಟನ್‌ನಲ್ಲಿ ಆರೋಗ್ಯ ಸೇವೆಗಾಗಿ ಸರ್ಕಾರವು ಒಟ್ಟಾರೆಯಾಗಿ ಶೇ.87ರಷ್ಟನ್ನು ವ್ಯಯಿಸುತ್ತದೆ. ಫ್ರಾನ್ಸ್ ಶೇ.80ರಷ್ಟು, ಥೈಲ್ಯಾಂಡ್ ಶೇ. 64ರಷ್ಟು ಸರ್ಕಾರದ ವತಿಯಿಂದ ಖರ್ಚು ಮಾಡುತ್ತವೆ. ಶ್ರೇಷ್ಠ ಗುಣಮಟ್ಟದ ಆರೋಗ್ಯಸೇವೆ ಸರ್ವರಿಗೂ ಲಭ್ಯವಾಗಲು ಸರ್ಕಾರವು ತನ್ನ ಅನುದಾನವನ್ನು ಹೆಚ್ಚಿಸಲೇಬೇಕಿದೆ. ಎನ್ಆರ್ಎಚ್ಎಂ ರಚಿಸಿರುವುದೇ ಸಾರ್ವಜನಿಕ ಆರೋಗ್ಯಸೇವೆಗಳ ವಿತರಣಾ ವ್ಯವಸ್ಥೆಯನ್ನು ಸಮರ್ಥಗೊಳಿಸುವ ಮತ್ತು ಸಾರ್ವಜನಿಕ ಆರೋಗ್ಯಸೇವೆಯಲ್ಲಿ ಸರ್ಕಾರದ ಪಾಲನ್ನು ರಾಷ್ಟ್ರೀಯ ಸರಾಸರಿ ಉತ್ಪನ್ನದ 0.9% ರಿಂದ 2–3%ಕ್ಕೆ ಹೆಚ್ಚಿಸಲು ಅಗತ್ಯವಾಗುವ ವಿನ್ಯಾಸ ಬದಲಾವಣೆಗಳನ್ನು ಮಾಡಲು. ಅದೇನೇ

ಇದ್ದರೂ, ಕುಡಿಯುವ ಶುದ್ಧನೀರು, ಶುಚಿ–ಶೌಚ ಇತ್ಯಾದಿಗಳನ್ನು ಕೂಡ ಆರೋಗ್ಯದ ಭಾಗವಾಗಿ ಪರಿಗಣಿಸಬೇಕಾಗಿದೆ. ಬದ್ಧತೆಯ ದೃಷ್ಟಿಯಿಂದ ಈ ಹಣಕಾಸು ಒದಗಿಸುವಿಕೆ ಸಾಗಬೇಕಾದ ದಾರಿ ಬಹುದೂರವಿದೆ.

**ತಲುಪದ ಗುರಿ, ಮರೆಯಾದ ಆದ್ಯತೆಗಳು:** ಅಪೌಷ್ಟಿಕತೆಯ ನಿವಾರಣೆಗಾಗಿ ಗುರಿ ನಿಗದಿಪಡಿಸಿದ್ದಾಗ್ಯೂ ಐಎಂಆರ್, ಎಂಎಂಆರ್‌ಗಳನ್ನು ಸಾಧಿಸಲಾಗಿಲ್ಲ. ಐಸಿಡಿಎಸ್ ಮತ್ತುಎನ್‌ಆರ್‌ಎಚ್‌ಎಂ ಕಾರ್ಯಕ್ರಮಗಳ ಹೊರತಾಗಿಯೂ ಅಪೌಷ್ಟಿಕತೆ ಮತ್ತು ಕಾಯಿಲೆಯ ಅಪಾಯವನ್ನು ತಪ್ಪಿಸಲಾಗಿಲ್ಲ. ಪುರುಷ ಮತ್ತು ಮಹಿಳೆಯರಲ್ಲಿ ರೋಗ ಸಾಂಕ್ರಾಮಿಕತೆಯ ಪ್ರಮಾಣ ಅಧಿಕವಾಗಿಯೇ ಇದೆ ಎಂದು ದತ್ತಾಂಶಗಳು ಹೇಳುತ್ತವೆ. ಮಹಿಳೆಯರ ಆರೋಗ್ಯ, ಸೇವಾ ಲಭ್ಯತೆ ಹಿನ್ನೆಲೆಯಲ್ಲಿ ಸಾಂಕ್ರಾಮಿಕತೆಯಲ್ಲಿನ ಭಿನ್ನತೆ ಮತ್ತು ಮರಣ ಪ್ರಮಾಣಗಳನ್ನು ಗಮನಿಸಿದರೆ ಪರಿಸ್ಥಿತಿ ಕಳವಳಕಾರಿಯಾಗಿದೆ. ಆದಾಗ್ಯೂ, ಕಾಯಿಲೆವಾರು ಮಾಹಿತಿ ಅಸ್ಪಷ್ಟವಾಗಿಯೇ ದೊರಕುತ್ತದೆ. ಹೆರಿಗೆ ಮತ್ತು ತಾಯಂದಿರ ಪೋಷಣೆಗಾಗಿ ಎನ್‌ಆರ್‌ಎಚ್‌ಎಂ ಸಾಂಸ್ಥಿಕ ಸೇವಾ ಸೌಲಭ್ಯವನ್ನು ಒದಗಿಸುವತ್ತ ಅಗಾಧ ಪ್ರಮಾಣದ ಗುರಿಯನ್ನು ಹೊಂದಿದೆ. ಬಾಣಂತಿಯರ ಮರಣ ಪ್ರಮಾಣ ತಗ್ಗಿಸುವುದು ಮತ್ತು ಪುನರುತ್ಪಾದಕತೆಗೆ ಆರೋಗ್ಯ ಆರೈಕೆಗೆ ಒದಗಿಸುವುದು ಪ್ರಮುಖವಾದರೂ ಮಹಿಳೆಯ ಜೀವಿಸುವಿಕೆ ಹಾಗೂ ಜೀವನಚಕ್ರವನ್ನು ಒಳಗೊಳ್ಳುವಂಥ ಯೋಜನೆಗಳನ್ನು ರೂಪಿಸುವುದು ಆವಶ್ಯಕವಾಗಿದೆ. ಈ ಆಶಯವು ನಮ್ಮನ್ನು ದತ್ತಾಂಶದತ್ತ ಕೊಂಡೊಯ್ಯಲಿದ್ದು ಮಹಿಳೆಯರು ಮತ್ತು ಪುರುಷರಿಗೆ ಸಂಬಂಧಿಸಿದಂತೆ ಕಾಯಿಲೆಯ ಹೊರೆ, ಆರೋಗ್ಯದ ಏರುಪೇರುಗಳನ್ನು ಒಳಗೊಂಡ ಪ್ರತ್ಯೇಕ ಮಾಹಿತಿ ಅಗತ್ಯವಾಗುತ್ತದೆ. ಈ ದತ್ತಾಂಶವನ್ನು ಬಳಸಿ, ಯಾವ ರೀತಿಯ ಆರೋಗ್ಯ ಸೇವೆಯ ಆವಶ್ಯಕತೆಯಿದೆ ಎಂದು ಗುರುತಿಸಿ ಕಾಯಿಲೆಯ ಶಮನಕ್ಕೆ ಅಡೆತಡೆಯಿರುವ ಅಂಶಗಳನ್ನು ನಿವಾರಿಸಬೇಕಿದೆ.

**ನಿಖರ ದತ್ತಾಂಶ:** ಕ್ಷೇತ್ರಕಾರ್ಯದಿಂದ ಸರ್ಕಾರಿ ಮೂಲಗಳು ಸಂಗ್ರಹಿಸಿದ ದತ್ತಾಂಶಕ್ಕೂ ಖಾಸಗಿ ಮೌಲ್ಯಮಾಪಕರು ಸಂಗ್ರಹಿಸಿದ ದತ್ತಾಂಶಕ್ಕೂ ಅಪಾರ ಪ್ರಮಾಣದ ವ್ಯತ್ಯಾಸವಿದೆ. ಆದ್ದರಿಂದ, ಕ್ಷೇತ್ರಕಾರ್ಯದಿಂದ ಸಂಗ್ರಹಿತವಾದ ಮಾಹಿತಿಯನ್ನು ನಿಯಮಿತವಾಗಿ ವಿಶ್ಲೇಷಿಸಲು ವ್ಯವಸ್ಥೆಯನ್ನು ಸ್ಥಾಪಿಸಬೇಕಿದೆ. ಅಪೌಷ್ಟಿಕತೆ, ಶಿಶುಮರಣ ಪ್ರಮಾಣ ಹಾಗೂ ಸಾಂಕ್ರಾಮಿಕತೆ ಮೂರು ಕ್ಷೇತ್ರಗಳಿಗೂ ಈ ಮಾತು ಅನ್ವಯವಾಗುತ್ತದೆ. ಆಡಳಿತ ಅಧಿಕಾರಿಗಳು ಸಿದ್ಧಪಡಿಸುವ ಮಾಸಿಕ ವರದಿಗಳನ್ನು ವಿಶ್ಲೇಷಣೆ ಮಾಡಲು, ವಿತರಣೆಗೆ ಸಿದ್ಧಪಡಿಸಲು ಪ್ರತಿ ತಿಂಗಳು ಸಭೆಗಳನ್ನು ನಡೆಸುವ ಅಗತ್ಯವಿದೆ. ಆ ಮೂಲಕ ಅಪೌಷ್ಟಿಕತೆ, ಶಿಶುಮರಣ ಪ್ರಮಾಣ ಹಾಗೂ ಸಾಂಕ್ರಾಮಿಕತೆಗಳನ್ನು ನಿವಾರಿಸಲು ಬಳಸುವ ಅನುಷ್ಠಾನ ತಂತ್ರಗಳನ್ನು ಚುರುಕುಗೊಳಿಸಬಹುದು.

**ಮರಣ ಪರಿಶೀಲನೆ:** ಶಿಶು ಮರಣ ಮತ್ತು ಬಾಣಂತಿ ಮರಣಗಳ ಪರಿಶೀಲನೆ, ವಿಶ್ಲೇಷಣೆಯಲ್ಲಿನ ಕಲಿಕೆಗಳನ್ನು ಪರಿಷ್ಕೃತಗೊಂಡ ಪ್ರಕ್ರಿಯೆಯಲ್ಲಿ ಪ್ರತಿಫಲಿಸುವಂತಿರಬೇಕು. ಮಾಹಿತಿಯನ್ನು ಹಂಚಿಕೊಳ್ಳಬೇಕು.

**ತರಬೇತಿ:** ಒಡಿಶಾದ ಮಲೇರಿಯಾ ಪೀಡಿತ ಬ್ಲಾಕ್‌ಗಳಲ್ಲಿ ಪ್ರಕರಣಗಳನ್ನು ಗುರುತಿಸಲು, ಚಿಕಿತ್ಸೆಗಾಗಿ ಪ್ರಕರಣಗಳನ್ನು ಜ್ವರ ಆರೈಕೆ ಕೇಂದ್ರಗಳಿಗೆ ವರದಿ ಮಾಡಲು; ಆ ಮೂಲಕ ರೋಗ ನಿಯಂತ್ರಿಸಲು ಅಲ್ಲಿನ ಆಶಾ ಕಾರ್ಯಕರ್ತರಿಗೆ ತರಬೇತಿಯನ್ನು ನೀಡಲಾಯಿತು. ಆದಾಗ್ಯೂ, ರೋಗ ಪತ್ತೆಹಚ್ಚಲು ಅಗತ್ಯವಾಗುವ ಕಿಟ್‌ಗಳ ಅಲಭ್ಯತೆಯಿಂದ ಚಿಕಿತ್ಸೆಗೆ ಬರುವ ದರವು ಅಧಿಕವಾಗಿತ್ತು. ಆ ಕಾರಣವಾಗಿಯೇ ಚಿಕಿತ್ಸೆಯೂ ವಿಳಂಬವಾಗುತ್ತಿತ್ತು.



**ಸಂಯೋಜನೆ:** ಅಪೌಷ್ಟಿಕತೆ, ಶಿಶುಮರಣ ಹಾಗೂ ಸಾಂಕ್ರಾಮಿಕತೆಗಳು ಅನೇಕ ಅಂಶಗಳನ್ನು ಒಳಗೊಂಡಿವೆ. ಆಹಾರ, ಪೌಷ್ಟಿಕಾಂಶ, ನಿಯಂತ್ರಕ, ಉತ್ತೇಜಕ ಮತ್ತು ಪರಿಹಾರಕ, ಪೌಷ್ಟಿಕತೆ ಸಮಾಲೋಚನೆ, ಶುದ್ಧ ಕುಡಿಯುವ ನೀರು, ಶುಚಿ–ಶೌಚ ಹೀಗೆ ಆ ಅಂಶಗಳು ಬೆಳೆಯುತ್ತವೆ. ಯೋಜನೆಯನ್ನು ಅನುಷ್ಠಾನ ಗೊಳಿಸುವ ವಿವಿಧ ಇಲಾಖೆ, ಸಚಿವಾಲಯಗಳ ನಡುವೆ ಉತ್ತಮ ರೀತಿಯ ಸಂಯೋಜನೆ ಅತಿ ಮುಖ್ಯವಾಗಿದೆ. ಪಂಚಾಯತ್‌ರಾಜ್ ಇಲಾಖೆ, ಆರೋಗ್ಯ, ಶಿಕ್ಷಣ, ನೀರು–ಒಳಚರಂಡಿ ಮುಂತಾದ ಇಲಾಖೆಗಳು ಒಟ್ಟಿಗೆ ಸೇರಿ ಕೆಲಸ ಮಾಡುವುದರಿಂದ ಪ್ರಗತಿ ಪರಿಶೀಲನೆ, ಸಾಧ್ಯವಾಗುತ್ತದೆ. ಫಲಿತಾಂಶದ ಪ್ರಮುಖಾಂಶಗಳು ಹಾಗೂ ಸೂಚಕಗಳು ತಂಡವಾಗಿ ಸಾಧಿಸಲು ಸಾಧ್ಯವಿರುವ ಗುರಿಗಳನ್ನು ನಿಗದಿಪಡಿಸಲು ಸಹಕಾರಿಯಾಗುತ್ತದೆ. ಜತೆಗೆ, ಫಲಿತಾಂಶ ಮಾದರಿ ದಾಖಲೆ ರಚನೆಯಲ್ಲಿ ಹೆಚ್ಚಿನ ಹೊಣೆಗಾರಿಕೆ ತರಲು, ಸಾಧ್ಯವಿರುವ ಕಾರ್ಯತಂತ್ರ ರೂಪಿಸಲು ಸಂಯೋಜಿತಗೊಂಡ ಪ್ರಕ್ರಿಯೆ ಪರಿಣಾಮಕಾರಿಯಾಗಿರಬಲ್ಲುದು. ಸಂಯೋಜನೆ ಸುಧಾರಿತ ಫಲಿತಾಂಶಗಳನ್ನು ನೀಡಬಲ್ಲುದು. ❑

# ಆರ್ಥಿಕ ಕೊರತೆ : ಪರಿಣಾಮಗಳು

ಡಾ. ಅಮಿಯಾ ಕುಮಾರ್ ಮಹಾಪಾತ್ರ
ಕನ್ನಡಕ್ಕೆ : ಗೌರಿ ಸತ್ಯ



**ಸಮಾಜದಲ್ಲಿನ ವಂಚಿತ, ಅಂಚಿನ ಹಾಗೂ ಎಲ್ಲ ವರ್ಗಗಳ ಕ್ಷೇಮಾಭಿವೃದ್ಧಿಗಾಗಿ ಸುಸ್ಥಿರ ಹಾಗೂ ಒಳಗೊಂಡ ಅಭಿವೃದ್ಧಿ ಮಾದರಿಯ ವಿವಿಧ ಕ್ಷೇತ್ರಗಳಲ್ಲಿನ ಸಮಸ್ಯೆಗಳನ್ನು ಬಗೆಹರಿಸುವಂತಹ ಕ್ರಮಗಳನ್ನು ರೂಪಿಸಲು ಭಾರತ ಸರ್ಕಾರ ಎಲ್ಲ ರೀತಿಯ ಉದ್ದೇಶಪೂರ್ವಕ ಮತ್ತು ಜಾಗರೂಕ ಪ್ರಯತ್ನ ಕೈಗೊಳ್ಳಬೇಕಾಗಿದೆ.**

ಭಾರತದ ಆಯವ್ಯಯ ಸರ್ಕಾರದ ಕೇವಲ ಆದಾಯ ಮತ್ತು ಖರ್ಚಿನ ಆರ್ಥಿಕ ಹೇಳಿಕೆಯಲ್ಲ. ಬದಲಿಗೆ ದೇಶದ ಜನತೆಯ ಸಾಮಾಜಿಕ–ಆರ್ಥಿಕ ವ್ಯವಸ್ಥೆಯಲ್ಲಿ ಪ್ರಮುಖ ಬದಲಾವಣೆಗಳನ್ನು ತರುವ ಒಂದು ಪ್ರಭಾವಿ ಮತ್ತು ಪರಿಣಾಮಕಾರಿ ಅಸ್ತ್ರ. ಭಾರತದ ಆರ್ಥಿಕ ಪರಿಸ್ಥಿತಿಯ ಬೆಳವಣಿಗೆ ಹಾಗೂ ಸಂಯೋಜಿತ ಅಭಿವೃದ್ಧಿ ಬಹಳಷ್ಟು ಮಟ್ಟಿಗೆ ಆಯವ್ಯಯದ ಕ್ರಿಯಾತ್ಮಕ ಮತ್ತು ಉದ್ದೇಶಿತ ಹಿನ್ನೆಲೆಯನ್ನು ಅವಲಂಬಿಸಿದೆ. ಜೊತೆಗೆ, ಅದರ ಪರಿಣಾಮ ಮತ್ತು ಮಹತ್ವವನ್ನು ಸಾಮಾನ್ಯವಾಗಿ ವಲಯ ಹಾಗೂ ಪ್ರಾದೇಶಿಕ ಅಭಿವೃದ್ಧಿ ಹಾಗೂ ವಿಶೇಷವಾಗಿ ಅಂಚಿನಲ್ಲಿರುವ ಗುಂಪಿನ ಏಳಿಗೆಯ ಮೇಲೆ ಮೌಲ್ಯಮಾಪನ ಮಾಡಲಾಗುತ್ತದೆ. ಆಯವ್ಯಯದ ಪ್ರಮುಖ ಉದ್ದೇಶವಾದರೊ ಬಡತನ ಮತ್ತು ಅಸಮತೋಲನವನ್ನು ಕಡಿಮೆ ಮಾಡುವುದು, ಉದ್ಯೋಗ ಸೃಷ್ಟಿಯಿಂದ ನಿರುದ್ಯೋಗವನ್ನು ಕಡಿಮೆ ಮಾಡುವುದು, ಬೆಲೆಯಲ್ಲಿ ಸ್ಥಿರತೆ ತರುವುದು ಮತ್ತು ಆರ್ಥಿಕ ಅಭಿವೃದ್ಧಿಯ ವೇಗವನ್ನು ಹೆಚ್ಚಿಸುವುದರ ಮೂಲಕ ಸಮಾಜದಲ್ಲಿನ ವಿವಿಧ ಶ್ರೇಣಿಯ ವರ್ಗಗಳ ಅವಶ್ಯಕತೆಗಳನ್ನು ಪೂರೈಸುವುದಾಗಿರುತ್ತದೆ.

ಹಿಂದಿನ ವರ್ಷಗಳಲ್ಲಿ ವಿಶ್ವದಲ್ಲಿನ ಅನಿಶ್ಚತೆ ಮತ್ತು ಆಂತರಿಕವಾಗಿ ಉಂಟಾದ ಆರ್ಥಿಕ ಏರುಪೇರುಗಳ ಹಿನ್ನೆಲೆಯಲ್ಲಿ ಭಾರತದ ಆರ್ಥಿಕ ನೀತಿ ಹಣಕಾಸು ನೀತಿಯಷ್ಟೇ ಮಹತ್ವದ್ದಾಗುತ್ತದೆ. ನಮ್ಮ ದೇಶದ ಅಭಿವೃದ್ಧಿಯಾದರೊ ಆರ್ಥಿಕ ಶಿಸ್ತು, ಆರ್ಥಿಕ ಕ್ರೋಢೀಕರಣ, ಅದಕ್ಕಿಂತ ಮಿಗಿಲಾಗಿ ಅಪೇಕ್ಷಿತ ಮಟ್ಟದಲ್ಲಿ ಆರ್ಥಿಕ ಕೊರತೆಯನ್ನು ನಿಯಂತ್ರಿಸುವುದರ ಮೇಲೆ ಅವಲಂಬಿತವಾಗಿದೆ. ಆದ್ದರಿಂದಾಗಿ ಭಾರತದ ಆರ್ಥಿಕ ಕೊರತೆಯ ಮೂಲ ಕಲ್ಪನೆಗಳನ್ನು ಮತ್ತು ಅದು ದೇಶದ ಆರ್ಥಿಕ ವ್ಯವಸ್ಥೆಯ ಮೇಲೆ ಬೀರುವ ಪ್ರಭಾವ ಮತ್ತು ಪರಿಣಾಮಗಳನ್ನು ಅರಿಯುವುದು ತೀವ್ರ ಅವಶ್ಯಕವಾಗುತ್ತದೆ.

### ಆರ್ಥಿಕ ಕೊರತೆ ಮತ್ತು ಅದರ ಪರಿಣಾಮಗಳು

ಸರ್ಕಾರದ ಒಟ್ಟು ಅಧಿಕ ಖರ್ಚು ಮತ್ತು ಸಾಲವನ್ನು ಹೊರತು ಪಡಿಸಿದ ಸರ್ಕಾರದ ಒಟ್ಟು ಆದಾಯ – ಇದು ಆರ್ಥಿಕ ಕೊರತೆಯ ನಿರೂಪಣೆ. 'ಸಾಲವನ್ನು ಹೊರತುಪಡಿಸಿ' ಕಲ್ಪನೆ ಆದಾಯ ವಿಭಾಗದಲ್ಲಿ ಸಾಲ ರೂಪದಲ್ಲಿ ಪಡೆದ ಆದಾಯವನ್ನು ಲೆಕ್ಕಕ್ಕೆ ತೆಗೆದುಕೊಳ್ಳದ ಆದಾಯ ಮತ್ತು ಖರ್ಚಿನ ಅಂತರವನ್ನು ಎತ್ತಿ ತೋರುತ್ತದೆ.

ಇನ್ನೂ ಸ್ಪಷ್ಟಪಡಿಸಿ ಹೇಳಬೇಕಾದರೆ, ಒಂದು ನಿರ್ದಿಷ್ಟ ಆರ್ಥಿಕ ವರ್ಷದಲ್ಲಿ ದೇಶವು ತನ್ನ ಹಣಕಾಸಿನ ಕೊರತೆಯನ್ನು ತುಂಬಿಕೊಳ್ಳಲು ಒಟ್ಟು ಎಷ್ಟು ಸಾಲದ ಮೇಲೆ ಅವಲಂಬಿತವಾಗಿದೆ ಎಂಬುದನ್ನು ತೋರುತ್ತದೆ. ಆದಾಯದಲ್ಲಿನ ಕೊರತೆ ಮತ್ತು ಬಂಡವಾಳದ ಖರ್ಚು ಆರ್ಥಿಕ ಕೊರತೆಯ ಮೂಲ ಅಂಶಗಳು. ಸಾಲಕ್ಕೆ ಸಂಬಂಧಪಟ್ಟಂತೆ ಸರ್ಕಾರದ ಬಂಡವಾಳ ಪರಿಸ್ಥಿಯ ಸಮಗ್ರ ಚಿತ್ರಣವನ್ನು ಇದು ನೀಡುತ್ತದೆ.

ಒಂದು ದೇಶದ ಆರ್ಥಿಕ ಅಭಿವೃದ್ಧಿ ಮತ್ತು ಸಾಲದ ಹೊರೆಯನ್ನು ಅಳೆಯಲು ಆರ್ಥಿಕ ಕೊರತೆಯನ್ನು ಒಂದು

ಉಪನ್ಯಾಸಕರು, ಅಪೀಜೆ ಸ್ಕೂಲ್ ಆಫ್ ಮ್ಯಾನೇಜ್‌ಮೆಂಟ್, ಹೊಸದೆಹಲಿ. email : amiyacademics@gmail.com

ಮಾನದಂಡವಾಗಿ ಬಳಸಿಕೊಳ್ಳಲಾಗುತ್ತದೆ ಮತ್ತು ಅದಕ್ಕಿಂತ ಮಿಗಿಲಾಗಿ ಅದು ಒಂದು ದೇಶದ ಜನತೆಯ ಹಣಕಾಸು ಸ್ಥಿರತೆ ಹಾಗೂ ಆರ್ಥಿಕ ಸಾಮರ್ಥ್ಯವನ್ನು ನಿರ್ಧಾರಗೊಳಿಸುತ್ತದೆ. ಆರ್ಥಿಕ ಕೊರತೆಯ ಗಾತ್ರವಾದರೋ ಉತ್ತೇಜನ ಕೊಡುವಲ್ಲಿ ಒಂದು ಮಧ್ಯವರ್ತಿಯ ಪಾತ್ರವಹಿಸಬಹುದು ಅಥವಾ ಆರ್ಥಿಕ ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಅದರ ಉಪಯೋಗ ಮತ್ತು ಕೆಡಕಿನ ಆಧಾರವನ್ನು ಅವಲಂಭಿಸಿದಂತೆ ಹಿಂಜರಿತದ ಶಕ್ತಿಯೂ ಆಗಬಹುದು.

**ಸಾಮಾನ್ಯ ಪರಿಣಾಮಗಳು**

* ಆರ್ಥಿಕ ಕೊರತೆ ಒಂದು ದೇಶದ ಇಡೀ ಆರ್ಥಿಕ ವರ್ಷದಲ್ಲಿನ ಒಟ್ಟು ಸಾಲದ ಅವಶ್ಯಕತೆಯನ್ನು ಅಳೆದು ತೋರುತ್ತದೆ.

* ಬಡ್ಡಿ ಪಾವತಿಯ ಹೊರೆಯ ಜೊತೆಗೆ ಅಸಲಿನ ಪಾವತಿಯೂ ಸೇರುವುದರಿಂದ ಹೆಚ್ಚಿನ ರೀತಿಯಲ್ಲಿ ಸಾಲ ತೆಗೆದುಕೊಳ್ಳಬೇಕಾಗಿ ಬರುವುದು ಸರ್ಕಾರದ ಹೊರೆಯನ್ನು ಇನ್ನಷ್ಟು ಹೆಚ್ಚಿಸುತ್ತದೆ ಮತ್ತು ಅದರಿಂದಾಗಿ ಒಂದು ದೇಶದ ಭವಿಷ್ಯದ ಹೊಣೆಗಾರಿಕೆಯನ್ನು ಅಧಿಕಗೊಳಿಸುತ್ತದೆ.

* ದೊಡ್ಡ ಪ್ರಮಾಣದ ಆರ್ಥಿಕ ಕೊರತೆ ಬಡ್ಡಿ ಪಾವತಿಗೆ ಕೂಡ ಹಣ ಒದಗಿಸಿಕೊಳ್ಳಲು ಸರ್ಕಾರ ಸಾಲವನ್ನೇ ಅವಲಂಬಿಸುವಂತೆ ಮಾಡಿಬಿಡುತ್ತದೆ. ಇದರಿಂದಾಗಿ ಅದು ಸಾಲದ ಬಲೆಯಲ್ಲಿ ಸಿಕ್ಕಿಕೊಂಡು ಕೆಡುಕಿನ ಸುಳಿಯಲ್ಲಿಯೇ ಸುತ್ತುವಂತೆ ಮಾಡಿಬಿಡುತ್ತದೆ.

* ಆರ್ಥಿಕ ಕೊರತೆಯನ್ನು ತುಂಬಿಕೊಳ್ಳಲು ಹೊರ ದೇಶಗಳಿಂದ ಸಾಲ ಪಡೆದುಕೊಳ್ಳುವುದು ರಾಜಕೀಯ ಅವಲಂಬನೆಗೆ ಹಾದಿ ಮಾಡಿಕೊಡುತ್ತದೆ. ಇದು ದೇಶದ ದಿನ ನಿತ್ಯದ ಆರ್ಥಿಕ ಚಟುವಟಿಕೆಗಳಲ್ಲಿ ಅನಗತ್ಯ ವಿದೇಶಿ ಹಸ್ತಕ್ಷೇಪಕ್ಕೆ ಅವಕಾಶ ಮಾಡಿಕೊಡಲು ಅನುವಾಗಬಹುದು.

* ಬಡ್ಡಿ ಪಾವತಿಯು ಆದಾಯ ಬಾಬ್ತಿನ ಖರ್ಚಿಗೆ ಒಳಗಾಗುವುದರಿಂದ ಅದು ಅಧಿಕಗೊಂಡರೆ ಅಭಿವೃದ್ಧಿಯ ಪ್ರಕ್ರಿಯೆಗೆ ದೊರೆಯುವ ಹಣ ಕಡಿಮೆಯಾಗಿ ಅಭಿವೃದ್ಧಿ ಕುಂಠಿತಗೊಳ್ಳಬಹುದು.

* ಮಾರುಕಟ್ಟೆಯಿಂದ ಹೆಚ್ಚಿನ ಪ್ರಮಾಣದಲ್ಲಿ ಸಾಲ ಪಡೆದುಕೊಳ್ಳುವುದು ಬಡ್ಡಿ ದರ ಹೆಚ್ಚಾಗಲು ಕಾರಣವಾಗುತ್ತದೆ. ಇದು ಖಾಸಗಿ ಬಂಡವಾಳ ಹೂಡಿಕೆ ದುಬಾರಿಯಾಗುವಂತೆ ಮಾಡುತ್ತದೆ ಹಾಗೂ ಖಾಸಗಿ ಬಂಡವಾಳ ಹೂಡಿಕೆಗೆ ನಿರುತ್ಸಾಹ ತರುತ್ತದೆ. ಇದು ಒಟ್ಟಾರೆ ಖಾಸಗಿ ಬಂಡವಾಳದ ಹಿಂಜರಿತಕ್ಕೆ ಹಾದಿ ಮಾಡಿಕೊಡುತ್ತ ದೆ.

**ನಿರ್ದಿಷ್ಟ ಪರಿಣಾಮಗಳು**

ವಿಶ್ವ ಆರ್ಥಿಕ ಪರಿಸ್ಥಿತಿಯ ಹಿಂಜರಿತ, ಚಾಲ್ತಿ ಖಾತೆಯಲ್ಲಿನ ಕೊರತೆ, ಉಳಿತಾಯದಲ್ಲಿ ಸಂಕುಚಿತ ಪರಿಸ್ಥಿತಿ ಮತ್ತು ಗ್ರಾಹಕ ಕೊಳ್ಳುವಿಕೆಯಲ್ಲಿ ಇಳಿಮುಖ ಇಂತಹ ಹಲವಾರು ವಿಸ್ತಾರವಾದ ಆರ್ಥಿಕ ಕಾರಣಗಳಿಂದಾಗಿ ನಮ್ಮ ಜಿ.ಡಿ.ಪಿ. ಏರಿಕೆಯ ಪ್ರಮಾಣವು ಕಳೆದು ಐದು ವರ್ಷಗಳಿಂದಲೂ ಒಂದೇ ಸಮನಾಗಿ ಇಳಿಮುಖಗೊಳ್ಳುತ್ತಿದ್ದು, ದೇಶದ ನೀತಿ ನಿರೂಪಕರು ಮತ್ತು ಯೋಜನಾಕಾರರು ಆರ್ಥಿಕ ವಿಸ್ತರಣಾ ನೀತಿಯನ್ನು ಒಪ್ಪಿಕೊಂಡು ಮುಂದುವರಿಯಬೇಕಾದ ಪರಿಸ್ಥಿತಿಯನ್ನು ತಂದಿಟ್ಟಿದೆ. ನಮ್ಮ ಆರ್ಥಿಕ ಪರಿಸ್ಥಿತಿಯನ್ನು ದೃಢಗೊಳಿಸಲು ಮತ್ತು ಶಕ್ತಿಶಾಲಿಯನ್ನಾಗಿ ಮಾಡಲು ಈ ತದ್ವಿರುದ್ಧ ಸುತ್ತುಮಾರ್ಗವನ್ನು ಅವರು ಅನುಸರಿಸಿದ್ದಾರೆ. ಆದರೆ, ಈ ಮಾರ್ಗ ಆರ್ಥಿಕ ಕೊರತೆಯನ್ನು ಅಧಿಕಗೊಳಿಸಿ ದೇಶದ ಆರ್ಥಿಕ ಪರಿಸ್ಥಿತಿಯ ಮೇಲೆ ಇನ್ನಷ್ಟು ಒತ್ತಡ ತಂದಿದೆ.

ಆದ್ದರಿಂದ ಆರ್ಥಿಕ ದೃಢತೆ ಸಾಧಿಸಲು ಸರ್ಕಾರ ಆಯವ್ಯಯದಲ್ಲಿ ಒದಗಿಸಿರುವ ಹಣವನ್ನು ಸಮನ್ವಯಗೊಳಿಸಲು, ನಿಯಂತ್ರಿಸಲು ಹಾಗೂ ಶಿಸ್ತುಬದ್ಧವಾಗಿರುವಂತೆ ನೋಡಿಕೊಳ್ಳಲು ಹೊಸ ಕಾಯ್ದೆಯನ್ನು ರಚಿಸುವುದರ ಮೂಲಕ ದಿಟ್ಟ ಹೆಜ್ಜೆ ಇಟ್ಟಿದೆ. ಆರ್ಥಿಕ ಕ್ರೋಢೀಕರಣಕ್ಕಾಗಿ ಮತ್ತು ದೂರದೃಷ್ಟಿಯ ಆರ್ಥಿಕ ನಿರ್ವಹಣೆಗಾಗಿ ಮತ್ತು ಭಾರತದ ಅರ್ಥವ್ಯವಸ್ಥೆಯ ಖರ್ಚಿನಲ್ಲಿ ದಕ್ಷತೆ ತರುವ ಸಲುವಾಗಿ ಭಾರತ ಸರ್ಕಾರ 'ಫ್ರೆಬ್ಮ' (ಆರ್ಥಿಕ ಹೊಣೆಗಾರಿಕೆ ಮತ್ತು ಆಯವ್ಯಯ ನಿರ್ವಹಣೆ ಕಾಯ್ದೆ–2003) ಜಾರಿಗೆ ತಂದಿದೆ. ಇದರಿಂದಾಗಿ ಆರ್ಥಿಕ ಕೊರತೆ ಈಚೆಗೆ ಆತಂಕಕಾರಿ ಘಟ್ಟವನ್ನು ತಲುಪಿದೆ. ಅದರಿಂದಾಗಿ ಇದರ ಉದ್ದಗಲ ಮತ್ತು ಪರಿಣಾಮ ಭಾರತದಲ್ಲಿನ ಜನತೆಯ ಗಮನವನ್ನು ಸೆಳೆದಿದೆ.

**ಮಾಹಿತಿ ವಿಶ್ಲೇಷಣೆ – ಒಲವು ಮತ್ತು ಆಯಾಮಗಳು**

**ಶೇಕಡಾವಾರಿನ ಮೇಲೆ ಕೇಂದ್ರೀಕರಿಸಿ**


ಇತ್ತೀಚಿನ ಪರಿಣಾಮಗಳನ್ನು ಅಧ್ಯಯನ ಮಾಡಲು ಮತ್ತು ಈಗಿನ ಅವಶ್ಯಕತೆಗಳ ಮೇಲೆ ಕೇಂದ್ರೀಕರಿಸಿ ಮತ್ತು ದೇಶದ ಪರಿಸ್ಥಿತಿಯನ್ನು ಗಮನಕ್ಕೆ ತೆಗೆದುಕೊಂಡು ವಿಶ್ಲೇಷಿಸಲು ಕಳೆದ ಹತ್ತು ವರ್ಷಗಳ (2004–05 ರಿಂದ 2014–15) ಅಂದಾಜು ಆರ್ಥಿಕ ಕೊರತೆಯನ್ನು ತೆಗೆದುಕೊಳ್ಳಲಾಗಿದೆ. ಪಟ್ಟಿ–1 2004–05 ರಿಂದ 2014–15 ರವರೆಗಿನ ಭಾರತದ ಅಂದಾಜು ಆರ್ಥಿಕ ಕೊರತೆಯನ್ನು ತೋರುತ್ತದೆ.

ಪಟ್ಟಿ–1 2004–05ರಿಂದ 2008–09ರವರೆಗಿನ ಅವಧಿಯಲ್ಲಿ ಅಂದಾಜು ಆರ್ಥಿಕ ಕೊರತೆ ಶೇ. 4.4%, 4.3%, 3.8%, 3.3% ಮತ್ತು 2.5

**ಪಟ್ಟಿ 1 : ಅಂದಾಜು ಆರ್ಥಿಕ ಕೊರತೆ (ಜಿ.ಡಿ.ಪಿ.ಯ %)**

| ವರ್ಷ | 2004–05 | 2005–06 | 2006–07 | 2007–08 | 2008–09 | 2009–10 | 2010–11 | 2011–12 | 2012–13 | 2013–14 | 2014–15 |
|---|---|---|---|---|---|---|---|---|---|---|---|
| ಅಂದಾಜು ಆರ್ಥಿಕ ಕೊರತೆ (ಜಿ.ಡಿ.ಪಿ.ಯ %) | 4.4 | 4.3 | 3.8 | 3.3 | 2.5 | 6.8 | 5.5 | 4.6 | 5.1 | 4.8 | 4.1 |

ಅಂತರದಲ್ಲಿದ್ದು ಹೆಚ್ಚಿನ ಮಟ್ಟಿಗೆ ಅದು ಕಡಿಮೆಯಾಗಿರುವುದನ್ನು ದೃಢೀಕರಿಸುತ್ತದೆ. ಆರ್ಥಿಕ ಬಲವರ್ಧನೆಯ ನೀತಿಯ ಅನುಷ್ಠಾನ ಇದಕ್ಕೆ ಕಾರಣವಾಗಿದೆ. ಶೇ. 2.5 ಗುರಿ ಇಟ್ಟುಕೊಂಡಿದ್ದ ಕಾರಣ 2008–09ರ ವರೆಗೆ ಎಫ್.ಆರ್.ಬಿ.ಎಂ.ಎ. ನಂತರದ ಅವದಿಯಲ್ಲಿ ಭಾರತದ ಆರ್ಥಿಕ ಪರಿಸ್ಥಿತಿ ಗಮನಾರ್ಹವಾಗಿ ಉತ್ತಮಗೊಂಡಿತ್ತು ಆದರೆ ನಂತರ ಆರ್ಥಿಕ ಉತ್ತೇಜನ ಕೊಡುಗೆ, ವಿಶ್ವದ ಆರ್ಥಿಕ ಕುಸಿತ ಮತ್ತು ಹೆಚ್ಚಿನ ಜಿ.ಡಿ.ಪಿ. ಬೆಳವಣಿಗೆ ಸಾಧನೆಗಾಗಿ ಹಣವನ್ನು ವಿನಿಯೋಗಿಸಿದ ಕಾರಣ 2009–10ರಲ್ಲಿ ಆರ್ಥಿಕ ಕೊರತೆ ಜಿ.ಡಿ.ಪಿ.ಯ ಶೇ. 6.8 ಪ್ರಮಾಣಕ್ಕೆ ಜಿಗಿಯಿತು. ಆದರೆ 2009–10ರ ನಂತರ ಅಂದಾಜು ಆರ್ಥಿಕ ಕೊರತೆ 2010–11ರಲ್ಲಿ ಶೇ. 5.5ಕ್ಕೆ ಇಳಿಯಿತು ಮತ್ತು 2011–12ರಲ್ಲಿ ಇನ್ನೂ ಕಡಿಮೆಯಾಗಿ ಶೇ. 4.6ಕ್ಕೆ ಇಳಿಯಿತು. ಇದಕ್ಕೆ ಕಾರಣ ಎಫ್. ಆರ್.ಬಿ.ಎಂ. ಕಾಯ್ದೆಯನ್ನು ಜಾರಿಗೆ ತಂದು ಅನುಷ್ಠಾನಗೊಳಿಸಿದ್ದರಿಂದ ಸರ್ಕಾರ ಆರ್ಥಿಕ ಕೊರತೆಯ ಮೇಲೆ ಹಿಡಿತ ಸಾಧಿಸಿ ಆರ್ಥಿಕ ಬಲವರ್ಧನೆಯನ್ನು ಕಟ್ಟುನಿಟ್ಟಾಗಿ ಅನುಸರಿಸಬೇಕಾಗಿ ಬಂದದ್ದು. ಅದು 2012–13ರಲ್ಲಿ ಶೇ. 5.1ರ ಅಂಚಿನಲ್ಲಿ ಏರಿತು. ಇದಕ್ಕೆ ಕಾರಣವಾದರೋ ಯೂರೊ ಬಿಕ್ಕಟ್ಟು ಮತ್ತು ಆರ್ಥಿಕತೆಯಲ್ಲಿ ಸಾಗುತ್ತಾ ಹೋದ ಹಿಂಜರಿತ. ಇದರಿಂದಾಗಿ 2013–14ರಲ್ಲಿ ಅದು ಶೇ. 4.8ಕ್ಕೆ ಇಳಿಯಿತು. ಆದರೆ ಈಚಿನ ಅಯವ್ಯಯದಲ್ಲಿ (2014–15), ಭಾರತದ ಅರ್ಥ ಸಚಿವರು ಕೇಳ್ಕರ್ ಸಮಿತಿಯ ಸಲಹೆಯನ್ನು ಅನುಸರಿಸಿ 2013–14ರ ಜಿ.ಡಿ.ಪಿ.ಯ ಶೇ. 4.15 ಪ್ರಮಾಣಕ್ಕೆ ಆರ್ಥಿಕ ಕೊರತೆಯನ್ನು ಸೀಮಿತಗೊಳಿಸಿದ್ದಾರೆ. 2016–17ರ ವೇಳೆಗೆ ಆರ್ಥಿಕ ಕೊರತೆ ಜಿ.ಡಿ.ಪಿ.ಯ ಶೇ 3ರ ಪ್ರಮಾಣವನ್ನು ಮೀರಿ ಹೋಗದಂತೆ ಹಿಡಿತ ಸಾಧಿಸುವ ಸರ್ಕಾರದ ದೃಢ ನಿಲುವನ್ನು ಹಾಲಿ ಆಯವ್ಯಯ ತೋರುತ್ತದೆ.



ಚಿತ್ರ–1

ಪಟ್ಟಿ 2 ಎಫ್.ಆರ್.ಬಿ.ಎಂ. ಕಾಯ್ದೆ – 2003 ಜಾರಿಗೆ ಬಂದ ನಂತರದ ವಾಸ್ತವಿಕ ಮತ್ತು ಅಂದಾಜು ಆರ್ಥಿಕ ಕೊರತೆಯನ್ನು ತೋರುತ್ತದೆ. ಅತಿ ಹೆಚ್ಚಿನ ದಶಾಂಶ ಬದಲಾವಣೆ 2008–09 ಸಾಲಿಗೆ ಸಲ್ಲುತ್ತದೆ. ಅದು ಎಫ.ಆರ.ಬಿ.ಎಂ. ಕಾಯ್ದೆಯ ಕೆಟ್ಟ ನಿರ್ವಹಣೆಯಿಂದಾಗಿ ವಾಸ್ತವಿಕ ಕೊರತೆ ಜಿ.ಡಿ.ಪಿ. ಶೇ. 3.5 ರಷ್ಟು ಏರಿಕೆಯಾದದ್ದನ್ನು ತೋರುತ್ತದೆ.

### ಬದಲಾವಣೆಗಳ ಮೇಲೆ ವ್ಯವಹಾರ – ಅಂದಾಜು ವಿರುದ್ಧ ವಾಸ್ತವಿಕ

ಉದ್ದೇಶಿಸಿದ್ದು ಮತ್ತು ಸಾಧಿಸಿದ್ದನ್ನು ಹೆಚ್ಚಿನ ರೀತಿಯಲ್ಲಿ ವಿಶ್ಲೇಷಿಸಿ ನೋಡಲು 2004–05 ರಿಂದ 2012–13 ಅಂತರದಲ್ಲಿ ವಾಸ್ತವಿಕ ಮತ್ತು ಅಂದಾಜು ಆರ್ಥಿಕ ಕೊರತೆಯ ನಡುವಿನ ವ್ಯತ್ಯಾಸವನ್ನು ಗುರುತಿಸಲು ಪ್ರಯತ್ನಿಸಲಾಗಿದೆ. 2004–05 ರಿಂದ 2007–08ರ ಅವಧಿಯಲ್ಲಿ ಸರ್ಕಾರದ ನಿಶ್ಚಿತ ಆರ್ಥಿಕ ಶಿಸ್ತು 0.2 ರಿಂದ 0.6 ರ ಅಂತರದಲ್ಲಿದ್ದು ಅದು ನಿಯಂತ್ರಣದಲ್ಲಿ ಇದ್ದದ್ದನ್ನು ವಿಚಲನೆ ತೋರುತ್ತದೆ. ಆದರೆ 2008–09ರ ವಿಶ್ವ ಹಿಂಜರಿತ ಮತ್ತು ಆರ್ಥಿಕ ಅನಿಶ್ಚಿತತೆಯಿಂದಾಗಿ ಸರ್ಕಾರ ದೇಶದಲ್ಲಿನ ಹಿಂಜರಿತ ಪರಿಸ್ಥಿತಿಯನ್ನು ಎದುರಿಸಲು ಆರ್ಥಿಕ ಉತ್ತೇಜನ ಕೊಡುಗೆಯನ್ನು ಆಯ್ಕೆಮಾಡಿಕೊಂಡಿತು. ಇದು ಶೇ.2.5 ಗುರಿಯನ್ನು ತಪ್ಪಿ ಆರ್ಥಿಕ ಕೊರತೆ ಶೇ 6 ಕ್ಕೆ ವಿಸ್ತರಿಸಿತು. ಆ ನಂತರ, ಬದಲಾವಣೆ 0.4 ರಿಂದ 1.1 ರ ಅಂತರದಲ್ಲಿ ಜರುಗಿದೆ. ಇದು ಭಾರತದ ಆರ್ಥಿಕ ಹೊಣೆಕಾರಿಕೆ ಮತ್ತು ವಿವೇಕಯುತ ಆರ್ಥಿಕ ನಿರ್ವಹಣೆಯ ತೀವ್ರತೆಯನ್ನು ತೋರುತ್ತದೆ.


### ಒಟ್ಟು ಸಂಪೂರ್ಣ ಕೇಂದ್ರೀಕರಿಸಿ

ಆರ್ಥಿಕ ಕೊರತೆಯ ಇಳಿಕೆಯನ್ನು ಶೇಕಡಾವಾರು ಮುಖದಿಂದ ಗಮನಿಸುವುದು ಮಾತ್ರವಲ್ಲ ಸಮಗ್ರ ರೂಪದಲ್ಲಿಯೂ ನೋಡಿ ನೈಜ ವ್ಯತ್ಯಾಸವನ್ನು ಗ್ರಹಿಸಿ ಮೌಲ್ಯಮಾಪನ ಮಾಡಬೇಕಾಗುತ್ತದೆ. ಅದರಿಂದಾಗಿಯೇ ನಾವು ನೈಜ ಆರ್ಥಿಕ ಹೊಣೆಗಾರಿಕೆ ಅಥವಾ ದೇಶದ ಸಾಲವನ್ನು ತಿಳಿಯಲು ಸಮಗ್ರ ಅಂಕಿಅಂಶಗಳ ಆಧಾರದ ಮೇಲೆ ವಿಶ್ಲೇಷಿಸಬೇಕಾಗುತ್ತದೆ. 2004–05 ರಲ್ಲಿ ವಾಸ್ತವಿಕ ಹಣ ವ್ಯಯಿಸಿದ್ದು ರೂ. 1,25,202 ಕೋಟಿ. ಆದರೆ ತದ ನಂತರ 2006–07ರವರೆಗಿನ ಆರ್ಥಿಕ ವರ್ಷಗಳಲ್ಲಿ ಸಾಮಾನ್ಯ ಏರಿಕೆ ಕಂಡು ಬರುತ್ತದೆ. ಆದರೆ ನಂತರ, ಎಫ್.ಆರ್.ಬಿ.ಎಂ. ಕಾಯ್ದೆಯ ಕಟ್ಟುನಿಟ್ಟಿನ ಅನುಷ್ಠಾನದಿಂದಾಗಿ 2007–08ರಲ್ಲಿ ವಾಸ್ತವಿಕವಾಗಿ ಮಾಡಿದ ಖರ್ಚು ರೂ. 1,26,912 ಕೋಟಿಗಳಿಗೆ ಇಳಿದಿದೆ.

**ಪಟ್ಟಿ – 2 ಆರ್ಥಿಕ ಕೊರತೆ ಬದಲಾವಣೆ**

| ವರ್ಷ | 2004–05 | 2005–06 | 2006–07 | 2007–08 | 2008–09 | 2009–10 | 2010–11 | 2011–12 | 2012–13 | 2013–14 | 2014–15 |
|---|---|---|---|---|---|---|---|---|---|---|---|
| ಅಂದಾಜು ಆರ್ಥಿಕ ಕೊರತೆ (%) | 4.4 | 4.3 | 3.8 | 3.3 | 2.5 | 6.8 | 5.5 | 4.6 | 5.1 | 4.8 | 4.1 |
| ವಾಸ್ತವಿಕ ಆರ್ಥಿಕ ಕೊರತೆ (%) | 4 | 4.1 | 3.5 | 2.7 | 6.0 | 6.4 | 4.9 | 5.7 | 4.8 | ಲಇ. | – |
| ಆರ್ಥಿಕ ಕೊರತೆಯ ವ್ಯತ್ಯಾಸ | 0.4 | 0.2 | 0.3 | 0.6 | –3.5 | 0.4 | 0.6 | –1.1 | 0.3 | – | – |

ಮೂಲ: ಭಾರತದ ಆಯವ್ಯಯ ದಾಖಲೆಗಳಿಂದ ಲೇಖಕರ ಸಂಕಲನ




ಚಿತ್ರ – 2

2008–09ರ ಸಾಲಿನಲ್ಲಿ ವಾಸ್ತವಿಕ ಹಣ ರೂ. 1,26,912 ಕೋಟಿಯಿಂದ (2007–08) ರೂ 3,36,992 ಕೋಟಿಗಳಿಗೆ ದಾಪುಗಾಲು ಹಾಕಿ ಆಯವ್ಯಯದಲ್ಲಿ ಅಂದಾಜಿಸಿದ್ದ ರೂ 1,33,287 ಕೋಟಿ ಮೀರಿ ನಾಗಾಲೋಟ ಹಾಕಿದ್ದು ಇದು 2004–05 ರಿಂದ 2007–08ರವರೆಗಿನ ಹಿಂದಿನ ಯಾವುದೇ ಆರ್ಥಿಕ ವರ್ಷದಲ್ಲಿನ ಎರಡು ಪಟ್ಟಿಗಿಂತಲೂ ಅದಿಕವಾಗಿದೆ. ಆದರೆ ನಾವು ಆಯವ್ಯಯದ ಅಂದಾಜು ನೋಡಿದರೆ, 2010–11ರ ಆರ್ಥಿಕ ಕೊರತೆ ರೂ. 3,81,408 ಕೋಟಿಯಾಗಿದ್ದು, ಇದು 2009–10 ರ ಆರ್ಥಿಕ ವರ್ಷಕ್ಕಿಂತ ಕಡಿಮೆಯಾಗಿದೆ. 2009–10 ರಿಂದ 2014–15ರವರೆಗೆ ವಾಸ್ತವಿಕ ಆರ್ಥಿಕ ಕೊರತೆಯಲ್ಲಿ ತೀವ್ರ ಏರಿಕೆ ಕಂಡುಬರುತ್ತದೆ, ರೂ. 4,00,996 ಕೋಟಿಯಿಂದ ರೂ. 5,31,177 ಕೋಟಿ. ಶೇಕಡಾವಾರು ಆರ್ಥಿಕ ಕೊರತೆಯಲ್ಲಿ ಇಳಿಕೆ ಕಂಡುಬಂದರೂ, ಸರ್ಕಾರದ ಒಟ್ಟು ಸಾಲದಲ್ಲಿ ವಾಸ್ತವಿಕದ ಪ್ರಕಾರ ಹಲವು ಪಟ್ಟು ಏರಿಕೆಯಾಗಿರುವುದು ಕಾಳಜಿಯ ವಿಚಾರ. ದಕ್ಷ ಆಯವ್ಯಯದ ಮೂಲಕ ಭಾರತದಲ್ಲಿನ ಆರ್ಥಿಕ ಕೊರತೆಯ ಬೆಳವಣಿಗೆಯನ್ನು ಸರ್ಕಾರ ವಾಸ್ತವಿಕದ ಜೊತೆಗೆ ಶೇಕಡಾ ಬೆಳವಣಿಗೆಯನ್ನು ತಡೆಗಟ್ಟಿದಾಗ ಮಾತ್ರ ಉತ್ತಮ ಆರ್ಥಿಕ ವಿವೇಕ ಸಾಧಿಸಬಲ್ಲದು.

ಸರ್ಕಾರದ ವಾಸ್ತವಿಕ ವಿರುದ್ಧ ಅಂದಾಜು ವಾಸ್ತವಿಕ ವ್ಯಯವನ್ನು ನೀವು ಹೋಲಿಸಿ ನೋಡಿದಾಗ

**ಪಟ್ಟಿ – 3 ಭಾರತದ ಆರ್ಥಿಕ ಕೊರತೆಯ ಬೆಳವಣಿಗೆ**

**ಭಾರತದಲ್ಲಿನ ಆರ್ಥಿಕ ಕೊರತೆಯ ಬೆಳವಣಿಗೆ : ಎಫ್.ಆರ್.ಬಿ.ಎಂ.ಎ. ನಂತರದ ವಿಶ್ಲೇಷಣೆ**

(ಕೋಟಿ ರೂ. ಗಳಲ್ಲಿ)


| ವರ್ಷ | 2004–05 | 2005–06 | 2006–07 | 2007–08 | 2008–09 | 2009–10 | 2010–11 | 2011–12 | 2012–13 | 2013–14 | 2014–15 |
|---|---|---|---|---|---|---|---|---|---|---|---|
| ಅಂದಾಜು ಆರ್ಥಿಕ ಕೊರತೆ | 137407 | 151144 | 148686 | 150948 | 133287 | 400996 | 381408 | 412817 | 513590 | 542499 | 531177 |
| ವಾಸ್ತವಿಕ ಆರ್ಥಿಕ ಕೊರತೆ | 125202 | 146435 | 142573 | 126912 | 336992 | 418482 | 373591 | 515990 | 490190 | ಲಇ. | – |

ಮೂಲ: ಭಾರತದ ಆಯವ್ಯಯ ದಾಖಲೆಗಳಿಂದ ಲೇಖಕರ ಸಂಕಲನ

2010–11 ಮತ್ತು 2013–14 ಆರ್ಥಿಕ ವರ್ಷದಲ್ಲಿ ವಾಸ್ತವಿಕ ಒಟ್ಟು ವ್ಯಯದಲ್ಲಿ ಅಂಚಿನ ಕಡಿತ ಆಗಿರುವುದನ್ನು ಬಿಟ್ಟಲ್ಲಿ 2008–09 ರಿಂದ 2014–15ರವರೆಗೆ ಸರ್ಕಾರದ ವ್ಯಯದಲ್ಲಿ ಏರಿಕೆಯಾಗಿರುವುದನ್ನು ಕಾಣಬಹುದು.

## ಸರ್ಕಾರದ ಪ್ರಯತ್ನಗಳು

ತಮ್ಮದೇ ನಿಶ್ಚಿತ ಮತ್ತು ನಿಶ್ಚಯಾತ್ಮಕ ಪರಿಣಾಮಗಳಿರುವ ಹಲವಾರು ಅಂಶಗಳು ಗಣನೆಗೆ ತೆಗೆದುಕೊಂಡಾಗ ಆರ್ಥಿಕ ಕೊರತೆಯನ್ನು ಅಪೇಕ್ಷಿತ ಮಟ್ಟದ್ದಲ್ಲಿ




ಚಿತ್ರ – 3

ತಡೆಗಟ್ಟಬಹುದು. ಫಲಿತಾಂಶವನ್ನು ನಿರೀಕ್ಷಿತ ಮಟ್ಟದಲ್ಲಿ ಸಾಧಿಸಬೇಕಾದರೆ ದಶಾಂಶ ರೂಪದಲ್ಲಿ ಆರ್ಥಿಕ ಕೊರತೆಯನ್ನು ತಡೆಗಟ್ಟುವುದು ಮಾತ್ರವಲ್ಲದೆ ವಾಸ್ತವಿಕ ಅಂಕಿಯ ಪ್ರಕಾರವೂ ತಡೆಗಟ್ಟಬೇಕಾಗುತ್ತದೆ. ಆರ್ಥಿಕ ವ್ಯವಸ್ಥೆಯ ವಿಸ್ತರಣೆ, ತೆರಿಗೆಯ ಅಪರಿಮಿತತೆ, ತೆರಿಗೆ ಸಂಗ್ರಹದಲ್ಲಿ ಏರಿಕೆ, ಉತ್ತಮ ತೆರಿಗೆ ಕಾರ್ಯದ ನಿರ್ವಹಣೆ, ತೆರಿಗೆ ಏರಿಕೆ–ಜಿ.ಡಿ.ಪಿ. ಪ್ರಮಾಣದ ಅನುಪಾತದ ಪ್ರಕಾರ ಹಾಗೂ ಖರ್ಚಿನ ಬಾಬಿನಲ್ಲಿ ದಕ್ಷತೆ ಇತ್ಯಾದಿಗಳ ಮೂಲಕ ಎಫ್.ಆರ್.ಬಿ.ಎಂ. ಕಾಯ್ದೆಯಲ್ಲಿ ಉದ್ದೇಶಿಸಿರುವ ಜಿ.ಡಿ.ಪಿ.ಯ ಶೇ. 3 ಮಟ್ಟದಲ್ಲಿ ಆರ್ಥಿಕ ಕೊರತೆಯನ್ನು ತಡೆಗಟ್ಟಬಹುದು. ಭಾರಿ ಗಾತ್ರದ ಪರಿಸರ, ಉತ್ತಮ ಮತ್ತು ಗರಿಷ್ಠ ಮಟ್ಟದ ಆಡಳಿತ ಹಾಗೂ ಎಲ್ಲದಕ್ಕಿಂತ ಹೆಚ್ಚಿನದಾಗಿ ಜನರ ಪಾತ್ರ ಆರ್ಥಿಕ ಕ್ರೋಢೀಕರಣ ಕಾರ್ಯದಲ್ಲಿ ಹೆಚ್ಚಿನ ಪ್ರಾಧಾನ್ಯತೆ ಪಡೆದುಕೊಳ್ಳುತ್ತವೆ. ಆರ್ಥಿಕ ನಿಯಂತ್ರಣದಲ್ಲಿ ನಿರ್ದಿಷ್ಟ ಗುರಿಯನ್ನು ಸಾಧಿಸಲು ಜಾರಿಗೆ ತರಬಹುದಾದ ಕೆಲವು ಸಾರ್ವತ್ರಿಕ ಕ್ರಮಗಳನ್ನು ಮುಂದೆ ವಿವರಿಸಲಾಗಿದೆ.


**1. ವೆಚ್ಚದಲ್ಲಿ ವಿವೇಚನೆ**

ನೈಜ ಅರ್ಥದಲ್ಲಿ ಸರ್ಕಾರದ ವೆಚ್ಚದಲ್ಲಿ ತಾರ್ಕಿಕತೆ ತರುವುದು ಅಷ್ಟು ಸುಲಭದ ಕಾರ್ಯವಲ್ಲ. ಏಕೆಂದರೆ ಸರ್ಕಾರದ ಹಲವಾರು ಅಭಿವೃದ್ಧಿಯ ಉಪಕ್ರಮಗಳನ್ನು ಕಾಲಕ್ರಮೇಣ ನಿರ್ವಹಿಸಬೇಕಾಗುತ್ತದೆ.

ಆಹಾರ, ಕೃತಕ ಗೊಬ್ಬರ ಮತ್ತು ಪೆಟ್ರೋಲಿಯಂ ಉತ್ಪಾದನೆಗಳಿಗೆ ಕೊಡುವ ಪ್ರಮುಖ ಸಹಾಯ ಧನದಲ್ಲಿ ಕಡಿತ ತರುವುದು ಅವಶ್ಯಕವಾಗುತ್ತದೆ. ಅಲ್ಲದೆ, ಹಲವಾರು ಖರ್ಚುಗಳಲ್ಲಿ ತಾರ್ಕಿಕತೆ ತರುವ ಉದ್ದೇಶದಿಂದ ಹಾಗೂ ವಿವಿಧ ಬಾಬುಗಳಿಗೆ ಒದಗಿಸುವ ಹಣದಲ್ಲಿ ದಕ್ಷತೆ ತರುವ ಉದ್ದೇಶದಿಂದ ಸರ್ಕಾರ 'ವೆಚ್ಚ ಪರಿಷ್ಕರಣಾ ಆಯೋಗ'ವನ್ನು ರಚಿಸಿದೆ.

**2. ಬಂಡವಾಳ ಹೂಡಿಕೆ ಹಿಂತೆಗೆತ**

ಕೊರತೆಯನ್ನು ತುಂಬಿಕೊಳ್ಳಲು ಸರ್ಕಾರಿ ಉದ್ದಿಮೆಗಳ ಬಂಡವಾಳವನ್ನು ಹಿಂತೆಗೆದುಕೊಳ್ಳುವುದು ಕುಟುಂಬದಲ್ಲಿನ ಸಂಪತ್ತನ್ನು ಮಾರಿದಂತೆ ಹಾಗೂ ಏಳಿಗೆ, ಉದ್ಯೋಗ ನಿರ್ಮಾಣ ಮತ್ತು ಆದಾಯ ಉತ್ಪತ್ತಿಯನ್ನು ನಿಶ್ಶಕ್ತಗೊಳಿಸುವುದರಿಂದ




ಇದು ತೀವ್ರ ಸ್ವರೂಪದ ಒಂದು ಕಾಳಜಿಯ ವಿಚಾರವೂ ಹೌದು. ಇನ್ನೂ ನಿರ್ದಿಷ್ಟವಾಗಿ ಹೇಳಬೇಕಾದರೆ, ರಾಷ್ಟ್ರೀಕರಣ ಕೈಬಿಡುವುದು ಸಂವಿಧಾನದ ಸಾಮಾಜಿಕ ಕಟ್ಟುಪಾಡಿನ ಚೌಕಟ್ಟಿಗೆ ಭಾರೀ ಹೊಡೆತ ತರುತ್ತದೆ.

ಆದರೆ ಈ ಪ್ರಕ್ರಿಯೆಯಿಂದ ಬರುವ ಆದಾಯವನ್ನು ಆರ್ಥಿಕ ಕೊರತೆಗೆ ಬಳಸಿಕೊಳ್ಳುವ ಸಲುವಾಗಿ ನಷ್ಟ ಹೊಂದುತ್ತಿರುವ ಸರ್ಕಾರಿ ಉದ್ದಿಮೆಗಳು ಮತ್ತು ರೋಗಗ್ರಸ್ಥ ಉದ್ದಿಮೆಗಳನ್ನು ನಷ್ಟದಿಂದ ಮುಕ್ತಗೊಳಿಸಬೇಕಾದ ಅವಶ್ಯಕತೆ ಇದೆ. ಇದು ಆದಾಯ ಕೊರತೆಯನ್ನೂ ಕಡಿಮೆ ಮಾಡುತ್ತದೆ.

**3. ತೆರಿಗೆ ಮತ್ತು ತೆರಿಗೆಯೇತರ ಆದಾಯದ ವೃದ್ಧಿ**

ತೆರಿಗೆ ಮತ್ತು ತೆರಿಗೆಯೇತರ ಬಾಬುಗಳ ಮೂಲ ಮತ್ತು ಹಣ ಸಂಗ್ರಹಣೆ ಎರಡರಿಂದಲೂ ಆದಾಯವನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಗಳು ಜರುಗಬೇಕು. ಉದ್ದೇಶವಾದರೂ ಆರ್ಥಿಕ ಕೊರತೆಯನ್ನು ನಿರ್ದೇಶಿತ ಮತ್ತು ನಿರೀಕ್ಷಿತ ಗುರಿಯೊಳಗೆ ಇಟ್ಟುಕೊಳ್ಳುವುದರ ಮೂಲಕ ಮುಂದುವರೆಯುವುದು. ತೆರಿಗೆ ಪ್ರಫುಲ್ಲತೆ, ತೆರಿಗೆ ಸಂಗ್ರಹದಲ್ಲಿ ಏರಿಕೆ ಮತ್ತು ಉತ್ತಮ ತೆರಿಗೆ ನಿರ್ವಹಣೆಯ ಮೂಲಕ ಮುಂದೆ ಜಿ.ಡಿ.ಪಿ. ಪ್ರಮಾಣಕ್ಕೆ ಅನುಗುಣವಾಗಿ ತೆರಿಗೆಯನ್ನು ಅಧಿಕ ಮಟ್ಟದಲ್ಲಿ ಸಾಧಿಸಲು ಯೋಜಿತ ರೀತಿ ಪ್ರಯತ್ನಗಳು ಜರುಗಬೇಕಾಗಿದೆ. ಇದು ಆರ್ಥಿಕ ಕೊರತೆಯನ್ನು ಬಹಳಷ್ಟು ಕಡಿಮೆ ಮಾಡಲು ಖಂಡಿತಾ ನೆರವಾಗುತ್ತದೆ ಮತ್ತು ಎಫ್. ಆರ್.ಬಿ.ಎಂ. ಕಾಯ್ದೆಯಲ್ಲಿ ಉದ್ದೇಶಿಸಿರುವ ಆರ್ಥಿಕ ವಿವೇಚನೆಯನ್ನು ಸಾಧಿಸಲು ನೆರವಾಗುತ್ತದೆ. ತೆರಿಗೆಯೇತರ ನೀತಿಯನ್ನು ವೈಜ್ಞಾನಿಕವಾಗಿ ರೂಪಿಸಿ ತೆರಿಗೆಯೇತರ ಬಾಬನ್ನು ದಕ್ಷತೆಯ ಮೂಲವನ್ನಾಗಿ ಅವಲಂಬಿಸಬಹುದು.

ತೆರಿಗೆಯೇತರ ಮೂಲಗಳಿಂದ ಬರುವ ಆದಾಯ ಒಂದು ಉತ್ತಮ ಮಾರ್ಗವಾಗಿದ್ದು ಸಾರ್ವಜನಿಕ ಉದ್ದಿಮೆಗಳನ್ನು ಸಮರ್ಥವಾಗಿ ನಿರ್ವಹಿಸುವುದರ ಮೂಲಕ ತೀವ್ರಗೊಳಿಸಬಹುದು. ದಕ್ಷತೆಯ ವೃದ್ಧಿ, ಭ್ರಷ್ಟಾಚಾರ ನಿಯಂತ್ರಣ ಮತ್ತು ಆಡಳಿತದ ನಷ್ಟದಲ್ಲಿ ಕಡಿತವನ್ನು ಇದರಿಂದ ಸಾಧಿಸಬಹುದು.

**ಕೊನೆಯ ಮಾತು**

ಸಾಮಾಜಿಕ–ಆರ್ಥಿಕ ಪರಿಸ್ಥಿತಿ ಮತ್ತು ಸಾರ್ವಜನಿಕ ಅವಶ್ಯಕತೆಗಳ ಹಿನ್ನೆಲೆಯಲ್ಲಿ ಅರ್ಥವ್ಯವಸ್ಥೆಯ ಅವಶ್ಯಕತೆಯನ್ನು ಅರ್ಥಮಾಡಿಕೊಂಡ ನಂತರ ಸರ್ಕಾರದ ಆಯವ್ಯಯ ರೂಪಿತವಾಗಬೇಕು.

ವಾಸ್ತವವಾಗಿ, ವಿವಿಧ ಕ್ಷೇತ್ರಗಳಲ್ಲಿ ಕಂಡುಬರುವ ದೇಶದ ಪ್ರಗತಿ ಮತ್ತು ಅಭಿವೃದ್ಧಿಯ ಪಾಲು ಬಡವರು ಮತ್ತು ವಂಚಿತ ಜನತೆಗೆ ಸಿಗದಿದ್ದಲ್ಲಿ ಪ್ರಜಾಪ್ರಭುತ್ವ ತನ್ನ ಮೆರಗನ್ನೇ ಕಳೆದುಕೊಳ್ಳುತ್ತದೆ. ಆದ್ದರಿಂದ ಮುಖ್ಯವಾಗಿ ಸಮಾಜದಲ್ಲಿನ ವಂಚಿತ, ಅಂಚಿನ ಹಾಗೂ ಎಲ್ಲ ವರ್ಗಗಳ ಕ್ಷೇಮಾಭಿವೃದ್ಧಿಗಾಗಿ ಸುಸ್ಥಿರ ಹಾಗೂ ಒಳಗೊಂಡ ಅಭಿವೃದ್ಧಿ ಮಾದರಿಯ ವಿವಿಧ ಕ್ಷೇತ್ರಗಳಲ್ಲಿನ ಸಮಸ್ಯೆಗಳನ್ನು ಬಗೆಹರಿಸುವಂತಹ ಕಾರ್ಯಕ್ರಮಗಳನ್ನು ರೂಪಿಸಲು ಭಾರತ ಸರ್ಕಾರ ಎಲ್ಲ ರೀತಿಯ ಉದ್ದೇಶಪೂರ್ವಕ ಮತ್ತು ಜಾಗರೂಕ ಪ್ರಯತ್ನ ಕೈಗೊಳ್ಳಬೇಕಾಗಿದೆ. ❑

# ಮೂಲಭೂತಸೌಕರ್ಯ ಮತ್ತು ಇಂಧನ ವಲಯ

* ಡಾ. ಹಿರಣ್ಮಯ್ ರಾಯ್
** ಪ್ರೊ. ಅನಿಲ್ ಕುಮಾರ್
ಕನ್ನಡಕ್ಕೆ : ಕೆ.ಎ.ರಾಮಕೃಷ್ಣ ಮೂರ್ತಿ



**ಖನಿಜಗಳ ಮೇಲಿನ ರಾಜಧನವನ್ನು ಪರಿಷ್ಕರಿಸಲು ರಾಜ್ಯ ಸರ್ಕಾರಗಳು ಹಲವಾರು ಬಾರಿ ಮನವಿ ಮಾಡಿದ್ದು, ರಾಜ್ಯಗಳಿಗೆ ಭಾರಿ ಪ್ರಮಾಣದ ರಾಜ್ಯಾದಾಯಕ್ಕೆ ಅನುಕೂಲ ಮಾಡಿಕೊಡಲು ಈ ಬಜೆಟ್‌ನಲ್ಲಿ ಅವಕಾಶ ಕಲ್ಪಿಸಲಾಗಿದೆ. ರಾಜಧನವನ್ನು ಮೂರು ವರ್ಷಗಳ ನಂತರ ಪರಿಷ್ಕರಣೆ ಮಾಡಬಹುದಾಗಿದೆ.**

ಕೇಂದ್ರ ಸರ್ಕಾರ ತನ್ನ ಮೊದಲ ಬಜೆಟ್ ಮಂಡಿಸಿದಾಗ ನಗದು ಕೊರತೆ ಎದುರಿಸುತ್ತಿರುವ ಮೂಲಭೂತಸೌಕರ್ಯಗಳಿಗೆ ಬೆಂಬಲದ ಆಧಾರದಲ್ಲಿ ದೀರ್ಘ ಕಾಲಿಕ ನಿಧಿ ಒದಗಿಸಲು ಮಾರ್ಗಸೂಚಿಯನ್ನು ಹಾಕಿಕೊಟ್ಟಿದೆ. ಇದರಲ್ಲಿ ಮೂಲಭೂತಸೌಕರ್ಯ ಹೂಡಿಕೆ ವಿಶ್ವಸ್ಥ ಮಂಡಳಿ (ಐಎನ್‌ವಿಐಟಿ'ಸ್) ಮತ್ತು ರಿಯಲ್ ಎಸ್ಟೇಟ್ ಹೂಡಿಕೆ ವಿಶ್ವಸ್ಥ ಮಂಡಳಿ (ಆರ್‌ಇಐಟಿಸ್) ರಚಿಸುವುದು ಸೇರಿದೆ. ಜಾಗತಿಕ ಮಾರುಕಟ್ಟೆಯೊಂದಿಗೆ ಸ್ಪರ್ಧಿಸಲು ಹಣಕಾಸು ಸಚಿವಾಲಯ ಈ ವಿಶ್ವಸ್ಥ ಮಂಡಳಿಗಳಿಗೆ ಹಲವಾರು ತೆರಿಗೆ ಪ್ರೋತ್ಸಾಹಗಳನ್ನು ಪ್ರಸ್ತಾಪಿಸಿದೆ. ಭಾರತಕ್ಕೆ ಮುಖ್ಯವಾಗಿ ಅಗತ್ಯವಾದ ಬೃಹತ್ ಯೋಜನೆಗಳ ಕಾರ್ಯನಿರ್ವಹಣೆ ಮತ್ತು ನಿರ್ಮಾಣಕ್ಕೆ ಈ ವಿಶ್ವಸ್ಥ ಮಂಡಳಿಗೆ ಶೀಘ್ರವಾಗಿ ರೂಪುರೇಷೆ ರಚನೆ, ಹೂಡಿಕೆದಾರ ಸ್ನೇಹಿ ಮತ್ತು ಸುಭದ್ರವಾದ ಸಾರ್ವಜನಿಕ ಖಾಸಗಿ ಪಾಲುದಾರಿಕೆ (ಪಿಪಿಪಿ) ಭರವಸೆ ನೀಡಿದೆ.

ವಿಶ್ವಸ್ಥ ಮಂಡಳಿಯಲ್ಲಿರುವ ಹೂಡಿಕೆಯನ್ನು ಕಂಪೆನಿಗಳಿಗೆ ನೀಡುವ ಬಂಡವಾಳ ಹೂಡಿಕೆ ಲಾಭದಂತಹವುಗಳಿಗೆ ಸಮಾನವಾದ ರೀತಿ ಪರಿಗಣಿಸಲಾಗುವುದು. ಅದಕ್ಕಿಂತಲೂ ಹೆಚ್ಚಿನದಾಗಿ ಮೂಲಭೂತಸೌಕರ್ಯ ಯೋಜನೆಗಳಲ್ಲಿ ಹೂಡಿಕೆ ಮಾಡಿದ ವಿಶ್ವಸ್ಥ ಮಂಡಳಿಗಳಿಗೆ ಆದಾಯದ ಬಡ್ಡಿಗೆ ಯಾವುದೇ ತೆರಿಗೆ ವಿಧಿಸುವುದಿಲ್ಲ ಮತ್ತು ಈ ಮೂಲಭೂತಸೌಕರ್ಯ ಯೋಜನೆಗಳಿಗೆ ತೆರಿಗೆ ಹಿಡಿಯಲಾಗುವುದಿಲ್ಲ. ಆಸಕ್ತಿದಾಯಕ ವಿಚಾರವೆಂದರೆ ವಿಶ್ವಸ್ಥ ಮಂಡಳಿ ಪಡೆಯುವ ಲಾಭಾಂಶವನ್ನು ವಿಶ್ವಸ್ಥ ಮಂಡಳಿಯ ಯೂನಿಟ್ ಹೊಂದಿರುವವರಿಗೆ ಅದನ್ನು ಯಾವುದೇ ತೆರಿಗೆ ಮುರಿದುಕೊಳ್ಳದೆ ವಿತರಿಸಲಾಗುವುದು. ಇದರಿಂದ ಆದಾಯ ತರುವ ಮೂಲಭೂತಸೌಕರ್ಯ ಯೋಜನೆಗಳಲ್ಲಿ ಪಣಒಡ್ಡುವುದನ್ನು ನಿಯಂತ್ರಿಸಬಹುದು. ಮೂಲಭೂತಸೌಕರ್ಯ ಹೂಡಿಕೆ ವಿಶ್ವಸ್ಥ ಮಂಡಳಿ ಮತ್ತು ರಿಯಲ್ ಎಸ್ಟೇಟ್ ಹೂಡಿಕೆ ವಿಶ್ವಸ್ಥ ಮಂಡಳಿಗಳಿಗೆ ತೆರಿಗೆ ಮಾರ್ಪಡು ಮಾಡುವ ಯೋಜನೆಗಳನ್ನು ಅನುಷ್ಠಾನಗೊಳಿಸಲು ಸರ್ಕಾರ ತನ್ನ ಲಕ್ಷ್ಯವನ್ನು ಕೇಂದ್ರೀಕರಿಸಿದೆ.

ಗ್ರಾಮೀಣ ಮೂಲಭೂತಸೌಕರ್ಯ ಅಭಿವೃದ್ಧಿ ನಿಧಿಯ ಮೂಲಧನವನ್ನು ಹೆಚ್ಚಿಸಲು ಬಜೆಟ್‌ನಲ್ಲಿ ಯೋಜನೆಯೊಂದನ್ನು ರೂಪಿಸಿದ್ದು, ಮಧ್ಯಂತರ ಬಜೆಟ್‌ನಲ್ಲಿ ಕೊಟ್ಟ ಗುರಿಯಲ್ಲಿ 25,000 ಕೋಟಿಗೆ ರೂಪಾಯಿಗಳಿಗೆ ಹೆಚ್ಚುವರಿಯಾಗಿ 5,000 ಕೋಟಿ ರೂಪಾಯಿ ನೀಡಲಿದೆ. ಇದರಿಂದ ದೇಶದ ಕೃಷಿ ಮತ್ತು ಗ್ರಾಮೀಣ ವಲಯದ ಮೂಲಭೂತಸೌಕರ್ಯ ಸೃಷ್ಟಿಸಲು ಸಹಾಯವಾಗಲಿದೆ. ಆದ್ದರಿಂದ ಖಚಿತವಾಗಿ ಗ್ರಾಮೀಣ ಅಭಿವೃದ್ಧಿ ವೇಗವನ್ನು ಪಡೆದುಕೊಳ್ಳಲಿದೆ.

ಕೃಷಿ ಉತ್ಪನ್ನಗಳು ಬಹುಕಾಲ ಕೆಡದಂತೆ ಅವುಗಳ ಅವಧಿಯನ್ನು ಹೆಚ್ಚಿಸುವ ಸಲುವಾಗಿ ಉಗ್ರಾಣಗಳ ಅನುಕೂಲಗಳನ್ನು ಹೆಚ್ಚು ಮಾಡಲು

* ಅರ್ಥಶಾಸ್ತ್ರ ಉಪನ್ಯಾಸಕರು, ಯುಪಿಇಎಸ್. email : h.roy10@gmail.com
** ಮುಖ್ಯಸ್ಥರು, ಇಂಧನ ವಿಭಾಗ, ಯುಪಿಇಎಸ್. email : anil3016@rediffmail.com

ಅವಕಾಶ ಮಾಡಿಕೊಡಲಾಗಿದೆ. ಇದರಿಂದಾಗಿ ಕೃಷಿಕರ ಸಾಮರ್ಥ್ಯವನ್ನು ವೃದ್ಧಿಸಲು ಹೆಚ್ಚಿನ ಪ್ರಾಮುಖ್ಯತೆ ನೀಡಲಾಗಿದೆ. ಇದನ್ನು ಗಮನದಲ್ಲಿರಿಸಿಕೊಂಡು ದೇಶದಲ್ಲಿ ವೈಜ್ಞಾನಿಕ ಉಗ್ರಾಣಗಳ ಮೂಲಭೂತಸೌಕರ್ಯದ ಅಗತ್ಯವನ್ನು ಪರಿಗಣಿಸಿ, ಈ ಅನುಕೂಲಗಳನ್ನು ಸೃಷ್ಟಿಸಲು 5000 ಕೋಟಿ ರೂಪಾಯಿಗಳ ಮೊತ್ತವನ್ನು 2014-15 ನೇ ಸಾಲಿ ಬಜೆಟ್‌ನಲ್ಲಿ ಒದಗಿಸಲಾಗಿದೆ.

ಭಾರತ 900 ಯೋಜನೆಗಳೊಂದಿಗೆ ಪಿಪಿಪಿ ಮಾರುಕಟ್ಟೆಯಲ್ಲಿ ದೊಡ್ಡದಾಗಿ ಹೊರಹೊಮ್ಮಿದೆ. ಅವುಗಳಲ್ಲಿ ಕೆಲವು ಮೂಲಭೂತ ಸೌಕರ್ಯಗಳಾದ ವಿಮಾನ ನಿಲ್ದಾಣ, ಬಂದರು, ಹೆದ್ದಾರಿ ನಿರ್ಮಾಣಗಳಲ್ಲಿ ಜಾಗತಿಕ ಅಭಿವೃದ್ಧಿಯಲ್ಲಿ ಮಾದರಿಯಾಗಿವೆ. ಭಾರತದ ಕರಾರು ವ್ಯವಸ್ಥೆ ನಿಷ್ಠುರತೆ ಹೊಂದಿರುವುದರಿಂದ ಪಿಪಿಪಿ ರಚನೆ ದುರ್ಬಲವಾಗಿದೆ. ಕರಾರು ವ್ಯವಸ್ಥೆ ಸೂಕ್ಷ್ಮ ವ್ಯತ್ಯಾಸ ಮತ್ತು ಅಧುನಿಕ ಮಾದರಿಯಲ್ಲಿ ರಚಿಸುವ ಅಗತ್ಯವಿದೆ ಮತ್ತು ವಿವಾದಗಳನ್ನು ಅದಷ್ಟು ಶೀಘ್ರವಾಗಿ ಪರಿಹರಿಸುವ ಕೌಶಲ್ಯವನ್ನು ಅಭಿವೃದ್ಧಿ ಪಡಿಸಬೇಕು. ಭಾರತದ 3 ಪಿ ಎಂದು ಕರೆಯುವ ಮುಖ್ಯವಾಹಿನಿ ಪಿಪಿಪಿಗೆ ಬೆಂಬಲ ನೀಡಲು 500 ಕೋಟಿ ರೂಪಾಯಿಯ ಮೂಲಧನ ಸ್ಥಾಪನೆಗೆ ಉದ್ದೇಶಿಸಲಾಗಿದೆ.

ವ್ಯವಹಾರ ಅಭಿವೃದ್ಧಿ ಮತ್ತು ಉದ್ಯೋಗ ಅಭಿವೃದ್ಧಿ ಅತ್ಯಂತ ಮುಖ್ಯವಾಗಿದ್ದು ಬಂದರುಗಳ ಸಂಪರ್ಕಕ್ಕಾಗಿ ಹದಿನಾರು ಹೊಸ ಬಂದರು ಯೋಜನೆಗಳನ್ನು ಪ್ರಸ್ತಾಪಿಸಿದೆ. ಭಾರತದಲ್ಲಿ ನಿಯಂತ್ರಣದಲ್ಲಿರುವ ಹಡಗಿನ ಒಂದು ಟನ್‌ಗೆ ವಿಧಿಸುವ ಬಾಡಿಗೆಯನ್ನು ಹೆಚ್ಚಿಸಲು ಪ್ರೋತ್ಸಾಹಿಸುವ ನೀತಿಯೊಂದನ್ನು ರಚಿಸಲಿದೆ. ಟುಟಿಕೋರಿನ್‌ನ 1 ನೇ ಹಂತದ ಹೊರವಲಯ ಬಂದರು ಯೋಜನೆ ಅಭಿವೃದ್ಧಿ ಪಡಿಸಲು ಹಾಗೂ ಕಾಂಡ್ಲಾ ಮತ್ತು ಜೆಎನ್‌ಪಿಟಿಯ ವಿಶೇಷ ಆರ್ಥಿಕ ವಲಯ (ಎಸ್‌ಇಜೆಡ್) ಅಭಿವೃದ್ಧಿ ಪಡಿಸಲು 11,635 ಕೋಟಿ ರೂಪಾಯಿಗಳನ್ನು ತೆಗೆದಿರಿಸಲಾಗಿದೆ. ಪ್ರಸ್ತುತ ಆರ್ಥಿಕ ವರ್ಷದಲ್ಲಿ ಭಾರತೀಯ ಹಡಗು ಉದ್ದಿಮೆಯನ್ನು ಪ್ರೋತ್ಸಾಹಿಸಲು ಸಮಗ್ರ ನೀತಿಯೊಂದನ್ನು ಘೋಷಿಸಲಾಗುವುದು. ಭಾರತೀಯ ವಿಮಾಣ ನಿಲ್ದಾಣ ಪ್ರಾಧಿಕಾರ ಅಥವಾ ಪಿಪಿಪಿ ಗಳ ಮೂಲಕ ಮೊದಲ



ಮತ್ತು ಎರಡನೇ ಶ್ರೇಣಿಯ ನಗರಗಳಲ್ಲಿ ಹೊಸ ವಿಮಾನ ನಿಲ್ದಾಣಗಳ ನಿರ್ಮಾಣ ಅನುಷ್ಠಾನಗೊಳಿಸಲು ಆರಂಭಿಸಲಾಗುವುದು.

ರಸ್ತೆ ವಲಯಕ್ಕೆ ಭಾರಿ ಮೊತ್ತ ಹೂಡಿಕೆ ಅಗತ್ಯವಿದೆ. ಉತ್ತರ ಪೂರ್ವಕ್ಕೆ 3,000 ಕೋಟಿ ರೂಪಾಯಿ ಸೇರಿದಂತೆ ಎನ್‌ಎಚ್‌ಎಐ ಮತ್ತು ರಾಜ್ಯ ರಸ್ತೆಗಳಿಗೆ 37,880 ಕೋಟಿ ರೂಪಾಯಿಗಳ ಹೂಡಿಕೆಯನ್ನು ಹಣಕಾಸು ಸಚಿವಾಲಯ ಪ್ರಸ್ತಾಪಿಸಿದೆ. 850 ಕಿ.ಮೀಗಳ ರಾಷ್ಟ್ರೀಯ ಹೆದ್ದಾರಿ ನಿರ್ಮಾಣ ಕಾರ್ಯದ ಗುರಿಯನ್ನು ಈ ಆರ್ಥಿಕ ವರ್ಷದಲ್ಲಿ ಸಾಧಿಸಲಾಗುವುದು. ಆಯ್ದ ಎಕ್ಸ್‌ಪ್ರೆಸ್ ಹೆದ್ದಾರಿಗಳಿಗೆ ಸಮಾನವಾಗಿ ಕೈಗಾರಿಕಾ ಕಾರಿಡಾರ್ ಅಭಿವೃದ್ಧಿ ಕಾಮಗಾರಿಗಳನ್ನು ಸರ್ಕಾರ ಕೈಗೊಳ್ಳಲಿದೆ. ಯೋಜನೆ ತಯಾರಿಗೆ ಎನ್‌ಎಚ್‌ಎಐ 500 ಕೋಟಿ ರೂಪಾಯಿಗಳನ್ನು ತೆಗೆದಿರಿಸಿದೆ.

ಇಂಧನ ವಲಯಕ್ಕೆ ಸಂಬಂಧಿಸಿದಂತೆ, ಪ್ರತಿ ಟನ್‌ಗೆ 100 ರೂಪಾಯಿ ಹಸಿರು ತೆರಿಗೆ ಹೆಚ್ಚಿಸಿದ್ದರಿಂದ ವಿದ್ಯುತ್ ದರಗಳು ಪ್ರತಿ ಯೂನಿಟ್‌ಗೆ 3.5 ಪೈಸೆ ಹೆಚ್ಚಲಿದೆ. ಆಂತರಿಕವಾಗಿ ಸೌರ ವಿದ್ಯುತ್ ಉತ್ಪಾದನೆ ಮತ್ತು ಗಾಳಿ ವಿದ್ಯುತ್ ಉಪಕರಣಗಳ ಉತ್ಪಾದನೆಯನ್ನು ಪ್ರೋತ್ಸಾಹಿಸುವ ಸಲುವಾಗಿ ತೆರಿಗೆ ಮುಂತಾದವುಗಳಿಗೆ ಬಜೆಟ್‌ನಲ್ಲಿ 1000 ಕೋಟಿ ರೂಪಾಯಿಗಳ ಅವಕಾಶ ಕಲ್ಪಿಸಲಾಗಿದೆ. ವಿದ್ಯುತ್ ಕಂಪೆನಿಗಳಿಗೆ ಉತ್ತೇಜನ ನೀಡುವ ಸಲುವಾಗಿ 2017 ರ ಮಾರ್ಚ್ 31 ರವರೆಗೆ ಸೆಕ್ಷನ್ 80 ಐಎ ಪ್ರಕಾರ ವಿದ್ಯುತ್ ಉತ್ಪಾದನೆ, ವರ್ಗಾವಣೆ ಮತ್ತು ವಿತರಣೆಗೆ 10 ವರ್ಷಗಳ ತೆರಿಗೆ ರಜಾ ವಿಸ್ತರಿಸಲಾಗಿದೆ. ರಾಜಸ್ಥಾನ, ಗುಜರಾತ್, ತಮಿಳು ನಾಡು ಮತ್ತು ಜಮ್ಮು ಮತ್ತು ಕಾಶ್ಮೀರದ ಲಡಕ್‌ನಲ್ಲಿ 4000 ಮೆಗಾ ವ್ಯಾಟ್ ಸೌರ ವಿದ್ಯುತ್ ಘಟಕಗಳ ನಿರ್ಮಾಣಕ್ಕೆ ಹಣಕಾಸು ಸಚಿವಾಲಯ 500 ಕೋಟಿ ರೂಪಾಯಿಗಳನ್ನು ತೆಗೆದಿರಿಸಿದೆ. ವಿದ್ಯುತ್ ಮತ್ತು ಡಿಸೇಲ್ ಸಬ್ಸಿಡಿ ಉಳಿಸಲು ಒಂದು ಲಕ್ಷ ಸೌರ ವಿದ್ಯುತ್ ಪಂಪ್‌ಸೆಟ್‌ಗಳನ್ನು ಆಳವಡಿಸಿಕೊಳ್ಳಲು 500 ಕೋಟಿ ರೂಪಾಯಿಗಳನ್ನು ಕಲ್ಪಿಸಿದೆ. ಒಂದು ಮೆಗಾ ವ್ಯಾಟ್‌ವರೆಗೆ ವಿದ್ಯುತ್ ಉತ್ಪಾದಿಸುವ ಸೌರ ಪ್ಯಾನೆಲ್ ಆಳವಡಿಸುವ ಪ್ರತಿ ಯೋಜನೆಗೆ 100 ಕೋಟಿ ರೂಪಾಯಿಗಳವರೆಗೆ ವೆಚ್ಚ ಮಾಡಲಾಗುತ್ತಿದೆ. ಸ್ವದೇಶಿ ಉತ್ಪಾದಕರಿಗೆ ಲಾಭವಾಗುವ ದೃಷ್ಟಿಯಿಂದ ಸೌರ ಪಾನೆಲ್ ತಯಾರಿಸಲು ಬೇಕಾದ ಶೀಟ್‌ಗಳು, ಫ್ಲಾಟ್ ಕಾಪರ್ ವೈರ್ ಮುಂತಾದವುಗಳ ಅಮದು ಮೇಲಿನ ತೆರಿಗೆ ಶೇ.5 ರಷ್ಟು ಕಡಿತ ಮಾಡಿದೆ. ಇದೇ ಸಂದರ್ಭದಲ್ಲಿ ಗಾಳಿ ಜನರೇಟರ್‌ಗಳಲ್ಲಿ ಉಪಯೋಗಿಸುವ ಬೇರಿಂಗ್ ತಯಾರಿಸಲು ಬೇಕಾದ ಲೋಹಗಳನ್ನು ಅಮದು ಮಾಡಿಕೊಳ್ಳುವವರಿಗೂ ತೆರಿಗೆ ಕಡಿತಗೊಳಿಸಲಾಗಿದೆ. ಆದರೆ ದೇಶಿ ಉತ್ಪಾದಕರ ಅಭಿಪ್ರಾಯದಂತೆ ಈ ರಿಯಾಯಿತಿಗಳು ತೀರ ಕಡಿಮೆ ಮತ್ತು ಅತ್ಯಂತ ತಡವಾಗಿ ಬಂದಿವೆ ಎನ್ನುತ್ತಾರೆ. ಹೆಚ್ಚು ವೆಚ್ಚ ಮಾಡುವುದರಿಂದ ಹಲವಾರು ದೇಶಗಳು ಅಗ್ಗದ ಬೆಲೆಗೆ ಮಾರುವುದರಿಂದ ಅವರಿಗೆ ಲಾಭವಾಗಲಿದೆ ಎನ್ನುವುದು ಉತ್ಪಾದಕರ ಭಯ.

ಶಾಖೋತ್ಪನ್ನ ವಿದ್ಯುತ್ ಹೆಚ್ಚು ಸಮರ್ಥ. ಇದರಲ್ಲಿ ಸ್ವಚ್ಛತೆಯನ್ನು ಪ್ರೋತ್ಸಾಹಿಸಲು 'ಅತ್ಯಾಧುನಿಕ ಸೂಪರ್ ಕ್ರಿಟಿಕಲ್ ಕಲ್ಲಿದ್ದಲು ಆಧಾರಿತ ಉಷ್ಣ ವಿದ್ಯುತ್ ತಂತ್ರಜ್ಞಾನ' ಹೊಸ ಯೋಜನೆಯ ತಯಾರಿಗೆ ಪ್ರಾರಂಭಿಕವಾಗಿ 100 ಕೋಟಿ ರೂಪಾಯಿಗಳನ್ನು ತೆಗೆದಿರಿಸಲಾಗಿದೆ.

ಪುಡಿ ಮಾಡಿದ ಕಲ್ಲಿದ್ದಲು ಸರಬರಾಜು ಮತ್ತು ತೊಳೆಯುವುದು ಸೇರಿದಂತೆ ದೇಶಿ ಕಲ್ಲಿದ್ದಲು ಉತ್ಪಾದನೆ ಹೆಚ್ಚಿಸಲು ಮತ್ತು ಗುಣಮಟ್ಟವನ್ನು ಕಾಪಾಡಿಕೊಳ್ಳುವ ಕಠಿಣ ತಂತ್ರಜ್ಞಾನ ಮತ್ತು ಪರಿಸರ ಸಂರಕ್ಷಣೆಗೆ ಕೇಂದ್ರ ಬಜೆಟ್‌ನಲ್ಲಿ ಕಲ್ಲಿದ್ದಲು ವಲಯದ ಸಮಗ್ರ ಕಾರ್ಯಕ್ರಮಗಳ ಮೂಲಕ ಉತ್ತೇಜನ ನೀಡುತ್ತಿದೆ. ಈಗಾಲೇ ಸ್ಥಗಿತಗೊಡಿರುವ ಈ ವಲಯದ ಪರಿಹಾರ ಹಾಗೂ ಕಾರ್ಯನಿರ್ವಹಿಸುತ್ತಿರುವ ಮತ್ತು 2015 ರ ಮಾರ್ಚ್ ತಿಂಗಳೊಳಗೆ ಕಾರ್ಯಾರಂಭ ಮಾಡುವ ವಿದ್ಯುತ್ ಘಟಕಗಳಿಗೆ ಹಣಕಾಸು ಸಚಿವರು ಯೋಜನೆಯೊಂದನ್ನು ಪ್ರಸ್ತಾಪಿಸಿದ್ದಾರೆ. ಕಲ್ಲಿದ್ದಲು ಸಾಗಾಣಿಕೆಯ ವೆಚ್ಚವನ್ನು ಕಡಿತಗೊಳಿಸುವುದರಿಂದ ವಿದ್ಯುತ್ ದರ ಕಡಿಮೆಯಾಗುವ ಕಾರ್ಯ ಚಾಲ್ತಿಯಲ್ಲಿದೆ. ರಾಜಸ್ತಾನ, ಗುಜರಾತ್, ತಮಿಳು ನಾಡು ಮತ್ತು ಜಮ್ಮು ಮತ್ತು ಕಾಶ್ಮೀರದ ಲಡಾಕ್‌ನಲ್ಲಿ ಅಧುನಿಕವಾದ ಬೃಹತ್ ಸೌರ ವಿದ್ಯುತ್ ಯೋಜನೆಗಳನ್ನು ವಿದ್ಯುತ್ ವಲಯದಲ್ಲಿ ಕೂಡಾ ಪ್ರಸ್ತಾವಿಸಲಾಗಿದೆ. 500 ಕೋಟಿ ರೂಪಾಯಿಗಳನ್ನು ಇದಕ್ಕಾಗಿ ತೆಗೆದಿರಿಸಲಾಗಿದೆ. ಕೃಷಿ ವಲಯದಲ್ಲಿ ಯೋಜನೆಯೊಂದನ್ನು ರೂಪಸಿದ್ದು, ಸೌರ ವಿದ್ಯುತ್ ಚಾಲಿತ ಕೃಷಿ ಪಂಪ್‌ಸೆಟ್‌ಗಳು ಮತ್ತು ನೀರು ಪಂಪ್ ಸ್ಟೇಷನ್‌ಗಳನ್ನು ವಿದ್ಯುತೀಕರಣಗಳಿಸಲು ಒಂದು ಲಕ್ಷ ಪಂಪ್ ಸೆಟ್‌ಗಳಿಗೆ 400 ಕೋಟಿ ರೂಪಾಯಿಗಳನ್ನು ಮೀಸಲಿರಿಸಲಾಗಿದೆ. ಹೆಚ್ಚುವರಿಯಾಗಿ 100 ಕೋಟಿ ರೂಪಾಯಿಗಳನ್ನು ಕಾಲುವೆಗಳ ದಡದಲ್ಲಿ ಒಂದು ಮೆಗಾ ವ್ಯಾಟ್ ಸೌರ ಉದ್ಯಾನ ಅಭಿವೃದ್ಧಿಗೆ ತೆಗೆದಿರಿಸಲಾಗಿದೆ. ದೇಶದಾದ್ಯಂತ ಮರುಬಳಕೆ ಇಂಧನವನ್ನು ಕಡಿತಗೊಳಿಸುವ ಸಲುವಾಗಿ ಹಸಿರು ಇಂಧನ ಕಾರಿಡಾರ್ ಯೋಜನೆ ಅನುಷ್ಠಾನಕ್ಕೆ ಈ ಆರ್ಥಿಕ ವರ್ಷದಲ್ಲಿ ವೇಗ ಕಲ್ಪಿಸಲಾಗುವುದು. ಬಳಸದೆ ಇರುವ ಕೋಲ್ ಬೆಡ್ ಮಿಥೇನ್ ಪತ್ತೆ ಮತ್ತು ಉತ್ಪಾದನೆಯ ವೇಗ ಹೆಚ್ಚಿಸಲು ಈ ಬಜೆಟ್‌ನಲ್ಲಿ ಉದ್ದೇಶಿಸಲಾಗಿದೆ. ಅಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ಪತ್ತೆ ಹಚ್ಚಿ ಉತ್ಪಾದನೆಯನ್ನು ಗರಿಷ್ಠ ಮಟ್ಟಕ್ಕೆ ಹೆಚ್ಚಿಸಲಾಗುವುದು.



ಸ್ವಚ್ಛ ಮತ್ತು ಸಮರ್ಥವಾದ ಪಿಎನ್‌ಜಿ ಬಳಕೆಯನ್ನು ಹೆಚ್ಚಿಸಲಾಗುವುದು. ದೇಶದಲ್ಲಿ ಪ್ರಸ್ತುತ 1500 ಕಿ.ಮೀ ಅನಿಲ ಪೈಪ್‌ಲೈನ್ ವ್ಯವಸ್ಥೆ ಇದೆ. ದೇಶದ ಅನಿಲ ಗ್ರಿಡ್ ಪೂರ್ಣಗೊಳಿಸಲು ಇನ್ನು 1500 ಕಿ.ಮೀ. ಪೈಪ್‌ಲೈನ್ ಅಗತ್ಯವಿದೆ. ಬಜೆಟ್‌ನಲ್ಲಿ ಸೂಕ್ತವಾದ ಪಿಪಿಪಿ ಮಾದರಿಯಲ್ಲಿ ಪೈಪ್‌ಲೈನ್ ಅಭಿವೃದ್ಧಿ ಪಡಿಸಲು ಪ್ರಸ್ತಾವಿಸಿದೆ. ಇದರಿಂದ ದೇಶಿ ಹಾಗೂ ಅಮದು ಅನಿಲ ಬಳಕೆ ಹೆಚ್ಚಲಿದೆ. ದೀಘ ಕಾಲದಲ್ಲಿ ಯಾವುದೇ ಒಂದು ಇಂಧನ ಮೂಲದ ಬಗ್ಗೆ ಅವಲಂಬಿತವಾಗುವುದು ಕಡಿಮೆಗೊಂಡು ಲಾಭವಾಗಲಿದೆ. ಗಣಿಗಾರಿಕೆ ವಲಯದಲ್ಲಿ ಹೂಡಿಕೆ ಮಾಡಲು ಈ ಬಜೆಟ್ ಪ್ರೋತ್ಸಾಹ ನೀಡಿದೆ. ಪರಿಸರ ಸಂರಕ್ಷಣೆಯನ್ನು ತ್ಯಾಗ ಮಾಡದೆ ಕೈಗಾರಿಕೆಗಳಿಗೆ ಅಗತ್ಯವಾದ ಸಹ್ಯ ಗಣಿಗಾರಿಕೆ ಆಚರಣೆಗೆ ತರಲು ಕೂಡಾ ಉತ್ತೇಜನ ನೀಡಿದೆ.

ಖನಿಜಗಳ ಮೇಲಿನ ರಾಜಧನವನ್ನು ಪರಿಷ್ಕರಿಸಲು ರಾಜ್ಯ ಸರ್ಕಾರಗಳು ಹಲವಾರು ಬಾರಿ ಮನವಿ ಮಾಡಿದ್ದು, ರಾಜ್ಯಗಳಿಗೆ ಭಾರಿ ಪ್ರಮಾಣದ ರಾಜ್ಯಾದಾಯ ಅನುಕೂಲ ಮಾಡಿಕೊಡಲು ಈ ಬಜೆಟ್‌ನಲ್ಲಿ ಅವಕಾಶ ಕಲ್ಪಿಸಲಾಗಿದೆ.

ರಾಜಧನವನ್ನು ಮೂರು ವರ್ಷಗಳ ನಂತರ ಪರಿಷ್ಕರಣೆ ಮಾಡಬಹುದಾಗಿದೆ. ಕಳೆದ ಬಾರಿ 2009 ರ ಅಗಸ್ಟ್‌ನಲ್ಲಿ ಪರಿಷ್ಕರಣೆ ಮಾಡಲಾಗಿತ್ತು. ರಾಜ್ಯಗಳಿಗೆ ಹೆಚ್ಚಿನ ರಾಜ್ಯಾದಾಯ ಖಾತ್ರಿಗೊಳಿಸಲು ಬಾಕಿಯಿರುವ ಇನ್ನೊಂದು ಪರಿಷ್ಕರಣೆಯನ್ನು ಮಾಡುವ ಭರವಸೆಯನ್ನು ಹಣಕಾಸು ಸಚಿವರು ನೀಡಿದ್ದಾರೆ. ಭಾರತೀಯ ಆರ್ಥಿಕತೆಯ ದೀರ್ಘ ಕಾಲಿಕ ಮತ್ತು ಸಮಗ್ರ ಅಭಿವೃದ್ಧಿಗೆ ಮೂಲಭೂತಸೌಕರ್ಯ ಮತ್ತು ಇಂಧನ ವಲಯಕ್ಕೆ 2014–15 ರ ಕೇಂದ್ರ ಬಜೆಟ್‌ನಲ್ಲಿ ಘೋಷಣೆ ಮಾಡಿದ ಎಲ್ಲ ಮೇಲಿನ ಕ್ರಮಗಳಿಗೆ ಮಾರ್ಗದರ್ಶನ ನೀಡಲಾಗಿದೆ. ❑


**ಯೋಜನಾ**

**ಸೆಪ್ಟೆಂಬರ್ 2014 ಸಂಚಿಕೆ ವಿಷಯ**

**ನಗರ ಯೋಜನೆ**

# ಜನರ ಪಾಲ್ಗೊಳ್ಳುವಿಕೆ : ಉತ್ತಮ ಸೇವೆ

**ಡಾ. ಮನೀಷಾ ವರ್ಮಾ**
**ಕನ್ನಡಕ್ಕೆ : ಅಕ್ಕಿಮಂಗಲ ಸುರೇಶ**



**ಭಾರತದ ಬಹುತೇಕ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಈಗಲೂ ಯಾವುದೇ ವಿಷಯದಲ್ಲಿ ಸಮಗ್ರವಾಗಿ ಯೋಜನೆ, ನೀತಿಗಳನ್ನು ರೂಪಿಸುವ ವ್ಯವಸ್ಥೆ ಇಲ್ಲ. ಸಮಗ್ರ ಅಭಿವೃದ್ಧಿ ಆಗಬೇಕಾದರೆ ಸರ್ಕಾರದ ನಿರ್ಧಾರಗಳಲ್ಲಿ ಜನರ ಭಾಗವಹಿಸುವಿಕೆ ಬಹಳ ಮುಖ್ಯ. ಬಿಆರ್‌ಟಿಎಸ್ ಇದಕ್ಕೆ ಉತ್ತಮ ನಿದರ್ಶನ.**

ನಗರ ಸಮೂಹ ಸಾರಿಗೆ ವ್ಯವಸ್ಥೆಯನ್ನು ಬಲಪಡಿಸುವಲ್ಲಿ ಸಾರ್ವಜನಿಕರು ಹಾಗೂ ಬಳಕೆದಾರರು ಯಾವ ರೀತಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ, ಅವರ ಸಹಭಾಗಿತ್ವದಿಂದಾಗಿ ಅಹಮದಾಬಾದ್ ಬಸ್ ರ್‍ಯಾಪಿಡ್ ಟ್ರಾನ್ಸಿಸ್ಟ್ ಸಿಸ್ಟಂ (ಎಬಿಆರ್‌ಟಿಎಸ್) ರೂಪುಗೊಂಡಿದೆ ಎಂಬುದನ್ನು ಈ ಲೇಖನದಲ್ಲಿ ಉಲ್ಲೇಖಿಸಲಾಗಿದೆ. ಜನಮಾರ್ಗ ಎಂದೇ ಹೆಸರಾಗಿರುವ ಬಿಆರ್‌ಟಿಎಸ್‌ನ ಯಶೋಗಾಥೆ ಮತ್ತು ಅನುಷ್ಠಾನದ ಹಾದಿಯನ್ನು ಇದರಲ್ಲಿ ಪ್ರಸ್ತಾಪಿಸಲಾಗಿದೆ.

ದೇಶದ ಹಲವು ನಗರ ಸ್ಥಳೀಯ ಸಂಸ್ಥೆಗಳು ಕೈಗೆತ್ತಿಕೊಂಡಿರುವ ಯೋಜನೆಗಳ ಅನುಷ್ಠಾನದಲ್ಲಿ ಜನರ ಪಾಲ್ಗೊಳ್ಳುವಿಕೆ ತುಂಬಾ ಕಡಿಮೆ ಇದೆ ಎಂಬುದು ಅಧ್ಯಯನದಿಂದ ಬೆಳಕಿಗೆ ಬಂದಿದೆ. ಜನರ ಪಾಲ್ಗೊಳ್ಳುವಿಕೆ, ಪಾರದರ್ಶಕತೆ ಇಲ್ಲದೆ ನಗರ ಸ್ಥಳೀಯ ಸಂಸ್ಥೆಗಳು ಅನೇಕ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿವೆ. ದೆಹಲಿ ಬಿಆರ್‌ಟಿಎಸ್ ಕೂಡ ಇದಕ್ಕೆ ಹೊರತಾಗಿಲ್ಲ. ಹೀಗಾಗಿ ದೆಹಲಿಯಲ್ಲಿ ಈ ಯೋಜನೆ ಯಶಸ್ವಿಯಾಗಲಿಲ್ಲ.

ಆದರೆ, ಜನರ ಅರ್ಥಪೂರ್ಣ ಮತ್ತು ಪರಿಣಾಮಕಾರಿ ಪಾಲ್ಗೊಳ್ಳುವಿಕೆಯಿಂದಾಗಿ ಅಹಮದಾಬಾದ್‌ನ ಬಿಆರ್‌ಟಿಎಸ್ ಯಶಸ್ವಿಯಾಗಿದೆ. ಗುಜರಾತ್ ರಾಜ್ಯ ಸರ್ಕಾರ, ಬಳಕೆದಾರರು ಸೇರಿದಂತೆ ಸಾರ್ವಜನಿಕರನ್ನು ಯೋಜನೆಯ ಅನುಷ್ಠಾನದಲ್ಲಿ ತೊಡಗಿಸಿಕೊಂಡಿದ್ದೇ ಇದಕ್ಕೆ ಕಾರಣ. ಈ ಯೋಜನೆ ದೇಶದ ಬೇರೆ ನಗರ ಸ್ಥಳೀಯ ಸಂಸ್ಥೆಗಳಿಗೆ ಒಂದು ಮಾದರಿಯಾಗಿದೆ. ಯೋಜನೆಗಳನ್ನು ರೂಪಿಸುವುದು, ನಿರ್ಮಾಣ ಮತ್ತು ಅನುಷ್ಠಾನದಲ್ಲಿ ಜನರ ಸಹಭಾಗಿತ್ವವನ್ನು ಪಡೆಯುವ ಮೂಲಕ ಯಾವ ರೀತಿ ಗುರಿ ಮುಟ್ಟಬಹುದು ಎಂಬುದಕ್ಕೆ ಇದೊಂದು ಉದಾಹರಣೆಯಾಗಿದೆ. ಜನರ ಪಾಲ್ಗೊಳ್ಳುವಿಕೆ, ಒಡೆತನದಿಂದಾಗಿ ಯಾವ ರೀತಿ ಯೋಜನೆಯನ್ನು ಯಶಸ್ವಿಗೊಳಿಸಬಹುದು ಎಂಬುದನ್ನು ಬಿಆರ್‌ಟಿಸ್ ಸ್ಪಷ್ಟವಾಗಿ ತೋರಿಸಿಕೊಟ್ಟಿದೆ.

**ಜನರ ಸಹಭಾಗಿತ್ವ : ತಾತ್ವಿಕ ನೋಟ**

ಸರ್ಕಾರ ಯಾವುದೇ ನೀತಿ, ಯೋಜನೆ ರೂಪಿಸಿದರೂ, ಅದು ಯಶಸ್ವಿಯಾಗಬೇಕಾದರೆ ಜನರ ಭಾಗವಹಿಸುವಿಕೆ ಬಹಳ ಮುಖ್ಯ.

ಅಲ್ಲದೆ ಗುಣಾತ್ಮಕ ಸೇವೆ ನೀಡಬೇಕಾದರೆ ಯೋಜನೆಯ ಅನುಷ್ಠಾನದಲ್ಲಿ ಜನರನ್ನು ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕಾಗುತ್ತದೆ. ಇದರಿಂದ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ. ಅಲ್ಲದೆ ಪರಸ್ಪರ ಸಮಾಲೋಚನೆ, ವಿಶ್ವಾಸದಿಂದ ಯೋಜನೆಗಳನ್ನು ಕೈಗೆತ್ತಿಕೊಳ್ಳುವುದರಿಂದ ಪರಿಣಾಮಕಾರಿ ಯಾಗಿ ಅನುಷ್ಠಾನಗೊಳಿಸಲು ಸಾಧ್ಯವಾಗುತ್ತದೆ.

ಜನರ ಸಹಭಾಗಿತ್ವದಿಂದಾಗಿ ಸರ್ಕಾರದ ಜವಾಬ್ದಾರಿ ಹೆಚ್ಚಾಗುವುದರ ಜೊತೆಗೆ ಪಾರದರ್ಶಕತೆ ಇರುತ್ತದೆ.

ನಾಗರಿಕ ಸೇವಾ ಅಧಿಕಾರಿ. email : v.manisha@gmail.com

ಬಳಕೆದಾರರಿಗೆ ಉತ್ತಮ ಸೇವೆ ನೀಡಲು ಸಾಧ್ಯವಾಗಲಿದೆ. ಸರ್ಕಾರದ ಚಟುವಟಿಕೆಗಳಲ್ಲಿ ಜನ ನೇರವಾಗಿ ಭಾಗಿಯಾದರೆ ಪಾರದರ್ಶಕತೆ ಇರುತ್ತದೆ. ಅಲ್ಲದೆ ಸರ್ಕಾರದ ಏಕಸ್ವಾಮ್ಯತೆ ಇರುವುದಿಲ್ಲ. ಕೆಳ ಹಂತದಲ್ಲಿ ಪಾರದರ್ಶಕತೆ, ಉತ್ತರದಾಯಿತ್ವ ಇರುತ್ತದೆ.

ಅಲ್ಲದೆ ಈ ರೀತಿಯ ಭಾಗವಹಿಸುವಿಕೆಯಿಂದಾಗಿ ಪ್ರಜಾಪ್ರಭುತ್ವ ವ್ಯವಸ್ಥೆಯ ಬಗೆಗಿನ ನಂಬಿಕೆ ಹೆಚ್ಚಾಗುತ್ತದೆ. ಬಿಕ್ಕಟ್ಟುಗಳನ್ನು ಬಗೆಹರಿಸಿಕೊಳ್ಳಲು, ಸಮಾಜದ ಎಲ್ಲ ವರ್ಗದ ಜನರ ಅಪೇಕ್ಷೆಗಳನ್ನು ಈಡೇರಿಸಲು ಸಾಧ್ಯವಾಗಲಿದೆ. ಜನರ ಭಾಗವಹಿಸುವಿಕೆಯ ಮಾದರಿಗಳು ಹೆಚ್ಚಿನ ಜವಾಬ್ದಾರಿಯಿಂದ ಕೂಡಿರುತ್ತವೆ. ಜನರ ಹಿತಾಸಕ್ತಿಗೆ ಅನುಗುಣವಾಗಿ ಇರುತ್ತವೆ ಎಂಬುದನ್ನು ಅಹಮದಾಬಾದ್ ಬಿಆರ್‌ಟಿಎಸ್ ತೋರಿಸಿಕೊಟ್ಟಿದೆ.

ನಗರ ಸಾರಿಗೆ ಸಂಪರ್ಕ ಸೇವೆಯಲ್ಲಿ ಯಶಸ್ವಿಯಾಗಿರುವ ಬಿಆರ್‌ಟಿಎಸ್ ರಾಷ್ಟ್ರೀಯ ಮತ್ತು ಅಂತಾರರಾಷ್ಟ್ರೀಯ ಮಟ್ಟದ ಹಲವು ಪ್ರಶಸ್ತಿಗಳನ್ನು ತನ್ನದಾಗಿಸಿಕೊಂಡಿದೆ. ನ್ಯೂಯಾರ್ಕ್ ಮೂಲದ ಅಂತಾರಾಷ್ಟ್ರೀಯ ಸ್ವಯಂ ಸೇವಾ ಸಂಸ್ಥೆ ಐಟಿಡಿಪಿಯು 2010ರಲ್ಲಿ, ಉತ್ತಮ ಸಮೂಹ ಸಾರಿಗೆ ವ್ಯವಸ್ಥೆಯನ್ನು ಹೊಂದಿರುವ ದಕ್ಷಿಣ ಏಷ್ಯಾದ ಮೊದಲ ನಗರ (ಅಹಮದಾಬಾದ್) ಎಂದು ಗುರುತಿಸಿ ಪ್ರಶಸ್ತಿ ನೀಡಿದೆ. ಅಲ್ಲದೆ ಇಂಟರ್ ನ್ಯಾಷನಲ್ ಟ್ರಾನ್ಸ್‌ಪೋರ್ಟ್ ಫೋರಂ (ಐಟಿಎಫ್) ಮತ್ತು ಇಂಟರ್‌ನ್ಯಾಷನಲ್ ಅಸೋಸಿಯೇಷನ್ ಫಾರ್ ಪಬ್ಲಿಕ್ ಟ್ರಾನ್ಸ್‌ಪೋರ್ಟ್ (ಯುಐಟಿಎಫ್) 2010ರಲ್ಲಿ ಔಟ್‌ಸ್ಟ್ಯಾಂಡಿಂಗ್ ಇನೊವೇಷನ್ ಇನ್ ಪಬ್ಲಿಕ್ ಟ್ರಾನ್ಸ್‌ಪೋರ್ಟ್ ಪ್ರಶಸ್ತಿ ನೀಡಿವೆ. ಇದಲ್ಲದೆ 2010ರಲ್ಲಿ ನ್ಯಾಷನಲ್ ಅವಾರ್ಡ್ ಫಾರ್ ಎಕ್ಸಲೆನ್ಸ್ ಇನ್ ಅರ್ಬನ್ ಮೊಬಿಲಿಟಿ ಹಾಗೂ 2011ರಲ್ಲಿ ಇನೊವೇಟಿವ್ ಇನ್‌ಫ್ರಾಸ್ಟ್ರಕ್ಚರ್ ಪ್ರಶಸ್ತಿಗಳು ದೊರೆತಿವೆ.

ಅಹಮದಾಬಾದ್ ನಗರದಲ್ಲಿ ನಗರ ಸಾರಿಗೆ ವ್ಯವಸ್ಥೆಯನ್ನು ಸುಧಾರಿಸಲು ಗುಜರಾತ್ ಸರ್ಕಾರ 2000ನೇ ಇಸವಿಯಲ್ಲಿ ಬಿಆರ್‌ಟಿಎಸ್ ಪ್ರಸ್ತಾವನೆ ಸಿದ್ಧಪಡಿಸಿತು. 2005ರಲ್ಲಿ ಅಹಮದಾಬಾದ್ ಮಹಾನಗರ ಪಾಲಿಕೆಗೆ ಇದರ ಅನುಷ್ಠಾನದ ಹೊಣೆಯನ್ನು ವಹಿಸಿತು. ಮಹಿಳೆಯರು, ಮಕ್ಕಳು, ಹಿರಿಯ ನಾಗರಿಕರು ಸೇರಿದಂತೆ ಎಲ್ಲ ವರ್ಗದ ಜನರಿಗೆ ಸುರಕ್ಷಿತ ಮತ್ತು ಸಮೂಹ ನಗರ ಸಾರಿಗೆ ಸೇವೆ ಒದಗಿಸುವುದು ಬಿಆರ್‌ಟಿಎಸ್ ಮೂಲ ಉದ್ದೇಶವಾಗಿತ್ತು. ಅಲ್ಲದೆ ಸಂಚಾರ ಅವಧಿಯನ್ನು ಕಡಿಮೆ ಮಾಡುವುದು, ಅಪಘಾತ ಮತ್ತು ಸಂಚಾರ ದಟ್ಟಣೆ ಕಡಿಮೆ ಮಾಡುವುದು, ಪಾರ್ಕಿಂಗ್‌ಗೆ ಪಾದಯಾತ್ರಿಗಳಿಗೆ, ಸೈಕಲ್ ಸವಾರರಿಗೆ ಮತ್ತು ಬೀದಿ ಬದಿಯ ವ್ಯಾಪಾರಿಗಳಿಗೆ, ಸಂಚಾರಿ ವ್ಯಾಪಾರಿಗಳಿಗೆ ಸೂಕ್ತ ಸ್ಥಳಾವಕಾಶ ಕಲ್ಪಿಸುವುದು ಮತ್ತು ರಸ್ತೆಗಳ ಸುಧಾರಣೆ ಮಾಡುವುದು ಬಿಆರ್‌ಟಿಎಸ್‌ನ ಮುಖ್ಯ ಆಶಯವಾಗಿತ್ತು.

ಒಟ್ಟು 88.8 ಕಿ.ಮೀ. ಉದ್ದದ ರಸ್ತೆ ಪೈಕಿ ಈಗಾಗಲೇ 86 ಕಿ.ಮೀ.ನಲ್ಲಿ ಬಿಆರ್‌ಟಿಎಸ್ ಪೂರ್ಣಗೊಂಡಿದೆ. ನಿತ್ಯ 1.5 ಲಕ್ಷಕ್ಕೂ ಹೆಚ್ಚು ಜನ 160 ಬಸ್‌ಗಳಲ್ಲಿ ಸಂಚಾರ ಮಾಡುತ್ತಿದ್ದಾರೆ. ಇದರಲ್ಲಿ 60 ಹವಾನಿಯಂತ್ರಿತ ಬಸ್‌ಗಳಾಗಿವೆ.

ಈ ಬಸ್‌ಗಳು ಸುಲಭ, ಆರಾಮದಾಯಕ, ಸುರಕ್ಷಿತವಾಗಿದ್ದು ಸಮಯಕ್ಕೆ ಸರಿಯಾಗಿ ನಿಗದಿತ ಜಾಗ ತಲುಪಬಹುದು. ಅಲ್ಲದೆ ಕೈಗೆಟುಕುವ ದರದಲ್ಲಿ ಹೊಸ ಸೌಲಭ್ಯಗಳೊಂದಿಗೆ ಸಂಚರಿಸುವ ಅವಕಾಶವನ್ನು ಕಲ್ಪಿಸಿಕೊಟ್ಟಿವೆ. ದಟ್ಟಣೆಯ ಅವಧಿಯಲ್ಲಿ ಈ ಬಸ್‌ಗಳ ವೇಗವು ಗಂಟೆಗೆ 24ರಿಂದ 26 ಕಿ.ಮೀ ಇರುತ್ತದೆ. ಉಳಿದ ಅವಧಿಯಲ್ಲಿ ಗಂಟೆಗೆ 28ರಿಂದ30 ಕಿ.ಮೀ ವೇಗ ಇರುತ್ತದೆ. ದೇಶದಲ್ಲೇ ಅತ್ಯಂತ ವೇಗವಾಗಿ ಸಂಚರಿಸುವ ಸಾರಿಗೆ ಬಸ್‌ಗಳು ಎಂಬ ಹೆಗ್ಗಳಿಕೆಗೆ ಇವು ಪಾತ್ರವಾಗಿವೆ. ಎಲ್ಲ ರೀತಿಯ ಹವಾಮಾನಕ್ಕೆ ಹೊಂದಿಕೊಳ್ಳುವ ಹಾಗೆ ಮೊದಲೇ ಆಲೋಚಿಸಿ ಬಸ್ ನಿಲ್ದಾಣಗಳನ್ನು ನಿರ್ಮಿಸಲಾಗಿದೆ. ಹಿರಿಯ ನಾಗರಿಕರು, ಅಂಗವಿಕಲರು ಮತ್ತು ಅಂಧರಿಗೆ ನೂಕು ನುಗ್ಗಲು ಇಲ್ಲದಂತೆ ಸುರಕ್ಷಿತ ಹಾಗೂ ಆರಾಮದಾಯಕವಾಗಿ ಪ್ರಯಾಣ ಮಾಡಲು ಈ ಬಸ್‌ಗಳು ಸಹಕಾರಿಯಾಗಿವೆ. ಸುಖಾಸೀನವಾದ ಆಸನಗಳ ಜೊತೆಗೆ ಪ್ರಯಾಣಿಕರಿಗೆ ಹಗಲು – ರಾತ್ರಿ ಭದ್ರತಾ ವ್ಯವಸ್ಥೆಯನ್ನು ಮಾಡಲಾಗಿದೆ.

ನವರಾತ್ರಿ ಮೊದಲಾದ ಹಬ್ಬದ ಸಮಯದಲ್ಲಿ ಸಂಚಾರದಟ್ಟಣೆ ಹೆಚ್ಚಾಗಿರುವುದರಿಂದ ಸಾರ್ವಜನಿಕರು ಸ್ವಂತ ವಾಹನಕ್ಕಿಂತ, ಬಿಆರ್‌ಟಿಎಸ್ ಸೇವೆಯ ಸದುಪಯೋಗ ಪಡೆಯುತ್ತಾರೆ. ಹೀಗಾಗಿ ದೈನಂದಿಗಿಂತ ಹಬ್ಬದ ಸಮಯದಲ್ಲಿ ಹೆಚ್ಚಿನ ಅವಧಿಯಲ್ಲಿ ಬಸ್‌ಗಳು ಸಂಚರಿಸುತ್ತವೆ. ಶಾಲಾ – ಕಾಲೇಜುಗಳಿಗೆ ಹೋಗುವ ವಿದ್ಯಾರ್ಥಿಗಳಿಗೆ ಈ ಬಸ್‌ಗಳು ಆಕರ್ಷಿತವಾಗಿವೆ. ಯೋಜನೆಯ ಅನುಷ್ಠಾನ ಹಂತದಲ್ಲಿ ಜನರ ಸಹಭಾಗಿತ್ವ ಇಲ್ಲದಿದ್ದರೆ, ಅವರ ಸಲಹೆ ಸೂಚನೆಗಳನ್ನು ಪಡೆಯದಿದ್ದರೆ ಬಿಆರ್‌ಟಿಎಸ್ ಇಷ್ಟೊಂದು ಯಶಸ್ಸು, ಜನಪ್ರಿಯತೆ ಗಳಿಸಲು ಸಾಧ್ಯವಾಗುತ್ತಿರಲಿಲ್ಲ.

### ಯೋಜನೆ ಮತ್ತು ವಿನ್ಯಾಸ

ಬಿಆರ್‌ಟಿಎಸ್ ಯೋಜನೆ ರೂಪಿಸುವಾಗ ಅಹಮದಾಬಾದ್ ಮಹಾನಗರ ಪಾಲಿಕೆಯ ಯೋಜನಾಧಿಕಾರಿಗಳ ಮುಂದೆ ಮುಖ್ಯವಾಗಿ ಎರಡು ದೊಡ್ಡ ಸವಾಲುಗಳಿದ್ದವು. ಮೊದಲನೆಯದಾಗಿ ಇದು ಸಂಪೂರ್ಣ ಹೊಸ ಯೋಜನೆಯಾಗಿದ್ದು, ಇಂತಹದೊಂದು ಯೋಜನೆ ಯಶಸ್ವಿಯಾದ ನಿದರ್ಶನ ದೇಶದಲ್ಲಿ ಇರಲಿಲ್ಲ. ಇನ್ನು ಎರಡನೇಯದಾಗಿ ಬಿಆರ್‌ಟಿಎಸ್ ಬಗ್ಗೆ ಜನರಿಗೆ ಅರಿವು ಇರಲಿಲ್ಲ. ಇದು ಯಶಸ್ವಿಯಾಗುತ್ತಾ ಎಂಬ ಪ್ರಶ್ನೆ ಜನರಿಂದಲೂ ಕೇಳಿಬರುತ್ತಿತ್ತು. ದೆಹಲಿ ಬಿಆರ್‌ಟಿಎಸ್ ಯಶಸ್ವಿಯಾಗಲಿಲ್ಲ. ನಗರ ಸಾರಿಗೆ ಸಮಸ್ಯೆಗೆ ಪರಿಹಾರ ಹುಡುಕುವಲ್ಲಿ ಇದು ವಿಫಲವಾಯಿತು. ಹೀಗಾಗಿ ಅಹಮದಾಬಾದ್‌ನಲ್ಲೂ ಇದೇ ರೀತಿ ಆಗಬಹುದು ಎಂಬ ಭಯ ಕೆಲವು ಜನರು ಮತ್ತು ಸಾರಿಗೆ ತಜ್ಞರನ್ನು ಕಾಡತೊಡಗಿತು. ಕೆಲವರು ಬಿಆರ್‌ಟಿಎಸ್‌ಗಿಂತ ಮೆಟ್ರೊ ಯೋಜನೆ ನಗರ ಸಾರಿಗೆ ಸಮಸ್ಯೆಗೆ ಪರಿಹಾರವಾಗಲಿದೆ ಎಂದು ಅಭಿಪ್ರಾಯಪಟ್ಟರು. ರಸ್ತೆಗಳ ನಿರ್ವಹಣೆ ಸರಿ ಇಲ್ಲದ ಕಾರಣ ಸಮಸ್ಯೆಗಳು ಎದುರಾಗಿವೆ. ರಸ್ತೆಗಳನ್ನು ಅಗಲ ಮಾಡಿ, ಸಾರಿಗೆ ವ್ಯವಸ್ಥೆಯನ್ನು ಸರಿಯಾಗಿ ನಿರ್ವಹಣೆ ಮಾಡಿದರೆ ಬಿಆರ್‌ಟಿಎಸ್‌ನಿಂದಲೂ ಸಮಸ್ಯೆಗೆ ಪರಿಹಾರ ಸಿಗಲಿದೆ ಎಂದು ಇನ್ನೂ ಕೆಲವರು ಅಭಿಪ್ರಾಯಪಟ್ಟರು.

ಅಹಮದಾಬಾದ್ ಮಹಾನಗರ ಪಾಲಿಕೆ ಈಗಾಗಲೇ ಅಹಮದಾಬಾದ್ ಮುನ್ಸಿಪಲ್ ಟ್ರಾನ್ಸ್‌ಪೋರ್ಟ್ ಸರ್ವಿಸ್

(ಎಎಂಟಿಎಸ್) ನಿರ್ವಹಣೆ ಮಾಡುತ್ತಿದ್ದು, ಅದು ತೃಪ್ತಿಕರವಾಗಿಲ್ಲ. ಅಹಮದಾಬಾದ್ ನಗರಾಭಿವೃದ್ಧಿ ಪ್ರಾಧಿಕಾರ ಮತ್ತು ಪಾಲಿಕೆ, ಈ ಎರಡೂ ಸಂಸ್ಥೆಗಳು ಸೇರಿ ನಿರ್ವಹಣೆ ಮಾಡುತ್ತಿರುವುದರಿಂದ ದಕ್ಷತೆ ಇಲ್ಲದಂತಾಗಿದೆ. ಬಿಆರ್‌ಟಿಎಸ್, ಎಎಂಟಿಎಸ್‌ನ ನಕಲು ಆಗಲಿದೆ ಅಷ್ಟೆ. ಇದರಿಂದ ಹೆಚ್ಚಿನದನ್ನು ನಿರೀಕ್ಷೆ ಮಾಡಲು ಸಾಧ್ಯವಿಲ್ಲ ಎಂಬ ಮಾತುಗಳು ಕೇಳಿಬರುತ್ತಿದ್ದವು.

ಇದೆಲ್ಲವನ್ನು ಗಮನದಲ್ಲಿಟ್ಟುಕೊಂಡ ಅಹಮದಾಬಾದ್ ಮಹಾನಗರ ಪಾಲಿಕೆ ಯೋಜನಾ ಅಧಿಕಾರಿಗಳ ತಂಡ, ಮೊದಲಿಗೆ ದೆಹಲಿ ಬಿಆರ್‌ಟಿಎಸ್ ಏಕೆ ವಿಫಲವಾಯಿತು ಎಂಬ ಬಗ್ಗೆ ಕಾರಣಗಳನ್ನು ಹುಡುಕಲು ಶುರು ಮಾಡಿತು. ದೆಹಲಿಯಲ್ಲಿ ಆಗಿರುವ ಲೋಪಗಳು ಇಲ್ಲಿ ಮರುಕಳಿಸಬಾರದು ಎಂಬ ಉದ್ದೇಶದಿಂದ ಎಚ್ಚರಿಕೆಯ ಹೆಜ್ಜೆ ಇಡಲು ತೀರ್ಮಾನಿಸಿದರು.

ನಗರದ ಜನರಿಗೆ ಯಾವ ರೀತಿಯ ಸೌಲಭ್ಯಬೇಕು ಎಂಬುದನ್ನು ಅರ್ಥ ಮಾಡಿಕೊಳ್ಳದಿರುವುದು ಹಾಗೂ ಬಳಕೆದಾರರನ್ನು ಯೋಜನೆಯ ಅನುಷ್ಠಾನದಲ್ಲಿ ತೊಡಗಿಸಿಕೊಳ್ಳದ ಕಾರಣ ದೆಹಲಿಯಲ್ಲಿ ಬಿಆರ್‌ಟಿಎಸ್ ವಿಫಲವಾಗಿದೆ ಎಂಬುದು ಅಧಿಕಾರಿಗಳ ತಂಡಕ್ಕೆ ಮನವರಿಕೆ ಆಯಿತು. ದೆಹಲಿ ಬಿಆರ್‌ಟಿಎಸ್‌ನಲ್ಲಿ ಜನರು ಸಕ್ರಿಯವಾಗಿ ತೊಡಗಿಲ್ಲ. ಅವರಿಗೆ ಆಸಕ್ತಿ ಇದ್ದರೂ, ಭಾಗಿಯಾಗಲು ಅವಕಾಶ ಇಲ್ಲ. ಅವರ ಮೇಲೆ ಬಲವಂತವಾಗಿ ಈ ಯೋಜನೆಯನ್ನು ಹೇರಲಾಗಿದೆ ಎಂಬುದು ಅವರಿಗೆ ಗೊತ್ತಾಯಿತು. ಇದರಿಂದ ಎಚ್ಚೆತ್ತುಕೊಂಡ ಅಧಿಕಾರಿಗಳು ಬಳಕೆದಾರರು ಮತ್ತು ಸಾರ್ವಜನಿಕರನ್ನು ಸಕ್ರಿಯವಾಗಿ ತೊಡಗಿಸಿಕೊಂಡು, ಪರಿಣಾಮಕಾರಿಯಾಗಿ ಬಿಆರ್‌ಟಿಎಸ್ ಯೋಜನೆ ಅನುಷ್ಠಾನಗೊಳಿಸಲು ತೀರ್ಮಾನಿಸಿದರು.

### ಬಳಕೆದಾರರು ಮತ್ತು ಪಾಲುದಾರರೊಂದಿಗೆ ಕಾರ್ಯಾಗಾರ

ಯೋಜನೆಯನ್ನು ಅನುಷ್ಠಾನಗೊಳಿಸುವ ಮುನ್ನ ಅಧಿಕಾರಿಗಳ ತಂಡ ಅನೇಕ ಕಾರ್ಯಾಗಾರಗಳನ್ನು ನಡೆಸಿ ಬಳಕೆದಾರರು ಮತ್ತು ಪಾಲುದಾರರ ಸಲಹೆ ಸೂಚನೆಗಳನ್ನು ಪಡೆಯಲು ತೀರ್ಮಾನಿಸಿತು. ಸಾರ್ವಜನಿಕ ಸಂಚಾರ ಸೇವೆಯಲ್ಲಿ ತೊಡಗಿರುವ ಖಾಸಗಿ ವಾಹನಗಳ ಮಾಲೀಕರು (ಆಟೊ, ಬಸ್ ಇತ್ಯಾದಿ), ನಾಲ್ಕು ಚಕ್ರವಾಹನ, ದ್ವಿಚಕ್ರವಾಹನ ಹೊಂದಿರುವವರನ್ನು ಕಾರ್ಯಾಗಾರಕ್ಕೆ ಆಹ್ವಾನಿಸಲಾಯಿತು. ಅಲ್ಲದೆ ಸಂಘಸಂಸ್ಥೆಗಳ ಪ್ರತಿನಿಧಿಗಳು, ದೆಹಲಿ ಮತ್ತು ಗುಜರಾತ್‌ನ ನಗರ ಮೂಲಸೌಕರ್ಯ ಮತ್ತು ಸಾರಿಗೆ ಕ್ಷೇತ್ರದ ತಜ್ಞರೊಂದಿಗೂ ಸಂವಾದ ನಡೆಸಿ ಯಾವ ರೀತಿ ಬಿಆರ್‌ಟಿಎಸ್ ಅನುಷ್ಠಾನಗೊಳಿಸಬಹುದು ಎಂದು ಅವರಿಂದ ಸಲಹೆಗಳನ್ನು ಪಡೆಯಲಾಯಿತು.

ನಗರ ಸಾರಿಗೆ ತಜ್ಞರು ಮತ್ತು ನೀತಿ ನಿರೂಪಕರೊಂದಿಗೆ ಜನ ಚರ್ಚೆ ನಡೆಸಿದರು. ಈ ರೀತಿಯ ಕಾರ್ಯಾಗಾರ, ಸಂವಾದದಿಂದ ಒಳ್ಳೆಯ ಸಲಹೆಗಳು ವ್ಯಕ್ತವಾದವು. ಅಂತಿಮವಾಗಿ ಬಳಕೆದಾರರನ್ನು ಪಾಲುದಾರರನ್ನಾಗಿ ಮಾಡಿಕೊಂಡು ಬಿಆರ್‌ಟಿಎಸ್ ಯೋಜನೆ ಅನುಷ್ಠಾನಗೊಳಿಸಲು ಅಧಿಕಾರಿಗಳ ತಂಡ ನಿರ್ಧರಿಸಿತು. ಅಲ್ಲದೆ ಇದಕ್ಕೂ ಮುನ್ನ ವಾಣಿಜ್ಯ ಬಳಕೆಯ ವಾಹನಗಳ ಮಾಲಿಕರ ಸಭೆ ಕರೆದು ಅವರೊಂದಿಗೂ ಮಾತುಕತೆ ನಡೆಸಲಾಯಿತು. ಅವರು ವಿರೋಧ ಮಾಡಿದರೆ ಯೋಜನೆ ಅನುಷ್ಠಾನಕ್ಕೆ ಮತ್ತು ಆದಾಯಕ್ಕೆ ತೊಂದರೆ ಆಗುತ್ತದೆ ಎಂಬ ಕಾರಣಕ್ಕೆ ಅವರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳಲಾಯಿತು. ಫೀಡರ್ ಸೇವೆ ಸೇರಿದಂತೆ ವಿವಿಧ ಸಾರಿಗೆ ಸೇವೆಗಳ ಬಗ್ಗೆಯೂ ವಿವರವಾಗಿ ಚರ್ಚಿಸಲಾಯಿತು.

### ಬಸ್ ಮಾರ್ಗಗಳ ಆಯ್ಕೆ ಮತ್ತು ಕಾರಿಡಾರ್‌ಗಳ ವಿನ್ಯಾಸ

ಸಾರ್ವಜನಿಕರಿಂದ ಬಂದ ಸಲಹೆಗಳನ್ನು ಆಧರಿಸಿ ಅಹಮದಾಬಾದ್ ಮಹಾನಗರ ಪಾಲಿಕೆ ಮೊದಲ ಹಂತದಲ್ಲಿ ಶೈಕ್ಷಣಿಕ ಸಂಸ್ಥೆಗಳು, ವಸತಿ ಪ್ರದೇಶಗಳು ಮತ್ತು ವಾಣಿಜ್ಯ ವಹಿವಾಟು ನಡೆಯುವ ಪ್ರದೇಶಗಳಿಗೆ ಬಸ್ ಸಂಪರ್ಕ ಕಲ್ಪಿಸಿತು. ವಿಭಿನ್ನ ವರ್ಗದ ಜನ ಇದರ ಪ್ರಯೋಜನ ಪಡೆದರು. ಈ ಮಾರ್ಗಗಳಲ್ಲಿ ಪಾದಯಾತ್ರಿಗಳಿಗೆ, ಸೈಕಲ್ ಸವಾರರಿಗೆ ಅಷ್ಟೆ ಅಲ್ಲದೆ ಪಾರ್ಕಿಂಗ್‌ಗೆ ಪ್ರತ್ಯೇಕ ಸ್ಥಳಾವಕಾಶ ಒದಗಿಸಲಾಯಿತು. ಅಷ್ಟೆ ಅಲ್ಲದೆ ಇದುವರೆಗೆ ಒತ್ತುವರಿಯಾಗಿದ್ದ, ಬಳಕೆಯಾಗದೆ ಇದ್ದ ಭೂಮಿಯನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲಾಯಿತು. ಇದು ಜನರ ಮೆಚ್ಚುಗೆಗೂ ಪಾತ್ರವಾಯಿತು.

ದೆಹಲಿಯಲ್ಲಿ ಬಿಆರ್‌ಟಿಎಸ್ ಬಸ್‌ಗಳಿಗೆ ಪ್ರತ್ಯೇಕ ಮಾರ್ಗ ಇರಲಿಲ್ಲ. ಹೀಗಾಗಿ ಸಂಚಾರ ದಟ್ಟಣೆ ಹೆಚ್ಚಾಗಿ ಕಿರಿಕಿರಿಯಾಗುತ್ತಿತ್ತು. ಇದರಿಂದ ಪಾಠ ಕಲಿತ ಅಹಮದಾಬಾದ್ ಮಹಾನಗರ ಪಾಲಿಕೆ ಬಿಆರ್‌ಟಿಎಸ್ ಬಸ್‌ಗಳಿಗೆ ಪ್ರತ್ಯೇಕ ಬಸ್ ಮಾರ್ಗ ಕಲ್ಪಿಸಿತು. ಈ ಮಾರ್ಗದಲ್ಲಿ ಬೇರೆ ವಾಹನಗಳ ಪ್ರವೇಶಕ್ಕೆ ಅವಕಾಶ ಇರಲಿಲ್ಲ. ಇದರಿಂದ ವೇಗದ ಸಂಚಾರಕ್ಕೆ ಅವಕಾಶವಾಯಿತು. ಈ ಮಾರ್ಗದಲ್ಲಿ ಬೇರೆ ವಾಹನಗಳ ಸಂಚಾರಕ್ಕೂ ಅವಕಾಶ ಕಲ್ಪಿಸಿದ್ದರೆ ವೇಗವಾಗಿ ಸಂಚರಿಸಲು ಸಾಧ್ಯವಾಗುತ್ತಿರಲಿಲ್ಲ. ಆದರೆ, ಈ ರೀತಿ ನಿರ್ಬಂಧ ಹೇರಿರುವುದರಿಂದ ಬಸ್‌ಗಳು ನಿಗದಿತ ವೇಗದಲ್ಲಿ ಸಂಚರಿಸುತ್ತಿದ್ದು, ಪ್ರಯಾಣಿಕರು ಸಮಯಕ್ಕೆ ಸರಿಯಾಗಿ ಸ್ಥಳಕ್ಕೆ ತಲುಪಲು ಅನುಕೂಲವಾಗಿದೆ.

ಮುಕ್ತ ಮಾರ್ಗದಲ್ಲಿ ಬಿಆರ್‌ಟಿಎಸ್ ಬಸ್‌ಗಳು ಸಂಚರಿಸಿದರೆ ಅಹಮದಾಬಾದ್ ಮಹಾನಗರ ಸಾರಿಗೆ ಸಂಸ್ಥೆಯ ಬಸ್‌ಗಳೊಂದಿಗೆ ಸ್ಪರ್ಧೆ ಎದುರಿಸಬೇಕಾಗುತ್ತದೆ. ಆದರೆ, ಬಿಆರ್‌ಟಿಎಸ್ ಬಸ್‌ಗಳಿಗೆ ಪ್ರತ್ಯೇಕ ಮಾರ್ಗ ಇರುವುದರಿಂದ ಸ್ಪರ್ಧೆಗೆ ಅವಕಾಶ ಇಲ್ಲ. ಸುಲಭವಾಗಿ ಹತ್ತುವ ಹಾಗೂ ಇಳಿಯುವ ಹಾಗೆ ಬಸ್ ನಿಲ್ದಾಣಗಳಲ್ಲಿ ಅವಕಾಶ ಕಲ್ಪಿಸಲಾಗಿದೆ. ಇದರಿಂದಾಗಿ ಸಮಯದ ಉಳಿತಾಯ ಆಗಲಿದೆ. ಅಲ್ಲದೆ ಪ್ರಯಾಣಿಕರಿಗೆ, ಅದರಲ್ಲೂ ವಿಶೇಷವಾಗಿ ಅಂಗವಿಕಲರಿಗೆ ಹತ್ತಲು, ಇಳಿಯಲು ರ್‍ಯಾಂಪ್ ವ್ಯವಸ್ಥೆ ಮಾಡಲಾಗಿದೆ. ಸಾರ್ವಜನಿಕರಿಂದ ಬಂದ ಸಲಹೆಗಳನ್ನು ಆಧರಿಸಿ ಈ ರೀತಿಯ ವ್ಯವಸ್ಥೆ ಮಾಡಲಾಗಿದೆ.

ಬಿಆರ್‌ಟಿಎಸ್ ಬಸ್ ಸಂಚಾರ ಆರಂಭವಾಗುವುದಕ್ಕೆ ಆರು ತಿಂಗಳ ಮುಂಚೆಯೇ ಪ್ರಾರಂಭಿಕವಾಗಿ ಕೆಲವು ಬಸ್ ನಿಲ್ದಾಣಗಳನ್ನು ನಿರ್ಮಿಸಲಾಯಿತು. ಸಾರ್ವಜನಿಕರಿಂದ ಬಂದ ಸಲಹೆಗಳನ್ನು ಆಧರಿಸಿ ನಿಲ್ದಾಣಗಳನ್ನು ಹೆಚ್ಚು ಆರಾಮದಾಯಕವಾಗಿ ಮಾಡಲಾಯಿತು. ಬಸ್ ನಿಲ್ದಾಣಗಳ ಬಗ್ಗೆ ಪಾಲಿಕೆ ಅಧಿಕಾರಿಗಳು ಖುದ್ದಾಗಿ ನಿಂತು ಮಾಹಿತಿ ಸಂಗ್ರಹಿಸಿದರು. ಅಲ್ಲದೆ ನಿಗದಿತ ಸ್ಥಳಗಳಲ್ಲಿ

ಸಾರ್ವಜನಿಕರಿಂದ ಅಭಿಪ್ರಾಯಗಳನ್ನು ಪಡೆದರು. ಅವರಿಂದ ಬಂದ ಸಲಹೆ ಸೂಚನೆಗಳನ್ನು ಆಧರಿಸಿ ವಿನ್ಯಾಸದಲ್ಲಿ ಕೆಲವು ಬದಲಾವಣೆಗಳನ್ನು ಮಾಡಲಾಯಿತು. ಉದಾಹರಣೆಗೆ ಬಸ್ ನಿಲ್ದಾಣದ ಛಾವಣಿಗೆ ಟಿನ್‌ಶೀಟ್ ಅಳವಡಿಸಲು ನಿರ್ಧರಿಸಲಾಗಿತ್ತು. ಆದರೆ, ಇದರಿಂದ ಬೇಸಿಗೆಯಲ್ಲಿ ಧಗೆ ಹೆಚ್ಚಾಗುತ್ತದೆ ಎಂದು ಸಾರ್ವಜನಿಕರಿಂದ ವಿರೋಧ ವ್ಯಕ್ತವಾಯಿತು. ಇದಕ್ಕೆ ಸ್ಪಂದಿಸಿದ ಅಧಿಕಾರಿಗಳು ಟಿನ್‌ಶೀಟ್ ಬದಲು ಕಾಂಕ್ರಿಟ್‌ಛಾವಣಿ ಹಾಕಲು ನಿರ್ಧರಿಸಿದರು.

ಬಸ್ ನಿಲ್ದಾಣದಲ್ಲಿ ಸ್ಟೀಲ್ ಕುರ್ಚಿಗಳನ್ನು ಹಾಕಲು ನಿರ್ಧರಿಸಲಾಗಿತ್ತು. ಆದರೆ, ಇವು ಬೇಸಿಗೆಯಲ್ಲಿ ಬಿಸಿಯಾಗಿದ್ದರೆ, ಚಳಿಗಾಲದಲ್ಲಿ ಚಳಿ ಇರುತ್ತದೆ ಎಂಬ ಅಭಿಪ್ರಾಯ ವ್ಯಕ್ತವಾಯಿತು. ಇದಕ್ಕೆ ಸ್ಪಂದಿಸಿದ ಅಧಿಕಾರಿಗಳು ಮರದ ಕುರ್ಚಿಗಳನ್ನು ಹಾಕಲು ತೀರ್ಮಾನಿಸಿದರು. 2010ರ ಜೂನ್‌ನಲ್ಲಿ ಮೊದಲ ಹಂತದಲ್ಲಿ 12.5 ಕಿ.ಮೀ. ಮಾರ್ಗ ಸಿದ್ಧವಾಯಿತು. ಮೂರು ತಿಂಗಳ ಕಾಲ ಉಚಿತ ಪ್ರವಾಸಕ್ಕೆ ಅವಕಾಶ ಕಲ್ಪಿಸಲಾಯಿತು. ಈ ಅವಧಿಯಲ್ಲಿ 1.5 ದಶಲಕ್ಷ ಜನ ಪ್ರಯಾಣ ಮಾಡಿದರು. ಈ ಅವಧಿಯಲ್ಲಿ ವೈದ್ಯರು, ಪತ್ರಕರ್ತರು, ವಿದ್ಯಾರ್ಥಿಗಳು, ಶೈಕ್ಷಣಿಕ ತಜ್ಞರು, ಉದ್ಯಮಿಗಳು, ರಾಜಕಾರಣಿಗಳು, ಧಾರ್ಮಿಕ ನಾಯಕರು, ಹಿರಿಯ ನಾಗರಿಕರು, ನೌಕರವರ್ಗ, ಪ್ರಮುಖ ನಾಗರಿಕರು, ಸಂಸದರು ಮತ್ತು ಶಾಸಕರ ಗುಂಪುಗಳಿಗೆ ವಿಶೇಷ ಪ್ರಯಾಣದ ವ್ಯವಸ್ಥೆ ಮಾಡಲಾಯಿತು. ಹೊಸ ವ್ಯವಸ್ಥೆಯಿಂದ ಆಗುವ ಅನುಕೂಲಗಳ ಬಗ್ಗೆ ಅವರಿಗೆ ಮನವರಿಕೆ ಮಾಡಿಕೊಡಲಾಯಿತು. ಪ್ರಾಯೋಗಿಕ ಹಂತವಾದ್ದರಿಂದ ಬಸ್‌ನಲ್ಲಿ ಜಿಪಿಎಸ್ ತಂತ್ರಜ್ಞಾನ ಅಳವಡಿಸಿದ್ದು, ಸುರಕ್ಷಿತ ಚಾಲನೆ ಬಗ್ಗೆ ಚಾಲಕರಿಗೆ ತಾಂತ್ರಿಕ ತಜ್ಞರು ಮಾಹಿತಿ ನೀಡುವ ವ್ಯವಸ್ಥೆ ಮಾಡಲಾಗಿತ್ತು. ದೆಹಲಿ ಬಿಆರ್‌ಟಿಎಸ್‌ನಲ್ಲಿ ಆದ ವೈಫಲ್ಯವನ್ನು ಗಮನದಲ್ಲಿಟ್ಟುಕೊಂಡು, ಚಾಲನೆಯಲ್ಲಿ ಎದುರಾಗುವ ಸವಾಲುಗಳು, ಸುರಕ್ಷತೆ ಬಗ್ಗೆ ಪೈಲಟ್‌ಗಳಿಗೆ ಸೂಕ್ತ ಮಾಹಿತಿ ನೀಡಲಾಯಿತು.

**ಅಭಿಪ್ರಾಯ ಕುರಿತ ಸಮೀಕ್ಷೆ**

ಪ್ರಾಯೋಗಿಕ ಸಂಚಾರ ಅವಧಿಯಲ್ಲಿ, ಅಹಮದಾಬಾದ್ ಮಹಾನಗರ ಪಾಲಿಕೆ ಪ್ರತಿದಿನವೂ ಪ್ರಯಾಣಿಕರಿಂದ ಅಭಿಪ್ರಾಯ ಸಂಗ್ರಹಿಸಿತು. ಯಾವ ನಿಲ್ದಾಣದಲ್ಲಿ ಹೆಚ್ಚಿನ ದಟ್ಟಣೆ ಇರುತ್ತದೆ, ದಟ್ಟಣೆ ಅವಧಿಯಲ್ಲಿ ಪ್ರಯಾಣಿಕರ ಸಂಖ್ಯೆ ಹೆಚ್ಚಿಗೆ ಇರುತ್ತದೆಯೇ, ಯಾವ ಯಾವ ನಿಲ್ದಾಣಗಳಲ್ಲಿ ಯಾವ ಸಮಯದಲ್ಲಿ ಪ್ರಯಾಣಿಕರ ಸಂಖ್ಯೆ ಹೆಚ್ಚಿರುತ್ತದೆ ಇತ್ಯಾದಿ ಅಂಶಗಳ ಬಗ್ಗೆ ಪ್ರಯಾಣಿಕರಿಂದ ಮಾಹಿತಿ ಸಂಗ್ರಹಿಸಿ, ಅದನ್ನು ಚಾಲಕರ ಗಮನಕ್ಕೆ ತರಲಾಯಿತು. ಅಲ್ಲದೆ ಪಾಲಿಕೆ ಆಯುಕ್ತರು ಆ ಮಾಹಿತಿಯನ್ನು ಆಧರಿಸಿ ಸುಧಾರಣಾ ಕ್ರಮಗಳನ್ನು ಕೈಗೊಳ್ಳಲು ಮುಂದಾದರು.

ಎಬಿಆರ್‌ಟಿಎಸ್ ಪೂರ್ಣ ಪ್ರಮಾಣದಲ್ಲಿ ಕಾರ್ಯಾಚರಣೆಗೊಳ್ಳುವ ಮುನ್ನ ಸೇವೆಗಳ ಬಗ್ಗೆ ಪ್ರಯಾಣಿಕರಿಂದ ಅಭಿಪ್ರಾಯ ಸಂಗ್ರಹಿಸಿತು. ಇತರೆ ಸೇವೆಗಳಿಗೂ ಬಿಆರ್‌ಟಿಎಸ್‌ಗೂ ಇರುವ ವ್ಯತ್ಯಾಸ, ಪ್ರತಿ ತಿಂಗಳು ನಡೆಯುವ ಅಪಘಾತಗಳ ಸಂಖ್ಯೆ ಇತ್ಯಾದಿಗಳ ಬಗ್ಗೆ ಪ್ರಯಾಣಿಕರಿಂದ ಪ್ರತಿಕ್ರಿಯೆಗಳನ್ನು ಪಡೆಯಲಾಯಿತು. ಅಲ್ಲದೆ ಟೋಲ್‌ಫ್ರಿ ಸಂಖ್ಯೆ ಮೂಲಕ ಅಹಮದಾಬಾದ್ ಮಹಾನಗರ ಪಾಲಿಕೆ ದೂರುಗಳನ್ನು ಸ್ವೀಕರಿಸಿತು.

ಸಮೀಕ್ಷೆಯಲ್ಲಿ ನಿತ್ಯ ಸಂಚರಿಸುವ ಪ್ರಯಾಣಿಕರ ಸಂಖ್ಯೆ ಹಾಗೂ ಸಂಗ್ರಹವಾಗುವ ಆದಾಯ, ಬಸ್‌ಗಳ ಕಾರ್ಯಾಚರಣೆ, ಬಸ್‌ಗಳ ಮತ್ತು ನಿಲ್ದಾಣಗಳ ಸ್ವಚ್ಛತೆ, ಚಾಲಕರು ಮತ್ತು ನಿರ್ವಾಹಕರ ನಡವಳಿಕೆ, ಅವರು ಸಮವಸ್ತ್ರ ಧರಿಸುತ್ತಾರಾ? ವೇಗವಾಗಿ ಮತ್ತು ಬೇಜವಾಬ್ದಾರಿಯಿಂದ ಚಾಲನೆ ಮಾಡುತ್ತಾರಾ? ಜನರಿಗೆ ಯಾವ ರೀತಿ ಬಸ್ ಸೇವೆ ಲಭ್ಯವಾಗುತ್ತಿದೆ ಮೊದಲಾದ ಅಂಶಗಳ ಬಗ್ಗೆ ಮಾಹಿತಿ ಸಂಗ್ರಹಿಸಲಾಯಿತು. ಈ ಮೂಲಕ ಬಳಕೆದಾರರಿಗೆ ಏನು ಅಗತ್ಯವಿದೆ? ಅವರ ಆದ್ಯತೆಗಳು ಏನು ಎಂಬುದನ್ನು ತಿಳಿಯಲು ಪಾಲಿಕೆಗೆ ಸಹಕಾರಿಯಾಯಿತು.




**ಉಪಸಂಹಾರ**

ಭಾರತದ ಬಹುತೇಕ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಈಗಲೂ ಯಾವುದೇ ವಿಷಯದಲ್ಲಿ ಸಮಗ್ರವಾಗಿ ಯೋಜನೆ, ನೀತಿಗಳನ್ನು ರೂಪಿಸುವ ವ್ಯವಸ್ಥೆ ಇಲ್ಲ. ಸಮಗ್ರ ಅಭಿವೃದ್ಧಿ ಆಗಬೇಕಾದರೆ ಸರ್ಕಾರದ ನಿರ್ಧಾರಗಳಲ್ಲಿ ಜನರ ಭಾಗವಹಿಸುವಿಕೆ ಬಹಳ ಮುಖ್ಯ. ಬಿಆರ್‌ಟಿಎಸ್ ಇದಕ್ಕೆ ಉತ್ತಮ ನಿದರ್ಶನ. ವಿವಿಧ ಹಂತಗಳಲ್ಲಿ ಬಳಕೆದಾರರು ಮತ್ತು ಪಾಲುದಾರರನ್ನು ಸಕ್ರಿಯವಾಗಿ ತೊಡಗಿಸಿಕೊಂಡಿದ್ದರಿಂದ ಉತ್ತಮ ಸೇವೆ ನೀಡಲು ಬಿಆರ್‌ಟಿಎಸ್‌ಗೆ ಸಾಧ್ಯವಾಗಿದೆ. ಅಹಮದಾಬಾದ್ ಮಹಾನಗರ ಪಾಲಿಕೆ ಪ್ರಾತ್ಯೇಕ್ಷಿಕೆ ಮೂಲಕ ಈ ಯೋಜನೆಯ ಮಹತ್ವವನ್ನು ಇತರೆ ನಗರ ಸ್ಥಳೀಯ ಸಂಸ್ಥೆಗಳಿಗೆ ತಿಳಿಸಿಕೊಟ್ಟರೆ, ಬೇರೆ ಕಡೆಯೂ ಸಹ ಸಾಂಪ್ರದಾಯಿಕವಾದ ಪದ್ಧತಿಗೆ ವಿದಾಯ ಹೇಳಿ, ಇದೇ ರೀತಿ ಬಳಕೆದಾರರ ಸಹಭಾಗಿತ್ವದಲ್ಲಿ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ಸಹಕಾರಿಯಾಗುತ್ತದೆ. ರಾಜ್ಯ ಸರ್ಕಾರಗಳು ಈ ನಿಟ್ಟಿನಲ್ಲಿ ಗಮನಹರಿಸಬೇಕು. ಈ ರೀತಿ ಮಾಡುವುದರಿಂದ ನಗರ ಸ್ಥಳೀಯ ಸಂಸ್ಥೆಗಳ ಬಗ್ಗೆ ಜನರಲ್ಲೂ ವಿಶ್ವಾಸ ಮೂಡುತ್ತದೆ. ಯೋಜನೆಗಳು ಜನಪರ ಆಗಿರುವುದು ಅಷ್ಟೆ ಅಲ್ಲದೆ ಅವು ಹೆಚ್ಚು ಉಪಯುಕ್ತವಾಗಿರುತ್ತವೆ. ಆದ್ದರಿಂದ ಜನರ ಸಹಭಾಗಿತ್ವದಲ್ಲಿ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ನಗರ ಸ್ಥಳೀಯ ಸಂಸ್ಥೆಗಳಿಗೆ ಹೆಚ್ಚಿನ ಉತ್ತೇಜನ ನೀಡಬೇಕು. ❑

# ಯಮುನಾ ನದಿ ಹಸನು – ಸವಾಲು ಮತ್ತು ಕ್ರಮ

**ಡಾ. ದೀಪ್ಷಿಕಾ ಶರ್ಮಾ**

**ಕನ್ನಡಕ್ಕೆ : ಎಸ್.ಎಸ್. ಶ್ರೀನಿವಾಸನ್**



**ನಗರದಲ್ಲಿ ಉತ್ತಮ ಚರಂಡಿ ವ್ಯವಸ್ಥೆ ಮತ್ತು ಮಳೆಕೊಯ್ಲನ್ನು ಅಳವಡಿಸಿಕೊಂಡರೆ, ಜಲಮಾಲಿನ್ಯವನ್ನು ನಿಯಂತ್ರಿಸಬಹುದು. ನದಿ ತಪ್ಪಲಿನ ಕೃಷಿ ಭೂಮಿಯಿಂದ ನೇರವಾಗಿ ಕೃಷಿತ್ಯಾಜ್ಯಗಳು ನದಿ ಪ್ರವೇಶಿಸುವುದನ್ನು ತಡೆಯಲು ಫಿಲ್ಟರ್ ಮತ್ತು ಬಫರ್ ಪಟ್ಟಿಗಳನ್ನು ಅಳವಡಿಸಿ ಸಹಾ ನದಿ ಮಾಲಿನ್ಯವಾಗುವುದನ್ನು ನಿಯಂತ್ರಿಸಬಹುದು.**

ವಿಶ್ವದಾದ್ಯಂತ ಅನೇಕ ನದಿಗಳು ಕಲುಷಿತಗೊಳ್ಳುತ್ತಿವೆ. ಯೂರೋಪಿನಲ್ಲಿ ರೈನ್ ನದಿ, ಫ್ರಾನ್ಸ್ ದೇಶದಲ್ಲಿ ಸೀನ್, ಅಮೆರಿಕಾದಲ್ಲಿ ಮಿನ್ನೆಸೋಟಾ ಹಾಗೂ ಸ್ಕ್ಯಾಂಡಿನೇವಿಯಾ ರಾಷ್ಟ್ರಗಳಲ್ಲಿ ನದಿಗಳು ಮಲಿನಗೊಂಡಿವೆ. ಈ ನದಿಮಾಲಿನ್ಯ ಭಾರತವನ್ನೂ ಬಿಟ್ಟಿಲ್ಲ. ಗಂಗಾ ಮತ್ತು ಬ್ರಹ್ಮಪುತ್ರಾ ನದಿ ಮಲಿನಗೊಂಡು ಪರಿಣಾಮ ಬೀರುತ್ತಿವೆ. ನದಿ ಮಾಲಿನ್ಯ ಮುಖ್ಯವಾಗಿ ಅಸ್ತಿತ್ವದಲ್ಲಿರುವ ಮೂಲಸೌಕರ್ಯ ಮತ್ತು ನೀತಿ ಸಾಧನಗಳ ವೈಫಲ್ಯದಿಂದ ಉಂಟಾಗುತ್ತದೆ.

ವಿಶ್ವಸಂಸ್ಥೆಯ ವಿಶ್ವ ನೀರಿನ ನಿರ್ಧರಿಸುವಿಕೆ ಕಾರ್ಯಕ್ರಮದ (2003) ಪ್ರಕಾರ ಪ್ರಪಂಚದ 227 ಅತಿದೊಡ್ಡ ನದಿಗಳ ಶೇಕಡಾ 60ರಷ್ಟು ನೀರನ್ನು ಅಣೆಕಟ್ಟುಗಳು ಮತ್ತು ಇತರ ಮೂಲ ಸೌಕರ್ಯಗಳು ತಡೆಹಿಡಿಯುತ್ತಿವೆ. ಇದರಿಂದಾಗಿ ಕೆಳಮುಖವಾಗಿ ಹರಿಯುವ ನದಿಗಳಲ್ಲಿ ನೀರಿನ ಹರಿಯುವ ದರ ಕಡಿಮೆಯಾಗಿ ನೀರಿನ ಗುಣಮಟ್ಟ ಕಡಿಮೆಯಾಗುತ್ತದೆ. ಅಡ್ಡಿಯುಂಟಾಗಿ ಸುತ್ತಮುತ್ತಲಿನ ಜೀವವೈವಿಧ್ಯಕ್ಕೆ ಧಕ್ಕೆ ತರುತ್ತದೆ. ಅದೇ ರೀತಿ ದೆಹಲಿ (ಭಾರತದ ರಾಜಧಾನಿ) ಪ್ರತಿದಿನ ಸುಮಾರು 3 ಶತಕೋಟಿ ಲೀಟರ್ ತ್ಯಾಜ್ಯನೀರನ್ನು ಹೊರಹಾಕಿ, ಅದರಲ್ಲಿ ಕೇವಲ ಅರ್ಧದಷ್ಟನ್ನು ಮಾತ್ರ ಸಂಸ್ಕರಿಸಿ, ಮಿಕ್ಕ ಅರ್ಧವನ್ನು ನೇರವಾಗಿ ಗಂಗೆಯ ಉಪಜಲಾನಯನವಾದ ಯಮುನಾ ನದಿಗೆ ಹರಿಸುತ್ತದೆ.

ಭಾರತದ ನದಿಗಳನ್ನು ಸ್ವಚ್ಛಗೊಳಿಸುವ ಪ್ರಯತ್ನ 1985 ರಲ್ಲಿ ಗಂಗಾನದಿಯ ನೀರಿನ ಗುಣಮಟ್ಟವನ್ನು ಮರುಸ್ಥಾಪಿಸುವ ಉದ್ದೇಶದೊಂದಿಗೆ ಪ್ರಾರಂಭವಾಯಿತು. ಸಿ.ಪಿ.ಸಿ.ಬಿ ವರದಿಗಳ ಆಧಾರದ ಮೇಲೆ, ಭಾರತ ಸರ್ಕಾರವು 1993 ರಲ್ಲಿ ವೈ.ಎ.ಪಿ ಹಂತ–1 ನ್ನು ಜಪಾನ್ ದೇಶದ ಬ್ಯಾಂಕಿನ ಸಹಕಾರದೊಂದಿಗೆ ಆರಂಭಿಸಿತು. ಪರಿಸರ ಮತ್ತು ಅರಣ್ಯ ಸಚಿವಾಲಯದಡಿ ಕಾರ್ಯನಿರ್ವಹಿಸುವ ರಾಷ್ಟ್ರೀಯ ನದಿಸಂರಕ್ಷಣಾ ನಿರ್ದೇಶನಾಲಯಕ್ಕೆ ಈ ಕಾರ್ಯವನ್ನು ಒಪ್ಪಿಸಲಾಯಿತು.

ವೈ.ಎ.ಪಿ ಹಂತ 1, ಮೂರು ರಾಜ್ಯಗಳಾದ, ಹರಿಯಾಣ, ಉತ್ತರಪ್ರದೇಶ ಮತ್ತು ದೆಹಲಿಯನ್ನು ಒಳಗೊಂಡಿದೆ. ಈ ರಾಜ್ಯಗಳಲ್ಲಿ ಕಾರ್ಯನಿರ್ವಹಿಸುವ ಜಲನಿಗಮಗಳು ಈ ಸ್ವಚ್ಛತಾಕಾರ್ಯದಲ್ಲಿ ಕೈಜೋಡಿಸಿವೆ.

ವೈ.ಎ.ಪಿ ಹಂತ 1 ಏಪ್ರಿಲ್ 2002ರ ಒಳಗೆಮುಗಿಯಬೇಕೆಂದು ನಿಗದಿಯಾಗಿದ್ದರೂ 2003 ರ ತನಕ ಸಾಗಿತು. ಆರಂಭದಲ್ಲಿ ಈ ಯೋಜನೆ 15 ಪಟ್ಟಣಗಳಲ್ಲಿ ಮಾಲಿನ್ಯ ನಿಯಂತ್ರಣ ಮಾಡುವ ಉದ್ದೇಶದೊಂದಿಗೆ ಆರಂಭವಾಯಿತು (ಹರಿಯಾಣದಲ್ಲಿ 6, ಉತ್ತರಪ್ರದೇಶದಲ್ಲಿ 8 ಹಾಗೂ ದೆಹಲಿಯಲ್ಲಿ 1). ಇದಕ್ಕೆ ಜಪಾನ್ ಬ್ಯಾಂಕ್ 17.77 ಬಿಲಿಯನ್ ಯೆನ್ ಧನಸಹಾಯ ಮಾಡಿತು. ಅದರಲ್ಲಿ ಹರಿಯಾಣ ರಾಜ್ಯಕ್ಕೆ 6 ಬಿಲಿಯನ್ ಯೆನ್, ಉತ್ತರಪ್ರದೇಶಕ್ಕೆ 8 ಬಿಲಿಯನ್ ಹಾಗೂ ದೆಹಲಿಗೆ 3.77 ಬಿಲಿಯನ್ ಯೆನ್ ಎಂದು ನಿಗದಿಮಾಡಲಾಯಿತು. ಆದರೆ ಏಪ್ರಿಲ್ 1996 ರಲ್ಲಿ ಭಾರತದ ಸರ್ವೋಚ್ಚ ನ್ಯಾಯಾಲಯ ಇನ್ನೂ ಆರು

ಮ್ಯಾನೇಜರ್, ಡಬ್ಲ್ಯೂಆರ್ಎ ವಿಂಡ್ ಫೋರ್ಸ್, ಮ್ಯಾನೇಜ್ಮೆಂಟ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್, ಗುರ್ಗಾಂವ್. email : deepshikha.k.sharma@gmail.com

| ಕೋಷ್ಟಕ –1 | | | | | | |
|---|---|---|---|---|---|---|
| ರಾಜ್ಯವಾರು ಬಂಡವಾಳ ಹೂಡಿಕೆ ಮತ್ತು ವೈ.ಎ.ಪಿ–1 ಮತ್ತು ವೈ.ಎ.ಪಿ–2 ರ ಅಡಿಯಲ್ಲಿರುವ ಯೋಜನೆಗಳು | | | | | | |
| | ವೈ.ಎ.ಪಿ–1 | | | ವೈ.ಎ.ಪಿ–2 | | |
| | ದೆಹಲಿ | ಹರಿಯಾಣ | ಉ.ಪ್ರ | ದೆಹಲಿ | ಹರಿಯಾಣ | ಉ.ಪ್ರ |
| ಮಂಜೂರಾದ ವೆಚ್ಚ (ಶ.ಕೋ.ರೂ) | 1.81 | 2.42 | 2.82 | 4.69 | 6.34 | 1.15 |
| ಭಾರತ ಸರ್ಕಾರ ಬಿಡುಗಡೆಗೊಳಿಸಿದ ಹಣ (ಶತಕೋಟಿ ರೂಗಳಲ್ಲಿ) | 1.77 | 1.78 | 2.40 | 1.21 | 0.48 | 0.58 |
| ಮಂಜೂರಾದ ಯೋಜನೆಗಳ ಸಂಖ್ಯೆ | 12 | 111 | 146 | 11 | 16 | 5 |
| ಪೂರ್ಣಗೊಳಿಸಿದ ಯೋಜನೆಗಳ ಸಂಖ್ಯೆ | 12 | 111 | 146 | 0 | 6 | 1 |

ನಗರಗಳನ್ನು ಈ ವೈ.ಎ.ಪಿ–1 ರ ಅಡಿಯಲ್ಲಿ ಸೇರಿಸಿಕೊಂಡು, ಪರಿಸರ ಮತ್ತು ಅರಣ್ಯ ಮಂತ್ರಾಲಯದಿಂದ ಬರುವ ಅನುದಾನವನ್ನು ಉಪಯೋಗಿಸಿಕೊಳ್ಳಬೇಕೆಂದು ನಿರ್ದೇಶನ ನೀಡಿತು. ಇದರೊಂದಿಗೆ ಒಟ್ಟು 21 ನಗರಗಳನ್ನು ಈ ವೈ.ಎ.ಪಿ–1 ರ ವ್ಯಾಪ್ತಿಗೆ ತರಲಾಯಿತು (ಯೋಜನಾ ಆಯೋಗ–2007). ಮಾರ್ಚ್ 2003 ರಲ್ಲಿ 753 ಎಂ.ಎಲ್.ಡಿ ಶುದ್ಧೀಕರಿಸುವ ಪ್ರಸ್ತಾಪಕ್ಕೆ ಒಪ್ಪಿ, ಯೋಜನೆ ಪೂರ್ಣಗೊಂಡಿತೆಂದು ಘೋಷಿಸಲಾಯಿತು. ವೈ.ಎ.ಪಿ–1 ರ ಒಟ್ಟು ಅನುಮೋದಿತ ವೆಚ್ಚ 5.09 ಶತಕೋಟಿ ಯೆನ್ ಆಗಿತ್ತು. ಜಪಾನ್ ಬ್ಯಾಂಕ್ ಬಿಡುಗಡೆ ಮಾಡಿದ ಒಟ್ಟು ಹಣದಲ್ಲಿ ಸುಮಾರು 3 ಬಿಲಿಯನ್ ಯೆನ್ ಉಳಿತಾಯವಾಗಿ ಆ ಹಣವನ್ನು ಹೆಚ್ಚುವರಿ ಕೆಲಸಗಳಿಗಾಗಿ ಅದೇ 15 ನಗರಗಳಿಗೆ ಕೊಡಲಾಯಿತು ಮತ್ತು ವೈ.ಎ.ಪಿ–1 ಯೋಜನೆಯನ್ನು ಫೆಬ್ರವರಿ–2003 ರವರೆಗೆ ವಿಸ್ತರಿಸಲಾಯಿತು. ಮೇ 2001 ರಲ್ಲಿ ಹೆಚ್ಚುವರಿಯಾಗಿ 2.22 ಶತಕೋಟಿ ರೂಪಾಯಿಗಳನ್ನು ಈ ವಿಸ್ತರಿತ ಯೋಜನೆಗೆ ಕೊಡಲಾಯಿತು. ಇದರಲ್ಲಿ 222.8 ದಶಲಕ್ಷ ರೂಪಾಯಿಗಳನ್ನು ಹರಿಯಾಣ ರಾಜ್ಯಕ್ಕೆ, 1.66 ಶತಕೋಟಿ ರೂಪಾಯಿಗಳನ್ನು ದೆಹಲಿಗೆ ಮತ್ತು 296.5 ದಶಲಕ್ಷ ರೂಪಾಯಿಗಳನ್ನು ಉತ್ತರಪ್ರದೇಶಕ್ಕೆ ಹಂಚಲಾಯಿತು. ಇದರ ಜೊತೆಗೆ 40.5 ದಶಲಕ್ಷ ರೂಪಾಯಿಗಳನ್ನು ಭಾರತ–ಜಪಾನ್ ಸಲಹೆಗಾರರ ಒಕ್ಕೂಟಕ್ಕೆ ಶುಲ್ಕವಾಗಿ ನೀಡಲು ಕೊಡಲಾಯಿತು. ಇದರೊಂದಿಗೆ ಒಟ್ಟು ವೈ.ಎ.ಪಿ–1 ರ ವೆಚ್ಚ 7.32 ಶತಕೋಟಿ ರೂಪಾಯಿಗಳಾಯಿತು.

ಈ ಕ್ರಿಯಾ ಯೋಜನೆಯ ಹಣವನ್ನು ಕೇಂದ್ರಹಾಗೂ ಆಯಾಯ ರಾಜ್ಯ ಸರ್ಕಾರಗಳು ಸಮನಾಗಿ ಹಂಚಿಕೊಂಡರು. 2001 ರಲ್ಲಿ ರಾಜ್ಯ ಸರ್ಕಾರಗಳು ಶೇಕಡಾ 30 ರಷ್ಟು ಹೆಚ್ಚುವರಿ ಹಣವನ್ನು ಬಿಡುಗಡೆಗೊಳಿಸಲು ಒಪ್ಪಿದಾಗ ಕೇಂದ್ರ ಸರ್ಕಾರವೂ ಶೇಕಡಾ 30 ರಷ್ಟು ಹೆಚ್ಚುವರಿ ಹಣವನ್ನು ಕೊಡುವುದಾಗಿ ಹೇಳಿತು. ವೈವಿಧ್ಯಮಯ ಚಟುವಟಿಕೆಗಳ ಹೊರತಾಗಿಯೂ, ನದಿಗಳ ಗುಣಮಟ್ಟ ಬಯಸಿದ ಗುಣಮಟ್ಟವನ್ನು ತಲುಪಲಿಲ್ಲ (ಸಿ.ಪಿ.ಸಿ.ಬಿ–2006–07). ದೆಹಲಿಯ ಸಾರಶುದ್ಧೀಕರಣ ಸಾಮರ್ಥ್ಯ ಅದರ ಅಂದಾಜಿಸಿದ ಸಾಮರ್ಥ್ಯಕ್ಕಿಂತಲೂ ಕಡಿಮೆ ಇರುವುದು ಗೊತ್ತಾಗಿ ವೈ.ಎ.ಪಿ ಅದರ ಶಕ್ತಿಗಿಂತಲೂ ಕಡಿಮೆ ಉಪಯುಕ್ತ ಎಂಬುದಾಗಿ ಸಾಬೀತಾಯಿತು.

ಅದರಿಂದ ಬಯಸಿದ ಗುಣಮಟ್ಟವನ್ನು ಸಾಧಿಸಲು ಡಿಸೆಂಬರ್–2004ರಲ್ಲಿ ವೈ.ಎ.ಪಿ–2ನ್ನು ಭಾರತ ಸರ್ಕಾರ ಅನುಷ್ಠಾನಗೊಳಿಸಲು ತೀರ್ಮಾನಿಸಿತು. ಇದು ಸೆಪ್ಟೆಂಬರ್ 2008 ರ ವೇಳೆಗೆ ಪೂರ್ಣಗೊಳ್ಳುವಂತೆ ನಿಗದಿಯಾಗಿತ್ತು. ವೈ.ಎ.ಪಿ–1 ರಲ್ಲಿ ನಡೆದ ಕೆಲಸ ಕಾರ್ಯಗಳ ಆಧಾರದ ಮೇಲೆ ಜೆ.ಬಿ.ಐ.ಸಿ ಭಾರತ ಸರ್ಕಾರದೊಂದಿಗೆ ಹೊಸ ಸಾಲ ಒಪ್ಪಂದಕ್ಕೆ 31.03.2003 ರಂದು ಸಹಿ ಮಾಡಿತು ಮತ್ತು ವೈ.ಎ.ಪಿ–2 ರ ಒಟ್ಟು ವೆಚ್ಚದ ಶೇಕಡಾ 85 ರಷ್ಟು ಹಣವಾದ 13.33 ಶತಕೋಟಿ ಯೆನ್‌ಗಳಿಗೆ ಅನುಮೋದನೆ ನೀಡಿತು. ಇದನ್ನು ದೆಹಲಿಗೆ 3.87 ಶತಕೋಟಿ ರೂಪಾಯಿ, ಉತ್ತರಪ್ರದೇಶಕ್ಕೆ 1.24 ಶತಕೋಟಿ ರೂಪಾಯಿ ಮತ್ತು ಹರಿಯಾಣಕ್ಕೆ 630 ದಶಲಕ್ಷ ರೂಪಾಯಿ ಎಂದು ಹಂಚಲಾಯಿತು. ಜೊತೆಗೆ 500 ದಶಲಕ್ಷ ರೂಪಾಯಿಗಳನ್ನು ಕಟ್ಟಡ ಸಾಮರ್ಥ್ಯ ಹೆಚ್ಚು ಮಾಡಲು ಮೀಸಲಿಡಲಾಯಿತು. ನಿಗದಿತ ಕೆಲಸ ಕಾರ್ಯಗಳು ಮುಗಿಯದ ಕಾರಣ ಈ ಯೋಜನೆಯನ್ನು ಮಾರ್ಚ್ 2011 ರ ತನಕ ವಿಸ್ತರಿಸಿದರು.

ಒಟ್ಟು ಸಾರಶುದ್ಧೀಕರಣ ಸಾಮರ್ಥ್ಯ 189 ಎಂ.ಎಲ್.ಡಿ. ಎಂದು ಮಂಜೂರಾಯಿತು. ಕೋಷ್ಟಕ – 1 ರಲ್ಲಿ ತಿಳಿಸಿರುವಂತೆ ಯಾವುದೇ ಯೋಜನೆಗಳೂ, ಯಾವ ರಾಜ್ಯದಲ್ಲೂ ಪೂರ್ಣಗೊಳ್ಳದ ಕಾರಣ ವೈ.ಎ.ಪಿ–2 ನ್ನು ಸಹಾ ವಿಸ್ತರಿಸಲಾಯಿತು.

ಬಂಡವಾಳ, ಸಮಯ ಎಲ್ಲವನ್ನೂ ವ್ಯಯಿಸಿದ್ದರೂ ನದಿಯಲ್ಲಿನ ಮಾಲಿನ್ಯ ಮಾತ್ರ ಹೆಚ್ಚುತ್ತಲೇ ಇರುವುದು ವಿಷಾದನೀಯ ಎನ್ನುವುದನ್ನು ಮನಗಾಣಬಹುದು. 1980 ರಲ್ಲಿ ದಿನವೊಂದಕ್ಕೆ 117 ಬಿ.ಓ.ಡಿ ಇದ್ದದ್ದು 2008 ರ ಹೊತ್ತಿಗೆ 270 ಬಿ.ಓ.ಡಿ ಗೆ ಏರಿರುವುದು ಕಂಡುಬಂದಿದೆ.

ಕೋಷ್ಟಕ–2 ಹರಿಯಾಣ, ದೆಹಲಿ ಮತ್ತು ಉತ್ತರಪ್ರದೇಶದಲ್ಲಿ 1996ರಲ್ಲಿದ್ದ ನೀರಿನಗುಣಮಟ್ಟ ಮತ್ತು 2009ರಲ್ಲಿದ್ದ ನೀರಿನ ಗುಣಮಟ್ಟವನ್ನು ವಿವರಿಸುತ್ತದೆ.

ವೈ.ಎ.ಪಿ–2ರ ಪ್ರಭಾವವನ್ನು ನೋಡಿ ಭಾರತ ಸರ್ಕಾರ ವೈ.ಎ.ಪಿ–3 ನ್ನು ಡಿಸೆಂಬರ್ 2011ರಲ್ಲಿ ಅನುಮೋದಿಸಿತು. ಇದರ ಒಟ್ಟು ಅಂದಾಜು ವೆಚ್ಚ 16.56 ಶತಕೋಟಿ ರೂಪಾಯಿಗಳಾಗಿದ್ದು, ದೆಹಲಿ ಮುಖ್ಯ ಕೇಂದ್ರಬಿಂದುವಾಗಿದೆ. ಆದ್ದರಿಂದ ವಿವಿಧ

ಮಾಲಿನ್ಯ ನಿಯಂತ್ರಣ ಉಪಕರಣಗಳು ಯಮುನಾ ನದಿಯ ಮಾಲಿನ್ಯವನ್ನು ತಡೆಗಟ್ಟಲು ಹೇಗೆ ಕೆಲಸ ಮಾಡುತ್ತವೆ ಎಂಬುದನ್ನು ಅಭ್ಯಸಿಸಲು ಅನುವಾಗುತ್ತದೆ.

ಕೋಷ್ಟಕ–3 ರಲ್ಲಿ ತೋರಿಸಿದಂತೆ, ವೈ.ಎ.ಪಿ–1 ಮತ್ತು 2ರ ಯೋಜನೆಗಳು ಪೂರ್ಣಗೊಂಡಿದ್ದರೂ ನದಿಯ ನೀರಿನ ಗುಣಮಟ್ಟ ಅಪೇಕ್ಷಿತ ಗುಣಮಟ್ಟದಲ್ಲಿ ಇಲ್ಲ. ವೈ.ಎ.ಪಿ.ಯೋಜನೆಗಳ ಸಮಯ, ಬಂಡವಾಳಗಳನ್ನು ಗಣನೆಗೆ ತೆಗೆದುಕೊಂಡು ಅದರ ಪರಿಣಾಮಗಳನ್ನು ಗುರುತಿಸಿ ನೋಡಿದರೆ, ಈ ನದಿ ಸ್ವಚ್ಛತಾ ಯೋಜನೆಗಳನ್ನು "ಪರಿಣಾಮ ಊಹೆ"ಯ ಬೆಳಕಿನಲ್ಲಿ ಪುನರ್ ಪರಿಶೀಲಿಸುವುದು ಅವಶ್ಯಕ.

ಯಮುನಾ ನದಿಯು 224 ಕಿಲೋಮೀಟರ್ ದೂರವನ್ನು ಕ್ರಮಿಸಿ ಪಲ್ಲಾ ಗ್ರಾಮದ ಹತ್ತಿರ ದೆಹಲಿಯನ್ನು ಪ್ರವೇಶಿಸುತ್ತದೆ. ನಂತರ ವಾಜಿರಾಬಾದ್ ಬಳಿ ದೆಹಲಿಗೆ ಕುಡಿಯುವ ನೀರು ಸರಬರಾಜು ಮಾಡಲು ಒಂದು ಬ್ಯಾರೇಜ್ ನಿರ್ಮಾಣಮಾಡಲಾಗಿದೆ. ಅಲ್ಲಿಂದ ಮುಂದೆ ನದಿ ಕ್ರಮಿಸದಿದ್ದರೂ ಅಥವಾ ಸ್ವಲ್ಪವೇ ನೀರು ಕೆಳಗೆ ಹರಿದರೂ, ಅದಕ್ಕೆ ಮುಂದೆ ಕಾರ್ಖಾನೆ ತ್ಯಾಜ್ಯಗಳು ಮತ್ತು ತ್ಯಾಜ್ಯನೀರು ಬಂದು ಸೇರುತ್ತದೆ.

ಹಾಗೆಯೇ 25 ಕಿಲೋಮೀಟರ್ ಕೆಳಕ್ಕೆ ಸಂಚರಿಸಿದ ನಂತರ ಈ ನೀರನ್ನು ಆಗ್ರಾ ಕಾಲುವೆಗೆ ಕೃಷಿ ಕಾರ್ಯಗಳಿಗೆ ತಿರುಗಿಸಲಾಗುತ್ತದೆ. ಮತ್ತೆ ಓಕ್ಲಾಪ್ರದೇಶದಲ್ಲಿ ನದಿಯನ್ನು ಅಡ್ಡಗಟ್ಟಲಾಗುತ್ತದೆ. ಹಾಗಾಗಿ ಬೇಸಿಗೆಯಲ್ಲಿ ನದಿಯಲ್ಲಿ ಯಾವುದೇ ನೀರು ಇರುವುದಿಲ್ಲ.

ಓಕ್ಲಾ ಬ್ಯಾರೇಜಿನ ಕೆಳಮುಖವಾಗಿ ಹರಿಯುವ ನದಿಗೆ ಪೂರ್ವ ದೆಹಲಿ, ನೋಯ್ಡಾ ಮತ್ತು ಸಹಿಬಾಬಾದ್ ಕಡೆಗಳಿಂದ ಗೃಹತ್ಯಾಜ್ಯ ಮತ್ತು ಕಾರ್ಖಾನೆತ್ಯಾಜ್ಯಗಳು ಶಹದರಾ ಚರಂಡಿಯ ಮೂಲಕ ಬಂದು ಯಮುನಾ ನದಿಯನ್ನು ಸೇರುತ್ತವೆ. ಕೊನೆಗೆ ಯಮುನಾ ನದಿ ಅದರ ಇತರ ಉಪನದಿಗಳಿಂದ ಬಂದು ಸೇರುವ ನೀರನ್ನು ಕೊಂಡೊಯ್ಯುತ್ತಾ ಸುಮಾರು 1370 ಕಿಲೋಮೀಟರ್ ಕ್ರಮಿಸಿ (ಸಿ.ಪಿ.ಸಿ.ಬಿ.2001–02[a]). ಗಂಗಾ ನದಿಯನ್ನು ಪ್ರಯಾಗದಲ್ಲಿ ಬಂದು ಸೇರುತ್ತದೆ. ಗುಪ್ತಗಾಮಿನಿಯಾಗಿ ಹರಿಯುವ ಸರಸ್ವತಿ ನದಿಯೂ ಪ್ರಯಾಗದಲ್ಲಿ ಗಂಗೆಯನ್ನು (ಅಲಹಾಬಾದ್) ಸೇರುತ್ತದೆ.

**ಕೋಷ್ಟಕ–2**

**ಯಮುನಾ ನದಿಯ ನೀರಿನ ಗುಣಮಟ್ಟದ ವಿವರಗಳು (ಬೇಸಿಗೆ ಸರಾಸರಿ : ಮಾರ್ಚ್–ಜೂನ್)**

| ಕೇಂದ್ರ / ಸ್ಥಳ | 1996 | | 2009 | |
|---|---|---|---|---|
| | ಡಿ.ಓ. (ಎಂ.ಜಿ/ಲೀ) | ಬಿ.ಓ.ಡಿ. (ಎಂ.ಜಿ/ಲೀ) | ಡಿ.ಓ. (ಎಂ.ಜಿ/ಲೀ) | ಬಿ.ಓ.ಡಿ. (ಎಂ.ಜಿ/ಲೀ) |
| **ಹರಿಯಾಣ** | | | | |
| ತಾಜೆವಾಲಾ | 11.70 | 1.20 | 9.22 | 1.25 |
| ಕಾಲನೌರ್ | 10.40 | 1.05 | 9.10 | 2.33 |
| ಸೋನೆಪತ್ | 9.75 | 3.00 | 7.60 | 7.00 |
| ದೆಹಲಿ | | | | |
| ನಿಜಾಮುದ್ದೀನ್ | 0.30 | 25.00 | 0.0 | 23.00 |
| **ಉತ್ತರಪ್ರದೇಶ** | | | | |
| ಆಗ್ರಾ ಕಾಲುವೆ | 0.35 | 26.50 | 0.00 | 14.75 |
| ಮಹ್ಜಾವಾಲಿ | 0.50 | 22.00 | 2.75 | 16.75 |
| ಮಥುರಾ | 8.10 | 4.00 | 5.28 | 8.50 |
| ಮಥುರಾ ಡಿ/ಎಸ್. | 8.50 | 2.50 | 6.30 | 8.75 |
| ಆಗ್ರಾ ಡಿ/ಎಸ್. | 1.65 | 9.00 | 4.67 | 16.25 |
| ಉದಿ | 9.71 | 2.00 | 9.00 | 1.00 |
| ಔರಯಾ ಜುಹಿಕಾ | 8.14 | 5.00 | 11.05 | 4.75 |

(ಕೃಪೆ : ಸಿಪಿಸಿಬಿ, <http://envfor.nic.in/nrcd/NRCD/Yamuna.htm>)


ದೇಶದ ಶೇಕಡಾ 10.7 ರಷ್ಟು ಭೂಮಿ ಈ ನದಿಪಾತ್ರದ್ದು. ನದಿಗೆ ಐದು ಬ್ಯಾರೇಜ್‌ಗಳಿರುವುದು ವರ್ಷಪೂರಾ ನೀರು ಹೆಚ್ಚು ಕಡಿಮೆಯಾಗಿ ಹರಿಯುವಂತೆ ಮಾಡುತ್ತವೆ. ಅಕ್ಟೋಬರ್‌ನಿಂದ ಜೂನ್ ವರೆಗೆ ನದಿಯು ಒಣಗಿರುತ್ತದೆ ಅಥವಾ ಬಹಳ ಕಡಿಮೆ ನೀರನ್ನು ಒಳಗೊಂಡಿರುತ್ತದೆ. ಅಂತೆಯೇ ಮಳೆಗಾಲದಲ್ಲಿ (ಜುಲೈ – ಸೆಪ್ಟೆಂಬರ್) ನದಿಯಲ್ಲಿ ಪೂರ್ಣಪ್ರಮಾಣದಲ್ಲಿ ನೀರು ಹರಿಯುತ್ತಿರುತ್ತದೆ. ಈ ನದಿಪಾತ್ರದಲ್ಲಿ ಸುಮಾರು ಆರು ದಶಲಕ್ಷ ಹೆಕ್ಟೇರ್ ಭೂಮಿಗೆ ಈ ನದಿ ನೀರುಣಿಸುತ್ತದೆ. ಈ ನದಿನೀರನ್ನು ಎಲ್ಲಾ ಕಾರ್ಯಗಳಿಗೂ ಬಳಸಲಾಗುತ್ತದೆ (ಸಿ.ಪಿ.ಸಿ.ಬಿ.2001–02[a]).

**ಕೋಷ್ಟಕ–3**

**ದೆಹಲಿಯ ನಿಜಾಮುದ್ದೀನ್‌ನಲ್ಲಿರುವ ಯಮುನಾ ನದಿಯ ಸರಾಸರಿ ವಾರ್ಷಿಕ ನೀರಿನ ಗುಣಮಟ್ಟ**

| ವರ್ಷ | ಡಿ.ಓ (ಎಂ.ಜಿ/ಲೀ) | ಬಿ.ಓ.ಡಿ (ಎಂ.ಜಿ/ಲೀ) | ಟಿ.ಸಿ. (ಎಂ,ಪಿ.ಎನ್/100ಎಂಎಲ್) |
|---|---|---|---|
| **1995** | 3.4 | 9.6 | 386091 |
| **2005** | 1.6 | 10.00 | 12200000 |
| **2009** | 0.0 | 23.00 | 22516660 |
| **ನಿರೀಕ್ಷಿತ ಗುಣಮಟ್ಟ** | $\geq 4$ | $\leq 3$ | $\leq 5000$ |

## ಚಿತ್ರ –1 : ಯಮುನಾ ನದಿ ಓಟ – ನೋಟ




**ಚಿತ್ರ –1 : ಯಮುನಾನದಿ ವಿವರಣೆ :**

(ಎ) ನದಿಪಾತ್ರದ ನಕ್ಷೆ

(ಬಿ) ಮಾಲಿನ್ಯ–ಆಧಾರಿತ ನದಿಯ ನೀಲನಕ್ಷೆ

(ಸಿ) ನದಿಗೆ ಅಡ್ಡಲಾಗಿ ಕಟ್ಟಿರುವ ಅಣೇಕಟ್ಟುಗಳು

ದೆಹಲಿ, ಆಗ್ರಾ ಮತ್ತು ಮಥುರಾ ನಗರಗಳು ಯಮುನಾ ನದಿಯನ್ನು ಮಾಲಿನ್ಯಗೊಳಿಸುವಲ್ಲಿ ಮುಖ್ಯ ಪಾತ್ರ ವಹಿಸುತ್ತವೆ ಎಂಬುದನ್ನು ಇಲ್ಲಿ ಗಮನಿಸಬಹುದು.

ದೆಹಲಿ ನಗರವು ಮೂರು ಮೂಲಗಳಿಂದ ನೀರನ್ನು ಪಡೆಯುತ್ತದೆ. ಅವುಗಳೆಂದರೆ, ಬಾಹ್ಯ ಜಲ, ಅಂತರ್ಜಲ ಮತ್ತು ಮಳೆನೀರು. ಗೃಹಕೃತ್ಯ ಮತ್ತು ಕಾರ್ಖಾನೆ ತ್ಯಾಜ್ಯಗಳಿಂದ ಉತ್ಪಾದನೆಯಾದ ನೀರು ಕೊಳಚೆ ನೀರು ಸಂಸ್ಕರಣ ಘಟಕ (ಎಸ್.ಟಿ.ಪಿ) ಮತ್ತು ಸಿ.ಇ.ಟಿ.ಪಿಗಳಿಗೆ ಚರಂಡಿಗಳ ಮೂಲಕ ಬಂದು ಸೇರುತ್ತದೆ. ಆದರೆ ಕೃಷಿಗೆ ಉಪಯೋಗಿಸಲ್ಪಟ್ಟ ನೀರು ಇಂಗಿ ಅಂತರ್ಜಲಕ್ಕೆ ಸೇರ್ಪಡೆಯಾಗುತ್ತದೆ. ಸಿ.ಇ.ಪಿ.ಟಿ ಗಳಿಂದ ಎಲ್ಲಾ ನೀರು ಮತ್ತೆ ಎಸ್.ಟಿ.ಪಿ.ಗಳಿಗೆ ಹೋಗುತ್ತದೆ. ಅದಾದ ಮೇಲೆ ಎಸ್.ಟಿ.ಪಿ.ಗಳಿಂದ ಬಿಡುಗಡೆಯಾದ ಎಲ್ಲಾ ನೀರು ಯಮುನಾ ನದಿಗೆ ಬಂದು ಸೇರಿ ನದಿಯನ್ನು ಆಯಾಯ ಕೇಂದ್ರಗಳಲ್ಲಿ ಕಲುಷಿತಗೊಳಿಸುತ್ತಾ ಹೋಗುತ್ತದೆ. ಇದರ ಜೊತೆಗೆ ಮುಂಗಾರಿನಲ್ಲಿ ಉಂಟಾದ ಎಲ್ಲಾ ಮಾಲಿನ್ಯವನ್ನು ತಂದು ಚರಂಡಿಗಳಲ್ಲಿ ತುಂಬಿ, ನಂತರ ಕ್ರಮೇಣ ಅದೆಲ್ಲಾ ಬಂದು ನದಿಯನ್ನು ಸೇರಿ ಮಾಲಿನ್ಯವನ್ನು ಹೆಚ್ಚು ಮಾಡುತ್ತದೆ. ಇದರಿಂದ ಎಲ್ಲಾ ಮೂಲಗಳಿಂದ ನದಿಯನ್ನು ಸೇರುವ ಕಲ್ಮಶ ಮಾಲಿನ್ಯಮಟ್ಟವನ್ನು ಹೆಚ್ಚಿಸಿ ನದಿಯನ್ನು ಕುಲಗೆಡಿಸುತ್ತದೆ ಎಂದು ಹೇಳಬಹುದು. ಒಟ್ಟು ಸರಬರಾಜಾದ ನೀರಿನ ಶೇಕಡಾ 80 ರಷ್ಟು ನೀರು 17 ಎಸ್.ಟಿ.ಪಿ ಮತ್ತು 13 ಸಿ.ಪಿ.ಟಿ.ಪಿ ಗಳಲ್ಲಿ ಸಂಸ್ಕರಣೆಗೊಂಡು ಉಳಿದ ನೀರು ನೇರವಾಗಿ ಯಮುನಾ ನದಿಯನ್ನು ಸೇರುತ್ತದೆ.

ವಾಜಿರಾಬಾದ್ ಬ್ಯಾರೇಜಿನ ನಂತರ ನದಿಯು ಪೂರ್ತಿ ಮಾಲಿನ್ಯಗೊಂಡು ಯಾವುದೇ ನಿಗದಿತ ಗುಣಮಟ್ಟವನ್ನು ಕಾಪಾಡಿಕೊಳ್ಳದೆ ಇರುವುದು ಅದಕ್ಕೆ ಬಂದು ಸೇರುವ 13 ಚರಂಡಿಗಳಿಂದ ಮತ್ತು ನಂತರ ಒಳ್ಳೆಯ ನೀರಿನ ವರತೆಗಳು ಬಂದು ಸೇರದ ಕಾರಣ ಎಂದು ಹೇಳಬಹುದು. ದೆಹಲಿಯಲ್ಲಿ ಉತ್ಪನ್ನವಾಗುವ ಒಟ್ಟು 655.5 ಎಂ.ಜಿ.ಡಿ. ತ್ಯಾಜ್ಯನೀರಲ್ಲಿ ಕೇವಲ 316.7 ಎಂ.ಜಿ.ಡಿ ನೀರನ್ನು ಮಾತ್ರ ಸಂಸ್ಕರಣೆ ಮಾಡಲಾಗುತ್ತದೆ. ದೆಹಲಿಯಲ್ಲಿರುವ ಸಿ.ಇ.ಪಿ.ಟಿ ಮತ್ತು ಎಸ್.ಟಿ.ಪಿ. ವಿವರಗಳನ್ನು ಕ್ರಮವಾಗಿ ಕೋಷ್ಟಕ–3 ಮತ್ತು 4 ರಲ್ಲಿ ನೋಡಬಹುದು. ಇದರಿಂದ ನಮಗೆ ತಿಳಿಯುವುದೇನೆಂದರೆ ನಗರದಲ್ಲಿರುವ ಸಿ.ಇ.ಪಿ.ಟಿ ಮತ್ತು ಎಸ್.ಟಿ.ಪಿ. ಗಳನ್ನು ಪೂರ್ಣಪ್ರಮಾಣದಲ್ಲಿ ಬಳಸಿಕೊಳ್ಳದೆ ಇರುವುದು. ಸಂಸ್ಕರಣ ಘಟಕಗಳಿಗೆ ಸಂಬಂಧಪಟ್ಟ ಚರಂಡಿಗಳು ಮತ್ತು ಅವುಗಳ ವಿಸ್ತೀರ್ಣದ ವಿವರಗಳನ್ನು ಕೊಡಲಾಗಿದೆ.

ನದಿಗೆ ಸಂಸ್ಕರಣಾ ಘಟಕಗಳಿಂದ ಹರಿದುಬರುವ ತ್ಯಾಜ್ಯನೀರಿನ ಚಿತ್ರಣವನ್ನು ಕೋಷ್ಟಕ–4 ರಲ್ಲಿ ಕೊಟ್ಟಿದೆ. ಹಿಂಡನ್ ಕಟ್ ಎಂಬ ತಿರುವಿನ ಕಡೆಯಿಂದ ನದಿಗೆ ನೇರವಾದ ಒತ್ತಡ ಬೀಳುತ್ತದೆ. ದೆಹಲಿಯಲ್ಲಿ ಉತ್ಪಾದನೆಯಾಗಿ ಓಕ್ಲಾ ಬ್ಯಾರೇಜ್ ಕಡೆಗೆ ಹರಿಯುವ ತ್ಯಾಜ್ಯ, ಕಾಲ್ಕಾಜಿ, ಸರಿತಾ ವಿಹಾರ್, ತುಗಲಕಾಬಾದ್, ಶಹದರಾ, ಎಲ್.ಪಿ.ಜಿ.ಬಾಟ್ಲಿಂಗ್ ಘಟಕದ ಬಳಿ, ಸರಿತಾವಿಹಾರ್ ಸೇತುವೆ ಬಳಿ, ಮತ್ತು ತೇಕಂಡ್ ಇತ್ಯಾದಿ ಸ್ಥಳಗಳಿಂದ ಉತ್ಪಾದನೆಯಾದದ್ದು ಮತ್ತು ಅಧ್ಯಯನಕ್ಕೆ ಯೋಗ್ಯವಲ್ಲದ ಪರಿಸ್ಥಿತಿಯಲ್ಲಿವೆ. ದೆಹಲಿಯಲ್ಲಿನ ಯಮುನಾ ನದಿಗೆ ಬಂದು

**ಕೋಷ್ಟಕ–4 : ದೆಹಲಿಯ ತ್ಯಾಜ್ಯ ನಿರ್ವಹಣಾ ಘಟಕಗಳು**

| ಒಳಚರಂಡಿ ವಲಯ | ಸಂಬಂಧಪಟ್ಟ ಚರಂಡಿಗಳು | ತ್ಯಾಜ್ಯ ನಿರ್ವಹಣಾ ಘಟಕ | ಪ್ರಸಕ್ತ ಪರಿಸ್ಥಿತಿ |
|---|---|---|---|
| ಶಹದರಾ | ಶಹದರಾ | ಯಮುನಾವಿಹಾರ್ | ಸಮರ್ಪಕವಾಗಿ ಉಪಯೋಗಿಸಲಾಗುತ್ತಿಲ್ಲ |
| | | ಕೊಂಡ್ಲಿ | ಸಮರ್ಪಕವಾಗಿ ಉಪಯೋಗಿಸಲಾಗುತ್ತಿಲ್ಲ |
| ರೀತಲಾ | | | |
| ರೋಹಿಣಿ | ನಜಫ್‌ಗಡ್ ಮತ್ತು ಅಕ್ಕಪಕ್ಕ | ನರೇಲಾ | ಸಮರ್ಪಕವಾಗಿ ಉಪಯೋಗಿಸಲಾಗುತ್ತಿಲ್ಲ |
| | | ರೀತಲಾ | ಸಮರ್ಪಕವಾಗಿ ಉಪಯೋಗಿಸಲಾಗುತ್ತಿಲ್ಲ |
| | | ರೋಹಿಣಿ | ಸಮರ್ಪಕವಾಗಿ ಉಪಯೋಗಿಸಲಾಗುತ್ತಿಲ್ಲ |
| ಓಕ್ಲಾ | ಮಾಗಜಿನ್ ರಸ್ತೆ, ಸ್ವೀಪರ್ ಕಾಲೋನಿ, ಖೈಬರ್ ಪಾಸ್, ಮೆಟ್‌ಕಾಫ್ ಹೌಸ್, ಐ.ಎಸ್.ಬಿ.ಟಿ, ಮೋರಿಗೇಟ್, ಟಾಂಗಾ ಸ್ಟ್ಯಾಂಡ್, ಸಿವಿಲ್ ಮಿಲ್, ನಂ.14, ಪವರ್ ಹೌಸ್, ದೆಹಲಿ ಗೇಟ್, ಸೇನ್ ನರ್ಸಿಂಗ್ ಹೋಂ, ಬಾರಾಪುಲ್ಲ, ಮಹಾರಾಣಿ ಬಾಗ್, ಕಾಲ್ಕಾಜಿ, ಸರಿತಾ ವಿಹಾರ್, ತುಗಲಕಾಬಾದ್, ಎಲ್.ಪಿ.ಜಿ ಬಾಟ್ಲಿಂಗ್ ಪ್ಲಾಂಟ್ ಬಳಿ, ಸರಿತಾವಿಹಾರ್ ಮೋರಿ ಹತ್ತಿರ ಮತ್ತು ತೇಖಂಡ್ | ವಸಂತ್ ಕುಂಜ್–1 ಮತ್ತು 2 | ಸಮರ್ಪಕವಾಗಿ ಉಪಯೋಗಿಸಲಾಗುತ್ತಿಲ್ಲ |
| | | ಮೆಹರೋಲಿ | ಸಮರ್ಪಕವಾಗಿ ಉಪಯೋಗಿಸಲಾಗುತ್ತಿಲ್ಲ |
| | | ಓಕ್ಲಾ | ಸಮರ್ಪಕವಾಗಿ ಉಪಯೋಗಿಸಲಾಗುತ್ತಿಲ್ಲ |
| | | ಸೇನ್ ನರ್ಸಿಂಗ್ ಹೋಂ | ಸಮರ್ಪಕವಾಗಿ ಉಪಯೋಗಿಸಲಾಗುತ್ತಿದೆ. |
| | | ದೆಹಲಿ ಗೇಟ್ | ಸಮರ್ಪಕವಾಗಿ ಉಪಯೋಗಿಸಲಾಗುತ್ತಿದೆ. |
| | | ಗಿಟೋಮಿ | ಇನ್ನೂ ನಿಯೋಜಿಸಲಾಗಿಲ್ಲ |
| ಕೇಶೋಪುರ್ | ನಜಫ್‌ಗಡ್ ಮತ್ತು ಅಕ್ಕಪಕ್ಕ | ಪಪ್ಪನ್‌ಕಾಲನ್ | ಇನ್ನೂ ನಿಯೋಜಿಸಲಾಗಿಲ್ಲ |
| | | ನಜಫ್‌ಗಡ್ | ಇನ್ನೂ ನಿಯೋಜಿಸಲಾಗಿಲ್ಲ |
| | | ಕೇಶೋಪುರ್ | ಇನ್ನೂ ನಿಯೋಜಿಸಲಾಗಿಲ್ಲ |
| | | ನಿಲೋತಿ | ಇನ್ನೂ ನಿಯೋಜಿಸಲಾಗಿಲ್ಲ |
| ಕಾರೋನೇಷನ್ ಪಿಲ್ಲರ್ | ನಜಫ್‌ಗಡ್ ಮತ್ತು ಅಕ್ಕಪಕ್ಕ | ಕಾರೋನೇಷನ್ ಪಿಲ್ಲರ್ I II & III | ಇನ್ನೂ ನಿಯೋಜಿಸಲಾಗಿಲ್ಲ |
| | | ಆಕ್ಸಿಡೇಷನ್ ಪಾಂಡ್, ತಿಮರ್ ಪುರ್ | ಸಮರ್ಪಕವಾಗಿ ಉಪಯೋಗಿಸಲಾಗುತ್ತಿದೆ. |

ಮೂಲ : <http://www.dpcc.delhigovt.nic.in>

ಸೇರುವ ಕಲುಷಿತ ನೀರು ಮುಖ್ಯವಾಗಿ ನಜಫಗಡ್ ಚರಂಡಿಯಿಂದ 72.7% ಮತ್ತು 61 % ಒಟ್ಟು ತ್ಯಾಜ್ಯನೀರು ಆಗುತ್ತದೆ.(ಸಿ.ಪಿ.ಸಿ.ಡಿ, 2006–07). ಪ್ರಸ್ತುತ, ಕಾರೋನೇಷನ್ ಸ್ತಂಭದ ತ್ಯಾಜ್ಯ ನಿರ್ವಹಣಾ ಘಟಕದಿಂದ 37.7 ಎಂ.ಜಿ.ಡಿ., ಕೇಶೋಪುರ್ ಘಟಕದಿಂದ 19.91 ಎಂ.ಜಿ.ಡಿ., ರಿತಾಲಾ ಘಟಕದಿಂದ 5 ಎಂ.ಜಿ.ಡಿ. ಮತ್ತು ಸೆನ್ ನರ್ಸಿಂಗ್ ಹೋಂ ಘಟಕದಿಂದ 2.2 ಎಂ.ಜಿ.ಡಿ. ನೀರು ಪುನರ್ಬಳಕೆ ಆಗುತ್ತಿದೆ. 2021 ರ ದೆಹಲಿಯ ಮಾಸ್ಟರ್ ಪ್ಲಾನ್ ಪ್ರಕಾರ, ಡಿ.ಜೆ.ಬಿಯು ಎಸ್.ಟಿ.ಪಿ ಮತ್ತು ಸಿ.ಇ.ಟಿ.ಪಿಗಳ ಸಾಮರ್ಥ್ಯ ಹೆಚ್ಚಿಸಿ ತ್ಯಾಜ್ಯನೀರನ್ನು ಶುದ್ಧೀಕರಿಸಿ ಪುನರ್ಬಳಕೆ ಮಾಡಿ, ಯಮುನಾ ನದಿಗೆ ಬಂದು ಸೇರುವ ತ್ಯಾಜ್ಯಗಳ ಪ್ರಮಾಣವನ್ನು ಕಡಿಮೆ ಮಾಡುವುದೇ ಆಗಿದೆ. ದೆಹಲಿಯಲ್ಲಿ ಯಮುನಾ ನದಿಯನ್ನು ಸ್ವಚ್ಛಗೊಳಿಸಲು ಮುಂದಿಟ್ಟಿರುವ ನಿವಾರಣೋಪಾಯಗಳು. 1. ಎಸ್.ಟಿ.ಪಿ, ಸಿ.ಇ.ಟಿ.ಪಿಗಳ ಸಾಮರ್ಥ್ಯವನ್ನು ಹೆಚ್ಚಿಸುವುದು; 2. ಇಂಟರ್ಸೆಪ್ಟರ್ ಒಳಚರಂಡಿ ಯೋಜನಾ ಪದ್ಧತಿ; 3. ತೃತೀಯ ಸಂಸ್ಕರಣ ಘಟಕಗಳ ಸ್ಥಾಪನೆ; 4. ಪುನರ್ಬಳಕೆಯ ಆಯ್ಕೆ; 5. ಪ್ರವಾಹವನ್ನು ವೃದ್ಧಿಸುವುದು. ತೃತೀಯ ಸಂಸ್ಕರಣ ಘಟಕಗಳ ಸ್ಥಾಪನೆ ಮತ್ತು ನೀರನ್ನು ಪುನರ್ಬಳಕೆ ಮಾಡಲು ನದಿಯು ಅಪೇಕ್ಷಿತ ಗುಣಮಟ್ಟದಲ್ಲಿಲ್ಲ. ಆದ್ದರಿಂದ 'ಸಿ' ಶ್ರೇಣಿಯನ್ನು ಗಳಿಸಲು ನದಿಗೆ ಶುದ್ಧನೀರು ಹರಿದು ಬರುವಂತೆ ಮಾಡುವುದು ತುಂಬಾ ಮುಖ್ಯ. ನೀರಿನ ವಿಷಯದಲ್ಲಿ ಈಗಿರುವ ಅಂತರ ರಾಜ್ಯ ಕಲಹಗಳಿಂದ ದೆಹಲಿಯ ಯಮುನೆಗೆ ಶುದ್ಧನೀರು ಹರಿಸುವುದು ತುಂಬಾ ಕಷ್ಟದ ಕೆಲಸ. ಅದರಿಂದ ಕಲುಷಿತ ನೀರಿನ ಪ್ರಮಾಣವನ್ನು ಕಡಿಮೆಗೊಳಿಸಿ ಅಂತಹ ನೀರನ್ನು ನದಿಗೆ ಹರಿಯಬಿಡುವುದನ್ನು ತಡೆಯಲು ಒಳಚರಂಡಿ ಸಂಸ್ಕರಣ ಘಟಕಗಳನ್ನು ಸ್ಥಾಪಿಸಿ, ನೀರನ್ನು ಪುನರ್ಬಳಕೆ ಮಾಡಿದರೆ ನದಿಗೆ ಸೇರುವ ಮಾಲಿನ್ಯವನ್ನು ತಡೆಗಟ್ಟಿ ನದಿಗೆ ಬೀಳುವ ಅನವಶ್ಯಕ ಒತ್ತಡವನ್ನು ನಿವಾರಿಸಬಹುದು. ಆದಾಗ್ಯೂ ಅಪರಿಮಿತ ತ್ಯಾಜ್ಯನೀರು ನದಿ ಸೇರುವುದರಿಂದ 'ಸಿ' ಶ್ರೇಣಿಗೆ ನದಿಯನ್ನು ಕೊಂಡೊಯ್ಯುವುದು ಕಷ್ಟ. ಆದ್ದರಿಂದ ವೈ.ಎ.ಪಿ ಯೋಜನೆಗಳಲ್ಲಿ ವ್ಯಯಿಸಿದ ಹಣವನ್ನು ದೃಷ್ಟಿಯಲ್ಲಿಟ್ಟುಕೊಂಡು, ದೆಹಲಿಯಲ್ಲಿನ ಪ್ರದೇಶವನ್ನೊಳಗೊಂಡ ನದಿಯನ್ನು 'ಸಿ' ಶ್ರೇಣಿಗೆ ಏರಿಸುವುದು ಬಹಳ ಮುಖ್ಯ.

### ಶಿಫಾರಸ್ಸುಗಳು

ವೈ.ಎ.ಪಿ. ಯೋಜನೆಯಡಿ ತೆಗೆದುಕೊಂಡ ಉಪಕ್ರಮಗಳು ಸರಿಯಾದ ದಿಕ್ಕಿನಲ್ಲಿ ಸಾಗುತ್ತಿದ್ದರೂ, ಇನ್ನೂ ಪರಿಣಾಮಕಾರಿ ಅನುಷ್ಠಾನ ಕ್ರಮಗಳು ಸಾಕಷ್ಟು ತಾಂತ್ರಿಕ ಅವಶ್ಯಕತೆಗಳನ್ನು ಅಪೇಕ್ಷಿಸುತ್ತದೆ. ಇದರಲ್ಲಿ ಶುದ್ಧನೀರು ಹೆಚ್ಚು ಹೆಚ್ಚು ಬಂದು ನದಿಪಾತ್ರವನ್ನು ಸೇರುವುದು ಒಂದು ಉಪಕ್ರಮ. ನದಿಯ ನೀರಿನ ಗುಣಮಟ್ಟವನ್ನು ವೃದ್ಧಿಸಲು ಈ ಮುಂದಿನ ವಿಧಾನಗಳನ್ನು ಅನುಸರಿಸಬಹುದು.

### ❖ ಒಳಚರಂಡಿ ವ್ಯವಸ್ಥೆ ಸುಧಾರಣೆ

ಇಡೀ ನಗರದಲ್ಲಿನ ಒಳಚರಂಡಿ ವ್ಯವಸ್ಥೆಯನ್ನು ಸರಿಪಡಿಸಿ (ಅಗತ್ಯ ಬಿದ್ದರೆ ಪಂಪ್‌ಗಳ ಮೂಲಕ) ನೀರನ್ನು ಸಂಸ್ಕರಣ ಘಟಕಗಳಿಗೆ ಕಳುಹಿಸಿ, ಅಲ್ಲಿಂದ ಹೊರಬರುವ ನೀರು ಸ್ವಲ್ಪವೂ ನದಿಯನ್ನು ಸೇರದಂತೆ ನೋಡಿಕೊಳ್ಳಬೇಕು. ಪ್ರಸ್ತುತ ಇರುವ ಅಸಮರ್ಪಕ ಸಂಸ್ಕರಣ ಘಟಕಗಳನ್ನು ಮೇಲ್ದರ್ಜೆಗೆ ಏರಿಸಬೇಕು. ಇದನ್ನು ಪರ್ಯಾಯ ಒಳಚರಂಡಿ ವ್ಯವಸ್ಥೆಯನ್ನು ನಿರ್ಮಿಸುವುದರ ಮೂಲಕ ಅಂದರೆ ನದಿಯ ಒಂದು ಅಥವಾ ಎರಡೂ ಕಡೆ ಕಾಲುವೆ ಅಥವಾ ಬಂಡುಗಳನ್ನು ನಿರ್ಮಿಸುವುದರ ಮೂಲಕ ಮಾಡಬಹುದು. ಎಲ್ಲಕ್ಕಿಂತ ಮುಖ್ಯವಾಗಿ ಸಂಸ್ಕರಣ ಘಟಕಗಳಲ್ಲಿನ ಪಂಪ್ ಕೇಂದ್ರಗಳಲ್ಲಿ ನಿರಂತರ 24 ತಾಸು ವಿದ್ಯುತ್ ಇರುವಂತೆ ಕಾಪಾಡಿಕೊಳ್ಳಬೇಕು. ನದಿ ತಟದ ಅಭಿವೃದ್ಧಿ ಆರ್ಥಿಕವಾಗಿ ಮತ್ತು ಪರಿಸರಪ್ರಿಯ ಪರಿಹಾರ. ಏಕೆಂದರೆ ಇದು "ಹಸಿರು ನಗರ" – ಗ್ರೀನ್ ಸಿಟಿ – ಕಲ್ಪನೆಯನ್ನು ಉತ್ತೇಜಿಸುತ್ತದೆ. ನದಿತಟಗಳನ್ನು ಅಭಿವೃದ್ಧಿಗೊಳಿಸಲು ಉದ್ಯಾನವನ, ಕಾರಂಜಿಗಳು, ಕೃತಕ ನೀರಿನ ಝರಿಗಳು, ಆಟದ ಮೈದಾನಗಳು, ಹುಲ್ಲು ಹಾಸಿನ ಮೈದಾನಗಳು, ನೀರಾಟಗಳು, ಕೊಳಗಳು, ಇತ್ಯಾದಿಗಳನ್ನು ನಿರ್ಮಿಸಬೇಕು. ಇದರಿಂದ ಒಳ್ಳೆ ಗಾಳಿ ಸಂಚಾರವೂ ಆಗುತ್ತದೆ.

### ❖ ಸಮೀಕೃತ ಸಾಮರ್ಥ್ಯ ವೃದ್ಧಿ ಮತ್ತು ಮಾಲಿನ್ಯಕಾರಕ ಮೂಲಗಳ ಟ್ಯಾಪಿಂಗ್

ಮುಂಗಾರು ಅವಧಿಯಲ್ಲಿ ಶೇಖರಿಸಿಟ್ಟುಕೊಂಡ ನೀರನ್ನು ಶುಷ್ಕ ಅವಧಿಯಲ್ಲಿ ಬಿಡುಗಡೆಗೊಳಿಸಿ ಉಪಯೋಗಿಸಿದರೆ ಇದನ್ನು



ಸಾಧಿಸಬಹುದು. ಹರಿಯುವ ತೊರೆಗಳಿಗೆ ಕೃತಕ ಗಾಳಿಯನ್ನು ಹಾಯಿಸಿ, ತ್ಯಾಜ್ಯನೀರನ್ನು ಒಯ್ಯುವ ಚರಂಡಿಗಳ ಕೆಳಭಾಗದಲ್ಲಿ ಗಾಳಿಸಂಚಾರವಾಗುವ ವ್ಯವಸ್ಥೆಯನ್ನು ನಿರ್ಮಿಸಿ, ಯಾಂತ್ರಿಕ ಆಮ್ಲಜನಕವಾಹಕಗಳನ್ನು ರೂಪಿಸಿ, ಒಳಗಿನಿಂದಲೇ ವಾಯುವಾಹಕಗಳನ್ನು ನಿರ್ಮಿಸುವ ಕಡೆ ಗಮನ ಹರಿಸಬೇಕು. ಆದ್ದರಿಂದ ವೈ.ಎ.ಪಿ. ಯೋಜನೆಯಡಿಯಲ್ಲಿ ಮಾಲಿನ್ಯವನ್ನು ಕಡಿಮೆಗೊಳಿಸುವ ಮಧ್ಯಸ್ಥಿಕೆಯ ವಿನ್ಯಾಸವನ್ನು ಮಾಡುವ ಮೊದಲು ನೀರಿನ ಗುಣಮಟ್ಟದ ಮಾಡಲಿಂಗ್ ಮಾಡುವುದು ಮುಖ್ಯ. ಈ ಮಾಡಲಿಂಗ್ ಯೋಜಕರಿಗೆ, ಅನುಷ್ಠಾನಗೊಳಿಸುವ ಮೊದಲು, ಮಧ್ಯಸ್ಥಿಕೆಯ ಮೌಲ್ಯಮಾಪನ ಮಾಡಲು ಸಹಾಯ ಮಾಡುತ್ತದೆ. ಸಂಸ್ಕರಿಸಿದ ತ್ಯಾಜ್ಯನೀರನ್ನು ಪುನರ್ಬಳಕೆ ಮಾಡುವುದು ಒಂದು ಮುಖ್ಯ ಅವಕಾಶ. ಇದನ್ನು ಕೃಷಿ, ತೋಟಗಾರಿಕೆ ಮತ್ತು ಕಾರ್ಖಾನೆಗಳ ಬಳಕೆಗೆ ಉಪಯೋಗಿಸಬಹುದು. ವಿದ್ಯುತ್ ಕೇಂದ್ರಗಳ ಸ್ಥಾವರಗಳನ್ನು ತಂಪಾಗಿಸಲು ಸಹಾ ಈ ನೀರನ್ನು ಬಳಸಬಹುದು. ಅಂತರ್ಜಲ ಮರುಪೂರಣಕ್ಕೂ ಈ ಜಲವನ್ನು ಬಳಸಬಹುದು. ಇತರೆ ಮಾಲಿನ್ಯಕಾರಕಗಳಾದ, ಮನುಷ್ಯರು ಮತ್ತು ಪ್ರಾಣಿಗಳು ನದಿ ಸ್ನಾನ ಮಾಡುವುದು, ಕೃಷಿತ್ಯಾಜ್ಯಗಳನ್ನು ನದಿಗೆ ಸೇರಿಸುವುದು, ಮೂರ್ತಿಗಳನ್ನು ನದಿಗಳಲ್ಲಿ ವಿಸರ್ಜನೆ ಮಾಡುವುದು ಇತ್ಯಾದಿಗಳನ್ನು ಪರಿಣಾಮಕಾರಿಯಾಗಿ ನಿಭಾಯಿಸುವುದು ಅತಿ ಮುಖ್ಯ. ನಗರದಲ್ಲಿ ಉತ್ತಮ ಚರಂಡಿ ವ್ಯವಸ್ಥೆ ಮತ್ತು ಮಳೆಕೊಯ್ಲನ್ನು ಅಳವಡಿಸಿಕೊಂಡರೆ, ಜಲಮಾಲಿನ್ಯವನ್ನು ನಿಯಂತ್ರಿಸಬಹುದು. ನದಿ ತಪ್ಪಲಿನ ಕೃಷಿ ಭೂಮಿಯಿಂದ ನೇರವಾಗಿ ಕೃಷಿತ್ಯಾಜ್ಯಗಳು ನದಿ ಪ್ರವೇಶಿಸುವುದನ್ನು ತಡೆಯಲಿಕ್ಕೆ ಫಿಲ್ಟರ್ ಮತ್ತು ಬಫರ್ ಪಟ್ಟಿಗಳನ್ನು ಅಳವಡಿಸಿ ಸಹಾ ನದಿ ಮಾಲಿನ್ಯವಾಗುವುದನ್ನು ನಿಯಂತ್ರಿಸಬಹುದು. ❑

# ರೈಲ್ವೆ ಬಜೆಟ್ : ರಾಜ್ಯಕ್ಕೆ ಬಹುಕೋಟಿ ಬಹುಮಾನ

ಎಂ.ಕೆ. ಭಾಸ್ಕರ ರಾವ್



ಈ ಸಾಲಿನ ಬಜೆಟ್‌ನಲ್ಲಿ ಕರ್ನಾಟಕದ ರೈಲ್ವೆ ಯೋಜನೆಗಳಿಗಾಗಿ 1500 ಕೋಟಿ ರೂ. ಮೀಸಲಿಡಲಾಗಿದೆ. ರಾಜ್ಯಕ್ಕೆ ಈ ಪ್ರಮಾಣದ ಮೊತ್ತ ಹರಿದು ಬರುತ್ತಿರುವುದು ಇದೇ ಮೊದಲು.

ಕರ್ನಾಟಕಕ್ಕೆ ರೈಲ್ವೆ ಖಾತೆ ಹೊಸದೂ ಅಲ್ಲ; ಅಪರೂಪದ್ದೂ ಅಲ್ಲ. ಅರವತ್ತರ ದಶಕದಿಂದಲೂ ಆಗೊಮ್ಮೆ ಈಗೊಮ್ಮೆ ಎಂಬಂತೆ ಬಿಡುವನ್ನು ಹೊರತುಪಡಿಸಿದರೆ ವಿವಿಧ ಪ್ರಧಾನ ಮಂತ್ರಿಗಳ ಸಂಪುಟದಲ್ಲಿ ನಮ್ಮ ಸಂಸದರು ರೈಲ್ವೆ ಖಾತೆಯನ್ನು ನಿಭಾಯಿಸಿದ್ದಾರೆ. ಈಗ ಈ ಮಹತ್ವದ ಖಾತೆಯ ಜವಾಬ್ದಾರಿ ಶ್ರೀ ಡಿ.ವಿ. ಸದಾನಂದ ಗೌಡರ ಹೆಗಲನ್ನೇರಿದೆ.


### ಬೇಡುವ ಪರಿಣಿತಿ

ದೇಶದಲ್ಲಿ ಅತ್ಯಂತ ದೊಡ್ಡ ಸಂಪರ್ಕ ಜಾಲ ಎಂಬ ಖ್ಯಾತಿ ರೈಲ್ವೆಗಿದೆ ನಿಜ. ಆದರೆ ದೇಶದ ಎಷ್ಟೋ ಜಿಲ್ಲೆಗಳಲ್ಲಿ ಒಂದಂಗುಲ ಉದ್ದದ ರೈಲ್ವೆ ಪ್ರಯಾಣದ ವ್ಯವಸ್ಥೆ ಇಲ್ಲ ಎನ್ನುವುದೂ ಅಷ್ಟೇ ನಿಜ. ಇದೊಂದು ವಿಪರ್ಯಾಸ ಎಂದು ಭಾವಿಸಬೇಕಾಗಿಲ್ಲ. ನೂರಾರು ವರ್ಷದ ಇತಿಹಾಸವುಳ್ಳ ರೈಲ್ವೆ ಪ್ರಯಾಣ ವ್ಯವಸ್ಥೆ ಅದೊಂದು ರೀತಿಯ ವಿಸ್ಮಯದಲ್ಲೇ ಕೆಲಸ ಮಾಡುತ್ತ ಬಂದಿದೆ.

ರೈಲ್ವೆ ಮಾರ್ಗ ಸೃಷ್ಟಿ ಎಂದರೆ ರಸ್ತೆ ಮಾಡಿದಂತೆ ಅಲ್ಲ, ಸಾವಿರಾರು ಜನರನ್ನು ಹೊತ್ತು ಎರಡು ಸಮಾನಾಂತರ ಹಳಿಗಳ ಮೇಲೆ ನಾಜೂಕಾಗಿ ಸಾಗುವ ರೈಲು ಅತ್ಯಂತ ಸೂಕ್ಷ್ಮ ತಂತ್ರಗಾರಿಕೆಯ ಪರಿಣಿತಿಯನ್ನು ಬೇಡುತ್ತದೆ. ಏರು ಇಳಿ ತಿರುವು...ಹೀಗೆ ಎಲ್ಲವೂ ರೈಲ್ವೆ ತಂತ್ರಜ್ಞತೆಗೆ ಸವಾಲೇ. ಆ ಸವಾಲನ್ನು ಎಳೆದುಕೊಂಡು ಇರುವುದನ್ನು ಸುಸ್ಥಿತಿಯಲ್ಲೇ ನಡೆಸುತ್ತ ಹೊಸದನ್ನು ಅಮಲಿಗೆ ತರುವ ಕೆಲಸ ಸುಲಭದ್ದಲ್ಲ.

### ಎತ್ತು ಏರಿಗೆ....

ಈ ಸವಾಲನ್ನು ಈ ಹಿಂದಿನ ಎಲ್ಲ ಸಚಿವರೂ ತಮ್ಮದೇ ವಿಶಿಷ್ಟ ಬಗೆಯಲ್ಲಿ ನಿಭಾಯಿಸಿದ್ದಾರೆ. ಕಳೆದ ಮೂವತ್ತು ವರ್ಷಗಳಲ್ಲಿ ಒಂದು ಪಕ್ಷದ ಅಧಿಕಾರ ಕೇಂದ್ರದಲ್ಲಿ ಇರಲಿಲ್ಲ. ಈಗಿನ ಸರ್ಕಾರವೂ ತಾಂತ್ರಿಕವಾಗಿ ಸಮ್ಮಿಶ್ರ ಸರ್ಕಾರವೇ. ಆದರೆ ಬಿಜೆಪಿ ನಿಚ್ಚಳ ಹಾಗೂ ಸ್ಪಷ್ಟ ಬಹುಮತ ಪಡೆದಿರುವ ಕಾರಣ "ಎತ್ತು ಏರಿಗೆ ಎಮ್ಮೆ ನೀರಿಗೆ" ಎಂಬ ಸ್ಥಿತಿ ಇಲ್ಲವಾಗಿದೆ.




ಹಿರಿಯ ಪತ್ರಕರ್ತರು.

## ಬಂಪರ್ ಕೊಡುಗೆ

ಈ ಬಜೆಟ್‌ನಲ್ಲಿ ಕರ್ನಾಟಕಕ್ಕೆ ಬಂಪರ್ ಕೊಡುಗೆ ದಕ್ಕಿದೆ. ರಾಜ್ಯದಲ್ಲಿ ಪ್ರವಾಸೋದ್ಯಮ ಈಗೀಗ ಕಣ್ತೆರೆಯುತ್ತಿದೆ. ರಸ್ತೆ ಮೂಲಕವೂ ಪ್ರವಾಸಿ ತಾಣಗಳನ್ನು ತಲುಪ ಬಹುದಾದರೂ ಹೆಚ್ಚಿನ ಸಂಖ್ಯೆಯ ಪ್ರವಾಸಿಗರು ರೈಲು ಪ್ರಯಾಣಕ್ಕೆ ಆದ್ಯತೆ ಕೊಡುತ್ತಾರೆ. ಎಲ್ಲಕ್ಕಿಂತ ಹೆಚ್ಚಾಗಿ ಪದೇ ಪದೇ ಶೌಚಾಲಯದ ಅಗತ್ಯವುಳ್ಳ ಜನರಿಗೆ ರೈಲು ಪ್ರಯಾಣ ಎನ್ನುವುದು ಒಂದು ದಿವ್ಯ ವರ.

ರೈಲ್ವೆ ಸಚಿವರು ಕರ್ನಾಟಕಕ್ಕೆ ಅನುಕೂಲವಾಗುವ ಆಶಯದ ಎರಡು ಪ್ರವಾಸಿ ರೈಲುಗಳ ಸಂಚಾರವನ್ನು ಪ್ರಕಟಿಸಿದ್ದಾರೆ. ಅದರಲ್ಲಿ ಒಂದು ರಾಮೇಶ್ವರ–ಬೆಂಗಳೂರು–ಚನ್ನೈ–ಅಯೋಧ್ಯಾ–ವಾರಾಣಸಿ–ಹರಿದ್ವಾರ ಮಾರ್ಗದಲ್ಲಿ ಓಡಲಿದೆ. ಇನ್ನೊಂದು ಗದಗ–ಬಾಗಲಕೋಟೆ–ವಿಜಾಪುರ–ಸೊಲ್ಲಾಪುರ–ಪಂಢರಪುರ ಮಾರ್ಗದಲ್ಲಿ ಸಂಚರಿಸಲಿದೆ.

ಅಸ್ಸಾಮಿನ ಕಾಮಾಖ್ಯ ಮತ್ತು ಬೆಂಗಳೂರು ನಡುವೆ ಏಸಿ ಹವಾನಿಯಂತ್ರಿತ ರೈಲು ಓಡಿಸುವ ನಿರ್ಧಾರ ಒಂದು ವಿಶೇಷ. ಇದು ಹಾಲಿ ಓಡಾಡುತ್ತಿರುವ ಯಾವುದೇ ರೈಲಿಗಿಂತ ಅಧಿಕ ಶುಲ್ಕದ ರೈಲು. ಬೆಂಗಳೂರು– ಮಂಗಳೂರು ನಡುವೆ ನಿತ್ಯ; ಬೆಂಗಳೂರು–ಶಿವಮೊಗ್ಗ ನಡುವೆ ವಾರಕ್ಕೆ ಒಮ್ಮೆ; ಬೀದರ್–ಮುಂಬೈ ನಡುವೆ ನಿತ್ಯ.... ಈ ಮೂರೂ ಎಸಿ ಎಕ್ಸ್‌ಪ್ರೆಸ್

## ರೈಲುಗಳು

ಬೆಂಗಳೂರಿನ ಬೈಯಪ್ಪನಹಳ್ಳಿ ರೈಲು ನಿಲ್ದಾಣದಿಂದ ಜಾರ್ಖಂಡ್‌ನ ಟಾಟಾ ನಗರಕ್ಕೆ ಎಕ್ಸ್‌ಪ್ರೆಸ್ ರೈಲು ಓಡಿಸುವ ನಿರ್ಧಾರಕ್ಕೆ ಈಗಾಗಲೇ ವ್ಯಾಪಕ ಸ್ವರೂಪದ ಪ್ರಶಂಸೆ ಕೇಳಿ ಬಂದಿದೆ.

ಧಾರವಾಡ–ಅಳ್ನಾವರ–ದಾಂಡೇಲಿ; ಬೈಂದೂರು–ಕಾಸರಗೋಡು ಪ್ಯಾಸೆಂಜರ್ ರೈಲು ಓಡಾಟದಿಂದ ಅಲ್ಲಿಯ ರಸ್ತೆಗಳ ಮೇಲೆ ಈಗ ಇರುವ ವಾಹನ ಸಂಚಾರದ ವಿಪರೀತ ಒತ್ತಡ ಗಣನೀಯ ರೀತಿಯಲ್ಲಿ ತಗ್ಗಲಿದೆ. ಯಶವಂತಪುರ–ತುಮಕೂರು; ಬೆಂಗಳೂರು–ರಾಮನಗರ ನಡುವೆ ರೈಲು ಓಡಾಟ ಇನ್ನು ಮುಂದೆ ಕನಸಲ್ಲ. ಶಿವಮೊಗ್ಗದಿಂದ ಇಲ್ಲವೇ ಉತ್ತರ ಕರ್ನಾಟಕದ ಭಾಗದಿಂದ ಬರುವ ರೈಲುಗಳಲ್ಲಿ ನುಗ್ಗಿ ಹರ ಸಾಹಸದಲ್ಲಿ ಬೆಂಗಳೂರು ಸೇರಬೇಕಿದ್ದ ಪ್ರಯಾಣಿಕರಿಗೆ ಇಷ್ಟರಲ್ಲೇ ಅವರ ಕನಸು ನನಸಾದ ಅನುಭವ ದಕ್ಕಲಿದೆ. ಕೆಂಗಲ್ ಹನುಮಂತಯ್ಯನವರು ರೈಲ್ವೆ ಸಚಿವರಾಗಿದ್ದ ಕಾಲದಲ್ಲೇ ರಾಮನಗರ–ಬೆಂಗಳೂರು ನಿತ್ಯ ಸಂಚಾರದ ರೈಲಿಗೆ ಬೇಡಿಕೆ ಕೇಳಿ ಬಂದಿತ್ತು. ಅದು ಈಗ ಈಡೇರಿದೆ.

ರಾಮನಗರ ಇಲ್ಲವೇ ತುಮಕೂರು ಒಂದು ರೀತಿಯಲ್ಲಿ ಬೆಂಗಳೂರಿನ ಸ್ಯಾಟಲೈಟ್ ನಗರಗಳಾಗಿವೆ. ಆ ಊರುಗಳ ಹಾಗೂ ಬೆಂಗಳೂರಿನ ನಡುವೆ ಜನ ಸಂಚಾರ ಮಿತಿ ಮೀರಿದ ಈ ಸಮಯದಲ್ಲಿ ವಿಶೇಷ ರೈಲಿನ ಅಗತ್ಯವಿತ್ತು. ಅದನ್ನು ಮನಗಂಡ ರೈಲ್ವೆ ಕನಸನ್ನು ನನಸಾಗಿಸಿದೆ.

ಯಾವುದೇ ಯೋಜನೆಯನ್ನು ಮಿತ್ರ ಪಕ್ಷಗಳ ಒತ್ತಡಕ್ಕಾಗಿಯೇ ಕೈಗೆತ್ತಿಕೊಳ್ಳಬೇಕಾದ ಅಥವಾ ಒತ್ತಡಕ್ಕಾಗಿಯೇ ಕೈ ಬಿಡಬೇಕಾದ ವಿಚಿತ್ರ ಪರಿಸ್ಥಿತಿ ಈಗ ಇಲ್ಲ. ಇದು ಸರ್ಕಾರದ ಸುಗಮ ನಡೆಗೆ ಅನುಕೂಲಕರವಾದ ವಾತಾವರಣವನ್ನು ನಿರ್ಮಿಸಿದೆ. ಶ್ರೀ ಸದಾನಂದ ಗೌಡರು ಅಂಥ ಅತ್ಯುತ್ತಮ ವಾತಾವರಣದಲ್ಲಿ ಖಾತೆಯ ಸಚಿವ ಸ್ಥಾನದ ಹೊಣೆ ಹೊತ್ತಿದ್ದಾರೆ.

### ಅರಸರ ಕಾರಣವಾಗಿ

ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ಹಳಿ ಮೇಲಿನ ಸಂಚಾರ ಸೌಕರ್ಯ ನಮ್ಮ ದೇಶದಲ್ಲಿ ಶುರುವಾಗಿದ್ದು ಹೌದಾದರೂ ಎಲ್ಲ ಕಡೆಯೂ ಬ್ರಿಟಿಷ್ ಪಾರುಪತ್ಯವೇ ಕೆಲಸ ಮಾಡಲಿಲ್ಲ. ಸ್ವಾತಂತ್ರ್ಯ ಪೂರ್ವದ ಕಾಲ, ಮೈಸೂರು ಪ್ರಾಂತ್ಯವಾಗಿದ್ದ ಕಾಲದಲ್ಲಿ ಮಹಾರಾಜರೇ ನಾಲ್ಕು ಮಾರ್ಗಗಳಲ್ಲಿ ರೈಲ್ವೆ ಸಂಚಾರದ ವ್ಯವಸ್ಥೆ ಮಾಡಿದ್ದನ್ನು ಇತಿಹಾಸ ಹೇಳುತ್ತದೆ. ಆಗ ಸಂಸ್ಥಾನದ ರಾಜಧಾನಿ ಮೈಸೂರು. ಹಾಗಾಗಿ ಮೈಸೂರು–ಚಾಮರಾಜನಗರ, ಮೈಸೂರು–ಬೆಂಗಳೂರು, ಮೈಸೂರು–ತಾಳಗುಪ್ಪ, ಮೈಸೂರು–ಚಿತ್ರದುರ್ಗ ಸಂಚಾರ ಆರಂಭವಾಗಿದ್ದು ಅರಸರ ಆಸಕ್ತಿಯ ಕಾರಣವಾಗಿ.

ಅರಸರು ಜೋಗಕ್ಕೆ ಹೋಗಿ ಜಲಪಾತದ ಸುಖಾನುಭವ ಪಡೆಯುವ ಉದ್ದೇಶದಿಂದಲೇ ತಾಳಗುಪ್ಪಕ್ಕೆ ರೈಲು ಹಳಿ ಹಾಕಿಸಿದ್ದನ್ನು ನಿನ್ನೆಮೊನ್ನೆಯವರೆಗೂ ಬದುಕಿದ್ದ ಆ ಭಾಗದ ಹಿರೀಕರು ಸ್ಮರಿಸುತ್ತಿದ್ದರು. "ಚಿತ್ರದುರ್ಗದ ರೈಲು ನಿತ್ಯವೂ ಓಡೋಡಿ ಮೈಸೂರ ಸೇರುವುದ ನಾನು ಬಲ್ಲೆ..." ಎಂಬ ಕವಿ ಕೆ.ಎಸ್. ನರಸಿಂಹ ಸ್ವಾಮಿಯವರ ಕವನದ ಸಾಲುಗಳಿಗೆ ಹಳಿಯಾಗಿದ್ದುದು ಅರಸರ ಉಗಿಬಂಡಿಯೇ ಹೊರತೂ ಫರಂಗಿಯವರ ರೈಲಲ್ಲ.

### ಕೋಟಿ ಕೋಟಿ ಪ್ರಯಾಣಿಕರು

ದೇಶದಲ್ಲಿ 1842ರ ಹೊತ್ತಿಗೆ ಒಂದಂಗುಲ ಹಳಿಯೂ ಇರಲಿಲ್ಲ. ಆದರೆ 1929ರ ಹೊತ್ತಿಗೆ 66 ಸಾವಿರ ಕಿಮೀ ರೈಲ್ವೆ ಸಂಚಾರ ನಮ್ಮದಾಗಿತ್ತು. ಈಗ ಲಕ್ಷಾಂತರ ಕಿಮೀ ರೈಲ್ವೆ ಪ್ರಯಾಣದಲ್ಲಿ ಸಂಚರಿಸುವ ಪ್ರಯಾಣಿಕರ ಸಂಖ್ಯೆ ಹತ್ತಾರು ಕೋಟಿ. ಸರಕು ಸಾಗಣೆಯ ಪ್ರಮಾಣವಂತೂ ಅಗಾಧ... ಎಂದರೆ ನಮ್ಮ ರೈಲ್ವೆಯ ಜಗದಗಲ ಮುಗಿಲಗಲ ಸಾಧನೆಯ ಅಂದಾಜು ಆದೀತು.

ಒಂದು ಕಾಲದಲ್ಲಿ ನ್ಯಾರೋ ಗೇಜು. ನಿಧಾನಕ್ಕೆ ಅದು ಮತ್ತೊಂದು ಹೆಸರು. ಬಸವನ ಹುಳು ಹರಿದಂತೆ. ನಂತರದಲ್ಲಿ ಮೀಟರ್ ಗೇಜು. ತುಸು ವೇಗ ಆದರೆ ಉಸಿರುಗಟ್ಟಿಸುವ ಸ್ಪೀಡಲ್ಲ. ಈಗ ಅವೆರಡೂ ಇತಿಹಾಸದ ಭಾಗ. ದಕ್ಷಿಣ ಭಾರತದಲ್ಲಂತೂ ನ್ಯಾರೋ ಗೇಜ್ ರೈಲನ್ನು ಮ್ಯೂಸಿಯಂ

ನೋಡಲು ಹೋದಂತೆ ಊಟಿ ಬಳಿಯ ಕೂನೂರಿಗೇ ಹೋಗಿ ನೋಡಬೇಕು. ಎಲ್ಲೆಡೆಯೂ ಈಗ ಬ್ರಾಡ್ ಗೇಜ್. ತಾಸಿಗೆ ನೂರಾರು ಕಿಮೀ ವೇಗದಲ್ಲಿ ಓಡುವ ಸಂಚಾರಕ್ಕೆ ಮತ್ತು ಸಮಯ ಉಳಿತಾಯಕ್ಕೆ ತನ್ನದೇ ಆದ ಆಯಾಮ ತಂದಿತ್ತಿರುವ ರೈಲ್ವೆ ಭಾರತದ ಕೀರ್ತಿಯೂ ಹೌದು, ಹೆಮ್ಮೆಯೂ ಹೌದು.

### ರೈಲ್ವೆ ನಾಗಾಲೋಟ

ಸುರಕ್ಷತೆ ಮತ್ತು ವೇಗ ಈ ಎರಡೂ ದೃಷ್ಟಿಯಿಂದಲೂ ಬ್ರಾಡ್ ಗೇಜ್‌ಗೆ ಆದ್ಯತೆ ಕೊಡುವುದು ಅಗತ್ಯವಾಗಿದೆ. ವೇಗವಷ್ಟೇ ಅಲ್ಲ ಸುರಕ್ಷತೆಯೂ ಪ್ರಥಮ ಆದ್ಯತೆಯ ಅಂಶ ಎಂಬ ನಿಟ್ಟಿನಲ್ಲಿ ಭಾರತೀಯ ರೈಲ್ವೆ ನಾಗಾಲೋಟದಲ್ಲಿದೆ. ಈ ನಿಟ್ಟಿನಲ್ಲಿ ಹೊಸ ಬಜೆಟ್ ದಾಪುಗಾಲನ್ನಿರಿಸಿದೆ. ವೇಗ ಮತ್ತು ಸುರಕ್ಷತೆಯ ಲಾಭ ಕರ್ನಾಟಕಕ್ಕೂ ದೊಡ್ಡ ಪ್ರಮಾಣದಲ್ಲಿಯೇ ಬರಲಿದೆ. ಕರ್ನಾಟಕ ಎಂದರೆ ಭಾರತ ಜನನಿಯ ತನುಜಾತೆ. ರೈಲ್ವೆ ಬಜೆಟ್‌ನಲ್ಲಿ ಇದ್ದು ಎದ್ದು ಕಾಣುವ ಅಂಶ.

ರೈಲ್ವೆ ಸಚಿವರು ಲೋಕಸಭೆಯಲ್ಲಿ ಬಜೆಟ್ ಮಂಡಿಸುತ್ತ ಹೇಳಿದ ಮಾತೊಂದು ರೈಲ್ವೆ ಅಭಿವೃದ್ಧಿ ದೃಷ್ಟಿಯಿಂದ ಅತ್ಯಂತ ಗಮನಾರ್ಹವಾದುದು. ಒಂದೇ ಒಂದು ಹೊಸ ಯೋಜನೆಯನ್ನೂ ಅವರು ಪ್ರಕಟಿಸಿಲ್ಲ. ಬದಲಿಗೆ ಈಗಾಗಲೇ ಹಿಂದಿನ ಸರ್ಕಾರಗಳಲ್ಲಿ ಪ್ರಕಟಿಸಿ ಅರ್ಧಂಬರ್ಧವಾಗಿರುವ, ನೆನೆಗುದಿಗೆ ಬಿದ್ದಿರುವ ಯೋಜನೆಗಳನ್ನು ಆದ್ಯತೆಯ ಮೇಲೆ ಕೈಗೆತ್ತಿಕೊಂಡು ಮುಗಿಸುವ ಭರವಸೆಯನ್ನು ರಾಷ್ಟ್ರಕ್ಕೆ ನೀಡಿದ್ದಾರೆ. ರೈಲ್ವೆ ಯೋಜನೆಗಳನ್ನು ಪ್ರಕಟಿಸುವುದರಲ್ಲಿಯೂ ಅವುಗಳನ್ನು ಅನುಷ್ಠಾನಕ್ಕೆ ತರುವುದರಲ್ಲಿಯೂ ರಾಜಕೀಯ ಸಲ್ಲದೆಂಬ ಧ್ವನಿ ಈ ಭರವಸೆಯಲ್ಲಿದೆ.

### ಘೋಷಣೆಯೊಂದೇ ಸಾಕೇ?

ಸಚಿವರೇ ಬಜೆಟ್‌ನಲ್ಲಿ ಹೇಳಿರುವಂತೆ ಕಳೆದ ಒಂದು ದಶಕದ ಅವಧಿಯಲ್ಲಿ ಘೋಷಿತವಾಗಿರುವ ಯೋಜನೆಗಳ ಸಂಖ್ಯೆ ಬರೋಬ್ಬರಿ 99. ಕಳೆದ ಹತ್ತು ವರ್ಷದ ಅವಧಿಯಲ್ಲಿ ಇದ್ದ ಸರ್ಕಾರ ಒಂದೇ. ಪ್ರಧಾನಿಯೂ ಒಬ್ಬರೇ. ಆದರೆ ರೈಲ್ವೆ ಸಚಿವರು ಬದಲಾಗುತ್ತ ಹೋದರು. ಈ ಬದಲಾವಣೆ ಘೋಷಿತ ಯೋಜನೆಗಳಿಗೆ ಪೂರಕವಾಗುವ ಬದಲಿಗೆ ಹಿನ್ನಡೆ ಆಯಿತು. ಹೊಸ ಹೊಸ



ಯೋಜನೆ ವರ್ಷ ವರ್ಷವೂ ಪ್ರಕಟಗೊಂಡು ಪಟ್ಟಿ ಬೆಳೆಯಿತೇ ವಿನಾ ಕಾರ್ಯಾನುಷ್ಠಾನ ಆಗಲಿಲ್ಲ. ಘೋಷಿತ 99 ಯೋಜನೆ ಪೈಕಿ ಮುಕ್ತಾಯ ಕಂಡಿದ್ದು ಕೇವಲ ಒಂದೇ ಒಂದು ಯೋಜನೆ ಮಾತ್ರ ಎನ್ನುವ ಸಚಿವರ ಮಾತಿನಲ್ಲಿ ಕಹಿಯೂ ಇಲ್ಲ; ವಿಷವೂ ಇಲ್ಲ. ಇರುವುದು ನೋವು ಮಾತ್ರ.

ಈ 99 ಯೋಜನೆಗಳ ಅಂದಾಜು ವೆಚ್ಚ 60 ಸಾವಿರ ಕೋಟಿ ರೂಪಾಯಿ. ಯೋಜನೆ ರೂಪಿಸಿದ ಕಾಲದಲ್ಲಿ ಇದ್ದ ಅಂದಾಜು ವೆಚ್ಚ ಇದು. ಈಗ ಅದೇ ವೆಚ್ಚ ಮತ್ತೆ ಹತ್ತಿಪ್ಪತ್ತು ಸಾವಿರ ಕೋಟಿಯಾದರೂ ಹೆಚ್ಚುತ್ತದೆ. ಸಮಯ ಮಿತಿಯಲ್ಲಿ ಯಾವುದೇ ಯೋಜನೆ ಅನುಷ್ಠಾನಗೊಳ್ಳದೇ ಹೋದರೆ ಎಲ್ಲ ಇತಿಮಿತಿಯನ್ನೂ ವೆಚ್ಚ ಮೀರುತ್ತದೆ. ಇದು ಬಡ ತೆರಿಗೆದಾರರ ಮೇಲೆ ಹೇರುವ ಭಾರವಾಗುತ್ತದೆಂಬ ಸಚಿವರ ಅಭಿಪ್ರಾಯದಲ್ಲಿ ಜನಮನ ಅಡಗಿದೆ.

### ದಶಕಗಳಿಂದ ನೆನೆಗುದಿ

ದೇಶದ ಪ್ರಮುಖ ನಾಲ್ಕು ರೈಲ್ವೆ ಮಾರ್ಗಗಳ ಅನುಷ್ಠಾನ ಮೂವತ್ತು ವರ್ಷದಿಂದ ನೆನೆಗುದಿಗೆ ಬಿದ್ದಿದೆ ಎಂಬ

### ರೈಲ್ವೆ ಖಾತೆ – ಕರ್ನಾಟಕ ಪರಂಪರೆ

ಎಚ್.ಸಿ. ದಾಸಪ್ಪ (1963–64); ಸಿ.ಎಂ.ಪೂಣಚ್ಚ (67–69); ಕೆಂಗಲ್ ಹನುಮಂತಯ್ಯ (71–72); ಟಿ.ಎಂ.ಎ. ಪೈ(72–73 ಹಾಗೂ 79–80); ಶ್ರೀ ಸಿ.ಕೆ. ಜಾಫರ್ ಷರೀಫ್ (91–95). ಇತ್ತೀಚೆಗೆ – ಶ್ರೀ ಮಲ್ಲಿಕಾರ್ಜುನ ಖರ್ಗೆ ಇವರೆಲ್ಲರೂ ತಮ್ಮ ಅವಧಿಯಲ್ಲಿ ಸಂಪುಟ ದರ್ಜೆ ಸಚಿವರಾಗಿ ಕಾರ್ಯ ನಿರ್ವಹಿಸಿದವರು. ಈಗ ಈ ಹುದ್ದೆಯ ಹೊಣೆಯನ್ನು ಶ್ರೀ ಡಿ.ವಿ. ಸದಾನಂದ ಗೌಡರು ಹೊತ್ತಿದ್ದಾರೆ.

ಶ್ರೀ ಜಾಫರ್ ಷರೀಫರು ಸಂಪುಟ ದರ್ಜೆಗೆ ಬಡ್ತಿ ಪಡೆಯುವ ಪೂರ್ವದಲ್ಲಿ 80–84ರ ಅವಧಿಯಲ್ಲಿ ರೈಲ್ವೆ ಖಾತೆ ರಾಜ್ಯ ಸಚಿವರಾಗಿದ್ದರು. ಬಸವನ ಗೌಡ ಯತ್ನಾಳರು 2003–04ರಲ್ಲಿ ಮತ್ತು ಶ್ರೀ ಕೆ.ಎಚ್. ಮುನಿಯಪ್ಪನವರು 2003–09ರ ಅವಧಿಯಲ್ಲಿ ಸಚಿವರಾಗಿದ್ದರು.

ಶ್ರೀ ಜಾರ್ಜ್ ಫರ್ನಾಂಡೀಸರು ಬಿಹಾರದಿಂದ ಲೋಕಸಭೆಗೆ ಆಯ್ಕೆಯಾದವರು. 89–90 ರಲ್ಲಿ ಅವರು ರೈಲ್ವೆ ಖಾತೆಯ ಕ್ಯಾಬಿನೆಟ್ ದರ್ಜೆ ಸಚಿವರಾಗಿದ್ದ ಕಾಲದಲ್ಲೇ ಕೊಂಕಣ ರೈಲು ಕಾಮಗಾರಿ ಪ್ರಗತಿ ಕಂಡು ಪೂರೈಸುವಂತಾಗಿದ್ದು. ಅವರ ಮೂಲ ಮಂಗಳೂರು ಮತ್ತು ಅವರು ಕನ್ನಡಿಗರೂ ಆಗಿರುವ ಹಿನ್ನೆಲೆಯಲ್ಲಿ ಅವರನ್ನೂ ನಮ್ಮ ರೈಲ್ವೆ ಸಚಿವರು ಎಂದು ಪರಿಗಣಿಸಿದರೆ ತಪ್ಪಾಗದು.

ಮಾತು ಪ್ರಗತಿ ಚಕ್ರವನ್ನು ಹಿಡಿದು ನಿಲ್ಲಿಸಿದಂತಿದೆ. ಕಳೆದ ಮೂವತ್ತು ವರ್ಷಗಳಲ್ಲಿ ಒಟ್ಟಾರೆ 674 ಯೋಜನೆಗಳಿಗೆ ಅನುಮತಿ ಸಿಕ್ಕಿದ್ದರೂ ಮುಕ್ತಾಯದ ಹಂತಕ್ಕೆ ಬಂದಿರುವುದು ಕೇವಲ 317 ಯೋಜನೆ ಮಾತ್ರ ಎಂಬ ಸಚಿವರ ಮಾತು ಈ ಹೊತ್ತಿನ ವಾಸ್ತವಕ್ಕೆ ಹಿಡಿದ ಕನ್ನಡಿ.

ವೃಥಾ ಹೊಸ ಹೊಸ ಯೋಜನೆಗಳನ್ನು ಪ್ರಕಟಿಸುವುದು ಆರ್ಥಿಕ ಕೊರತೆ ಇಲ್ಲವೇ ರಾಜಕೀಯ ಕಾರಣಕ್ಕಾಗಿ ಅದು ನೆನಗುದಿಗೆ ಬೀಳುವಂತಾಗುವುದು ಸಲ್ಲದು ಎನ್ನುವುದು ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಆಶಯ ಕೂಡಾ. ಇದಕ್ಕೆ ಪೂರಕವಾಗಿರುವ ಬಜೆಟ್ ಮಂಡಿಸಿರುವ ಶ್ರೀ ಸದಾನಂದ ಗೌಡರು ಅನುಷ್ಠಾನಗೊಳ್ಳದ ಯೋಜನೆಗಳ ಪ್ರಕಟಣೆಯೂ ಒಂದೇ ಇಲ್ಲದ ಹಳಿಗಳ ಮೇಲೆ ರೈಲು ಬಿಡುವುದೂ ಒಂದೇ ಎಂಬ ನಿರ್ಧಾರದೊಂದಿಗೆ ಮುಂದಡಿ ಇಟ್ಟಿರುವುದನ್ನು ನಾವು ಪ್ರಸ್ತುತ ಬಜೆಟ್‌ನಲ್ಲಿ ನೋಡಬಹುದಾಗಿದೆ.

### ಕುಂಟುತ್ತಿರುವ ಕಾಮಗಾರಿ

ಕರ್ನಾಟಕದಲ್ಲೇ ಹಲವು ರೈಲ್ವೆ ಕಾಮಗಾರಿ ಕುಂಟುತ್ತ ಎಡವುತ್ತ ಸಾಗಿದೆ. ದೇಶದಲ್ಲಿ ಇನ್ನೆಷ್ಟು ಇಂಥವು ಇರಬಹುದೋ. ಎಲ್ಲಾ ರೈಲ್ವೆ ಯೋಜನೆಗಳನ್ನು ಮುಗಿಸುವುದಕ್ಕೆ ಅದರಲ್ಲೂ ವಿಶೇಷವಾಗಿ ಕರ್ನಾಟಕದ ಯೋಜನೆಗಳನ್ನು ಮುಗಿಸುವುದಕ್ಕೆ ಸರ್ಕಾರ ದೃಢ ಸಂಕಲ್ಪ ಮಾಡಿರುವಂತಿದೆ. ಈ ವರ್ಷದ ಬಜೆಟ್‌ನಲ್ಲಿ ರಾಜ್ಯದ ಯೋಜನೆಗಳಿಗೆಂದೇ ವಿಶೇಷವಾಗಿ ರೂ. 1500 ಕೋಟಿ ಮೀಸಲು ಇಟ್ಟಿರುವ ಕ್ರಮ ಈ ಸಂಕಲ್ಪಕ್ಕೆ ಸಾಕ್ಷಿ. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಈ ಹಿಂದೆ ಯಾವ ವರ್ಷವೂ ಈ ರೀತಿಯಲ್ಲಿ ಇಷ್ಟು ಭಾರೀ ಮೊತ್ತವನ್ನು ರಾಜ್ಯಕ್ಕೆ ನೀಡಿದ ನಿದರ್ಶನವಿಲ್ಲ. ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ರೈಲ್ವೆ ಸಚಿವರಾಗಿ ಮುಂದಿಟ್ಟ ಮಧ್ಯಂತರ ಬಜೆಟ್‌ನಲ್ಲಿ 1500 ಕೋಟಿಯನ್ನು ರಾಜ್ಯಕ್ಕೆ ನೀಡುವ ಪ್ರಸ್ತಾವವಿತ್ತು. ಆದರೆ ಅದರಲ್ಲಿ 600 ಕೋಟಿ ರೂಪಾಯಿ ರಾಜ್ಯದ ಪಾಲು ಸೇರಿತ್ತು.

### ಹೊಸ ರೈಲು ಕೊಡುಗೆ

ಆದರೆ ಸಚಿವರು ಬುಟ್ಟಿಗೆ 1500 ಕೋಟಿ ನೀಡಿದ್ದಾರೆ. ಈಗ ಇರುವ ಮಾರ್ಗಗಳಲ್ಲೇ ಹನ್ನೊಂದು ಹೊಸ ರೈಲುಗಳನ್ನು ಓಡಿಸುವ ಪ್ರಸ್ತಾವವನ್ನು ಸಚಿವರು ಮುಂದಿಟ್ಟಿದ್ದಾರೆ. ಇದರಲ್ಲಿ ಬೀದರ್–ಮುಂಬೈ ಎಕ್ಸ್‌ಪ್ರೆಸ್ ರೈಲೂ ಸೇರಿದೆ. ರೈಲ್ವೆ ಪ್ರಯಾಣಿಕರ ಸುದೀರ್ಘ ಬೇಡಿಕೆಗಳಲ್ಲಿ ಇದು ಒಂದು ಎನ್ನುವುದು ಗಮನಾರ್ಹ. ಮೈಸೂರು–ಬೆಂಗಳೂರು–ಚೆನ್ನೈ ನಡುವೆ ತಾಸಿಗೆ 160 ರಿಂದ 200 ಕಿಮೀ ವೇಗದಲ್ಲಿ ಸಂಚರಿಸುವ ಹೈಸ್ಪೀಡ್ ರೈಲು ಸರ್ಕಾರದ ಮಹತ್ವಾಕಾಂಕ್ಷೆಗಳಲ್ಲಿ ಒಂದೆಂದು ಧಾರಾಳವಾಗಿ ಹೇಳಬಹುದು.




### ಹೈಸ್ಪೀಡ್ ರೈಲು

ಮೈಸೂರು ಈಗ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ನಗರ. ವಾಣಿಜ್ಯಕವಾಗಿಯೂ ವೃದ್ಧಿಯಾಗುತ್ತಿರುವ ಈ ಊರಿನಲ್ಲಿರುವ ವಿಮಾನ ಯಾನ ಸೌಲಭ್ಯ ಅಷ್ಟಕ್ಕಷ್ಟೆ. ಚೆನ್ನೈ–ಮೈಸೂರು ನಡುವೆ ಬೆಂಗಳೂರು ಮಾರ್ಗವಾಗಿ ಓಡುವ ಈ ರೈಲು ನಿಜಕ್ಕೂ ಒಂದು ಹೊಸ ಭರವಸೆ. ಔದ್ಯೋಗಿಕ ಬೆಳವಣಿಗೆಗೆ ಇದು ನಿಸ್ಸಂಶಯವಾಗಿ ಪೂರಕ.

ರಾಜ್ಯದ ಹೊಸ ಮಾರ್ಗಗಳಿಗೆ 517ಕೋಟಿ, ಸುರಂಗ ಮಾರ್ಗ ನಿರ್ಮಾಣಕ್ಕೆ 171 ಕೋಟಿ, ಜೋಡಿ ಮಾರ್ಗಕ್ಕೆ 759 ಕೋಟಿ ಎಂದು ರಾಜ್ಯಕ್ಕೆ ನೀಡಿರುವ ಮೊತ್ತವನ್ನು ವರ್ಗೀಕರಿಸಲಾಗಿದೆ. ರಾಜ್ಯದಲ್ಲಿ ಈಗಾಗಲೇ ಕೈಗೆತ್ತಿಕೊಂಡಿರುವ ಯೋಜನೆಗಳನ್ನು ಮುಗಿಸಲು ಎಂಟು ಸಾವಿರ ಕೋಟಿಯ ಅಗತ್ಯವಿದೆ ಎನ್ನುವುದನ್ನು ನೋಡಿದಾಗ ಈಗ ಕೊಟ್ಟಿರುವ 1500 ಕೋಟಿ ದೊಡ್ಡದೇನೂ ಅಲ್ಲ ಎಂದು ಸಿನಿಕರು ಹೇಳಿಯಾರು.



**(71ನೇ ಪುಟಕ್ಕೆ)**

# ಕೇಂದ್ರ ಬಜೆಟ್; ಮಹಿಳೆಗೆ ದಕ್ಕಿದ್ದು ಏನು?

ಸಿ.ಜಿ. ಮಂಜುಳಾ



'ಸಬ್ ಕಾ ಸಾಥ್ ಸಬ್ ಕಾ ವಿಕಾಸ್' (ಸರ್ವರೊಂದಿಗೆ ಸರ್ವರ ವಿಕಾಸ) ಎಂಬ ಪ್ರಧಾನಿ ಶ್ರೀ ನರೇಂದ್ರ ಮೋದಿ ಘೋಷಣೆಗೆ ಅನುಸಾರವಾಗಿ ಎಲ್ಲರನ್ನೂ ಒಳಗೊಳ್ಳುವ ಅಭಿವೃದ್ಧಿ ಮಾದರಿಗೆ ಬದ್ಧತೆಯನ್ನು ಸರ್ಕಾರ ಪ್ರದರ್ಶಿಸಬೇಕಾಗಿದೆ. ಹಂಚಿಕೆಯಾಗಿರುವ ಹಣದ ಸಮರ್ಪಕ ಬಳಕೆ ಇಲ್ಲಿ ಮುಖ್ಯ.

ಮುಂಗಡಪತ್ರ ಎಲ್ಲರ ಬದುಕಿನ ಮೇಲೂ ಪರಿಣಾಮ ಬೀರುವಂತಹದ್ದು. ತೆರಿಗೆ ನೀತಿ ಬದಲಾವಣೆ, ರಿಯಾಯಿತಿಗಳು, ನೀತಿಗಳಲ್ಲಿ ಬದಲಾವಣೆ ಇತ್ಯಾದಿ ಕ್ರಮಗಳು ಬಜೆಟ್‌ನಲ್ಲಿ ಪ್ರಕಟಗೊಳ್ಳುತ್ತವೆ . ಹೀಗಾಗಿ ಬಜೆಟ್ ಮಂಡನೆ ಎಂಬುದು ಕೇವಲ ವಾಣಿಜ್ಯ ಸಮುದಾಯ ಅಥವಾ ಮಾರುಕಟ್ಟೆ ಸಂಬಂಧಿತ ಜನರಿಗೆ ಮಾತ್ರವಲ್ಲ, ಎಲ್ಲ ಜನ ವರ್ಗಗಳಿಗೂ ಆಸಕ್ತಿ ಮೂಡಿಸುವಂತಹದ್ದು.

ಈ ಬಾರಿ ಕೇಂದ್ರದ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಚೊಚ್ಚಲ ಬಜೆಟ್ ಮಂಡಿಸಿದೆ. ಈ ಬಜೆಟ್‌ನಲ್ಲಿ ಮಹಿಳೆಯರಿಗೆ ಸಂಬಂಧಿಸಿದಂತೆ ಪ್ರಸ್ತಾಪವಾಗಿರುವ ಅಂಶಗಳ ವಿಶ್ಲೇಷಣೆ ನಡೆಸುವ ಕಿರು ಪ್ರಯತ್ನ ಇಲ್ಲಿದೆ.

ಮಹಿಳೆಯರ ಮೇಲೆ ಅಪರಾಧಗಳು ತೀವ್ರ ಹೆಚ್ಚಳ ಕಾಣುತ್ತಿರುವ ಸನ್ನಿವೇಶ ಇದು. ಇಂತಹ ಸಂದರ್ಭದಲ್ಲಿ ಕೇಂದ್ರ ಹಣಕಾಸು ಸಚಿವ ಶ್ರೀ ಅರುಣ್ ಜೇಟ್ಲಿ ಅವರು 2014–15ನೇ ಸಾಲಿಗಾಗಿ ಮಂಡಿಸಿದ ಬಜೆಟ್ ಮಹಿಳೆಯರಿಗೆ ಸಂಬಂಧಿಸಿದ ಯಾವ ಯಾವ ಯೋಜನೆಗಳಿಗೆ ಹಣ ಹೂಡಿದೆ ? ಇದು ಮಹಿಳೆಯರ ಮೇಲೆ ಬೀರಬಹುದಾದ ಪರಿಣಾಮ ಯಾವ ಬಗೆಯದು?

2012 ರ ಡಿಸೆಂಬರ್ 16ರಂದು ದೆಹಲಿಯ ಪ್ಯಾರಾ ಮೆಡಿಕಲ್ ವಿದ್ಯಾರ್ಥಿನಿ 'ನಿರ್ಭಯಾ' ಮೇಲೆ ಸಾಮೂಹಿಕ ಅತ್ಯಾಚಾರ ಹಾಗೂ ನಂತರ ಆಕೆಯ ಸಾವಿನಿಂದಾಗಿ ಮಹಿಳಾ ಸುರಕ್ಷತೆಯ ವಿಚಾರ ರಾಷ್ಟ್ರದಲ್ಲಿ ಹೆಚ್ಚು ಪ್ರಾಧಾನ್ಯ ಗಳಿಸಿಕೊಂಡಿತು. ಕಳೆದ ವರ್ಷದ ಬಜೆಟ್ ನಲ್ಲಿ ' ನಿರ್ಭಯಾ ನಿಧಿ' ಸ್ಥಾಪಿಸಲಾಗಿದ್ದನ್ನೂ ಇಲ್ಲಿ ಸ್ಮರಿಸಬಹುದು. ಮಹಿಳೆಯರ ರಕ್ಷಣೆಗಾಗಿ ಕಾರ್ಯ ನಿರ್ವಹಿಸುವ ಸರ್ಕಾರ ಹಾಗೂ ಎನ್‌ಜಿಓಗಳ ಉಪಕ್ರಮಗಳನ್ನು ಬೆಂಬಲಿಸಲು ಈ ನಿಧಿಯನ್ನು ಆರಂಭಿಸಿತು. 2013ರಲ್ಲಿ ಶ್ರೀ ಪಿ. ಚಿದಂಬರಂ ಅವರು ಮಂಡಿಸಿದ ಕೇಂದ್ರ ಬಜೆಟ್‌ನಲ್ಲಿ ಇದಕ್ಕೆಂದೇ ರೂ 1000 ಕೋಟಿಯನ್ನೂ ನಿಗದಿ ಪಡಿಸಲಾಗಿತ್ತು.

ಈ ಬಾರಿಯ ಬಜೆಟ್‌ನಲ್ಲೂ ಮಹಿಳಾ ಸುರಕ್ಷತೆ ವಿಚಾರ ಪ್ರಾಧಾನ್ಯ ಪಡೆದುಕೊಂಡಿದೆ. ಸಾರ್ವಜನಿಕ ಸಾರಿಗೆಯನ್ನು ಮಹಿಳೆಯರಿಗೆ ಸುರಕ್ಷಿತವಾಗಿಸುವ ನಿಟ್ಟಿನಲ್ಲಿ ಈ ಬಜೆಟ್‌ನಲ್ಲಿ ಹೆಜ್ಜೆ ಇರಿಸಲಾಗಿದೆ. ರೂ. 50 ಕೋಟಿಯನ್ನು ಕೇಂದ್ರ ಹಣಕಾಸು ಸಚಿವರು ನಿಗದಿ ಪಡಿಸಿದ್ದು ಇದಕ್ಕಾಗಿ ಪ್ರಾಯೋಗಿಕ ಯೋಜನೆ (ಪೈಲಟ್ ಪ್ರಾಜೆಕ್ಟ್) ರೂಪಿಸುವ ಹೊಣೆಗಾರಿಕೆ ರಸ್ತೆ ಸಾರಿಗೆ ಸಚಿವಾಲಯದ್ದಾಗಿರುತ್ತದೆ.

'ಸಾರ್ವಜನಿಕ ಸಾರಿಗೆಯನ್ನು ಮಹಿಳೆಯರಿಗೆ ಸುರಕ್ಷಿತವಾಗಿಸುವುದಕ್ಕಾಗಿ ಈ ಹಣ ಬಳಕೆಯಾಗುವಂತೆ ರಸ್ತೆ ಸಾರಿಗೆ ಸಚಿವಾಲಯ ನೋಡಿಕೊಳ್ಳುವುದು' ಎಂದು ಸಚಿವ ಶ್ರೀ ಅರುಣ್ ಜೇಟ್ಲಿ ಹೇಳಿದ್ದಾರೆ.

ಹಾಗೆಯೇ ಎಲ್ಲಾ ದೊಡ್ಡ ನಗರಗಳಲ್ಲಿ ಮಹಿಳೆಯರ ಸುರಕ್ಷತೆ ಹೆಚ್ಚಿಸುವ ಯೋಜನೆಗಾಗಿ ರೂ. 150 ಕೋಟಿ ಹಂಚಿಕೆ ಮಾಡಲಾಗಿದೆ. ಆದರೆ ಇದಕ್ಕಿಂತಲೂ ಹೆಚ್ಚು ಎಂದರೆ ರೂ 200 ಕೋಟಿ ಹಣವನ್ನು ಸರ್ದಾರ್ ವಲ್ಲಭ ಭಾಯಿ ಪಟೇಲ್ ಪುತ್ಥಳಿ ನಿರ್ಮಿಸಲು ಬಜೆಟ್ ನಲ್ಲಿ ಹಂಚಿಕೆ ಮಾಡಲಾಗಿದೆ. ಇದು ಟೀಕೆಗಳಿಗೆ ಗ್ರಾಸವಾಗಿದೆ. ನಗರಗಳನ್ನು ಸುರಕ್ಷಿತವಾಗಿಸಲು ರೂ 150 ಕೋಟಿ

ಹಿರಿಯ ಪತ್ರಕರ್ತೆ.

ಸಾಕೆ ಎಂಬುದು ಪ್ರಶ್ನೆ. ಏಕೆಂದರೆ ಹೆಚ್ಚಿನ ಬೀದಿ ದೀಪಗಳ ವ್ಯವಸ್ಥೆ, ಪೊಲೀಸ್ ಗಸ್ತು ಹೆಚ್ಚಳ, ಆಧುನಿಕ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ಕ್ಷಿಪ್ರವಾಗಿ ಕಾರ್ಯಾಚರಣೆಗಿಳಿಯುವಂಥ ಭದ್ರತಾ ದಳಗಳು ಇತ್ಯಾದಿ ಸೌಲಭ್ಯಗಳು ಸುರಕ್ಷಿತ ನಗರಗಳನ್ನು ಸೃಷ್ಟಿಸಲು ಅಗತ್ಯ. ಹಾಗೆಯೇ ಸಾರ್ವಜನಿಕ ಸಾರಿಗೆಯನ್ನು ಮಹಿಳೆಯರಿಗೆ ಸುರಕ್ಷಿತವಾಗಿಸಲು ಮೂಲಸೌಕರ್ಯಗಳನ್ನು ಸೃಷ್ಟಿಸಲೂ ಸರ್ಕಾರ ಸಾಕಷ್ಟು ಹಣ ಹೂಡಿಕೆ ಮಾಡಬೇಕಾಗುತ್ತದೆ. ಅಲ್ಲದೆ ತರಬೇತಿ ಸೌಲಭ್ಯಗಳೂ ಬೇಕು. ಜೊತೆಗೆ ರಾಷ್ಟ್ರದ ಎಷ್ಟು ನಗರಗಳನ್ನು ಈ ಯೋಜನೆ ವ್ಯಾಪ್ತಿಗೆ ತರಲಾಗುತ್ತದೆ ಎಂಬ ಬಗ್ಗೆಯೂ ಸ್ಪಷ್ಟತೆ ಇಲ್ಲ. ಇದರಿಂದ ಈ ಹಣ ಹಂಚಿಕೆಯ ಪ್ರಮಾಣ ಎಷ್ಟರ ಮಟ್ಟಿಗೆ ಸಾಲುತ್ತದೆ ಎಂಬ ಪ್ರಶ್ನೆಯಂತೂ ಉಳಿಯುತ್ತದೆ.

ದೆಹಲಿಯಲ್ಲಿ 'ಕ್ರೈಸಿಸ್ ಮ್ಯಾನೇಜ್ ಮೆಂಟ್ ಸೆಂಟರ್' ಆರಂಭಿಸುವುದಾಗಿಯೂ ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗಿದೆ. ಇದಕ್ಕಾಗಿ ಪ್ರತ್ಯೇಕ ನಿಧಿ ಸ್ಥಾಪಿಸುವುದಿಲ್ಲ. ಈ ಕೇಂದ್ರಕ್ಕೆ ಹಣವನ್ನು 'ನಿರ್ಭಯಾ ನಿಧಿ'ಯಿಂದಲೇ ಬಳಸಿಕೊಳ್ಳಲಾಗುವುದು. ಹೆಣ್ಣು ಮಗುವಿನ ಕುರಿತಂತೆ ಜನರನ್ನು ಸೂಕ್ಷ್ಮಗೊಳಿಸುವ ಪ್ರಚಾರಾಂದೋಲನಗಳಿಗೆ ಗಮನ ಹರಿಸುವುದಾಗಿ ಹಣಕಾಸು ಸಚಿವರು ಹೇಳಿದ್ದಾರೆ. ಇದಕ್ಕಾಗಿ ಲಿಂಗತ್ವ ಸಂವೇದನಾಶೀಲತೆಯನ್ನು ಮುಖ್ಯವಾಹಿನಿಯ ಭಾಗವಾಗಿಸುವುದಕ್ಕಾಗಿ ಪ್ರತ್ಯೇಕ ಶಾಲಾ ಪಠ್ಯಗಳನ್ನು ರೂಪಿಸಲಾಗುವುದೆಂದೂ ಹಣಕಾಸು ಸಚಿವರು ಹೇಳಿದ್ದಾರೆ. ಲಿಂಗತ್ವದ ವಿಚಾರಗಳಲ್ಲಿ ಸೂಕ್ತ ಸಂವೇದನಾಶೀಲತೆ ಮೂಡಬೇಕಾಗಿರುವುದು ಇಂದಿನ ಸಮಾಜದಲ್ಲಿ ಅಗತ್ಯ ಎಂಬುದರಲ್ಲಿ ಎರಡು ಮಾತಿಲ್ಲ.

ಭಾರತದಲ್ಲಿನ ಹೆಣ್ಣುಮಗುವಿನ ಸ್ಥಿತಿಗತಿಯ ಬಗ್ಗೆ ಕಳವಳಗೊಂಡಿರುವ ಸರ್ಕಾರ ಹೆಣ್ಣು ಮಗುವಿನ ಕುರಿತಾಗಿ ತಮ್ಮ ಕಾಳಜಿಯನ್ನು ಹೊಸ ಯೋಜನೆಯೊಂದನ್ನು ಪ್ರಕಟಿಸುವ ಮೂಲಕ ವ್ಯಕ್ತ ಪಡಿಸಿದೆ.

ಹೆಣ್ಣುಮಗುವಿನ ಆರೋಗ್ಯ ರಕ್ಷಣೆ ಹಾಗೂ ಆಕೆಯ ಭವಿಷ್ಯಕ್ಕಾಗಿ 'ಮಗಳನ್ನು ಉಳಿಸಿ, ಮಗಳನ್ನು ಓದಿಸಿ' (ಬೇಟಿ ಬಚಾವೊ ಬೇಟಿ ಪಡಾವೊ) ಹೊಸ ಯೋಜನೆಯನ್ನು



ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗಿದೆ. ಇದಕ್ಕಾಗಿ ಮಂಜೂರು ಮಾಡಲಾಗಿರುವ ಹಣ ರೂ. 100 ಕೋಟಿ .

'ಹೆಣ್ಣು ಮಗುವಿನ ರಕ್ಷಣೆ ಹಾಗೂ ಶಿಕ್ಷಣಕ್ಕೆ ಈ ಯೋಜನೆ ನೆರವಾಗಲಿದೆ. ಅಲ್ಲದೆ ಹೆಣ್ಣು ಮಕ್ಕಳು ನಾಳಿನ ರಾಷ್ಟ್ರ ನಿರ್ಮಾತೃಗಳಾಗಲೂ ಇದರಿಂದ ಅನುಕೂಲವಾಗಲಿದೆ. ಹೆಣ್ಣು ಮಗುವಿನ ಶಿಕ್ಷಣಕ್ಕಾಗಿ ಇನ್ನೂ ಹೆಚ್ಚಿನ ಯೋಜನೆಗಳನ್ನು ಬರಲಿರುವ ದಿನಗಳಲ್ಲಿ ಆರಂಭಿಸಲಾಗುವುದು' ಎಂದೂ ಸಚಿವರು ಹೇಳಿದ್ದಾರೆ. ಆದರೆ ಈ ವಲಯದಲ್ಲಿನ ಸಮಸ್ಯೆಯ ಅಗಾಧತೆ ಹಾಗೂ ಗಂಭೀರತೆಯನ್ನು ಪರಿಗಣಿಸಿದಲ್ಲಿ ಈ ಹಣ ಏನೇನೂ ಸಾಲದು ಎಂಬುದು ತಜ್ಞರ ವಿಶ್ಲೇಷಣೆ. ಹೆಣ್ಣು ಭ್ರೂಣ ಹತ್ಯೆಯ ಪಿಡುಗು ಭಾರತಕ್ಕೆ ಕಪ್ಪು ಚುಕ್ಕೆಯಾಗಿರುವ ಸನ್ನಿವೇಶ ಇದು. ಹೀಗಾಗಿ ಸಮರೋಪಾದಿಯಲ್ಲಿ ಈ ಪಿಡುಗು ನಿಯಂತ್ರಣಕ್ಕೆ ಕ್ರಮಗಳನ್ನು ಕೈಗೊಳ್ಳಬೇಕಾದುದು ಇಂದಿನ ಅಗತ್ಯ. ಈ ನಿಟ್ಟಿನಲ್ಲಿ ಹೆಚ್ಚಿನ ಪ್ರಚಾರಾಂದೋಲನಗಳು ಹಾಗೂ ಅಗತ್ಯ ಮೂಲಸೌಕರ್ಯಗಳ ಸೃಷ್ಟಿಗೆ ಕ್ರಮಗಳನ್ನು ಕೈಗೊಳ್ಳಬೇಕಾದ ಜವಾಬ್ದಾರಿ ಸರ್ಕಾರಕ್ಕಿದೆ. ಆದರೆ ಇದಕ್ಕೆ ಈಗ ಹಂಚಿಕೆ ಮಾಡಿರುವ ಹಣ ಸಾಕಾಗುವುದಿಲ್ಲ ಎಂಬ ಭಾವನೆ ಇದೆ. ಗ್ರಾಮೀಣ ಮಹಿಳೆಯರ ಕ್ಷೇಮಾಭಿವೃದ್ಧಿ ವಿಚಾರವೂ ಕೇಂದ್ರ ಬಜೆಟ್ ನಲ್ಲಿ ಸ್ಥಾನ ಪಡೆದುಕೊಂಡಿದೆ. ಗ್ರಾಮೀಣ ಭಾರತದ ಮಹಿಳೆಯರಿಗಾಗಿ ರಿಯಾಯಿತಿ ಸಾಲಗಳನ್ನು ಸರ್ಕಾರ ನೀಡುವುದು ಎಂದು ಪ್ರಕಟಿಸಲಾಗಿದೆ. ಈ ಪ್ರಕಾರ, 'ಆಜೀವಿಕಾ' ಎಂಬ ಯೋಜನೆ ಹೆಸರಲ್ಲಿ ಕೆಲವು ಜಿಲ್ಲೆಗಳಲ್ಲಿ ಶೇ 4 ಹಾಗೂ ಮತ್ತೆ ಇನ್ನು ಕೆಲವು ಜಿಲ್ಲೆಗಳಲ್ಲಿ ಶೇ 7 ರ ಬಡ್ಡಿದರಗಳಲ್ಲಿ ಮಹಿಳಾ ಸ್ವಸಹಾಯ ಗುಂಪುಗಳಿಗೆ ಸಾಲಗಳನ್ನು ನೀಡಲಾಗುವುದು.

ಕಳೆದ ಯುಪಿಎ ಸರ್ಕಾರದ ಬಜೆಟ್ ನಲ್ಲಿ 'ಮಹಿಳಾ ಬ್ಯಾಂಕ್' ಸ್ಥಾಪನೆಯನ್ನು ಪ್ರಕಟಿಸಲಾಗಿತ್ತು. ದೊಡ್ಡ ಬ್ಯಾಂಕ್‌ಗಳಲ್ಲಿ ಮಹಿಳೆಯರಿಗೆ ಸಾಲ ಸಿಗುವುದು ಕಷ್ಟ; ಜೊತೆಗೆ ಅನೇಕ ಮಹಿಳೆಯರು ಬ್ಯಾಂಕ್‌ಗಳಿಗೆ ಹೋಗುವುದೂ ಕಷ್ಟ ಎಂಬ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಯುಪಿಎ ಸರ್ಕಾರ ಈ ಹೆಜ್ಜೆ ಇರಿಸಿತ್ತು. 'ಮಹಿಳಾ ಬ್ಯಾಂಕ್' ಗಳ ಸ್ಥಾಪನೆ, ಯುಪಿಎ ಸರ್ಕಾರ ಮಹಿಳೆ ಪರವಾಗಿ ಕೈಗೊಂಡ ಒಂದು ಸಾಂಕೇತಿಕ ಕ್ರಮವಾಗಿತ್ತು ಎನ್ನಬಹುದು. ಅನೇಕ ವಿಚಾರಗಳಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರವೂ, ಹಿಂದಿನ ಯುಪಿಎ ಸರ್ಕಾರ ಅನುಸರಿಸಿದ ಹಾದಿಯಲ್ಲೇ ಸಾಗಿರುವುದು ಗೋಚರವಾಗುತ್ತದೆ. ಏಕೆಂದರೆ ಸಾಲಗಳ ವಿಚಾರದಲ್ಲಿ ಯುಪಿಎ ಸರ್ಕಾರದ ಅದೇ ಸಾಂಕೇತಿಕತೆಯ ನೀತಿಯನ್ನು ಅನುಸರಿಸಿದಂತೆ ಕಾಣುತ್ತದೆ. ಮೇಲ್ನೋಟಕ್ಕೆ ಈ ಕ್ರಮ ಉತ್ತೇಜನದಾಯಕವಾಗಿ ಕಾಣಬಹುದು. ಆದರೆ ಆಳಕ್ಕೆ ಇಳಿದಂತೆ ಇದರ ಮಿತಿಗಳು ದೃಗ್ಗೋಚರವಾಗುತ್ತವೆ. ಕಿರು ಉದ್ಯಮಗಳನ್ನು ಆರಂಭಿಸುವುದಕ್ಕಾಗಿ ಸಾಲಕ್ಕೆ ಶೇ. 4 ಬಡ್ಡಿ ನೀಡಲೂ ಸಾಧ್ಯವಾಗದ



**ಬಜೆಟ್ 2014**
**ಮಹಿಳೆ ಸಂಬಂಧಿಸಿದಂತೆ**
**ಪ್ರಮುಖ ಹಂಚಿಕೆ**

* 50 ಕೋಟಿ ರೂ. ಸುರಕ್ಷಿತ ಸಾರಿಗೆಗೆ
* 150 ಕೋಟಿ ರೂ. ಸುರಕ್ಷಿತ ನಗರಗಳಿಗೆ
* 100 ಕೋಟಿ ರೂ. 'ಬೇಟಿ ಪಡಾವೊ,ಬೇಟಿ ಬಚಾವೊ' ಯೋಜನೆಗೆ
* 1000 ಕೋಟಿ ರೂ. ಈಗಾಗಲೇ ಇರುವ ನಿರ್ಭಯಾ ನಿಧಿ.

ಸ್ಥಿತಿಯಲ್ಲಿ ಅನೇಕ ಮಹಿಳೆಯರಿದ್ದಾರೆ. ಜೊತೆಗೆ ಅಧಿಕೃತವಾದ ಇಂತಹ ವ್ಯವಸ್ಥೆಗಳಿಂದ ಸಾಲ ಪಡೆದುಕೊಳ್ಳಲು ಆಧಾರ ಅಥವಾ ಒತ್ತೆಯಾಗಿಡಲು ಆಸ್ತಿಯ ಕೊರತೆಯೂ ದೊಡ್ಡ ಅಡ್ಡಿಯಾಗಿರುತ್ತದೆ ಮಹಿಳೆಯರಿಗೆ.

ಆದರೆ ಅನೇಕ ಸಕಾರಾತ್ಮಕ ಅಂಶಗಳೂ ಇವೆ. ಇದರಲ್ಲಿ ಮುಖ್ಯವಾದದ್ದು ಶೌಚಾಲಯ ಹಾಗೂ ಕುಡಿಯುವ ನೀರಿನ ಲಭ್ಯತೆಗೆ ಕಲ್ಪಿಸಿರುವ ಅವಕಾಶ. ಎಲ್ಲಾ ಹೆಣ್ಣುಮಕ್ಕಳ ಶಾಲೆಗಳಲ್ಲಿ ಶೌಚಾಲಯಗಳು ಹಾಗೂ ಕುಡಿಯುವ ನೀರು ಒದಗಿಸಲು ಸರ್ಕಾರ ಪ್ರಯತ್ನಿಸುವುದು ಎಂದು ಬಜೆಟ್‌ನಲ್ಲಿ ಹೇಳಲಾಗಿದೆ. ಹೆಣ್ಣುಮಕ್ಕಳು ಶಾಲೆಗಳಿಗೆ ಹೋಗುವ ಪ್ರಮಾಣ ಶೌಚಾಲಯಗಳ ಲಭ್ಯತೆಯಿಂದ ಹೆಚ್ಚಾಗಲಿದೆ. ಅಲ್ಲದೆ ಹೆಣ್ಣುಮಕ್ಕಳು ಶಾಲೆ ಬಿಡುವ ಪ್ರಮಾಣವೂ ಕಡಿಮೆಯಾಗಲಿದೆ. ಬಹುತೇಕ ಸಂದರ್ಭಗಳಲ್ಲಿ ಋತುಮತಿಯಾದ ನಂತರ ಹೆಣ್ಣುಮಕ್ಕಳು ಸ್ವಚ್ಛ ಶೌಚಾಲಯದ ಕೊರತೆಯಿಂದಾಗಿಯೇ ಶಾಲೆಯನ್ನು ಮಧ್ಯದಲ್ಲೇ ಬಿಡುತ್ತಾರೆ ಎಂಬುದನ್ನು ಅಧ್ಯಯನಗಳು ತೋರಿಸಿಕೊಟ್ಟಿವೆ. ಇದರಿಂದಾಗಿ ಹೆಣ್ಣುಮಕ್ಕಳಿಗೆ ಪ್ರತ್ಯೇಕ ಶೌಚಾಲಯಗಳಿರುವುದು ತೀರಾ ಅಗತ್ಯ. ಈ ನಿಟ್ಟಿನಲ್ಲಿ ಬಜೆಟ್ ಗಮನ ಹರಿಸಿರುವುದು ಸೂಕ್ತವಾಗಿದೆ. ಹೆಣ್ಣುಮಕ್ಕಳ ಶಿಕ್ಷಣ ಹಾಗೂ ವಿವಾಹದ ಅಗತ್ಯಗಳಿಗೆ ಸ್ಪಂದಿಸುವುದಕ್ಕಾಗಿ ವಿಶೇಷ ಸಣ್ಣ ಉಳಿತಾಯ ಯೋಜನೆಯ ಪ್ರಸ್ತಾವವನ್ನೂ ಈ ಬಜೆಟ್‌ನಲ್ಲಿ ಮಾಡಲಾಗಿದೆ. ಇದು ನ್ಯಾಷನಲ್ ಸೇವಿಂಗ್ಸ್ ಸರ್ಟಿಫಿಕೇಟ್ ಅಥವಾ ಕಿಸಾನ್ ವಿಕಾಸ ಪತ್ರದ ರೀತಿಯದೇ ಮತ್ತೊಂದು ಯೋಜನೆ. ಉಳಿತಾಯ ಪ್ರವೃತ್ತಿಯನ್ನು ಪ್ರೋತ್ಸಾಹಿಸುವುದು ನಿಜಕ್ಕೂ ಸಕಾರಾತ್ಮಕವಾದ ಹೆಜ್ಜೆ. ಆದರೆ ಹೆಣ್ಣುಮಕ್ಕಳಿಗೆ ಸಂಬಂಧಿಸಿದಂತೆ ವಿವಾಹದ ವಿಚಾರವನ್ನು ಇದಕ್ಕೆ ಜೋಡಿಸಿರುವುದು ವಿವಾದಾಸ್ಪದ. ಹೆಣ್ಣುಮಕ್ಕಳ ಮದುವೆ ಎಂದರೆ ಖರ್ಚು ಎಂಬ ಚಿಂತನೆಯನ್ನು ಸಮಾಜದಿಂದ ಮೂಲೋತ್ಪಾಟನೆ ಮಾಡುವುದಕ್ಕಾಗಿ ವಿವಾಹ ರೀತಿನೀತಿಗಳಲ್ಲಿ ಸುಧಾರಣೆಯಾಗ ಬೇಕಾಗಿರುವುದು ಇಂದಿನ ಅಗತ್ಯ. ಆದರೆ ಹೆಣ್ಣುಮಕ್ಕಳ ಮದುವೆ ಖರ್ಚಿಗೆ ಹಣ ಕೂಡಿಡಬೇಕೆಂಬ ಚಿಂತನೆ ರೂಢಿಸುವ ಈ ನೀತಿ ಹೆಣ್ಣುಮಕ್ಕಳ ಅಭಿವೃದ್ಧಿಗೆ ಮಾರಕವಾದುದು. ಇಂತಹ ಚಿಂತನಾ ಧಾಟಿಯೇ ಹೆಣ್ಣು ಭ್ರೂಣ ಹತ್ಯೆಗೆ ಮೂಲ ಕಾರಣ ಎಂಬುದನ್ನು ನಾವು ಗ್ರಹಿಸಬೇಕಾದುದು ಅಗತ್ಯ. ಪ್ರತಿ ಬಜೆಟ್ ಸಹ ಮಹಿಳೆಯರಿಗಾಗಿ ಅನೇಕ ಪ್ರಕಟಣೆಗಳನ್ನು ಮಾಡುತ್ತದೆ. ಆದರೆ ಇವುಗಳಲ್ಲಿ ಎಷ್ಟು ವಾಸ್ತವವಾಗಿ ಅನುಷ್ಠಾನಗೊಳ್ಳುತ್ತದೆ ಎನ್ನುವುದೇ ಮುಖ್ಯ ಪ್ರಶ್ನೆ. 'ನಿರ್ಭಯಾ ನಿಧಿ' ಯ ವಿಚಾರವನ್ನೇ ತೆಗೆದುಕೊಳ್ಳಿ. 'ನಿರ್ಭಯಾ ನಿಧಿ' ಸ್ಥಾಪನೆಯಾದ ಒಂದು ವರ್ಷದ ನಂತರ, ಒಂದೇ ಒಂದು ರೂಪಾಯಿಯೂ ಈ ನಿಧಿಯಿಂದ ವೆಚ್ಚವಾಗಿಲ್ಲ. ಈ ಕುರಿತಂತೆ ಮಾಹಿತಿ ಹಕ್ಕು (ಆರ್‌ಟಿಐ) ಪ್ರಕಾರ ಕೇಳಲಾದ ಪ್ರಶ್ನೆಯೊಂದಕ್ಕೆ ಕೇಂದ್ರ ಹಣಕಾಸು ಸಚಿವಾಲಯದ ಆರ್ಥಿಕ ವ್ಯವಹಾರಗಳ ಇಲಾಖೆಯ ಅಧೀನ ಕಾರ್ಯದರ್ಶಿ ಅಮಿತ್ ಬನ್ಸಾಲ್ ಅವರು ನೀಡಿರುವ ಪ್ರತಿಕ್ರಿಯೆ ಇದು : 'ರೂ 1000 ಕೋಟಿ ರೂಪಾಯಿಯ 'ನಿರ್ಭಯಾ ನಿಧಿ'ಯ ಸ್ಥಾಪನೆಗೆ ಸಂಸತ್ತು ಅಂಗೀಕಾರ ನೀಡಿದೆ. ಆದರೆ ಇದಕ್ಕೆ ಸಂಬಂಧಿಸಿದಂತೆ ಸೂಕ್ತ ಯೋಜನೆಗಳನ್ನು ಇನ್ನೂ ರೂಪಿಸಬೇಕಾಗಿರುವುದರಿಂದ ಈವರೆಗೆ ಇನ್ನೂ ಈ ನಿಧಿಯ ಬಳಕೆಯಾಗಿಲ್ಲ'.

ಮನೆಯ ಹೊರಗೆ, ಒಳಗೆ ಮಹಿಳೆಯ ಸುರಕ್ಷತೆ, ಆರೋಗ್ಯ, ಸ್ವಚ್ಛತೆ, ಶಿಕ್ಷಣ ಹಾಗೂ ಉದ್ಯೋಗ – ಈ ವಿಚಾರಗಳು ಮಹಿಳೆಗೆ ಸಂಬಂಧಿಸಿದಂತೆ ಭಾರತದಲ್ಲಿ ಸದ್ಯಕ್ಕೆ ಗಂಭೀರ ಕಾಳಜಿಯ ಸಂಗತಿಗಳಾಗಿರುವುದು ನಿಜ. ಮಹಿಳೆಯರ ಮೇಲಿನ ಅಪರಾಧಗಳು ದಿನನಿತ್ಯ ಹೆಚ್ಚಳ ಕಾಣುತ್ತಿರುವ ಈ ದಿನಗಳಲ್ಲಿ, ಬಜೆಟ್‌ನಲ್ಲಿ ಪ್ರಕಟಿಸಲಾಗಿರುವ ಕೆಲವಾದರೂ ಯೋಜನೆಗಳು ಬರೀ ಕಾಗದದ ಮೇಲಿನ ಯೋಜನೆ ಆಗಬಾರದು. ಮಹಿಳೆಯರ ಸುರಕ್ಷತೆ ಎಂಬುದೇ ಇಂದು ದೊಡ್ಡ ಸಮಸ್ಯೆಯಾಗಿದೆ. ಹೀಗಾಗಿ ಬಜೆಟ್‌ನಲ್ಲಿ ಪ್ರಕಟಿಸಲಾಗಿರುವ ಯೋಜನೆಗಳು ಅಸ್ತಿತ್ವಕ್ಕೆ ಬಂದು ರಾಷ್ಟ್ರದ ಬೆಳವಣಿಗೆಗೆ ಹೊಸ ಚೇತನ ನೀಡಬೇಕಾಗಿದೆ. ಆದರೆ ಬಜೆಟ್‌ನಲ್ಲಿ ಪ್ರಕಟಿಸಲಾಗಿರುವ ಅನೇಕ ನೀತಿಗಳಿಂದಾಗಿ ಹಣದುಬ್ಬರ ಹೆಚ್ಚಾಗುವ ಸಾಧ್ಯತೆಯೂ ಇದೆ. ಸ್ವಂತ ಭೂಮಿ ಕಳೆದುಕೊಳ್ಳುವಿಕೆ, ದುಬಾರಿಯಾಗಿ ಪರಿಣಮಿಸಬಹುದಾದ ಶಿಕ್ಷಣ, ಹಾಗೂ ಆರೋಗ್ಯ ಸೇವೆ – ಇತ್ಯಾದಿಗಳಿಂದ ನಗರ ಹಾಗೂ ಹಳ್ಳಿಗಳ ಮಹಿಳೆಯರು ಹೆಚ್ಚಿನ ಸಂಕಷ್ಟಕ್ಕೆ ಸಿಲುಕಬಹುದಾದ ಸಾಧ್ಯತೆಗಳತ್ತಲೂ ಮುನ್ನೋಟ ಹರಿಸುವುದು ಅಗತ್ಯ ಎಂಬುದು ತಜ್ಞರ ವಿಶ್ಲೇಷಣೆ. ಈ ಅಂಶಗಳನ್ನು ಗಮನದಲ್ಲಿ ಇರಿಸಿಕೊಂಡು ಇನ್ನಷ್ಟು ಕ್ಷೇಮಾಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸಬೇಕಾದುದು ಅಗತ್ಯವಾಗುತ್ತದೆ. 'ಸಬ್ ಕಾ ಸಾಥ್ ಸಬ್ ಕಾ ವಿಕಾಸ್' (ಸರ್ವರೊಂದಿಗೆ ಸರ್ವರ ವಿಕಾಸ) ಎಂಬ ಪ್ರಧಾನಿ ಶ್ರೀ ನರೇಂದ್ರ ಮೋದಿ ಘೋಷಣೆಗೆ ಅನುಸಾರವಾಗಿ ಎಲ್ಲರನ್ನೂ ಒಳಗೊಳ್ಳುವ ಅಭಿವೃದ್ಧಿ ಮಾದರಿಗೆ ಬದ್ಧತೆಯನ್ನು ಸರ್ಕಾರ ಪ್ರದರ್ಶಿಸಬೇಕಾಗಿದೆ. ಹಂಚಿಕೆಯಾಗಿರುವ ಹಣದ ಸಮರ್ಪಕ ಬಳಕೆ ಇಲ್ಲಿ ಮುಖ್ಯ. ಈಗಾಗಲೇ ಉದಾಹರಿಸಿದಂತೆ 'ನಿರ್ಭಯಾ ನಿಧಿ'ಯಂತೆ ಹಂಚಿಕೆಯಾದ ಹಣ ಬಳಕೆಯಾಗದೆ ಉಳಿದುಹೋಗುವುದೂ ಮಾಮೂಲು. ಹಾಗೆಯೇ ಅನೇಕ ಹೊಸ ವಿಚಾರಗಳು ಹಣವಿಲ್ಲದೆ ಕಳೆದುಹೋಗುವುದೂ ಇದೆ. ಆದರೆ ಸಹಭಾಗಿತ್ವ ಹಾಗೂ ವಿಕೇಂದ್ರೀಕರಣ ತತ್ವಗಳು, ಯೋಜನೆಗಳ ಜಾರಿಗೆ ಮುಖ್ಯವಾದುದು. ಈ ತತ್ವವನ್ನು ಮಹಿಳಾ ಸಬಲೀಕರಣ ಕ್ಷೇತ್ರಕ್ಕೂ ಅನ್ವಯಿಸುವುದು ಅಗತ್ಯ. ❑

ಯಶೋಗಾಥೆ



# ಹತ್ತಿ ಬಿಡಿಸುವ ಯಂತ್ರ

ನಾತುಭಾಯ್ ಆರ್ ವಾಡೆರ್
ಕನ್ನಡಕ್ಕೆ : ಹೇಮಂತ್ ಕಂಪ್ಲಿಮಠ್



ನಾತುಭಾಯಿ ಅವರಿಗೆ ಯಂತ್ರ ಉತ್ಪಾದನಾ ಘಟಕವನ್ನು ಅವರ ಹಳ್ಳಿಯಲ್ಲಿಯೇ ತೆರೆಯುವ ಯೋಜನೆ ಇದೆ. ಯಂತ್ರದೊಳಗೆ ಹತ್ತಿ ಸಂಗ್ರಹಿಸುವ ಜಾಗ ಮಾಡುವ ಆಲೋಚನೆಯೂ ಇದೆ. ಆಯಸ್ಕಾಂತ ಚಾಲಿತ ವಾಹನ ನಿರ್ಮಿಸುವ ಆಸೆ ಹೊಂದಿರುವ ನಾತುಭಾಯಿ ಸದ್ಯದಲ್ಲಿಯೇ ತಮ್ಮ ಆಸೆ ಕೈಗೂಡಿಸುವ ಭರವಸೆ ಹೊಂದಿದ್ದಾರೆ.

ಗುಜರಾತ್ ರಾಜ್ಯದ ಒಣ ಪ್ರದೇಶಗಳಲ್ಲಿ ಹತ್ತಿ ಬೆಳೆ ಪ್ರಮುಖವಾದುದು. ಆದರೆ ಕೆಲವು ವಿಧದ ಹತ್ತಿ ಹೂವು ಸರಿಯಾಗಿ ಅರಳುವುದಿಲ್ಲ. ಆದ ಕಾರಣ ಹತ್ತಿಯಿಂದ ಹೂವನ್ನು ಬಿಡಿಸುವುದು ಹಾಗು ಬೀಜವನ್ನು ಬೇರ್ಪಡಿಸುವುದು ಶ್ರಮದಾಯಕವಾಗುತ್ತದೆ. ಈ ಸಮಸ್ಯೆಯನ್ನು ಪರಿಹಾರ ಮಾಡಲು, ನಾತುಭಾಯ್ ಎಂಬ ನಲವತ್ತು ವರ್ಷದ ರೈತರೊಬ್ಬರು ಎರವಾಡ (ಸುರೇಂದ್ರನಗರ್ ಜಿಲ್ಲೆ, ಗುಜರಾತ್) ಗ್ರಾಮದಲ್ಲಿ ಟ್ರಾಕ್ಟರ್ ಚಾಲಿತ ಹತ್ತಿ ಬಿಡಿಸುವ ಯಂತ್ರವನ್ನು ಅಭಿವೃದ್ಧಿಪಡಿಸಿದರು.

ಹದಿಹರೆಯದಲ್ಲಿಯೇ ನಾತುಭಾಯ್ ಅವರ ವಿವಾಹ ಪುಷ್ಪಬೆಹೆನ್ ಅವರೊಂದಿಗಾಯಿತು. ಇದಾದ ಒಂದು ವರ್ಷದ ನಂತರ ನಾತುಭಾಯ್ ಅವರನ್ನು ಮೆಹ್ಸಾನ ಜಿಲ್ಲೆಯ ಕಡಿಯಲ್ಲಿರುವ ವಸತಿ ಶಾಲೆಗೆ ಕಳುಹಿಸಲಾಯಿತು.

ಈ ಮಧ್ಯೆ ನಾತುಭಾಯ್ ಅವರ ಒಬ್ಬ ಅಣ್ಣ ವ್ಯಾಪಾರಕ್ಕಾಗಿ ಅಹಮದಾಬಾದ್ ತೆರಳಿದರು. ಎರಡನೇ ಅಣ್ಣ ದಸಾದದಲ್ಲಿ ಶಿಕ್ಷಕರಾಗಿ ನೌಕರಿ ಮಾಡಲಾರಂಭಿಸಿದರು. ಅವರ ತಂದೆಗೆ ಕೃಷಿ ಕೆಲಸಗಳಲ್ಲಿ ಸಹಾಯ ಮಾಡಲು ನಾತುಭಾಯ್ ತಮ್ಮ ಶಿಕ್ಷಣವನ್ನು ಅರ್ಧಕ್ಕೇ ಮೊಟಕುಗೊಳಿಸಿ ಮನೆಗೆ ಬರಬೇಕಾಯಿತು. ಶಿಕ್ಷಣ ಬರೀ ಕೆಲಸ ಗಿಟ್ಟಿಸುವುದಕ್ಕಿರುವುದಲ್ಲ. ಉತ್ತಮ ಮೌಲ್ಯಗಳನ್ನು ಮನುಷ್ಯನಲ್ಲಿ ಬೆಳೆಸುವಂತೆ ಮಾಡುವುದೇ ನಿಜವಾದ ಶಿಕ್ಷಣ ಎಂದು ಅವರ ತಂದೆ ರಾತುಭಾಯ್ ಹೇಳುತ್ತಿದ್ದರು. ಇದನ್ನೇ ನಾತುಭಾಯ್ ಸಹ ನಂಬಿದ್ದರು.

## ಪ್ರೇರಣೆ

ಗುಜರಾತ್ ರಾಜ್ಯದ ಸುರೇಂದ್ರನಗರ್, ಅಹಮದಾಬಾದ್ ಹಾಗೂ ರಾಧನಗರ್ ಜಿಲ್ಲೆಗಳಲ್ಲಿ ಹತ್ತಿಯು ಪ್ರಮುಖ ಬೆಳೆ. ಇಲ್ಲಿನ ಪ್ರದೇಶಗಳಲ್ಲಿ ನೀರು ಕಡಿಮೆಯಾದ್ದರಿಂದ ಒಂದು ಸ್ಥಳೀಯ ತಳಿಯಾದ ಕಲ್ಯಾಣ್-V-797 ಅಥವಾ ಶಂಕರ್ ಎಂಬ ಹತ್ತಿಯನ್ನು ಹೆಚ್ಚು ಬೆಳೆಯಲಾಗುತ್ತದೆ. ನಾತುಭಾಯ್ ಅವರ ಹಳ್ಳಿ ಏರ್ವಾಡದಲ್ಲಿ ಸಹ ಇದೇ ಹತ್ತಿಯನ್ನು ಬೆಳೆಯುತ್ತಾರೆ. ಇದು ಮಳೆ ಆಧಾರಿತ ಬೆಳೆ ಹಾಗೂ ಇಳುವರಿ ನೀಡಲು ಹತ್ತು ತಿಂಗಳು ತೆಗೆದುಕೊಳ್ಳುತ್ತದೆ. ಮಳೆಗಾಲದಲ್ಲಿ ಬಿತ್ತನೆ ಮಾಡಿದರೆ ಮಾರ್ಚ್– ಏಪ್ರಿಲ್ ತಿಂಗಳಲ್ಲಿ ಕೊಯ್ಲಿಗೆ ಬರುತ್ತದೆ. ಹತ್ತಿಯಿಂದ ಬೀಜವನ್ನು ಬೇರ್ಪಡಿಸಲು ಕೂಲಿ ಕೆಲಸದವರು ಶ್ರಮವಹಿಸಿ ಕೆಲಸ ಮಾಡಬೇಕಾಗುತ್ತದೆ. ಹಳ್ಳಿಗಳಲ್ಲಿ ಕೂಲಿ ಕೆಲಸದವರು ಸಿಗುವುದು ಬಹಳ ಕಷ್ಟ. ಸಿಕ್ಕರೂ ಸಿಕ್ಕಾಪಟ್ಟೆ ಕೂಲಿ ಕೇಳುತ್ತಾರೆ. ಸಮಯಕ್ಕೆ ಸರಿಯಾಗಿ ಹತ್ತಿ ಹೂವು ಬಿಡಿಸದಿದ್ದರೆ, ಬೆಳೆ ವ್ಯರ್ಥವಾಗುತ್ತದೆ. ಇದರಿಂದ ಚಿಕ್ಕ ಪುಟ್ಟ ರೈತರಿಗೆ ಹೆಚ್ಚಿನ ಕೂಲಿ ಕೊಟ್ಟು ಕೆಲಸಗಾರರನ್ನು ಕರೆತರುವುದು ಕಠಿಣವಾಗುತ್ತದೆ. ಇದು ವರ್ಷಕ್ಕೆ ಸಿಗುವ ಒಂದೇ ಆದಾಯವಾದ್ದರಿಂದ ಹೇಗಾದರೂ ಮಾಡಿ ಹತ್ತಿ ಬಿಡಿಸುವುದು ಇಲ್ಲಿನ ರೈತರಿಗೆ ಅನಿವಾರ್ಯ. ಚೇತಕ್ ಎಂಬ ಸ್ವಯಂಚಾಲಿತ ಹತ್ತಿ ಬಿಡಿಸುವ ಯಂತ್ರವನ್ನು ಮನ್ಸುಖ್ ಪಟೇಲ್ ಕಂಡುಹಿಡಿದ ವಿಷಯ ತಿಳಿದು ನಾತುಭಾಯಿ ಅವರು ಬಹಳ ಉತ್ತೇಜಿತರಾದರು. ನಾತುಭಾಯಿ ಅವರು ಯಂತ್ರದ ತಯಾರಿಕೆಯಲ್ಲಿ 10–12

ಸಂಶೋಧಕರು.

ಲಕ್ಷ ಹೂಡಿ, ಯಂತ್ರ ಸರಿಯಾಗಿ ಕೆಲಸ ಮಾಡದೆ, ಹಣವನ್ನು ಕಳೆದುಕೊಂಡಾಗ ಅವರ ಹೆಂಡತಿ ಬಹಳ ಕಂಗಾಲಾದರು.

ಮನೆಗೆ ಬೇಕಾದ ಸಾಮಾನು ತರಲು ಕಿರಾಣಿ ಅಂಗಡಿಗೆ ಹೋಗುವುದಾಗಿ ಹೇಳಿ, ಮನೆಗೆ ಸಾಮಾನು ತರದೇ ಯಂತ್ರದ ತಯಾರಿಕೆಯಲ್ಲಿ ಸಹಾಯವಾಗುವ ಯಾವುದೋ ಬಿಡಿಭಾಗಗಳನ್ನು ತಂದುಬಿಡುತ್ತಿದ್ದರು.

ಮನೆಯವರ ವಿರೋಧಕ್ಕೆ ಮಣಿದ ನಾತುಭಾಯಿ ಮೂರು ವರ್ಷಗಳ ಕಾಲ ಯಂತ್ರದ ತಯಾರಿಸುವುದನ್ನು ನಿಲ್ಲಿಸಿಬಿಟ್ಟಿದ್ದರು. 2004ರಲ್ಲಿ, ಸೃಷ್ಟಿ ಸಂಸ್ಥೆಯು ಈ ಸಂಶೋಧನೆಗೆ ಧನಸಹಾಯ ಮಾಡುಲು ನಿರ್ಧರಿಸಿತು. ಇದರಿಂದ ಹೊಸ ಹುಮ್ಮಸ್ಸಿನೊಂದಿಗೆ ತಮ್ಮ ಕೆಲಸವನ್ನು ನಾತುಭಾಯಿ ಮುಂದುವರಿಸಿದರು. ನಂತರದಲ್ಲಿ NIF/GIAN ಸಹ ತನ್ನ ಅನುದಾನವನ್ನು 1,50,000ಕ್ಕೆ ಹೆಚ್ಚಿಸಿದ್ದರಿಂದ ಯಂತ್ರವನ್ನು ಸುಧಾರಿಸಲಾಯಿತು.

### ಹತ್ತಿ ಬಿಡಿಸುವ ಯಂತ್ರ

ಯಂತ್ರವು ಎಲ್ಲಾ ರೀತಿಯ ಹತ್ತಿ ತಳಿಗಳಿಗೆ ಹೊಂದಿಕೊಳ್ಳುವಂತೆ ನಿರ್ಮಿತವಾಗಿತ್ತು ಹಾಗೂ ರೈತರ ಕೈಗೆಟಕುವ ಬೆಲೆ ಹೊಂದಿತ್ತು.ಟ್ರಾಕ್ಟರ್ ನ ಮೇಲೆ ಅವಳಡಿಸಲಾದ ಈ ಯಂತ್ರದ ಎತ್ತರವನ್ನು ಅನುಕೂಲತೆಗೆ ತಕ್ಕಂತೆ ಹೊಂದಿಸಿಕೊಳ್ಳಬಹುದು. ಯಂತ್ರವನ್ನು ಟ್ರಾಕ್ಟರ್ ಸಹಾಯದಿಂದ ಹೊಲಕ್ಕೆ ಸುಲಭವಾಗಿ ಕೊಂಡೊಯ್ಯಬಹುದು. ಯಂತ್ರದಲ್ಲಿರುವ ನಾಲ್ಕು ಮುಖ್ಯ ಭಾಗಗಳೆಂದರೆ ಕಂಪಕ, ಕನ್ವೆಯೇರ್ ಟ್ರೇ, ಸಕ್ಶನ್ ಪಂಪ್ ಹಾಗೂ ಸಂಗ್ರಹಿಸುವ ಕ್ಯಾಬಿನ್. ಟ್ರಾಕ್ಟರ್ ಹತ್ತಿ ಗಿಡಗಳ ಮೇಲೆ ನಡೆದಂತೆ, ಕಂಪಕವು ಕಂಪನ ಉಂಟುಮಾಡುತ್ತದೆ. ಇದರಿಂದ ಹತ್ತಿ ಹೂವು ಗಿಡದಿಂದ ಬೇರ್ಪಟ್ಟು ಕನ್ವೆಯೇರ್ ಟ್ರೇ ಮೇಲೆ ಬೀಳುತ್ತದೆ.

ನಂತರ ಸಕ್ಶನ್ ಪಂಪ್ ಬಿದ್ದ ಹತ್ತಿ ಹೂವನ್ನು ಸಂಗ್ರಹಿಸುವ ಭಾಗಕ್ಕೆ ಕಳುಹಿಸುತ್ತದೆ. ಚಕ್ರದ ಮೇಲೆ ಅಳವಡಿಸಿರುವ ಶಾಫ್ಟ್ ನ ಸಹಾಯದಿಂದ ಹತ್ತಿ ಹೂವನ್ನು ಬಿಡಿಸಲಾಗುತ್ತದೆ. ಯಂತ್ರದ ಕಾರ್ಯ ನಿರ್ವಹಣೆ ಸಮಾಧಾನಕರವಾಗಿದೆ. ಯಂತ್ರವು ಡಿಸೇಲ್ ಸಹಾಯದಿಂದ ಚಲಿಸಬಲ್ಲದು. ಟ್ರಾಕ್ಟರ್ನಿಂದಲೇ ಶಕ್ತಿ ಪಡೆಯುವ ಯಂತ್ರವು 5 ಅಶ್ವ ಶಕ್ತಿಯನ್ನು ಅಧಿಕವಾಗಿ ಪಡೆಯುತ್ತದೆ ಅಷ್ಟೇ. ಕೃಷಿ ಮತ್ತು ಆಹಾರ ಇಲಾಖೆ ಮತ್ತು ಐಐಟಿ ಖರಗ್ಪುರ್ ಸಹ ಯಂತ್ರದ ಕಾರ್ಯವನ್ನು ಪರೀಕ್ಷಿಸಿವೆ ಹಾಗೂ ಯಂತ್ರವನ್ನು ಇನ್ನು ಉತ್ತಮಗೊಳಿಸುವ ಕಾರ್ಯ ಜಾರಿಯಲ್ಲಿದೆ.

ಮಾರುಕಟ್ಟೆಯಲ್ಲಿ ಲಭ್ಯವಿರುವ ಬೇರೆ ಹತ್ತಿ ಬಿಡಿಸುವ ಯಂತ್ರಗಳಿಗಿಂತ ನಾತುಭಾಯಿಯವರ ಯಂತ್ರವು ಭಿನ್ನ ಹಾಗು ಸ್ಥಳೀಯ ಸ್ಥಿತಿಗತಿಗಳಿಗೆ ಹೊಂದಿಕೊಳ್ಳುವಂತಿದೆ. ನಿಫ್ ಮುಖಾಂತರ ನಾತುಭಾಯಿಯವರ ಹೆಸರಲ್ಲಿ ಬೌದ್ಧಿಕ ಆಸ್ತಿ ಹಕ್ಕು ಸಲ್ಲಿಸಲಾಗಿದೆ. ಸದ್ಯ ಯಂತ್ರದ ಮಾದರಿಯು ಕಡಿಮೆ ಬೆಲೆಯದ್ದಗಿದ್ದು, 3 ಬೀಘ ಹೊಲದಿಂದ ಸುಮಾರು 600ಕೇಜಿ ಹತ್ತಿಯನ್ನು ಒಂದು ಗಂಟೆಯಲ್ಲಿ, ಕೇವಲ ಒಂದು ಲೀಟರ್ ಡಿಸೇಲ್ ಉಪಯೋಗಿಸಿ ಬಿಡಿಸಬಹುದಾಗಿದೆ.

ಕೂಲಿಗಳು ಕೈಯಲ್ಲಿ ಮಾಡಿಸಿದರೆ 100ಕೇಜಿ ಹತ್ತಿಯನ್ನು 20 ಕೇಜಿಗೆ 30–40 ರೂಪಾಯಿಯಂತೆ ಬಿಡಿಸಬೇಕಾಗುತ್ತದೆ. ಆದ್ದರಿಂದ ಯಂತ್ರವು ಹಣ ಹಾಗೂ ಸಮಯ ಎರಡನ್ನೂ ಉಳಿಸುತ್ತದೆ. ಯಂತ್ರದ ಅಳವಡಿಕೆಗೆ ಸುಮಾರು 60000 70000 ರೂಪಾಯಿ ಖರ್ಚಾಗುತ್ತದೆ. ರೈತರು ಯಂತ್ರವನ್ನು ಬಾಡಿಗೆಗೆ ಸಹ ಪಡೆಯಬಹುದು. ಇನ್ನೂ ಕೊಂಚ ಮಾರ್ಪಡಿಸಿದರೆ ಬಿಟಿ ಹತ್ತಿಯನ್ನು ಸಹ ಬಿಡಿಸಬಹುದು ಎನ್ನುತ್ತಾರೆ ನಾತುಭಾಯಿ.

### ಬೆಂಬಲ ಮತ್ತು ಅಂಗೀಕಾರ.

ನಾತುಭಾಯಿ ಅವರ ಹತ್ತಿ ಬಿಡಿಸುವ ಯಂತ್ರ ಮಾಧ್ಯಮ, ಸರ್ಕಾರ ಹಾಗೂ ಜನರ ಮನ್ನಣೆ ಪಡೆಯಿತು. ಉತ್ತರ ಗುಜರಾತ್ ನರೋದ ರಜಪೂತ ಸಮಾಜವು 2005ರಲ್ಲಿ ಇವರ ಸಾಧನೆಯನ್ನು ಗುರುತಿಸಿ ಸನ್ಮಾನಿಸಿತು. 2006 ರಲ್ಲಿ ಸರ್ದಾರ್ ಪಟೇಲ್ ಕೃಷಿ ಪ್ರಶಸ್ತಿ ಹಾಗೂ 2007ರಲ್ಲಿ ಶೀಷ್ಟಿ ಸಮ್ಮಾನ್ ದೊರಕಿದವು. ಬೈಸಖ್ ಸುತ್ ತೀಜ್ ಕೃಷಿ ಸಮ್ಮೇಳನದಲ್ಲಿ ಭಾಗವಹಿಸಿದರು.

ಗುಜರಾತ್ ಮುಖ್ಯ ಮಂತ್ರಿಗಳ ಕಚೇರಿಯ ದಿಲೀಪ್ ಸಂಘಾನಿ ಹಾಗು ಇನ್ನು ಕೆಲವು ವಿಜ್ಞಾನಿಗಳನ್ನು ಭೇಟಿ ಮಾಡಿದರು. ಇವರಿಂದ ರಾಜ್ಯ ಸರ್ಕಾರದ ಸಬ್ಸಿಡಿಯ ಆಶ್ವಾಸನೆ ದೊರೆಯಿತು. ನಂತರ ನಾತುಭಾಯಿ ಅವರಿಗೆ 2012ರಲ್ಲಿ ನ್ಯಾಷನಲ್ ಇನ್ನೋವೇಶನ್ ಫೌಂಡೇಶನ್ ನ ಗುಜರಾತ್ ರಾಜ್ಯ ಪ್ರಶಸ್ತಿಯು ಲಭಿಸಿತು. ಸೃಷ್ಟಿ ಹಾಗೂ NIF/GIAN ನ ಸಹಕಾರ ದೊರೆತ ನಂತರ ನಾತುಭಾಯಿ ಯಂತ್ರವನ್ನು ದ್ವಿಮುಖ ಜಲಚಾಲಿತ ಗೇರ್ ಅಳವಡಿಸುವ ಮೂಲಕ ಅಭಿವೃದ್ಧಿಪಡಿಸಿದರು.

ನಾತುಭಾಯಿ ಅವರ ಸಮುದಾಯ ಅವರನ್ನು ಬಹಳ ಹೆಮ್ಮೆಯಿಂದ ಸನ್ಮಾನಿಸಿತು ಹಾಗು ಧನಸಹಾಯ ನೀಡಲು ಸಹ ಮುಂದೆ ಬಂದಿತು. ಆದರೆ ಸ್ವಾಭಿಮಾನಿಯಾದ ನಾತುಭಾಯಿ ಅದನ್ನು ನಿರಾಕರಿಸಿದರು. ಯಂತ್ರದ ಬೆಲೆ ಸ್ವಲ್ಪ ಹೆಚ್ಚಿದ್ದರೂ ಸಹ ಮುಂದೆ ಹೆಚ್ಚು ಲಾಭ ತಂದುಕೊಡುವ ಈ ಯಂತ್ರವನ್ನು ಖರೀದಿಸುವುದಾಗಿ ಜನರು ಮಾತು ಕೊಟ್ಟರು. ಮಾದೇಭಾಯಿ ಯಾದವ್ ಅವರು ಹೇಳುತ್ತಾರೆ "ಯಂತ್ರದ ತಯಾರಿಕೆ ಅಷ್ಟು ಸುಲಭದ ಕೆಲಸವಲ್ಲ. ನಮ್ಮ ಇಡೀ ಹಳ್ಳಿಯಲ್ಲಿ ನಾತುಭಾಯಿ ಅವರನ್ನು ಬಿಟ್ಟರೆ ಬೇರೆ ಯಾರಿಗೂ ಅಂತಹ ಜಾಣತನವಿಲ್ಲ." ಇನ್ನೊಬ್ಬ ಹಳ್ಳಿಯ ಹಿರಿಯರ ಪ್ರಕಾರ ಯಂತ್ರಕ್ಕೆ ಬಹಳ ಬೇಡಿಕೆಯಿದೆ.

ಇದೆಲ್ಲದರ ಜೊತೆ ನಾತುಭಾಯಿ "ವರ್ಚುಯಲ್ ಮಷಿನ್" ಎಂಬ ತಮ್ಮ ಹೊಸ ಸಂಶೋಧನೆಗೆ ಸಿದ್ಧರಾಗುತ್ತಿದ್ದಾರೆ. ಪ್ರಕಾಶ್ ದೊಧಿಯ ಅವರು ಫೆರ್ಗುಸ್ಸೋನ್ ಟ್ರಾಕ್ಟರ್ ವಿತರಕರು. ಇವರು ಹೇಳುವಂತೆ ಜನರು 1.5 ಲಕ್ಷಕ್ಕೂ ಹೆಚ್ಚು ಹಣ ಕೊಟ್ಟು ಯಂತ್ರವನ್ನು ಖರೀದಿಸಲು ತಯಾರಿದ್ದಾರೆ. ಇದರಿಂದ ಮುಂದೆ ಕೂಲಿ ಕೊಡುವುದು ಉಳಿಯುವುದರಿಂದ ಒಳ್ಳೆಯ ಲಾಭವೇ ಆಗುತ್ತದೆ.

### ಮುಂದಿನ ದಾರಿ

ನಾತುಭಾಯಿ ಅವರಿಗೆ ಯಂತ್ರ ಉತ್ಪಾದನಾ ಘಟಕವನ್ನು ಅವರ ಹಳ್ಳಿಯಲ್ಲಿಯೇ ತೆರೆಯುವ ಯೋಜನೆ ಇದೆ. ಯಂತ್ರದೊಳಗೆ ಹತ್ತಿ ಸಂಗ್ರಹಿಸುವ ಜಾಗ ಮಾಡುವ ಆಲೋಚನೆಯೂ ಇದೆ. ಆಯಸ್ಕಾಂತ ಚಾಲಿತ ವಾಹನ ನಿರ್ಮಿಸುವ ಆಸೆ ಹೊಂದಿರುವ ನಾತುಭಾಯಿ ಸದ್ಯದಲ್ಲಿಯೇ ತಮ್ಮ ಆಸೆ ಕೈಗೂಡಿಸುವ ಭರವಸೆ ಹೊಂದಿದ್ದಾರೆ. ❑

ಉತ್ತಮ ಹವ್ಯಾಸ

# ಹಾಜಿಯ : ಒಂದು ರಾಜಕೀಯ ಸ್ಫೂರ್ತಿ

**ಅಜ್ರಾ ಖಾತೂನ್**
ಕನ್ನಡಕ್ಕೆ : ಪ್ರೇಮಕುಮಾರಿ



**ಈಗಾಗಲೇ ಕಾರ್ಗಿಲ್ ಯುವತಿಯರ ಸ್ಫೂರ್ತಿಯಾಗಿರುವ ಹಾಜಿಯ, ಪರಿವಾರದಲ್ಲಿ ಮಹಿಳೆಯ ಪಾತ್ರ ಏನೂ ಇಲ್ಲ ಎನ್ನುವ ಜನರ ಭಾವನೆಗಳನ್ನು ಅಳಿಸಿಹಾಕಿದ್ದಾರೆ. ಅವರು ಮಹಿಳೆ ಎಲ್ಲಾ ಕ್ಷೇತ್ರದಲ್ಲೂ ಪುರುಷನ ಸರಿ ಸಮಾನವಾಗಿ ನಿಲ್ಲಬಲ್ಲಳು ಹಾಗು ಪುರುಷನಿಗಿಂತ ನಿಪುಣತೆಯಿಂದ ಕಾರ್ಯ ನಿರ್ವಹಿಸಬಲ್ಲಳು ಎಂಬುದನ್ನು ತೋರಿಸಿಕೊಟ್ಟಿದ್ದಾರೆ.**

ಭಾರತದ ಉತ್ತರದ ತುತ್ತತುದಿಯ ರಾಜ್ಯ ಜಮ್ಮು ಕಾಶ್ಮೀರದ ಬೇಸಿಗೆಯ ರಾಜಧಾನಿ ಶ್ರೀನಗರದಿಂದ 213 ಕಿಲೋಮೀಟರ್ ದೂರದಲ್ಲಿರುವ ಕಾರ್ಗಿಲ್ ಒಂದು ಹಿಮಾವೃತ ಭೂಮಿ. ಲೋಕಸಭಾ ಚುನಾವಣೆಯವರೆಗೂ ಮಾಧ್ಯಮಗಳ ಕಣ್ಣಿನಿಂದ ಮರೆಯಾಗಿದ್ದ ಕಾರ್ಗಿಲ್ ಇದ್ದಕ್ಕಿದ್ದಂತೆ ಸುದ್ದಿಯಾಗಿ, ಸಹಜವಾಗಿ ಚುನಾವಣೆಯ ನಂತರ ನಿರೀಕ್ಷೆಯಂತೆ ಮರೆಯಾಗಬಹುದಾಗಿತ್ತು.

ಈ ಒಳನಾಡಿನಲ್ಲಿ, ರಾಜಕೀಯ ಹಾಗೂ ಪಿತೃಪ್ರಭುತ್ವ ಸಮಾಜವು ಜೊತೆಗೂಡಿ ಮಹಿಳೆಯರ ಸಮಾನ ಹಕ್ಕುಗಳ ವಿರುದ್ಧ ಅವ್ಯಾಹತವಾದ ಪಕ್ಷಪಾತ ನಡೆಸಿವೆ.

ಈ ಎಲ್ಲಾ ಕಟ್ಟಳೆಗಳನ್ನು ಧಿಕ್ಕರಿಸಿದ ಐವತ್ತೊಂದು ವರ್ಷದ ಹಾಜಿಯ ಮರ್ಜಿಯ, ಆಡಳಿತ ವರ್ಗಕ್ಕೆ ಸವಾಲೆಸೆಯುವಲ್ಲಿ ಶ್ರಮಿಸಿದ ಮಹಿಳಾ ಪ್ರವರ್ತಕರಲ್ಲಿ ಒಬ್ಬರು. ಕಾರ್ಗಿಲ್ ನಿಂದ ಇಪ್ಪತ್ತೈದು ಕಿಲೋಮೀಟರ್ ದೂರದಲ್ಲಿರುವ ತಾಂಡಾ ತುಮೈಲ್ ಗೃಹಕ್ಷೇತ್ರದಿಂದ ರಾಜಕೀಯ ಪ್ರಪಂಚಕ್ಕೆ ಹೆಜ್ಜೆ ಇರಿಸುವ ಸಾಹಸ ಮಾಡಿದರು.

1999ರ ಕಾರ್ಗಿಲ್ ಯುದ್ಧದ ನಂತರ ಹೆಸರಾದ ಈ ಪ್ರದೇಶದಲ್ಲಿ, ಇತ್ತೀಚಿಗೆ ಪಂಚಾಯತ್ ಚುನಾವಣೆಗಳಲ್ಲಿ ಮಹಿಳೆಯರಿಗೆ ಕಡ್ಡಾಯವಾಗಿ ಮೀಸಲಾತಿ ನೀಡುವವರೆಗೂ, ಮಹಿಳೆಯರು ಪಂಚಾಯಿತಿಗಳಂತಹ ರಾಜಕೀಯ ಕ್ಷೇತ್ರಗಳಲ್ಲಿ ಮತ್ತು ಇತರೆ ಸ್ಥಳೀಯ ರಾಜಕೀಯ ಸಂಸ್ಥೆಗಳಲ್ಲಿ ಕಾಣಿಸಿಕೊಳ್ಳುತ್ತಿದ್ದು ಬಲು ಅಪರೂಪವಾಗಿತ್ತು. ಮೀಸಲಾತಿಯನ್ನು ಉತ್ತಮ ಅವಕಾಶವೆಂದು ಪರಿಗಣಿಸಿದ ಹಾಜಿಯ, 2002ರಲ್ಲಿ ತುಮೈಲ್ ತಾಂಡಾದಿಂದ ಪಂಚಾಯತ್ ಚುನಾವಣೆಗೆ ನಾಮಪತ್ರ ಸಲ್ಲಿಸಿದರು. ಆದರೆ ಇಂತಹ ಪ್ರಯತ್ನಗಳಿಗೆ ಬೆಂಬಲ ನೀಡದ ಸಮಾಜ ಹಾಗೂ ಕಠಿಣ ಮೌಖಿಕ ಆರೋಪಗಳ ಕಾರಣದಿಂದ ಅವರು ಚುನಾವಣೆಯಿಂದ ಹಿಂದೆ ಸರಿಯಬೇಕಾಯಿತು.

2003ರಲ್ಲಿ ಲಡಾಖ್‌ನ ಸ್ವಾಯತ್ತ ಗುಡ್ಡಗಾಡು ಅಭಿವೃದ್ಧಿ ಮಂಡಳಿ ಚುನಾವಣೆಗಳು ಕಾರ್ಗಿಲ್‌ನಲ್ಲಿ ನಡೆದಾಗ ಅವರ ಆಸೆಗಳಿಗೆ ಹೊಸ ಜೀವ ಬಂದಿತು. ಹಿಲ್ ಕೌನ್ಸಿಲ್ ಎಂದು ಸಾಮಾನ್ಯವಾಗಿ ಕರೆಯಲ್ಪಡುವ ಈ ಮಂಡಳಿಯು ಮೂವತ್ತು ಸದಸ್ಯರ ಗುಂಪಾಗಿದೆ.

ಇಪ್ಪತ್ತಾರು ಸದಸ್ಯರು ಆಯಾ ಕ್ಷೇತ್ರಗಳಿಂದ ಚುನಾಯಿತರಾಗುತ್ತಾರೆ. ಉಳಿದ ನಾಲ್ವರು ಸದಸ್ಯರನ್ನು ಪ್ರಮುಖ ಅಲ್ಪಸಂಖ್ಯಾತರು ಹಾಗೂ ಮಹಿಳೆಯರ ವಿಭಾಗಗಳಿಂದ ನಾಮನಿರ್ದೇಶನ ಮಾಡಲಾಗುತ್ತದೆ.

ಜಿಲ್ಲಾಡಳಿತದ ಅಭಿವೃದ್ಧಿ ಕಾರ್ಯಗಳ ಪಾರದರ್ಶಕತೆ ಹಾಗೂ ಹೊಣೆಗಾರಿಕೆಯ ಬಗ್ಗೆ ಪ್ರಾಮಾಣಿಕ ಕಣ್ಗಾವಲು ಇರಿಸುವುದೇ ಹಿಲ್ ಕೌನ್ಸಿಲ್ ನ ಧ್ಯೇಯವಾಗಿದೆ. ಕಾರ್ಯ ಯೋಜನೆಗಳನ್ನು ಮಾಡುವಾಗ ತಳಮಟ್ಟದಿಂದ ಸದಸ್ಯರು,

ಹವ್ಯಾಸಿ ಲೇಖಕರು.

ಪಂಚರು ಮತ್ತು ಸರಪಂಚರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮಾಡಲಾಗುತ್ತದೆ. ನಂತರ ಕೇಂದ್ರ ಕಾರ್ಯಾಲಯದಲ್ಲಿ ಮುಖ್ಯ ಕಾರ್ಯ ನಿರ್ವಾಹಣಾ ಅಧಿಕಾರಿ ಹಾಗೂ ಕಾರ್ಯಕಾರಿ ಸದಸ್ಯರ ಉಪಸ್ಥಿತಿಯಲ್ಲಿ ಪುನರ್ ವಿಮರ್ಶೆ ಮಾಡಲಾಗುವುದು. 1995ರಲ್ಲಿ ಡಾರ್ಜಲಿಂಗ್ ಹಿಲ್ ಡೆವೆಲಪ್ಮೆಂಟ್ ಕೌನ್ಸಿಲ್ ಮಾದರಿಯಲ್ಲಿ ಹಿಲ್ ಕೌನ್ಸಿಲ್ ಅನ್ನು ಮೊದಲು ಲೇಹ್ ಜಿಲ್ಲೆಯಲ್ಲಿ ಅಳವಡಿಸಲಾಯಿತು.

ನಂತರ 2003ರಲ್ಲಿ ಕಾರ್ಗಿಲ್ ಜಿಲ್ಲೆಯನ್ನು ಗಡಿ ಭಾಗದ ಅಭಿವೃದ್ಧಿಗಾಗಿ ಲಡಾಖ್ ಆಟೋನಮಸ್ ಹಿಲ್ ಡೆವೆಲಪ್ಮೆಂಟ್ ಕೌನ್ಸಿಲ್ ಕ್ಷೇತ್ರದ ವ್ಯಾಪ್ತಿಗೆ ತರಲಾಯಿತು. ಈ ಹೊಸದಾಗಿ ರೂಪುಗೊಂಡ ಸಮಿತಿಗೆ ಸದಸ್ಯರಾಗುವ ಅವಕಾಶ ತಮ್ಮನ್ನು ಹುಡುಕಿಕೊಂಡು ಬಂದಾಗ ಹಾಜಿಯ ಅವರಿಗೆ ತಮ್ಮನ್ನು ತಾವು ತಡೆಯಲಾಗಲಿಲ್ಲ. ಏಕೆಂದರೆ ಸಮಾಜದಲ್ಲಿ ಪರಿವರ್ತನೆ ತರಲು ಇದೊಂದು ಉತ್ತಮ ಅವಕಾಶವೆಂದು ಅವರಿಗೆ ಸ್ಪಷ್ಟವಾಗಿ ತಿಳಿದಿತ್ತು.

"ಒಬ್ಬ ವ್ಯಕ್ತಿಗೆ ರಾಜಕೀಯ ಅಧಿಕಾರವಿದ್ದಾಗ ಮಾತ್ರ, ಬದುಕಲು ಉತ್ತಮ ಸಮಾಜ ನಿರ್ಮಾಣ ಮಾಡುವ ಆ ವ್ಯಕ್ತಿಯ ಸಾಮರ್ಥ್ಯವನ್ನು ಯಾರೂ ಪ್ರಶ್ನಿಸಲಾರರು," ಎಂದು ನಂಬಿರುವ ಹಾಜಿಯ ಅವರು ತಮ್ಮನ್ನು ನಿರಂತರವಾಗಿ ವಿನಾಕಾರಣ ಟೀಕಿಸುವವರ ವಿರುದ್ಧ ಹೋರಾಡುವುದನ್ನು ಮುಂದುವರಿಸಿದ್ದಾರೆ.

ಎರಡು ಹಿನ್ನಡೆಗಳು ಹಾಜಿಯ ಅವರ ಹೋರಾಟವನ್ನು ತಡೆಯಲಾಗಲಿಲ್ಲ. ಅನೇಕ ವರ್ಷಗಳನ್ನು ಇರಾನ್ ನಲ್ಲಿ ಕಳೆದು, ಭಾರತಕ್ಕೆ ಮರಳಿ ಬಂದ ಹಾಜಿಯಾರನ್ನು ತನ್ನ ಹಳ್ಳಿಯಲ್ಲಿ ಶಿಥಿಲವಾದ ಸ್ಥಿತಿಯಲ್ಲಿದ್ದ ಏಕೈಕ ಪ್ರಾಥಮಿಕ ಶಾಲೆ ವ್ಯಥೆಗೀಡುಮಾಡಿತ್ತು. ಸಮಾಜದ ಅಭಿವೃದ್ಧಿಗಾಗಿ ತಮ್ಮ ಅಲ್ಪ ಕಾಣಿಕೆಯಾಗಿ ಅವರ ಮನೆಯ ನೆಲ ಅಂತಸ್ಥನ್ನೇ ಪ್ರಾಥಮಿಕ ಶಾಲೆಯನ್ನಾಗಿ ಪರಿವರ್ತಿಸಿದ್ದರು. ಹಾಗೂ ಅಲ್ಲಿ ಸುಮಾರು ಹದಿನೇಳು ವರ್ಷಗಳ ಕಾಲ ಬೋಧನೆಯನ್ನೂ ಮಾಡಿದ್ದರು.

ಇದಷ್ಟೇ ಅಲ್ಲ. ಅವರ ಸಮುದಾಯವನ್ನೂ ಸಹ ಈ ಪ್ರಯತ್ನದಲ್ಲಿ ಭಾಗಿಯಾಗುವಂತೆ ಮಾಡಲು, ಹಳ್ಳಿಗರನ್ನು ಸಮುದಾಯದ ಯಾವುದಾದರೂ ಚಿಕ್ಕ ಭೂಮಿಯನ್ನು ಪ್ರಾಥಮಿಕ ಶಾಲೆ ಕಟ್ಟಲು ದಾನ ಮಾಡುವಂತೆ ಮನವೊಲಿಸಲು ಬಹಳ ಪ್ರಯತ್ನಿಸಿದರು. ಆದರೆ ಅವರ ಈ ಶ್ರಮ ನೀರಿನಲ್ಲಿ ಹೋಮ ಮಾಡಿದಂತಾಯಿತು. ಅವರ ಅಭಿಪ್ರಾಯದಲ್ಲಿ "ಜನರಿಗೆ ತಿಳಿವಳಿಕೆ ಇಲ್ಲದ ಕಾರಣ ಶಾಲೆ ಹಾಗೂ ಶಿಕ್ಷಣದ ಮಹತ್ವವನ್ನು ಅರಿಯುವಲ್ಲಿ ವಿಫಲರಾಗಿದ್ದಾರೆ"

2008 ನವೆಂಬರ್ ತಿಂಗಳಲ್ಲಿ, ಲಡಾಖ್ ಆಟೋನಮಸ್ ಹಿಲ್ ಡೆವಲಪ್ಮೆಂಟ್ ಕೌನ್ಸಿಲ್ ನ ಎರಡನೇ ಸಾರ್ವತ್ರಿಕ ಚುನಾವಣೆಯು ಕಾರ್ಗಿಲ್ ನಲ್ಲಿ ನಡೆದಾಗ, ಅವರ ಪರಿಶ್ರಮಕ್ಕೆ ತಕ್ಕ ಫಲ ದೊರೆಯಿತು. ಇತಿಹಾಸದಲ್ಲೇ ಪ್ರಪ್ರಥಮವಾಗಿ ಎಲ್ಲರ ಹೆಮ್ಮೆಯ ಮಹಿಳಾ ಕೌನ್ಸಿಲ್ ಸದಸ್ಯರಾಗಿ ಆಯ್ಕೆಯಾದರು.

ದೃಢಸಂಕಲ್ಪದಿಂದ ಹೋರಾಟ ನಡೆಸುತ್ತಿರುವ ಹಾಜಿಯ ತಮ್ಮ ದನಿಯಲ್ಲಿ ಶಕ್ತಿ ಹಾಗೂ ಸತ್ವವನ್ನು ತುಂಬಿಕೊಂಡು ಹೇಳುತ್ತಾರೆ – "ಪ್ರತಿಯೊಬ್ಬರಿಗೂ ರಾಜಕೀಯದಲ್ಲಿ ಭಾಗಿಯಾಗುವ ಹಾಗೂ ಕಾನೂನು ಪ್ರಾಧಿಕಾರದ ವಿವೇಚನಾಯುಕ್ತ ಉಪಯೋಗ ಪಡೆಯುವ ಹಕ್ಕಿದೆ. ನಾನು ಎಂದಿಗೂ ಭೌತಿಕವಾದವನ್ನು ನಂಬುವುದಿಲ್ಲ.

ನಾನು ಯಾವಾಗಲೂ ನನ್ನ ಜೀವನವನ್ನು ಸಮಾಜಸೇವೆ ಮತ್ತು ಸಾಮಾಜದಲ್ಲಿ ಪರಿವರ್ತನೆ ತರುವ ಸಿದ್ಧಾಂತಗಳ ಮೇಲೆ ನಡೆಸಿದ್ದೇನೆ" ತಮ್ಮ ಆದರ್ಶಗಳಿಗೆ ಬದ್ಧರಾಗಿಯೇ ನಾಲ್ಕು ವರ್ಷಕ್ಕೂ ಮಿಗಿಲಾಗಿ ಕೌನ್ಸಿಲ್ ಸದಸ್ಯರಾಗಿ ಕಾರ್ಯ ನಿರ್ವಹಿಸಿದ ಹಾಜಿಯ ದೃಢವಾಗಿ ಹೇಳುತ್ತಾರೆ ಯಾರೂ ತಮಗೆ ದೊರೆತ ಸ್ಥಾನವನ್ನು ಲಘುವಾಗಿ ತೆಗೆದುಕೊಳ್ಳಬಾರದು.

"ನನಗೆ ನನ್ನ ಕೆಲಸದ ಬಗ್ಗೆ ಗೌರವವಿದೆ. ಕೇವಲ ಒಬ್ಬ ಅಧಿಕಾರಿಯಾಗಿ ಮಾತ್ರವಲ್ಲ ಒಬ್ಬ ಆತ್ಮಸಾಕ್ಷಿಯುಳ್ಳ ನಾಗರೀಕಳಾಗಿ ಸಹ ನನ್ನ ಕೆಲಸಕ್ಕೆ ನ್ಯಾಯ ಸಲ್ಲಿಸುವುದಕ್ಕೆ ಪ್ರಯತ್ನಿಸುತ್ತೇನೆ." ಇವರ ಅಧಿಕಾರಾವಧಿಯಲ್ಲಿನ ಸಾಧನೆಗೆ ಹಲವಾರು ನೀರಿನ ಕಾಲುವೆಗಳು, ಕಾಂಕ್ರೀಟ್ ಪಾದಾಚಾರಿ ರಸ್ತೆಗಳು, ಅನೇಕ ಶಾಲೆಗಳಲ್ಲಿ ಆರಂಭಗೊಂಡ ಗಣಕಯಂತ್ರ ಪ್ರಯೋಗಶಾಲೆಗಳು, ಮಹಿಳೆಯರಿಗೆ ದೊರೆತ ಉದ್ಯೋಗಾವಕಾಶಗಳು, ಹಲವಾರು ಮಹಿಳಾ ಸ್ವಸಹಾಯ ಸಂಘಗಳಿಗೆ ಸಿಕ್ಕ ಹಣಕಾಸಿನ ನೆರವುಗಳು ಉದಾಹರಣೆಗಳಾಗಿವೆ. "ಪ್ರತಿ ಹೆಣ್ಣು ಮಗಳಿಗೂ ಹೊರಗೆ ಹೋಗಿ ಸಭ್ಯತೆ ಹಾಗೂ ನಮ್ರತೆಯಿಂದ ಕೆಲಸ ಮಾಡಿ ಆದರ್ಶಪ್ರಾಯ ನಾಗರಿಕಳೆನ್ನಿಸಿಕೊಳ್ಳುವ ಹಕ್ಕಿದೆ" ಎಂದು ಮಹಿಳೆಯರನ್ನು ಪ್ರೋತ್ಸಾಹಿಸುತ್ತಾರೆ ಹಾಜಿಯ.

ಹುಸೇನ್ ಎಂಬ ಸ್ಥಳೀಯರೊಬ್ಬರು ಹೇಳುತ್ತಾರೆ "ಅವರು ನಾವು ನೋಡಿರುವ ಅತ್ಯಂತ ಬಲಶಾಲಿ ಮಹಿಳೆ. ಅವರು ತಮ್ಮ ಅಭಿಪ್ರಾಯವನ್ನು ತಿಳಿಸುವಲ್ಲಿ ಎಂದೂ ಹಿಂಜರಿಯುವುದಿಲ್ಲ, ಪ್ರಮುಖವಾಗಿ ಕಚೇರಿಯಲ್ಲಿ ಪುರುಷರ ಸಂಖ್ಯೆ ಹೆಚ್ಚಿದ್ದಾಗ. ಸಮಾಜದ ಸುಧಾರಣೆಗೋಸ್ಕರ ಅವರು ಸದಾ ಪ್ರಯತ್ನಿಸುತ್ತಾರೆ.

ಅವರು ಯಾವಾಗಲೂ ಸರಿಯಾದ ಕಾರಣಕ್ಕಾಗಿ ಹೋರಾಡುತ್ತಾರೆ ಮತ್ತು ಅವರಿಗೆ ಸಮಯಕ್ಕೆ ಸರಿಯಾಗಿ ಕೆಲಸ ಮಾಡಿಸುವ ಸಾಮರ್ಥ್ಯವಿದೆ. ಇದನ್ನರಿತವರು ಅವರನ್ನು ಎದುರಿಸುವ ಧೈರ್ಯ ಮಾಡುವುದಿಲ್ಲ".

ಅವರು ಪ್ರಸ್ತುತ ಯಾವುದೇ ರಾಜಕೀಯ ಸಂಘ ಸಂಸ್ಥೆಯ ಸಕ್ರಿಯ ಸದಸ್ಯರಲ್ಲದಿದ್ದರೂ, ಕಷ್ಟದಲ್ಲಿರುವವರಿಗೆ ಅದರಲ್ಲೂ ಮಹಿಳೆಯರು ಮತ್ತು ಮಕ್ಕಳಿಗೆ ಸ್ವಯಂಪ್ರೇರಣೆಯಿಂದ ತಮ್ಮ ಸಹಾಯ ಹಸ್ತವನ್ನು ಚಾಚುತ್ತಾರೆ. ಬಟ್ಟೆಗಳು ಹಾಗೂ ಉಣ್ಣೆಯ ಕೈಗವಸುಗಳು, ಕಾಲುಚೀಲಗಳು, ಮಫ್ಲರ್ ಗಳನ್ನು ಮಾರುವ ಅವರ ಸಹೋದರಿಯ ವ್ಯಾಪಾರ ವಹಿವಾಟಿನಲ್ಲಿ ನೆರವಾಗುತ್ತಾರೆ.

ಈಗಾಗಲೇ ಕಾರ್ಗಿಲ್ ಯುವತಿಯರ ಸ್ಫೂರ್ತಿಯಾಗಿರುವ ಹಾಜಿಯ, ಪರಿವಾರದಲ್ಲಿ ಮಹಿಳೆಯ ಪಾತ್ರ ಏನೂ ಇಲ್ಲ ಎನ್ನುವ ಜನರ ಭಾವನೆಗಳನ್ನು ಅಳಿಸಿಹಾಕಿದ್ದಾರೆ. ಅವರು ಮಹಿಳೆ ಎಲ್ಲಾ ಕ್ಷೇತ್ರದಲ್ಲೂ ಪುರುಷನ ಸರಿ ಸಮಾನವಾಗಿ ನಿಲ್ಲಬಲ್ಲಳು ಹಾಗು ಪುರುಷನಿಗಿಂತ ನಿಪುಣತೆಯಿಂದ ಕಾರ್ಯ ನಿರ್ವಹಿಸಬಲ್ಲಳು ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಕಾರ್ಗಿಲ್ ಸಮಾಜಕ್ಕೆ ಅವರು ನೀಡಿರುವ ಕೊಡುಗೆ ಮುಂಚೂಣಿಯಲ್ಲಿರುವ ರಾಜಕೀಯ ವ್ಯಕ್ತಿಗಳು ಪ್ರಚಾರಕ್ಕಾಗಿ ಮಾಡುತ್ತಿರುವ ಕೆಲಸಗಳಿಗಿಂತ ಶ್ಲಾಘನೀಯವಾದುದು.

❑

# ನಿಮಗಿದು ತಿಳಿದಿದೆಯೇ?

## ನೌಕರರ ಶೇರು ಮಾಲಿಕತ್ವ ಯೋಜನೆ

ನೌಕರರ ಶೇರು ಮಾಲಿಕತ್ವ ಯೋಜನೆಯು ನೌಕರರಿಗೆ / ಕಾರ್ಯಶಕ್ತಿಗೆ ಕಂಪನಿಯ ಲಾಭದಲ್ಲಿ ಪಾಲುದಾರಿಕೆ ಒದಗಿಸುವ ಯೋಜನೆಯಾಗಿದೆ. ಇದರನ್ವಯ ಕಂಪನಿಯು ಇದಕ್ಕೆ ತನ್ನದೇ ಆದ ಶೇರನ್ನು ಅಥವಾ ನಗದನ್ನು ಅಥವಾ ಸಾಲದ ಹಣವನ್ನು ನೀಡಬಹುದಾಗಿದೆ.

ಇದು ಒಂದು ಮಿತಿಗೊಳಪಟ್ಟು ತೆರಿಗೆ ಕಡಿತದ ಅವಕಾಶ ಹೊಂದಿರುತ್ತದೆ. ನೌಕರರಿಗೆ ನೀಡುವ ಶೇರು ಅವರ ಕೆಲಸಕ್ಕೆ ನೀಡುವ ಸಂಭಾವನೆಯ ಭಾಗವಾಗಿರಬಹುದಾಗಿದ್ದು, ಅದನ್ನು ನೌಕರ ನಿವೃತ್ತಿ ಹೊಂದುವವರೆಗೆ ನಿಧಿಯಲ್ಲಿಡಬಹುದಾಗಿದೆ. 21 ವರ್ಷ ವಯಸ್ಸು ಪೂರ್ತಿಯಾದ ಪೂರ್ಣಾವಧಿಯ ನೌಕರ ಇದರಲ್ಲಿ ಪಾಲ್ಗೊಳ್ಳಬಹುದಾಗಿದೆ. ಕಂಪನಿಯಲ್ಲಿ ಸೇವಾ ಹಿರಿತನ ಹೆಚ್ಚಾದಂತೆ, ನೌಕರನಿಗೆ ಶೇರಿನ ಮೇಲಿನ ಹಕ್ಕು (ವೆಸ್ಟಿಂಗ್) ಹೆಚ್ಚಾಗುತ್ತದೆ. ಕಂಪನಿಯನ್ನು ಬಿಡುವ ವೇಳೆ ಅಥವಾ ನಿವೃತ್ತಿಯ ವೇಳೆಗೆ, ಕಂಪನಿಯು ಸೂಕ್ತ ಬೆಲೆಗೆ ಶೇರುಗಳನ್ನು ತಾನೇ ಹಿಂದಕ್ಕೆ ಖರೀದಿಸಿ ಹಣವನ್ನು ನೌಕರನಿಗೆ ನೀಡಬೇಕಾಗುತ್ತದೆ. ಖಾಸಗಿ ಕಂಪನಿಗಳಲ್ಲಿ ನೌಕರನು ತನಗೆ ನೀಡಲಾದ ಶೇರುಗಳನ್ನು ಎಲ್ಲ ಪ್ರಮುಖ ನೀಡಿಕೆಗಳಂತೆ, ವೋಟ್ ಮಾಡಬಹುದಾಗಿದ್ದು, ಇದು ಅಂತಿಮವಾಗಿ (ವೋಟಿಂಗ್ ಹಕ್ಕು) ಕಂಪನಿಯ ಅಧಿಕಾರವಾಗಿರುತ್ತದೆ.

ಸಾರ್ವಜನಿಕ ಕಂಪನಿಗಳಲ್ಲಿ ನೌಕರರು ಎಲ್ಲ ಶೇರು ನೀಡಿಕೆ ಮೇಲೂ ವೋಟ್ ಮಾಡಬಹುದಾಗಿದ್ದು, ತೆರಿಗೆ ಕಡಿತ ಕಡಿಮೆ ಮಾಡಿಕೊಳ್ಳಲು ಅವಕಾಶವಿರುತ್ತದೆ.

## ಎಕ್ಸ್‌ಚೇಂಜ್ ಟ್ರೇಡೆಡ್ ಫಂಡ್ – ಇಟಿಎಫ್

ಇದೊಂದು ರೀತಿಯ ಬಂಡವಾಳ ಹೂಡಿಕೆ ನಿಧಿಯಾಗಿದ್ದು, ಶೇರುಗಳ ವಿನಿಮಯದ ಮೇಲೆ ನಡೆಯುವ ವಹಿವಾಟಾಗಿದೆ. ಇವು ಸಾಮಾನ್ಯವಾಗಿ ನಾಸ್‌ಡಾಕ್ – 100 ಸೂಚ್ಯಂಕ – ಎಸ್ ಅಂಡ್ ಪಿ 500 ಮೊದಲಾದ ಬಾಂಡ್ ಅಥವಾ ಶೇರು ಸೂಚ್ಯಂಕಗಳನ್ನು ನಿರ್ವಹಿಸುವ ಬಂಡವಾಳ ಹೂಡಿಕೆ ನಿಧಿಗಳಾಗಿವೆ. ತೆರಿಗೆ, ದಕ್ಷತೆ, ಕಡಿಮೆ ವೆಚ್ಚ ಹಾಗೂ ಶೇರು ಮಾದರಿಯ ಲಕ್ಷಣಗಳನ್ನು ಹೊಂದಿರುವ ಈ ನಿಧಿಗಳು. ಆಕರ್ಷಕ ಬಂಡವಾಳ ಹೂಡಿಕೆ ಆಯ್ಕೆಗಳಾಗಿವೆ. ಇದು ಮ್ಯುಚುವಲ್ ಫಂಡ್ ಹಾಗೂ ಯುನಿಟ್ ಇನ್ವೆಸ್ಟ್‌ಮೆಂಟ್ ಸ್ವರೂಪಗಳನ್ನು ಹೊಂದಿದ್ದು ವ್ಯಾಪಾರದ ದಿನದ ಅಂತ್ಯದಲ್ಲಿ ಖರೀದಿ ಅಥವಾ ಮಾರಾಟ ಮಾಡಬಹುದಾಗಿದೆ.

ಈ ನಿಧಿಯ ಪ್ರಮುಖ ಲಕ್ಷಣವೆಂದರೆ ಇದು ಸಕ್ರಿಯವಾಗಿ ನಿರ್ವಹಿಸಲ್ಪಡುವುದಿಲ್ಲ. ನಿಧಿ ನಿರ್ವಾಹಕರು ನಿಧಿಯನ್ನು ಸಂಚಲನೆಯಲ್ಲಿ ಇಡಲು ಅತಿ ಕಡಿಮೆಯ ಹೊಂದಾಣಿಕೆಗೆ ಮುಂದಾಗಬಹುದಾಗಿದೆ. ಭಾರತದಲ್ಲಿ ಸ್ಪೈಡರ್, ಎಸ್‌ಪಿವೈ ಸಂಕೇತದಡಿ ಎಸ್ ಅಂಡ್ ಪಿ ಸೂಚ್ಯಂಕವನ್ನು ಅನುಸರಿಸುತ್ತಿರುವ ಇಟಿಎಫ್ ಆಗಿದೆ. ಭಾರತದಲ್ಲಿ ಕಳೆದ ನಾಲ್ಕು ತಿಂಗಳಲ್ಲಿ (ಮೊದಲೆರಡು ತಿಂಗಳಲ್ಲಿ 1.2 ಶತಕೋಟಿ ಡಾಲರ್ ಶೇರು ಮಾರಾಟವಾಗಿದೆ) ಭಾರತೀಯ ಶೇರುಗಳಲ್ಲಿ 2.3 ಶತಕೋಟಿ ಡಾಲರ್ ಮೊತ್ತದ ಹಣ ಇಟಿಐಎಫ್‌ನಲ್ಲಿ ದಾಖಲಾಗಿದೆ. ❑

(63ನೇ ಪುಟದಿಂದ)

## ರೈಲ್ವೆ ಬಜೆಟ್: ರಾಜ್ಯಕ್ಕೆ ಬಹುಕೋಟಿ ಬಹುಮಾನ

ರಾಜ್ಯದಲ್ಲಿ ಹೊಸ ಮಾರ್ಗಗಳಿಗೆ ಬೇಡಿಕೆ ಇಂದಿನದಲ್ಲ. ಚುನಾವಣೆ ಸಮಯದಲ್ಲಿ ತಮ್ಮ ಪಕ್ಷ ಅಧಿಕಾರಕ್ಕೆ ಬಂದರೆ ಇಷ್ಟೆಲ್ಲ ಹೊಸ ಮಾರ್ಗ ಕಲ್ಪಿಸುತ್ತದೆಂದು ರಾಜಕೀಯ ಪಕ್ಷಗಳು ಭರವಸೆ ನೀಡುವುದೂ ಹೊಸದಲ್ಲ. ಬೆಂಗಳೂರು ಮತ್ತು ಮೈಸೂರಿನಿಂದ ತಾಳಗುಪ್ಪದವರೆಗೆ ಬ್ರಾಡ್ ಗೇಜಿದೆ. ಬೆಂಗಳೂರಿನಿಂದ ಮತ್ತು ಮೈಸೂರಿನಿಂದ ಎರಡು ಪ್ರತ್ಯೇಕ ರೈಲು ಸಂಚಾರವೂ ಇದೆ. ಅಲ್ಲಿಂದ ಮುಂದೆ ಕೆಲವೇ ಕೆಲವು ಕಿಮೀ ಹಳಿ ಮುಂದುವರಿದರೆ ಉತ್ತರ ಕನ್ನಡ ಸಿಗುತ್ತದೆ. ಆ ಜಿಲ್ಲೆಯಲ್ಲಿ ಒಂದಂಗುಲ ರೈಲ್ವೆ ಮಾರ್ಗವೂ ಕೆಲವು ವರ್ಷದ ಹಿಂದಿನವರೆಗೆ ಇದ್ದಿರಲಿಲ್ಲ. ಕೊಂಕಣ ರೈಲ್ವೆ ಕಾರಣವಾಗಿ ಜಿಲ್ಲೆಯ ಕರಾವಳಿ ಭಾಗ ರೈಲು ಓಡಾಟ ಕಂಡಿತು.

### ಜೋಗಕ್ಕೆ ಜೋಷ್

ಅದು ಕರಾವಳಿಯ ಕಥೆಯಾಯಿತು. ಜಿಲ್ಲೆಯ ಘಟ್ಟದ ಭಾಗ...? ಈ ಹೊತ್ತಿನವರೆಗೂ ಅಲ್ಲಿ ರೈಲಿಲ್ಲ. ಕೆಲವು ಕಡೆ ಇಂಥ ಪ್ರಸ್ತಾವಗಳಿಗೆ ಒಂದು ನೆಲೆ ಇರುವುದಿಲ್ಲ. ಆದರೆ ಇದು ಹಾಗಲ್ಲ. ಸಾಮಾನ್ಯವಾಗಿ ರೈಲು ಯೋಜನಾ ಪ್ರಸ್ತಾವದಲ್ಲಿ ಲಾಭವನ್ನು ಮುಖ್ಯವಾಗಿ ಪರಿಗಣಿಸುವದಿದೆ. ತಪ್ಪಲ್ಲ. ಆದರೆ ಈ ಮಾರ್ಗಕ್ಕೆ ಅಂಥ ಹಿನ್ನಡೆ ಇಲ್ಲ. ಇದನ್ನು ಅರಿತವರಂತೆ ತಾಳಗುಪ್ಪದಿಂದ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರಕ್ಕೆ ರೈಲ್ವೆ ಮಾರ್ಗ ಕಲ್ಪಿಸುವ ಯೋಜನೆಗೆ ಮುನ್ನುಡಿಯಾಗಿ ಸಮೀಕ್ಷೆ ನಡೆಸುವ ನಿರ್ಧಾರವನ್ನು ಸಚಿವರು ಕೈಗೆತ್ತಿಕೊಂಡಿದ್ದಾರೆ. ಇದರಿಂದಾಗುವ ಲಾಭವೆಂದರೆ ಜಗತ್ಪ್ರಸಿದ್ಧ ಜೋಗ ಜಲಪಾತದವರೆಗೂ ರಾಜಧಾನಿಯಿಂದ ರೈಲಿನಲ್ಲಿ ಪ್ರವಾಸಿಗರು ತೆರಳಿ ಅದೇ ಸಂಜೆ ಮರಳಲು ಅನುಕೂಲವಾಗುತ್ತದೆ.

ದಕ್ಷಿಣದ ಕಾಶ್ಮೀರ ಎಂದು ಖ್ಯಾತವಾಗಿರುವ ಕೊಡಗು ಜಿಲ್ಲೆಯ ಮಡಿಕೇರಿ– ಕುಶಾಲ ನಗರ; ಆಂಧ್ರದ ಗಬ್ಬೂರು–ಬಳ್ಳಾರಿ; ಗದಗ–ಹರಪನಹಳ್ಳಿ; ಶಿವಮೊಗ್ಗ–ಶೃಂಗೇರಿ–ಮಂಗಳೂರು; ಉಲ್ಲಾಳ–ಮಂಗಳೂರು–ಸುರತ್ಕಲ್ (ಇದು ಜೋಡಿ ಮಾರ್ಗ) ನಡುವೆ ಹೊಸ ಮಾರ್ಗಕ್ಕೆ ಸಮೀಕ್ಷೆ ನಡೆಸಲು ಇಲಾಖೆ ಮುಂದಾಗಿದೆ.

ಹೀಗೆ ಹಲವು ಯೋಜನೆಗಳನ್ನೂ ಹಲವು ರೈಲುಗಳನ್ನೂ ಇತ್ತಿರುವ ಬಜೆಟ್‌ನಲ್ಲಿ ಅಭಿವೃದ್ಧಿ ಮುಖ್ಯ ಎನ್ನುವುದು ಎದ್ದು ಕಾಣುವ ಸಂಗತಿಯಾಗಿದ್ದು ಇದು ಎಲ್ಲರ ಮೆಚ್ಚುಗೆಗೂ ಪಾತ್ರವಾಗಿದೆ. ❑

# ವಾರ್ತಾ ವಿಶೇಷ

ಬ್ರಿಕ್ಸ್ (ಬ್ರೆಜಿಲ್, ರಶಿಯಾ, ಇಂಡಿಯಾ, ಚೀನಾ ಮತ್ತು ಸೌತ್ ಆಫ್ರಿಕಾ) ದೇಶಗಳು ತಮ್ಮ ಅಭಿವೃದ್ಧಿ ಅಗತ್ಯಗಳಿಗಾಗಿ ಹೊಸ ಬ್ಯಾಂಕ್ ಹಾಗೂ ತುರ್ತು ಸಂಗ್ರಹ ನಿಧಿ ಸ್ಥಾಪಿಸಲು ನಿರ್ಧರಿಸಿವೆ.

ಭಾರತದ ಪ್ರಧಾನಿ, ಶ್ರೀ ನರೇಂದ್ರ ಮೋದಿ, ಚೀನಾದ ಅಧ್ಯಕ್ಷ ಶ್ರೀ ಕ್ಸಿ, ಆತಿಥೇಯ ಬ್ರೆಜಿಲ್‌ನ ಅಧ್ಯಕ್ಷೆ ಶ್ರೀಮತಿ ಡಿಲ್ಮಾ ರಸೂಫ್, ರಶಿಯಾದ ಶ್ರೀ ವ್ಲಾಡಿಮಿರ್ ಪುಟಿನ್, ಹಾಗೂ ದಕ್ಷಿಣ ಆಫ್ರಿಕಾದ ಶ್ರೀ ಜಾಕೋಬ್ ಜುಮಾ ಅವರು ಫ್ಲೋರ್ಟಲೇಜಾದಲ್ಲಿ ನಡೆದ 6ನೇ ಬ್ರಿಕ್ ಸಮ್ಮೇಳನದಲ್ಲಿ ಈ ಕುರಿತಾದ ನಿರ್ಣಯಕ್ಕೆ ಸಹಿಹಾಕಿದ್ದಾರೆ.

ಒಟ್ಟು ನೂರು ಬಿಲಿಯನ್ ಡಾಲರ್ ಮೊತ್ತದ ಅಭಿವೃದ್ಧಿ ಬ್ಯಾಂಕ್‌ನ್ನು ಆರಂಭಿಕ 50 ಬಿಲಿಯನ್ ಡಾಲರ್‌ನೊಂದಿಗೆ ಪ್ರಾರಂಭಿಸಲಾಗುವುದು.

ಚೀನಾದ ಶಾಂಘೈಯಲ್ಲಿ ಮುಖ್ಯಕಚೇರಿ ಹೊಂದಿರುವ ಈ ಬ್ಯಾಂಕಿಗೆ ಭಾರತ ಮೊದಲ ಅಧ್ಯಕ್ಷ ದೇಶವಾಗಿರುತ್ತದೆ. ತುರ್ತು ಸಂಗ್ರಹ ನಿಧಿಯ ಮೊತ್ತ ಕೂಡಾ ನೂರು ಬಿಲಿಯನ್ ಡಾಲರ್‌ಗಳಾಗಿದ್ದು, ಇದು ಸದಸ್ಯ ರಾಷ್ಟ್ರಗಳಿಗೆ ನೆರವಾಗುವ ತುರ್ತು ಹಣಕಾಸು ವ್ಯವಸ್ಥೆಯಾಗಿರುತ್ತದೆ.

* * *

ಖ್ಯಾತ ಪರಿಸರವಾದಿ ಶ್ರೀ ಚಾಂದಿ ಪ್ರಸಾದ್ ಭಟ್ ಅವರಿಗೆ ಪ್ರತಿಷ್ಠಿತ ಗಾಂಧಿ ಶಾಂತಿ ಪುರಸ್ಕಾರವನ್ನು ನೀಡಲಾಗಿದೆ. ರಾಷ್ಟ್ರಪತಿ ಭವನದಲ್ಲಿ ಜುಲೈ 15ರಂದು ನಡೆದ ಸಮಾರಂಭದಲ್ಲಿ ರಾಷ್ಟ್ರಪತಿ ಶ್ರೀ ಪ್ರಣವ್ ಮುಖರ್ಜಿ ಅವರು 2013ನೇ ಸಾಲಿನ ಗಾಂಧಿ ಶಾಂತಿ ಪುರಸ್ಕಾರವನ್ನು ಶ್ರೀ ಚಾಂದಿ ಪ್ರಸಾದ್ ಭಟ್ ಅವರಿಗೆ ಪ್ರದಾನ ಮಾಡಿದರು. ಪುರಸ್ಕಾರ, ಫಲಕ ಹಾಗೂ ಒಂದು ಕೋಟಿ ರೂಪಾಯಿ ನಗದನ್ನು ಒಳಗೊಂಡಿದೆ.

* * *

ಮೂಲಸೌಕರ್ಯ ಅಭಿವೃದ್ಧಿ ಹಾಗೂ ವಸತಿ ಕ್ಷೇತ್ರಕ್ಕೆ ಉತ್ತೇಜನ ನೀಡುವ ದೃಷ್ಟಿಯಿಂದ ಭಾರತೀಯ ರಿಸರ್ವ್ ಬ್ಯಾಂಕ್, ದೀರ್ಘಾವಧಿ ಬಾಂಡುಗಳಿಗೆ, ಕಡ್ಡಾಯ ಸಂಗ್ರಹ ಅಗತ್ಯಗಳಿಂದ ವಿನಾಯ್ತಿ ಪ್ರಕಟಿಸಿದೆ. ಮುಂಬಯಿಯಲ್ಲಿ ಈ ಬಗ್ಗೆ ಅಧಿಸೂಚನೆ (ಜುಲೈ 15) ಹೊರಡಿಸಲಾಗಿದ್ದು, ಬ್ಯಾಂಕುಗಳು ದೀರ್ಘಾವಧಿ ಯೋಜನೆಗಳಿಗೆ ಸಾಲ ಒದಗಿಸಲು ಸಂಪನ್ಮೂಲ ಕ್ರೋಢೀಕರಣಕ್ಕಾಗಿ ಕನಿಷ್ಠ ಏಳು ವರ್ಷಗಳ ಮೆಚುರಿಟಿಯ ದೀರ್ಘಾವಧಿ ಬಾಂಡುಗಳನ್ನು ನೀಡಬಹುದಾಗಿದೆ ಎಂದು ತಿಳಿಸಿದೆ. ಇಂತಹ ಬಾಂಡುಗಳ ನೀಡಿಕೆಯನ್ನು ಬ್ಯಾಂಕುಗಳ ಸಾಮಾನ್ಯ ಹೊಣೆಗಾರಿಕೆ ಎಂದು ಪರಿಗಣಿಸಲಾಗುವುದಿಲ್ಲ; ಹೀಗಾಗಿ, ಇದಕ್ಕೆ ನಗದು ಸಂಗ್ರಹ ಅನುಪಾತ ಮತ್ತು ಸ್ಥಾಯಿ ಲಿಕ್ವಿಡಿಟಿ ಅನುಪಾತಗಳಿಂದ ವಿನಾಯ್ತಿ ಇರುತ್ತದೆ ಎಂದು ತಿಳಿಸಿದೆ. ❑


## Subscription Coupon

**[For New membership /Renewal/Change of Address]**

I want to subscribe to :

Yojana / Kurukshetra / Ajkal / : 1 yr. Rs.100/-; 2 yrs, Rs.180/- ; 3 yrs, Rs.250/-

Bal Bharati : 1 yr. Rs.80/-; 2 yrs, Rs.150/- ; 3 yrs, Rs.200/-

**(Circle the magazine of your choice and the period of subscription)**

DD/PO/MO No.____________________ date __________

Name (in block letters) : ____________________

Subscriber's profile : Student / Academician / Institution / Others

Address : ____________________

____________________

PIN : ________________

The amount may kindly be sent in the form of D.D. It should be drawn in favour of ADG (I/C), Publications Division, Min. of I & B, GOI and payable at New Delhi. The D.D. along with duly filled cupon may kindly be sent to The Business Manager (Journals), Publications Division, East Block-IV, Level-7, R.K.Puram, New Delhi – 110066. Ph : 011-26100207, 26105590

Please allow us 4 to 6 weeks for the dispatch of the first issue.
P.S. : For Renewal / change in address, please quote your subscription number

## ಕೇಂದ್ರ ಆಯವ್ಯಯ



ಹಣಕಾಸು ಸಚಿವ
**ಶ್ರೀ ಅರುಣ್ ಜೇಟ್ಲಿ** ಅವರು
ಲೋಕಸಭೆಯಲ್ಲಿ 2014–15ನೇ ಸಾಲಿನ
ಮುಂಗಡ ಪತ್ರವನ್ನು ಮಂಡಿಸಿದರು.

## ರೈಲ್ವೆ ಮುಂಗಡ ಪತ್ರ



ರೈಲ್ವೆ ಸಚಿವ
**ಶ್ರೀ ಸದಾನಂದ ಗೌಡ** ಅವರು
ಲೋಕಸಭೆಯಲ್ಲಿ 2014–15ನೇ ಸಾಲಿನ
ರೈಲ್ವೆ ಬಜೆಟ್‌ನ್ನು ಸಾದರಪಡಿಸಿದರು.